ಭಾನುವಾರ, ಡಿಸೆಂಬರ್ 4, 2022 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಎರಡು ದಿನದಿಂದ ಅರಣ್ಯ ಸಿಬ್ಬಂದಿ ಗಸ್ತು, ಬೋನು ಅಳವಡಿಕೆ

ಸೆರೆಯಾಗದ ಚಿರತೆ: ಆತಂಕ

ಪ್ರಜಾವಾಣಿ ವಾರ್ತೆ

ಕೆಂಗೇರಿ: ತುರಹಳ್ಳಿ ಅರಣ್ಯ ವ್ಯಾಪ್ತಿಯ ಕೋಡಿಪಾಳ್ಯ ಹಾಗೂ ಗಾಣಕಲ್ಲು ಸುತ್ತಮುತ್ತಲ ಪ್ರದೇಶದಲ್ಲಿ ಚಿರತೆಗಳು ಪದೇ ಪದೇ ಕಾಣಿಸಿಕೊಳ್ಳುತ್ತಿವೆ. ಅರಣ್ಯ ಇಲಾಖೆ ಸಿಬ್ಬಂದಿ ಎರಡು ದಿನಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದರೂ ಚಿರತೆ ಸೆರೆ ಸಿಕ್ಕಿಲ್ಲ. ಇದು ಸ್ಥಳೀಯರಲ್ಲಿ ಮತ್ತಷ್ಟು ಭಯ ಹೆಚ್ಚಿಸಿದೆ.

ಬುಧವಾರ ಮಧ್ಯರಾತ್ರಿ ಕೆಂಗೇರಿ ಬಳಿಯ ಶ್ರೀಧರ ಗುಡ್ಡದ ಜನವಸತಿ ಪ್ರದೇಶದಲ್ಲಿ ಚಿರತೆಯು ಜಿಂಕೆಯನ್ನು ಬೇಟೆಯಾಡಿತ್ತು. ಬಳಿಕ, ಸುತ್ತಮುತ್ತಲ ಪ್ರದೇಶದಲ್ಲೇ ಚಿರತೆ ಸುಳಿದಾಡುತ್ತಿರುವ ಅನುಮಾನ ವ್ಯಕ್ತವಾಗಿದೆ.

ಶುಕ್ರವಾರ ರಾತ್ರಿ ಗಾಣಕಲ್ ಗ್ರಾಮದ ಸುತ್ತ ಚಿರತೆಗಳು ಕಾಣಿಸಿಕೊಂಡಿದ್ದು, ಗ್ರಾಮಸ್ಥರಲ್ಲಿ ಭೀತಿ ಹೆಚ್ಚಿಸಿದೆ. ಬಿಜಿಎಸ್ ಹೈಸ್ಕೂಲ್, ಬಿಜಿಎಸ್ ಎಂಜಿನಿಯರಿಂಗ್ ಕಾಲೇಜು, ಆರ್‌ಎನ್‌ಎಸ್ ಕಾಲೇಜಿಗೆ ಬರುವ ಸುತ್ತಮುತ್ತಲ ವಿದ್ಯಾರ್ಥಿಗಳು ತುರಹಳ್ಳಿ ಅರಣ್ಯ ರಸ್ತೆಯ ಮೂಲಕವೇ ಹಾದು ಹೋಗಬೇಕಾಗಿದೆ. ಇದರಿಂದ ಪೋಷಕರು ಆತಂಕಗೊಂಡಿದ್ದಾರೆ.

ಚಿರತೆ ಪ್ರತ್ಯಕ್ಷವಾದ ನಂತರ ತುರಹಳ್ಳಿ ಸುತ್ತಮುತ್ತಲ ಪ್ರದೇಶದಲ್ಲಿ ಅರಣ್ಯ ಸಿಬ್ಬಂದಿ ಗಸ್ತು ನಡೆಸಿದ್ದಾರೆ. ಚಿರತೆ ಹಿಡಿಯಲು ತುರಹಳ್ಳಿ ಬಳಿಯ ಇಂಟಿಗ್ರೇಟೆಡ್ ಕಮ್ಯೂನಿಟಿ ಹಾಲ್ ಬಳಿ ಬೋನು ಅಳವಡಿಸಲಾಗಿದೆ. ತುರಹಳ್ಳಿ ಅರಣ್ಯ ವಲಯದಲ್ಲಿ ಕೇವಲ ಒಂದು ಚಿರತೆಯ ಸಂಚಾರವಿದೆ. ಹಗಲಿನ ವೇಳೆ ಚಿರತೆ ಸಂಚಾರ ವಿರಳವಾಗಿದ್ದು, ಜನ ಆತಂಕಗೊಳ್ಳುವ ಅವಶ್ಯಕತೆ ಇಲ್ಲ. ಶೀಘ್ರದಲ್ಲೇ ಚಿರತೆ ಸೆರೆ ಹಿಡಿಯಲಾಗುವುದು ಎಂದು ಕಗ್ಗಲೀಪುರ ಆರ್‌ಎಫ್‌ಒ ಗೋವಿಂದರಾಜು ಹೇಳಿದರು.

ಕಳೆದ ನಾಲ್ಕೈದು ತಿಂಗಳ ಹಿಂದೆ ಗಾಣಕಲ್ ಗ್ರಾಮದ ಕರುವೊಂದರ ಮೇಲೆ ಚಿರತೆ ದಾಳಿ ನಡೆದಿತ್ತು. ಹೀಗಾಗಿ ಇಲ್ಲಿನ ತೋಟವೊಂದರಲ್ಲಿ ಬೋನು ಇಡಲಾಗಿತ್ತು. ಇದುವರೆಗೆ ಚಿರತೆ ಬೋನಿಗೆ ಬಿದ್ದಿಲ್ಲ. ಅರಣ್ಯ ವ್ಯಾಪ್ತಿಯಲ್ಲೇ ಸಂಚರಿಸುತ್ತಿದ್ದ ಚಿರತೆ ಇದೀಗ ಜನವಸತಿ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ಆತಂಕ ತಂದಿದೆ ಎಂದು ಸ್ಥಳೀಯರು ಹೇಳಿದರು.

ವಾಯುವಿಹಾರ ಸ್ಥಗಿತ

ಶ್ರೀಧರಗುಡ್ಡ, ಸುಂಕೇನಹಳ್ಳಿ, ಕೋಡಿಪಾಳ್ಯ, ಕರಿಯನ ಪಾಳ್ಯ, ಹೆಮ್ಮಿಗೆಪುರ ಸೇರಿದಂತೆ ಹತ್ತಾರು ಬಡಾವಣೆಗಳ ನಾಗರಿಕರು ವಾಯುವಿಹಾರಕ್ಕಾಗಿ ತುರಹಳ್ಳಿ ಅರಣ್ಯ ವಲಯಕ್ಕೆ ಮುಂಜಾನೆಯೇ ಭೇಟಿ ನೀಡುತ್ತಿದ್ದರು. ಚಿರತೆ ಭಯದಿಂದ ಯಾರೊಬ್ಬರೂ ಕಾಡಿನ ವಲಯಕ್ಕೆ ಬರುತ್ತಿಲ್ಲ. ಭಯದಿಂದ ಬದುಕು ಸಾಗಿಸುವಂತಾಗಿದೆ ಎಂದು ಕೋಡಿಪಾಳ್ಯ ನಿವಾಸಿ ಶಾಂತರಾಜು ಆತಂಕ ವ್ಯಕ್ತಪಡಿಸಿದರು.

ಮಾರ್ಗ ಬದಲಿಸಿದ ವಿದ್ಯಾರ್ಥಿಗಳು

ಚಿರತೆ ಭಯದಿಂದ ಜಟ್ಟಗರಹಳ್ಳಿ ಸರ್ಕಾರಿ ಶಾಲೆ ಮಕ್ಕಳು ಎಂದಿನಂತೆ ಓಡಾಡುತ್ತಿದ್ದ ಶ್ರೀಧರ ಗುಡ್ಡದ ರಸ್ತೆಯನ್ನು ಬದಲಿಸಿ ಪಕ್ಕದ 100 ಅಡಿ ರಸ್ತೆಯನ್ನು ಅವಲಂಬಿಸಿದ್ದಾರೆ.

ಚಿನ್ಮಯ, ರಾಷ್ಟ್ರೋತ್ಥಾನ ಶಾಲೆಗೆ ಹೋಗುವ ಮಕ್ಕಳು ಕೂಡ ತಂಪಾಗಿದ್ದ ಅರಣ್ಯ ರಸ್ತೆಯನ್ನು ಬಿಟ್ಟು ಮುಖ್ಯರಸ್ತೆಯಲ್ಲಿ ಸಂಚರಿಸುತ್ತಿದ್ದಾರೆ.



ಚಿರತೆ ಸೆರೆಹಿಡಿಯಲು ದೊಡ್ಡಬಳ್ಳಾಪುರ ತಾಲ್ಲೂಕಿನ ನಂದಿಬೆಟ್ಟದ ತಪ್ಪಲಿನ ಚನ್ನಾಪುರ ಗ್ರಾಮದ ಸಮೀಪ ನೀಲಗಿರಿ ತೋಪಿನಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಇಟ್ಟಿರುವ ಬೋನು

ಭಯದಲ್ಲಿ ನಂದಿಬೆಟ್ಟದ ತಪ್ಪಲಿನ ಗ್ರಾಮಸ್ಥರು

ದೊಡ್ಡಬಳ್ಳಾಪುರ: ತಾಲ್ಲೂಕಿನ ನಂದಿಬೆಟ್ಟದ ತಪ್ಪಲಿನ ಚನ್ನಾಪುರ ಸೇರಿದಂತೆ ವಿವಿಧ ಗ್ರಾಮಗಳಲ್ಲೂ ಚಿರತೆಯ ಹಾವಳಿ ಮಿತಿ ಮೀರಿದೆ. ಇದರಿಂದ ಈ ಗ್ರಾಮಗಳ ರೈತರು ತೋಟಗಳ ಕಡೆಗೆ ಹೋಗಲು ಹಾಗೂ ಬೆಟ್ಟದ ತಪ್ಪಲಿನಲ್ಲಿ ಹಸು, ಕುರಿ, ಮೇಕೆ ಮೇಯಿಸಲು ಭಯಪಡುವಂತಾಗಿದೆ.

ಮೂರು ದಿನಗಳ ಹಿಂದೆಯಷ್ಟೇ ಚನ್ನಾಪುರ ಗ್ರಾಮದ ಅಂಚಿನ ಕುರಿ ದೊಡ್ಡಿಗೆ ನುಗ್ಗಿದ್ದ ಚಿರತೆಯೊಂದು ಕುರಿಯನ್ನು ತಿಂದು ಹೋಗಿತ್ತು. ಇದರಿಂದಾಗಿ ಗ್ರಾಮದಲ್ಲಿ ಸಂಜೆ ವೇಳೆ ಜನರು ಹೊರಗೆ ಬರಲು ಸಹ ಆತಂಕ ಪಡುವಂತಾಗಿದೆ. ಗ್ರಾಮಸ್ಥರ ಒತ್ತಾಯದ ಮೇರೆಗೆ ಅರಣ್ಯ ಇಲಾಖೆಯು ಚನ್ನಾಪುರ ಸಮೀಪದ ನಂದಿಬೆಟ್ಟದ ತಪ್ಪಲಿನ ನೀಲಗಿರಿ ತೋಪಿನಲ್ಲಿ ಚಿರತೆ ಸೆರೆಗೆ ಬೋನು ಇಟ್ಟಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು, ಘಾಟಿ ಸುಬ್ರಮಣ್ಯ, ನೆಲಮಂಗಲ ತಾಲ್ಲೂಕಿನ ದಾಬಸ್‌ಪೇಟೆ, ತ್ಯಾಮಗೊಂಡ್ಲು ಮತ್ತು ಹೊಸಕೋಟೆ ತಾಲೂಕಿನ ನಂದಗುಡಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಮೂರು ವರ್ಷದ ಹಿಂದೆ ಕೊಯಿರ ಬೆಟ್ಟದಲ್ಲಿ ಇಟ್ಟಿದ್ದ ಬೋನಿಗೆ ಚಿರತೆ ಬಿದ್ದಿತ್ತು.

ನೆಲಮಂಗಲ ತಾಲ್ಲೂಕಿನಲ್ಲಿ ಈಗಾಗಲೇ ಎಂಟು ಬೋನು ಇಡಲಾಗಿದೆ. ಮತ್ತೆ ಮೂರು ಬೋನು ಖರೀದಿಸಲಾಗುತ್ತಿದೆ. ಈ ಹಿಂದೆ ಎರಡು ಚಿರತೆಗಳನ್ನು ಹಿಡಿದು ಬನ್ನೇರುಘಟ್ಟ ಹಾಗೂ ಕಾವೇರಿ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.

ಚಿಲುಮೆ ಸಂಸ್ಥೆ: ವಿಚಾರಣೆಗೆ ಐಎಎಸ್ ಅಧಿಕಾರಿಗಳು ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಲುಮೆ ಸಂಸ್ಥೆ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಹಲಸೂರು ಗೇಟ್ ಠಾಣೆ ಪೊಲೀಸರು, ಐಎಎಸ್ ಅಧಿಕಾರಿಗಳಾದ ಕೆ. ಶ್ರೀನಿವಾಸ್ ಹಾಗೂ ಎಸ್. ರಂಗಪ್ಪ ಅವರನ್ನು ಶನಿವಾರ ವಿಚಾರಣೆ ನಡೆಸಿದರು.

ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಆರೋಪದಡಿ ದಾಖಲಾಗಿರುವ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ನೀಡಿದ್ದರು. ಅದನ್ನು ಸ್ವೀಕರಿಸಿದ್ದ ರಂಗಪ್ಪ, ಶನಿವಾರ ಬೆಳಿಗ್ಗೆಯೇ ವಿಚಾರಣೆ ಎದುರಿಸಿದರು. ಮಧ್ಯಾಹ್ನ 3 ಗಂಟೆಗೆ ಶ್ರೀನಿವಾಸ್ ಪ್ರತ್ಯೇಕವಾಗಿ ಠಾಣೆಗೆ ಬಂದು ಪೊಲೀಸರ ಪ್ರಶ್ನೆಗಳಿಗೆ ಉತ್ತರಿಸಿದರು.

‘ಅಕ್ರಮವಾಗಿ ಮತದಾರರ ಸಮೀಕ್ಷೆ ನಡೆಸುತ್ತಿದ್ದ ಚಿಲುಮೆ ಸಂಸ್ಥೆಗೆ ಬಿಬಿಎಂಪಿ ಅಧಿಕಾರಿಗಳು ಸಹಕಾರ ನೀಡಿದ್ದರು ಎಂಬುದಕ್ಕೆ ಪುರಾವೆಗಳು ಸಿಕ್ಕಿವೆ. ಈ ಸಂಬಂಧ ನಾಲ್ವರು ಬಿಬಿಎಂಪಿ ಅಧಿಕಾರಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಅವರೆಲ್ಲರ ಹೇಳಿಕೆ ಆಧರಿಸಿ ಮತ್ತಷ್ಟು ಮಾಹಿತಿ ಕಲೆಹಾಕಲು ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ವಿಚಾರಣೆ ಎದುರಿಸಿದ ಇಬ್ಬರೂ ಅಧಿಕಾರಿಗಳು, ಕೆಲ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿದ್ದಾರೆ. ಉಳಿದ ಪ್ರಶ್ನೆಗಳಿಗೆ ಉತ್ತರಿಸಲು ತಡವರಿಸಿದ ಅವರಿಬ್ಬರು, ವೈಯಕ್ತಿಕ ಕಾರಣಗಳನ್ನು ನೀಡಿ ಕಾಲಾವಕಾಶ ನೀಡುವಂತೆ ಕೋರಿದ್ದರು. ಹೀಗಾಗಿ, ಬುಧವಾರ (ಡಿ. 7) ಪುನಃ ವಿಚಾರಣೆಗೆ ಬರುವಂತೆ ತಿಳಿಸಿ ಅವರನ್ನು ವಾಪಸ್ ಕಳುಹಿಸಲಾಗಿದೆ’ ಎಂದು ತಿಳಿಸಿದರು.

ಪ್ರಾಥಮಿಕ ಹೇಳಿಕೆ ಪರಿಶೀಲನೆ: ‘ಶ್ರೀನಿವಾಸ್ ಹಾಗೂ ರಂಗಪ್ಪ ಅವರು ಕೃತ್ಯಕ್ಕೆ ಸಂಬಂಧಪಟ್ಟಂತೆ ಪ್ರಾಥಮಿಕ ಹೇಳಿಕೆ ನೀಡಿದ್ದಾರೆ. ತಾವು ಯಾವುದೇ ಆದೇಶಗಳನ್ನು ನೀಡಿಲ್ಲ. ಚಿಲುಮೆ ಸಂಸ್ಥೆಗೆ ಸಹಾಯ ಮಾಡಿಲ್ಲವೆಂದು ತಿಳಿಸಿದ್ದಾರೆ. ಹೇಳಿಕೆ ಪರಿಶೀಲನೆ ನಡೆಸಬೇಕಿದೆ’ ಎಂದು ಅಧಿಕಾರಿ ಹೇಳಿದರು.

‘ಇಬ್ಬರೂ ಐಎಎಸ್ ಅಧಿಕಾರಿಗಳು ಮೌಖಿಕವಾಗಿ ಸೂಚನೆ ನೀಡಿದ್ದಾಗಿ ಆರೋಪಿತ ಬಿಬಿಎಂಪಿ ಅಧಿಕಾರಿಗಳು ಹೇಳಿದ್ದರು. ಆದರೆ, ಈ ಹೇಳಿಕೆಯನ್ನು ಇಬ್ಬರೂ ಐಎಎಸ್ ಅಧಿಕಾರಿಗಳು ತಳ್ಳಿ ಹಾಕಿದ್ದಾರೆ’ ಎಂದು ಅವರು ತಿಳಿಸಿದರು.

6ರಿಂದ ಕಬ್ಬು ಬೆಳೆಗಾರರ ಉಪವಾಸ

ಬೆಂಗಳೂರು: ಫ್ರೀಡಂ ಪಾರ್ಕ್‌ನಲ್ಲಿ ಕಬ್ಬು ಬೆಳೆಗಾರರು ಶನಿವಾರವೂ ಪ್ರತಿಭಟನೆ ನಡೆಸಿದರು. ಬೆಳೆಗಾರರ ಪ್ರತಿಭಟನೆಯು 12ನೇ ದಿನಕ್ಕೆ ಕಾಲಿಟ್ಟಿದೆ.

‘ಮುಖ್ಯಮಂತ್ರಿ ಭೇಟಿಗೆ ಶುಕ್ರವಾರ ಅವಕಾಶ ಕೊಡುವುದಾಗಿ ಪೊಲೀಸರು ಭರವಸೆ ನೀಡಿದ್ದರು. ಆದರೆ, ಭರವಸೆ ಹುಸಿಗೊಂಡಿದೆ’ ಎಂದು ಪ್ರತಿಭಟನನಿರತರು ಹೇಳಿದರು.

‘ಡಿ.5ರಂದು ಎಲ್ಲ ಜಿಲ್ಲೆಗಳಲ್ಲಿ ಬಿಜೆಪಿಯ ಸಂಸದರು, ಶಾಸಕರ ಮನೆ ಎದುರು ಪ್ರತಿಭಟನೆ ನಡೆಸುತ್ತೇವೆ. ಡಿ.6ರಿಂದ ಉಪವಾಸ ಸತ್ಯಾಗ್ರಹ ನಡೆಸುತ್ತೇವೆ’ ಎಂದು ಸಂಘದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ ಎಚ್ಚರಿಸಿದರು.

ಜ್ಞಾನಭಾರತಿ ಬದಲು ಲಗ್ಗೆರೆಯಲ್ಲಿ ವೈಟ್‌ಟಾಪಿಂಗ್

ಬಿಬಿಎಂಪಿ ಸಲ್ಲಿಸಿದ್ದ ಪ್ರಸ್ತಾವ ತಿರಸ್ಕಾರ

ಬೆಂಗಳೂರು: ಜ್ಞಾನಭಾರತಿ ಆವರಣದಲ್ಲಿ ₹35.50 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ವೈಟ್‌ಟಾಪಿಂಗ್ ಕಾಮಗಾರಿಯನ್ನು ಲಗ್ಗೆರೆ ಮುಖ್ಯರಸ್ತೆಗೆ ವರ್ಗಾಯಿಸಲು ಬಿಬಿಎಂಪಿ ಸಲ್ಲಿಸಿದ್ದ ಪ್ರಸ್ತಾವನೆಯನ್ನು ನಗರಾಭಿವೃದ್ಧಿ ಇಲಾಖೆ ತಿರಸ್ಕರಿಸಿದೆ.

ಜ್ಞಾನಭಾರತಿ ಆವರಣದಲ್ಲಿ ಟೆಂಡರ್ ಕರೆಯದೆ ಈ ಕಾಮಗಾರಿ ನಿರ್ವಹಿಸಲು ಯತ್ನಿಸಲಾಗಿತ್ತು. ಈ ಕುರಿತು ‘ಪ್ರಜಾವಾಣಿ’ ವರದಿ ಪ್ರಕಟಿಸಿದ ಬಳಿಕ ಟೆಂಡರ್ ಕರೆದೇ ಕಾಮಗಾರಿ ನಿರ್ವಹಿಸಲು ಸರ್ಕಾರ ಆದೇಶ ಹೊರಡಿಸಿತ್ತು. ಟೆಂಡರ್ ಪ್ರಕ್ರಿಯೆ ನಡೆಸುವಷ್ಟರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಭೇಟಿ ನೀಡಿದ್ದರು. ಕೊಮ್ಮಘಟ್ಟಕ್ಕೆ ತೆರಳಲು ಜ್ಞಾನಭಾರತಿ ಆವರಣದಲ್ಲೇ ಹಾದು ಹೋದರು. ಅದಕ್ಕಾಗಿ ಡಾಂಬರ್ ರಸ್ತೆಯನ್ನು ತರಾತುರಿಯಲ್ಲಿ ನಿರ್ಮಿಸಲಾಯಿತು.

ಹೊಸದಾಗಿ ಡಾಂಬರ್ ಹಾಕಿದ ರಸ್ತೆಗಳಿಗೆ ಮೂರು ವರ್ಷ ವೈಟ್‌ಟಾಪಿಂಗ್ ಮಾಡುವುದಿಲ್ಲ ಎಂದು ಸರ್ಕಾರ ತೀರ್ಮಾನಿಸಿತು. ಇದರಿಂದಾಗಿ ಜ್ಞಾನಭಾರತಿ ಆವರಣದ ವೈಟ್‌ಟಾಪಿಂಗ್ ಕಾಮಗಾರಿ ಯೋಜನೆ ನನೆಗುದಿಗೆ ಬಿದ್ದಿತು.

ಅದೇ ವಿಧಾನಸಭಾ ಕ್ಷೇತ್ರದ (ರಾಜರಾಜೇಶ್ವರಿ ನಗರ) ಲಗ್ಗೆರೆ ಮುಖ್ಯರಸ್ತೆಯ ಆಲದ ಮರ ವೃತ್ತದಿಂದ ಲಗ್ಗೆರೆ ಪೈಪ್‌ಲೈನ್ ತನಕ ವೈಟ್‌ಟಾಪಿಂಗ್‌ಗೆ ಈ ಮೊತ್ತವನ್ನು ವರ್ಗಾಯಿಸಲು ಅವಕಾಶ ನೀಡುವಂತೆ ಬಿಬಿಎಂಪಿ ಪ್ರಸ್ತಾವನೆ ಸಲ್ಲಿಸಿತ್ತು. ‘ಕೂಲಂಕಷವಾಗಿ ಪರಿಶೀಲಿಸಿ ಪ್ರಸ್ತಾವನೆ ತಿರಸ್ಕರಿಸಲಾಗಿದೆ’ ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಮೊಬೈಲ್ ಆ್ಯಪ್ ಸೇವೆ ಕಂಪನಿ ಪ್ರತಿನಿಧಿಗಳ ಸಭೆ: ಕಮಿಷನರ್ ಎಚ್ಚರಿಕೆ

‘ಸುರಕ್ಷತೆ’ ತಪ್ಪಿದರೆ ಕಠಿಣ ಕಾನೂನು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊಬೈಲ್ ಆ್ಯಪ್ ಆಧಾರಿತ ಸಾರಿಗೆ, ಸರಕು ಸಾಗಣೆ ಹಾಗೂ ಆಹಾರ ಪೂರೈಕೆ ಮಾಡುವ ಕಂಪನಿಗಳು ಗ್ರಾಹಕರ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು. ನಿಯಮ ಮೀರಿದರೆ ಕಠಿಣ ಕಾನೂನು ಕ್ರಮ ಎದುರಿಸಬೇಕಾಗುತ್ತದೆ’ ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಎಚ್ಚರಿಕೆ ನೀಡಿದರು.

ನಗರದ ಕಮಿಷನರ್ ಕಚೇರಿಯಲ್ಲಿ ಶನಿವಾರ ಏರ್ಪಡಿಸಿದ್ದ ಕಂಪನಿಗಳ ಪ್ರತಿನಿಧಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಆ್ಯಪ್ ಮೂಲಕ ರ್‍ಯಾಪಿಡೊ ಬೈಕ್ ಸೇವೆ ಪಡೆದಿದ್ದ ಯುವತಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದ ಆರೋಪದಡಿ ಬೈಕ್ ಸವಾರ ಸೇರಿ ಇಬ್ಬರನ್ನು ಬಂಧಿಸಲಾಗಿತ್ತು. ಈ ಘಟನೆಯಿಂದ ಆ್ಯಪ್ ಆಧಾರಿತ ಸೇವೆ ಪಡೆಯುವವರಲ್ಲಿ ಆತಂಕ ಶುರುವಾಗಿತ್ತು. ಹೀಗಾಗಿ, ಪೊಲೀಸರು ಈ ಸಭೆ ಹಮ್ಮಿಕೊಂಡಿದ್ದರು. ಓಲಾ, ಉಬರ್, ಜೊಮ್ಯಾಟೊ, ಡನ್ಜೊ, ಫ್ಲಿಪ್‌ಕಾರ್ಟ್, ಅಮೆಜಾನ್, ರ್‍ಯಾಪಿಡೊ ಸೇರಿದಂತೆ ವಿವಿಧ ಕಂಪನಿಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

‘ಸಾರ್ವಜನಿಕರ ಸುರಕ್ಷತೆಗೆ ಎಲ್ಲ ಕಂಪನಿಗಳು ಒತ್ತು ನೀಡಬೇಕು. ಮಹಿಳೆ ಮತ್ತು ಮಕ್ಕಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಕಂಪನಿಯ ವ್ಯವಸ್ಥೆಯನ್ನು ಜನಸ್ನೇಹಿಯಾಗಿ ರೂಪಿಸಬೇಕು. ಯಾವುದೇ ತುರ್ತು ಸಂದರ್ಭದಲ್ಲೂ ಪರಿಸ್ಥಿತಿಯನ್ನು ಎದುರಿಸಲು ಪೊಲೀಸರು ನಿಮ್ಮ ಜೊತೆಗಿರಲಿದ್ದಾರೆ’ ಎಂದು ಪ್ರತಾಪ್ ರೆಡ್ಡಿ ಹೇಳಿದರು.

ಕಂಪನಿಗಳಿಗೆ ಕಮಿಷನರ್ ನೀಡಿದ ಸೂಚನೆಗಳು

- ನಡತೆ, ಅಪರಾಧ ಹಿನ್ನೆಲೆ ತಿಳಿದುಕೊಂಡು ಕನಿಷ್ಠ ಎರಡು ಗುರುತಿನ ಚೀಟಿಗಳನ್ನು ಪರಿಗಣಿಸಿ ಸಿಬ್ಬಂದಿಯನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕು
- ಹೊಸದಾಗಿ ಸಿಬ್ಬಂದಿ ನೇಮಕ ಮಾಡಿಕೊಳ್ಳುವ ಮುನ್ನ ಸೇವಾ ಸಿಂಧು ಮೂಲಕ ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು
- ಟ್ಯಾಕ್ಸಿ ಕಾಯ್ದಿರಿಸಿದ ಗ್ರಾಹಕರು, ಆರಂಭಿಕ ಸ್ಥಳದಿಂದ ನಿಗದಿತ ಸ್ಥಳ ತಲುಪಿದ್ದಾರೆಯೇ ಎಂಬುದನ್ನು ತಿಳಿಯಲು ಸುಧಾರಿತ ಕ್ರಮಗಳನ್ನು ಕೈಗೊಳ್ಳಬೇಕು
- ಸಂಸ್ಥೆಯ ಆ್ಯಪ್‌ಗಳಲ್ಲಿ ಹಾಗೂ ವಾಹನಗಳ ಮೇಲೆ ‘ಸುರಕ್ಷಿತ ಸಂಖ್ಯೆ- 112’ ಸ್ಟಿಕರ್‌ಗಳನ್ನು ಲಗತ್ತಿಸಬೇಕು.
- ಸಂಸ್ಥೆಯ ಸಮವಸ್ತ್ರ ದುರುಪಯೋಗವಾಗದಂತೆ ತಡೆಯಬೇಕು. ಕೆಲಸ ಮುಗಿದ ಮೇಲೆ ಸಮವಸ್ತ್ರಗಳನ್ನು ಹಿಂಪಡೆಯುವ ವ್ಯವಸ್ಥೆ ಮಾಡಿಕೊಳ್ಳಬೇಕು.
- ಆಹಾರ ಸರಬರಾಜು ಸೇವೆಗಳ ಜೊತೆ ಕೆಲವರು ಅಕ್ರಮವಾಗಿ ಡ್ರಗ್ಸ್ ಮಾರುತ್ತಿದ್ದ ಪ್ರಕರಣಗಳು ವರದಿಯಾಗಿವೆ. ಈ ರೀತಿಯಾಗದಂತೆ ಕಂಪನಿಗಳು ನಿಗಾ ವಹಿಸಬೇಕು
- ಬಹುತೇಕ ಡೆಲಿವರಿ ಬಾಯ್‌ಗಳು ಸಂಚಾರ ನಿಯಮ ಉಲ್ಲಂಘಿಸುತ್ತಿದ್ದಾರೆ. ಈ ರೀತಿ ಮಾಡದಂತೆ ತಿಳಿವಳಿಕೆ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಬೇಕು
- ಪ್ರತಿಯೊಂದು ಸಂಸ್ಥೆಗಳಲ್ಲಿ 24 ಗಂಟೆ ತುರ್ತು ಸಹಾಯಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು. ದೂರುಗಳು ಬಂದಲ್ಲಿ ತ್ವರಿತವಾಗಿ ಠಾಣೆಗಳಿಗೆ ಮಾಹಿತಿ ನೀಡಬೇಕು

'ನೆನಪು ಅನಂತ'– ಎಸ್ತರ್ ಅನಂತಮೂರ್ತಿ ಮನದಾಳ

ಮನೆ ಹೊರಗೆ ಪೊಲೀಸ್... ಮನೆಯೊಳಗೆ ಡಯಾಲಿಸಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯು.ಆರ್. ಅನಂತಮೂರ್ತಿ ಮನೆಯೊಳಗೆ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದರೆ, ಹೊರಗೆ ಪೊಲೀಸರು ನಿಂತಿದ್ದರು. ಇನ್ನೊಂದು ಕಡೆ ಸಾಹಿತಿಗಳು ಪ್ರತಿಭಟನೆ ಕೂತಿದ್ದರು. ಕೊನೆಗಾಲದಲ್ಲಿ ಅವರು ಹೇಳಿದ್ದೊಂದು ಮಾತನ್ನು ತಪ್ಪಾಗಿ ಅರ್ಥೈಸಿ ಅನೇಕರು ಸಾಕಷ್ಟು ಹಿಂಸೆ ಕೊಟ್ಟಿದ್ದರು.'

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಅನಂತಮೂರ್ತಿ ಅವರ ನೆನಪುಗಳ ಬುತ್ತಿಯನ್ನು ಅವರ ಪತ್ನಿ ಎಸ್ತರ್ ಅವರು ಹಂಚಿಕೊಂಡಿದ್ದು ಹೀಗೆ. 'ನೆನಪು ಅನಂತ: ಯು.ಆರ್. ಅನಂತಮೂರ್ತಿ' ಸಂವಾದದಲ್ಲಿ ಅವರು ಸಾಹಿತಿ ವನಮಾಲಾ ವಿಶ್ವನಾಥ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋದಾಗ ಹಲವು ಭಾವನಾತ್ಮಕ ಕ್ಷಣಗಳು ಮರು ಅನಾವರಣಗೊಂಡವು.

ಮೊದಲ ಪಿಯು ವಿದ್ಯಾರ್ಥಿನಿಯಾಗಿದ್ದಾಗ ತಮಗೆ ಇಂಗ್ಲಿಷ್ ಪಾಠ ಹೇಳಲು ಬಂದ ಅನಂತಮೂರ್ತಿ ಅವರತ್ತ ಆಕರ್ಷಿತರಾದ ಸಂದರ್ಭವನ್ನು ಎಸ್ತರ್ ಮುಗುಳುನಗೆಯೊಂದಿಗೆ ನೆನಪಿಸಿಕೊಂಡರು. ವಿಲಿಯಂ ಬ್ಲೇಕ್ ಪದ್ಯ, ಶೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ನಾಟಕವನ್ನು ಬಣ್ಣಿಸುತ್ತಿದ್ದ ರೀತಿಯಿಂದಲೇ ಅವರತ್ತ ಆಕರ್ಷಣೆಗೊಂಡಿದ್ದನ್ನು, ಸಂಪ್ರದಾಯಸ್ಥ ಕುಟುಂಬದಲ್ಲಿನ ಎಲ್ಲರೂ ತಮ್ಮದೇ ಲೋಕದಲ್ಲಿದ್ದಾಗ ಸ್ನೇಹಿತರನ್ನೇ ಮಾಡಿಕೊಳ್ಳದ ತಮ್ಮಂಥ ಅಮಾಯಕ ಹುಡುಗಿ ಮೇಷ್ಟರಿಗೆ ಮೋಹಿತರಾದದ್ದನ್ನು ಅವರು 'ನೆನಪು ಅನಂತ' ಕೃತಿಯಲ್ಲಿ ಬರೆದ ಸಾಲುಗಳನ್ನು ಓದುವ ಮೂಲಕ ದಾಟಿಸಿದರು.



ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಯ ಮೊದಲ ದಿನವಾದ ಶನಿವಾರ 'ನೆನಪು ಅನಂತ: ಯು.ಆರ್. ಅನಂತಮೂರ್ತಿ' ಗೋಷ್ಠಿಯಲ್ಲಿ ಎಸ್ತರ್ ಅನಂತಮೂರ್ತಿ ಮಾತನಾಡಿದರು. ವನಮಾಲಾ ವಿಶ್ವನಾಥ ಇದ್ದಾರೆ.
– ಪ್ರಜಾವಾಣಿ ಚಿತ್ರ.

'82ರ ಯುವತಿ'

'ಮನೆಗೆ ಬರುವ ಜನರನ್ನು ಸಂಭಾಳಿಸಬೇಕಿತ್ತು. ಸದಾ ಜನರ ಜತೆಗೇ ಇರುತ್ತಿದ್ದ ಅನಂತಮೂರ್ತಿ ಅವರಲ್ಲಿ ನನಗೂ ಸ್ವಲ್ಪ ಜಾಗ ಕೊಡಿ ಎಂದು ಕೇಳಿದ್ದೆ. ಅದಕ್ಕೇ ನಾನು ಸ್ಕೂಲಿಗೆ ಸೇರಿದೆ. 20 ವರ್ಷ ಕಾಮನ್ ಸ್ಕೂಲ್‌ನಲ್ಲಿ ಕೆಲಸ ಮಾಡಿದೆ. ಆರ್ಥಿಕವಾಗಿಯೂ ನಮಗೆ ಅದರಿಂದ ಅನುಕೂಲವಾಯಿತು. ಮಕ್ಕಳ ಕಲಿಕೆಗೂ ಮನೆಯ ವಾತಾವರಣ ಪೂರಕವಾಯಿತು' ಎಂದು ಎಸ್ತರ್ ನೆನಪಿಸಿಕೊಂಡರು.

ಅನಂತಮೂರ್ತಿ ಅಗಲಿದ ಒಂದು ತಿಂಗಳ ನಂತರ ತಾವು ಊರೂರು, ದೇಶ ಸುತ್ತಲಾರಂಭಿಸಿದ್ದು ಹಾಗೂ ಹೊಸ ಸ್ನೇಹಿತರನ್ನು ಸಂಪಾದಿಸಿದ್ದನ್ನು ಹೇಳಿಕೊಂಡರು. ನೆಟ್‌ಫ್ಲಿಕ್ಸ್‌ನಲ್ಲಿ ಬರುವ ಸಿನಿಮಾಗಳನ್ನು ನೋಡುತ್ತಾ ಕಾಲಕಳೆಯುವುದು ತಮ್ಮ ಈಗಿನ ಅಭ್ಯಾಸ ಎಂದರು.

ಅದಕ್ಕೇ ಅವರನ್ನು '82ರ ಯುವತಿ' ಎಂದು ವನಮಾಲಾ ಬಣ್ಣಿಸಿದರು.

ತಮ್ಮ ಬಗೆಗೆ ಏನೆಲ್ಲ ಅನಿಸುತ್ತಿದೆಯೋ ಎಂದು ಒಂದು ಟಿಪ್ಪಣಿ ಬರೆಯುವಂತೆ ತರಗತಿಯ ಎಲ್ಲ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೂ ಅನಂತಮೂರ್ತಿ ಹೇಳಿದ್ದರು. ಆಗ ಎಸ್ತರ್ ಬರೆದ ಸವಿವರವಾದ ಬರಹವನ್ನು ಅವರು ವಿಶೇಷವಾಗಿ ಗಮನಿಸಿ, 'ಚೆನ್ನಾಗಿ ಬರೆದಿರುವೆ' ಎಂದು ನೋಡಿ ನಗೆ ಬೀರಿದ್ದನ್ನು ಸ್ಮರಿಸಿದರು.

ಮನೆಪಾಠದ ನೆಪ ಮಾಡಿಕೊಂಡು ತಮ್ಮಲ್ಲಿಗೆ ಬಂದ ಎರಡು ಜಡೆಯ ಹುಡುಗಿಯ ಮೇಲೆ ತಮಗೂ ಪ್ರೀತಿ ಹುಟ್ಟಿದ್ದನ್ನು ಅನಂತಮೂರ್ತಿ ಅವರೂ 'ಸುರಗಿ' ಕೃತಿಯಲ್ಲಿ ದಾಖಲಿಸಿರುವುದನ್ನು ವನಮಾಲಾ ಉಲ್ಲೇಖಿಸಿದರು.

'ಅಂತರ್ಧರ್ಮೀಯ ಮದುವೆಯಾದರೂ ತಮಗೆ ಹೊಂದಿಕೊಳ್ಳಲು ಕಷ್ಟವೇನೂ ಆಗಲಿಲ್ಲ. ಮಕ್ಕಳ ಮೇಲೆ ಯಾವ ಆಚರಣೆಯನ್ನೂ ಹೇರಲಿಲ್ಲ' ಎಂದ ಎಸ್ತರ್, ಸದಾ ಜನರ ನಡುವೆ ಇರುತ್ತಿದ್ದ ತಮ್ಮ ಪತಿಯ ಮೇಲೆ ಅಸೂಯೆ ಹುಟ್ಟುತ್ತಿತ್ತು ಎಂದಾಗ ಸಭಿಕರಲ್ಲಿ ನಗೆಯುಕ್ಕಿತು.

ಹತ್ತು ತಿಂಗಳ ಮಗು ಶರತ್‌ನನ್ನು ಕರೆದುಕೊಂಡು ತಾವೊಬ್ಬರೇ ಇಂಗ್ಲೆಂಡ್‌ಗೆ ಹೋದ ಸಂದರ್ಭವನ್ನು ಅವರು ನೆನಪಿಸಿಕೊಂಡರು. ಫ್ಲ್ಯಾಟ್ ಒಂದರಲ್ಲಿ ಆಗಲೇ ಅನಂತಮೂರ್ತಿ 'ಸಂಸ್ಕಾರ' ಬರೆದು ಕೈಗಿತ್ತಿದ್ದನ್ನೂ ಸ್ಮರಿಸಿದರು. ಆಗ ತಮಗೆ ಸಂಪೂರ್ಣವಾಗಿ ಗ್ರಹಿಸಲಾಗದೇ ಇದ್ದ ಆ ಕಾದಂಬರಿ ಆಮೇಲೆ ವಿಶ್ವಮಟ್ಟಕ್ಕೆ ವ್ಯಾಪ್ತಿಸಿದ್ದನ್ನು ಕಂಡು ಬೆರಗುಗೊಂಡಿದ್ದಾಗಿ ಹೇಳಿದರು.

'ವಯಸ್ಸು 80 ದಾಟಿದರೂ ಯೌವನದ ಕಳೆ ಇತ್ತು' ಎಂದು ಅನಂತಮೂರ್ತಿ ಅವರ ಬಗೆಗೆ ಎಸ್ತರ್ ಬರೆದಿದ್ದ ಸಾಲು ಹಾಗೂ 'ವಯಸ್ಸು 70 ದಾಟಿದರೂ ಯೌವನದ ಕಳೆ ಹಾಗೆಯೇ ಇದೆ' ಎಂದು ಅನಂತಮೂರ್ತಿ ಬರೆದ ಸಾಲನ್ನು ಒಂದಾದಮೇಲೆ ಒಂದನ್ನು ಹೇಳಿ ವನಮಾಲಾ ವಿಶ್ವನಾಥ ಇಬ್ಬರ ಬಾಂಧವ್ಯದ ಗಟ್ಟಿತನವನ್ನು ತೆರೆದಿಟ್ಟರು.

'ಹೋರಾಟಕ್ಕಿಳಿದ ಸ್ತ್ರೀ ಹೆಜ್ಜೆ ಹಿಂದಿಟ್ಟಿದ್ದಿಲ್ಲ'

ಲ್ಯಾಂಡ್, ಗನ್, ಕ್ಯಾಸ್ಟ್, ವಿಮೆನ್' ಕೃತಿ ಲೇಖಕಿ ಗೀತಾ ರಾಮಸ್ವಾಮಿ ಅಭಿಮತ

• ಸುಕೃತ ಎಸ್.

ಬೆಂಗಳೂರು: 'ಪುರುಷರಿಗಿಂತ ಮಹಿಳೆಯರು ಹೆಚ್ಚು ಶಾಂತಿಪ್ರಿಯರು ಎಂಬುದರ ಕುರಿತು ನನಗೆ ಅಷ್ಟೊಂದು ನಂಬಿಕೆ ಇಲ್ಲ... ಪಕ್ಷದ ತತ್ವಗಳು ಮುಖ್ಯವಾಗ ಬೇಕು ವಿನಃ ಪಕ್ಷವಲ್ಲ... ಇಂಗ್ಲಿಷ್ ಭಾಷೆಯಲ್ಲಿ ಪುಸ್ತಕ ಪ್ರಕಟವಾದರೆ ಒಳ್ಳೆಯ ಹೋಟೆಲ್, ವಿದೇಶಗಳಲ್ಲೂ ಅಭಿಮಾನಿಗಳು ದೊರೆಯುತ್ತಾರೆ....'

ಹೀಗೆ ತಮ್ಮ ಪ್ರಖರ ಮಾತಿನ ಮೂಲಕ ವೇದಿಕೆ ಕಾರ್ಯಕ್ರಮದಿಂದ ದೂರ ಉಳಿದಿದ್ದವರನ್ನೂ ತಮ್ಮತ್ತ ಸೆಳೆದುಕೊಂಡರು ಹೋರಾಟಗಾರ್ತಿಯೂ ಆಗಿರುವ ಲೇಖಕಿ ಗೀತಾ ರಾಮಸ್ವಾಮಿ. ಇದು ಸಾಧ್ಯವಾಗಿದ್ದು, ನಗರದಲ್ಲಿ ನಡೆಯುತ್ತಿರುವ 'ಬೆಂಗಳೂರು ಸಾಹಿತ್ಯ ಉತ್ಸವ'ದಲ್ಲಿ.



ಗೀತಾ ರಾಮಸ್ವಾಮಿ

ಗೀತಾ ಅವರು ರಚಿಸಿದ 'ಲ್ಯಾಂಡ್, ಗನ್, ಕ್ಯಾಸ್ಟ್, ವಿಮೆನ್' ಪುಸ್ತಕದ ಕುರಿತ ಗೋಷ್ಠಿ ಅದಾಗಿತ್ತು.

ತಮ್ಮ ಮಹಿಳಾ ಹೋರಾಟದ ದಿನಗಳನ್ನು ನೆನಪಿಸಿಕೊಂಡ ಗೀತಾ, 'ವ್ಯವಸ್ಥೆಯ ವಿರುದ್ಧ ಹೋರಾಟ ಎಂದಾದಮೇಲೆ, ಪೊಲೀಸರು, ಗುಂಡು, ಹೊಡೆತ ಇವೆಲ್ಲವೂ ಸಾಮಾನ್ಯ. ಇಂಥ ಸಂದರ್ಭಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಪುರುಷರು ಮಹಿಳೆಯರನ್ನು ಮುಂದೆ ಬಿಡುತ್ತಾರೆ. ಪೊಲೀಸರು ಆಗ ಹೊಡೆಯುವುದಿಲ್ಲ, ಬಂಧಿಸುವುದಿಲ್ಲ ಎನ್ನುವ ಕಾರಣಕ್ಕಾಗಿ. ಹೀಗೆ ಹೋರಾಟಗಳಿಗೆ ಧುಮುಕುವ ಮಹಿಳೆಯರು ಮತ್ತೆ ಹಿಂದೆ ಸರಿದದ್ದೇ ಇಲ್ಲ' ಎಂದರು.

'ಸ್ನೇಹಿತರ ಗುಂಪಿನಲ್ಲಿ ನಾನೇ ಹೆಚ್ಚು ಜೋರು ಇದ್ದವಳು. ಹೋರಾಟದ ವಿಷಯದಲ್ಲಿ ಮಹಿಳೆಯರು ಜೋರಾಗಿಯೇ ಇರುತ್ತಾರೆ. ಖಾರದ ಪುಡಿಯನ್ನು ತಮ್ಮೊಂದಿಗೆ ಸದಾ ಇಟ್ಟುಕೊಳ್ಳುತ್ತಿದ್ದ ಮಹಿಳೆಯರು ಯಾವ ರೀತಿಯ ಸಂದರ್ಭವನ್ನೂ ಧೈರ್ಯದಿಂದ ಎದುರಿಸುತ್ತಿದ್ದರು. ಇದು ನಮ್ಮ ಹೋರಾಟಕ್ಕೆ ಬಹಳ ಸಹಕಾರಿಯಾಗಿತ್ತು. ಯಾರಿಗಾದರೂ ಹೊಡೆಯಬೇಕು ಎಂದಾದರೆ, ಹೊಡೆದ ಮೇಲಿನ ಪರಿಣಾಮವನ್ನು ಲೆಕ್ಕಿಸದೇ ಮಹಿಳೆಯರು ಹೊಡೆದೇಬಿಡುತ್ತಾರೆ' ಎಂದರು.

'ಎಡ ಚಿಂತನೆಯ ಹೋರಾಟಗಳಲ್ಲಿ ಭಾಗವಹಿಸುವುದನ್ನು ನಾನು 1976ರ ಹೊತ್ತಿಗೆ ಬಿಟ್ಟುಬಿಟ್ಟೆ. ಕಮ್ಯುನಿಸ್ಟ್ ಪಕ್ಷದೊಂದಿಗಿನ ಸಂಬಂಧವನ್ನೂ ಕಡಿದುಕೊಂಡೆ. ಹೋರಾಟ ಕಟ್ಟುವ ವಿಚಾರದಲ್ಲಿ ಹೋರಾಟ ಮಾತ್ರ ಮುಖ್ಯವಾಗಬೇಕು. ಪಕ್ಷದ ತತ್ವಗಳು ಮುಖ್ಯವಾಗಬೇಕು; ಪಕ್ಷವಲ್ಲ' ಎಂದರು.

'ಹೋರಾಟಗಾರರು, ಇಂಥ ಚಿಂತನೆಗಳನ್ನು ಇಟ್ಟುಕೊಂಡವರು, ಮನೆಯ ಒಳಗೂ ಹೊರಗೂ ಒಂದೇ ರೀತಿ ಇರಬೇಕು. ಮನೆಯಲ್ಲಿ ಹೆಂಡತಿಯ ಮುಂದೆ ಯಜಮಾನಿಕೆ ತೋರಿಸುವುದು. ಅದನ್ನು ಸಂಭ್ರಮಿಸುವುದು. ಆದರೆ, ಹೊರಗಡೆ ಸಮಾನತೆಯ ಭಾಷಣ. ಇಂಥ ವೈರುಧ್ಯದಿಂದ ಬೇಸತ್ತು ನಾನು ಪಕ್ಷ ಬಿಟ್ಟು ಹೊರಬಂದೆ' ಎಂದರು.

ಸಿಂಥಿಯಾ ಸ್ಟೀಫನ್ ಅವರು ಕಾರ್ಯಕ್ರಮ ನಿರ್ವಹಿಸಿದರು.

'ಮತೀಯ ಪಂಜರ ಪ್ರವೇಶಿಸುತ್ತಿರುವ ನ್ಯಾಯಾಂಗ'

'ಪ್ರಗತಿಪರ, ಜಾತ್ಯತೀತವಾದ ನ್ಯಾಯಾಂಗ ವ್ಯವಸ್ಥೆ ಇರುವುದು ಭಾರತದಲ್ಲಿ ಮಾತ್ರ. ಆದರೆ, ಇಂಥ ನ್ಯಾಯಾಂಗ ವ್ಯವಸ್ಥೆ ಮತೀಯ ಪಂಜರವನ್ನು ಪ್ರವೇಶಿಸುತ್ತಿದೆ ಎಂಬ ಆತಂಕ ನನ್ನನ್ನು ಸೇರಿ ಎಲ್ಲರನ್ನೂ ಕಾಡುತ್ತಿದ್ದೆ. ಆದ್ದರಿಂದ ನಮ್ಮ ಭವ್ಯ ನ್ಯಾಯಾಂಗ ವ್ಯವಸ್ಥೆಯನ್ನು ದೇಶದ ಜನರಿಗೆ ಪರಿಚಯಿಸುವುದರ ಮೂಲಕ ನ್ಯಾಯಾಂಗವನ್ನು ಪಂಜರದಿಂದ ಹೊರಗೆ ತರುವ ಪ್ರಯತ್ನವಾಗಬೇಕು. ಈ ಕುರಿತು ನನ್ನ ಪುಸ್ತಕ ಸದ್ಯದಲ್ಲೇ ಹೊರಬರಲಿದೆ' ಎಂದು ಕಾಂಗ್ರೆಸ್ ನಾಯಕ ವೀರಪ್ಪ ಮೊಯಿಲಿ ಹೇಳಿದರು.

'ನನ್ನ ಬೊಗಸೆಯ ಆಕಾಶ' ಕಾಂಗ್ರೆಸ್ ನಾಯಕ ವೀರಪ್ಪ ಮೊಯಿಲಿ ಅವರ ಆತ್ಮಕಥನ. ಈ ಪುಸ್ತಕಕ್ಕೆ ಸಂಬಂಧಿಸಿ ಆಯೋಜಿಸಲಾಗಿದ್ದ ಗೋಷ್ಠಿಯಲ್ಲಿ ಮಾತನಾಡಿದರು. ಪತ್ರಕರ್ತ ಬಿ.ಎಂ. ಹನೀಫ್ ಗೋಷ್ಠಿಯನ್ನು ನಡೆಸಿಕೊಟ್ಟರು.

'ನನ್ನ ಮತ್ತು ದೇವರಾಜ ಅರಸು ಅವರ ಮಧ್ಯೆ ಕೊನೆ ಕೊನೆಗೆ ಕೆಲವು ತಪ್ಪುಗ್ರಹಿಕೆಗಳು ಉಂಟಾದವು. ಅವರು ಜ್ಯೋತಿಷಿಗಳ ಬಲೆಗೆ ಬಿದ್ದರು. 1978ರಲ್ಲಿ ನನ್ನನ್ನು ಮಂತ್ರಿ ಮಾಡಲಿಲ್ಲ. ಯಾಕೆಂದರೆ, ಅರಸು ಮತ್ತು ಮೊಯಿಲಿ ಜಾತಕ ಕೂಡಿ ಬರುವುದಿಲ್ಲ ಎಂದು ಅರಸು ಅವರಿಗೆ ಯಾರೋ ಹೇಳಿದ್ದರಂತೆ. ಅದಕ್ಕೆ ನನ್ನನ್ನು ಕೈಬಿಟ್ಟರು' ಎಂದರು.

ಕೊಟ್ಟದ್ದು ವೆಂಟಿಲೇಟರ್‌ಗಳಲ್ಲ, ಬೈಪಾಪ್ ಯಂತ್ರಗಳು: ತಲ್ಲೂರ್

'ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೂ ಪಿಎಂ ಕೇರ್ಸ್‌ನಿಂದ ವೆಂಟಿಲೇಟರ್‌ಗಳನ್ನು ಖರೀದಿ ಮಾಡಲಾಯಿತು. ಆದರೆ, ಇವು ಬೈಪಾಪ್ ಯಂತ್ರಗಳಾಗಿದ್ದವು' ಎಂದು ಲೇಖಕ ರಾಜಾರಾಂ ತಲ್ಲೂರು ಅವರು ಹೇಳಿದರು.

ತಮ್ಮ ಪುಸ್ತಕ 'ಕೋವಿಡ್ ಕರಿಡಬ್ಬಿ' ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಂದು ವೆಂಟಿಲೇಟರ್‌ಗೆ ₹40 ಲಕ್ಷದಿಂದ ₹60 ಲಕ್ಷವಾಗುತ್ತದೆ ಎಂದು ಕೋವಿಡ್‌ಗೂ ಮೊದಲು ನಮಗೆಲ್ಲಾ ತಿಳಿದಿತ್ತು. ಆದರೆ, ಕೋವಿಡ್ ಕಾಲದಲ್ಲಿ ₹4 ಲಕ್ಷಕ್ಕೆ ವೆಂಟಿಲೇಟರ್‌ಗಳನ್ನು ಕೊಡಲಾಯಿತು. ಇವು, ಕೋವಿಡ್ ಚಿಕಿತ್ಸೆಗೆ ಮಾತ್ರ ಬರುವಂಥವಾಗಿದ್ದವು. ಇವೆಲ್ಲವೂ ಬೈಪಾಪ್ ಯಂತ್ರಗಳಾಗಿದ್ದವು. ಹಾಗಾದರೆ ಅಷ್ಟೊಂದು ದೊಡ್ಡ ಸಂಖ್ಯೆಯ ವೆಂಟಿಲೇಟರ್‌ಗಳು ಈಗ ಯಾವ ಕೆಲಸ ಮಾಡುತ್ತಿವೆ' ಎಂದು ಪ್ರಶ್ನಿಸಿದರು.

'ಆಮ್ಲಜನಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಯಿತು. ತಾಲ್ಲೂಕು ಆಸ್ಪತ್ರೆಯೊಂದಕ್ಕೆ ತಿಂಗಳಿಗೋ, ವಾರಕ್ಕೋ ಬೇಕಾಗುವ ಆಮ್ಲಜನಕವನ್ನು ಈ ಘಟಕಗಳು ಒಂದು ದಿನದಲ್ಲಿ ಉತ್ಪಾದಿಸಿದ್ದವು. ಈಗ ಈ ಘಟಕಗಳಲ್ಲಿ ಉತ್ಪಾದಿಸಲಾಗುತ್ತಿರುವ ಹೆಚ್ಚುವರಿ ಆಮ್ಲಜನಕವನ್ನು ಯಾವುದಕ್ಕೆ ಉಪಯೋಗ ಮಾಡಿಕೊಳ್ಳಲಾಗುತ್ತಿದೆ. ವ್ಯವಸ್ಥೆಯನ್ನು ಅವ್ಯವಸ್ಥೆ ಮಾಡುವ ಯತ್ನವಿದು' ಎಂದರು.

'ಹಿಂದೆ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಾಗ ರೋಗ ನಿಯಂತ್ರಣ ರಾಷ್ಟ್ರೀಯ ಸಂಸ್ಥೆಗೆ ರೋಗ ನಿಯಂತ್ರಣದ ಜಬಾಬ್ದಾರಿಯನ್ನು ಸರ್ಕಾರ ನೀಡುತ್ತಿತ್ತು. ಆದರೆ, ಇದೇ ಮೊದಲ ಬಾರಿಗೆ ಸಂಶೋಧನಾ ಸಂಸ್ಥೆಯಾದ ಐಸಿಎಂಆರ್ ಜವಾಬ್ದಾರಿ ನೀಡಲಾಯಿತು. ಈ ಸಂಸ್ಥೆಯು ಇಡೀ ಸಾಂಕ್ರಾಮಿಕವನ್ನು ಪ್ರಯೋಗದ ರೀತಿಯಲ್ಲಿ ನಿರ್ವಹಿಸಿತು' ಎಂದರು. ಟೀನಾ ಶಶಿಕಾಂತ್ ಅವರು ಗೋಷ್ಠಿ ನಿರ್ವಹಿಸಿದರು.

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಕವಯಿತ್ರಿ ಕೆ. ಶಿವಕಾಮಿ ಪ್ರತಿಪಾದನೆ

'ದಲಿತ ಬರಹಗಳ ಸ್ವೀಕೃತಿ ಈಗಲೂ ಕಷ್ಟ'

• ವಿಶಾಖ ಎನ್.

ಬೆಂಗಳೂರು: 1980ರ ದಶಕದಲ್ಲಿ ದಲಿತ ಸಾಹಿತ್ಯದ ಸ್ವೀಕೃತಿ ಉತ್ತಮ ರೀತಿಯಲ್ಲಿ ಆಯಿತು. 2000ದ ನಂತರ ಪರಿಸ್ಥಿತಿ ತುಸು ಕಷ್ಟವೆನಿಸತೊಡಗಿತು ಎಂದು ಕಾದಂಬರಿಗಾರ್ತಿ, ಕವಯಿತ್ರಿ ಹಾಗೂ ಸ್ವಯಂ ನಿವೃತ್ತಿ ಪಡೆದ ಐಎಎಸ್ ಅಧಿಕಾರಿ ಪಿ. ಶಿವಕಾಮಿ ಪ್ರತಿಪಾದಿಸಿದರು.

ಬೆಂಗಳೂರು ಸಾಹಿತ್ಯ ಉತ್ಸವದ ಮೊದಲ ದಿನವಾದ ಶನಿವಾರ ನಡೆದ 'ಓಯಿಂಗ್ ದಿ ನರೇಟಿವ್: ದಲಿತ್ ರೈಟಿಂಗ್ ಇನ್ ಫೋಕಸ್' (ದಲಿತ ಕೇಂದ್ರಿತ ಬರಹದಲ್ಲಿ ಕಥಾ ನಿರೂಪಣೆಯ ಕಾಣ್ಕೆ) ಎಂಬ ವಿಚಾರ ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪೆರುಮಾಳ್ ಮುರುಗನ್, ಜಯರಾಮನ್ ಅವರಂತಹ ತಮಿಳು ದಲಿತ ಲೇಖಕರನ್ನು ಮೊದಮೊದಲು ಕೆಟ್ಟ ಧೋರಣೆಯಿಂದ ನೋಡಿದ್ದರು. ಕಾಲಕ್ರಮೇಣ ದಲಿತೇತರರ ಬರಹಗಳ ಮೇಲೂ ಅವರ ಸಾಹಿತ್ಯ ಪರಿಣಾಮ ಬೀರಿತು. ಇದರಿಂದ ನಿಧಾನವಾಗಿ ಧೋರಣೆ ಬದಲಾಯಿತಷ್ಟೆ. ಈಗಲೂ ಬೇರೆ ಜಾತಿಯವರಲ್ಲಿ ದಲಿತ ಬರಹಗಳ ಸ್ವೀಕೃತಿ ಕಷ್ಟವೇ ಎಂಬ ಸ್ಥಿತಿ ಇದೆ' ಎಂದರು.



ಬೆಂಗಳೂರು ಸಾಹಿತ್ಯ ಉತ್ಸವದ ಶನಿವಾರ 'ದಲಿತ ಕೇಂದ್ರಿತ ಬರಹದಲ್ಲಿ ಕಥಾ ನಿರೂಪಣೆಯ ಕಾಣ್ಕೆ' ಕುರಿತ ಗೋಷ್ಠಿಯಲ್ಲಿ ಸಾಹಿತಿ ಪಿ.ಶಿವಕಾಮಿ ಮಾತನಾಡಿದರು. ಮಿನಿ ಕೃಷ್ಣನ್ ಮತ್ತು ಅನುವಾದಕಿ ವಸಂತ ಸೂರ್ಯ ಇದ್ದಾರೆ.
– ಪ್ರಜಾವಾಣಿ ಚಿತ್ರ

'ನೂರಕ್ಕೂ ಹೆಚ್ಚು ದಲಿತರು ತಮಿಳಿನಲ್ಲಿ ಬರಹಗಳ ಮೂಲಕ ಹೆಚ್ಚಿನದನ್ನು ಸಾಧಿಸಲು ಸಾಧ್ಯವಾಗಿದೆ. ಜಾತಿ ಸೂಕ್ಷ್ಮದ ಇಂತಹ ಬರಹಗಳು ದಲಿತೇತರರಿಗೆ ನಾಟುವುದು ಕಷ್ಟ. ಬರಹವೆಂದರೆ ಬರೀ ಕಟ್ಟುವಿಕೆಯ ಸೌಂದರ್ಯ ಕುರಿತದ್ದಲ್ಲ, ಅದು ನಮ್ಮ ಬದುಕನ್ನು ಸುಧಾರಿಸುವಂತೆ ಇರಬೇಕು. ತಮಿಳಿನ ಎಷ್ಟೋ ಹಳ್ಳಿಗಳ ದಲಿತ ಮಹಿಳೆಯರಲ್ಲಿ ಈಗಲೂ ಒಂದು ಗ್ರಾಂ ಚಿನ್ನ ಕೂಡ ಇಲ್ಲ' ಎಂದು ವಸ್ತುಸ್ಥಿತಿಯ ಮೇಲೆ ಬೆಳಕು ಚೆಲ್ಲಿದರು.

ದಲಿತ ಸಾಹಿತ್ಯದ ಅನುವಾದದ ಮೂಲಕ ಹೆಸರಾಗಿರುವ ವಸಂತ ಸೂರ್ಯ, ಕೆಲವು ಪ್ರಮುಖ ಬರಹಗಳು, ಕಾವ್ಯಗಳ ಉದಾಹರಣೆ ನೀಡುತ್ತಾ ಮಾತನಾಡಿದರು. ಕಳೆದ ವರ್ಷ ದೆಹಲಿ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯ ವಿಷಯದಿಂದ ಕೈಬಿಟ್ಟ ದಲಿತ ಬರಹವೊಂದರ ಸಾರಾಂಶವೊಂದನ್ನು ನೆನಪಿಸಿಕೊಂಡರು. 1968ರಲ್ಲಿ 23 ಮಕ್ಕಳನ್ನೂ ಸೇರಿದಂತೆ 56 ಮಂದಿಯನ್ನು ಗುಡಿಸಲಿನಲ್ಲಿ ಬಂಧಿಸಿ ಕೊಳ್ಳಿಇಟ್ಟ ಪ್ರಸಂಗವೊಂದು ದಲಿತ ಸಾಹಿತ್ಯದ ಭಾಗವಾಗಿರುವುದನ್ನು ಭಾವುಕರಾಗಿ ವಿವರಿಸಿದರು.

'ಸತ್ಯವೇವ ಜಯತೆ' ಎನ್ನುವುದು ತಮಿಳಿನ ಪ್ರಮುಖ ದಲಿತ ಸಾಹಿತಿಗಳ ನರನಾಡಿ, ಬೆನ್ನುಹುರಿಯಲ್ಲೂ ಮಿಳಿತವಾಗಿದೆ ಎಂದರು.

ಮಿನಿ ಕೃಷ್ಣನ್ ವಿಚಾರ ಮಂಥನದ ನಿರ್ವಹಣೆ ಮಾಡಿದರು.

ಭಾನುವಾರ, ಡಿಸೆಂಬರ್ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 334 | ಪುಟ 22
www.prajavani.net
/prajavani.net @prajavani /+prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಾಮಗಾರಿಯಲ್ಲಿ ನಿಯಮ ಉಲ್ಲಂಘನೆ • ಲಂಚಕ್ಕೆ ಆದ್ಯತೆ • ಪರಿಹಾರಕ್ಕೂ ಗಂಡಾಗುಂಡಿ

ರಸ್ತೆಗುಂಡಿಗೆ ಯಾರು ಹೊಣೆ?

ರಸ್ತೆ ಮಾಹಿತಿ				
3,29,962 ಕಿ.ಮೀ	7,589 ಕಿ.ಮೀ	27,814 ಕಿ.ಮೀ	56,165 ಕಿ.ಮೀ	2,38,394 ಕಿ.ಮೀ
ರಾಜ್ಯದಲ್ಲಿರುವ ಒಟ್ಟು ರಸ್ತೆ	ರಾಷ್ಟ್ರೀಯ ಹೆದ್ದಾರಿ	ರಾಜ್ಯ ಹೆದ್ದಾರಿ	ಜಿಲ್ಲಾ ರಸ್ತೆ	ಪಾಲಿಕೆ, ನಗರ–ಪುರಸಭೆ, ಗ್ರಾಮೀಣ ರಸ್ತೆ

• ಆರ್. ಮಂಜುನಾಥ್

ಬೆಂಗಳೂರು: ‘ದೇಶಕ್ಕಾಗಿ ಗಡಿಯಲ್ಲಿ ಹೋರಾಡಿದ ಮಗ ಇಲ್ಲಿಗೆ ಬಂದು ಯಕಶ್ಚಿತ್ ರಸ್ತೆ ಗುಂಡಿಗೆ ಬಲಿಯಾದ. ಶತ್ರುಗಳ ಗುಂಡಿಗೆ ಬಲಿಯಾಗಿದ್ದರೆ ದೇಶಕ್ಕಾಗಿ ತ್ಯಾಗ ಮಾಡಿದ ಎಂಬ ಹೆಮ್ಮೆ ಇರುತ್ತಿತ್ತು. ಆದರೆ ಇಲ್ಲಿ ಅನ್ಯಾಯವಾಗಿ ಪ್ರಾಣ ಕಳೆದುಕೊಂಡ...’

-ಮಂಡ್ಯ ಜಿಲ್ಲೆಯ ಸಾತನೂರು ಗ್ರಾಮದ ನಿವೃತ್ತ ಎಎಸ್ಐ ಎನ್. ನರಸಯ್ಯ ಹಾಗೂ ಅವರ ಪತ್ನಿ ಸರೋಜಮ್ಮ ಅವರು ಹೀಗೆ ಹೇಳುವಾಗ ಕಣ್ಣೀರು ತುಂಬಿತ್ತು. ಮಂಡ್ಯ ಜಿಲ್ಲೆಯಲ್ಲಿ ಕಾರೆಮನೆ ಗೇಟ್ ಬಳಿ ರಸ್ತೆ ಗುಂಡಿ ತಪ್ಪಿಸಲು ಹೋಗಿ ದ್ವಿಚಕ್ರ ವಾಹನದಿಂದ ಕೆಳಗೆ ಬಿದ್ದು ಲಾರಿ ಚಕ್ರಕ್ಕೆ ಸಿಲುಕಿ ಮೃತಪಟ್ಟ ಎಸ್.ಎನ್.ಕುಮಾರ್ (38) ಅವರು ಭಾರತೀಯ ಸೇನೆಯಿಂದ ನಿವೃತ್ತರಾಗಿ ಎರಡು ವರ್ಷವಷ್ಟೇ ಆಗಿತ್ತು. ‘ಜಮ್ಮು–ಕಾಶ್ಮೀರ ಸೇರಿದಂತೆ ದೇಶದ ಹಲವೆಡೆ ಕಠಿಣ ಪರಿಸ್ಥಿತಿಯಲ್ಲಿ ಸೇವೆ ಸಲ್ಲಿಸಿ ಸಾವು ಗೆದ್ದು ಬಂದಿದ್ದ ಮಗ, ರಸ್ತೆ ಗುಂಡಿಗೆ ಬಲಿಯಾದ’ ಎಂದು ಪೋಷಕರು ಮರುಗಿದರು.

ಬೆಂಗಳೂರು, ದಾವಣಗೆರೆ, ಮಂಗಳೂರು, ಮೈಸೂರಿನಲ್ಲಿ ಈ ವರ್ಷ 12ಕ್ಕೂ ಹೆಚ್ಚು ಮಂದಿ ರಸ್ತೆ ಗುಂಡಿಗೆ ಪ್ರಾಣ ಕಳೆದುಕೊಂಡಿದ್ದಾರೆ. ಈ ಸಂತ್ರಸ್ತರಿಗೆ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ಪರಿಹಾರ ನೀಡಿಲ್ಲ. ಪೊಲೀಸರು ದಾಖಲಿಸುವ ಎಫ್ಐಆರ್‌ನಲ್ಲಿ ‘ಅಪಘಾತಕ್ಕೆ ಅಜಾಗರೂಕತೆಯ ಚಾಲನೆ’ ಎಂಬುದು ನಮೂದಾಗದ್ದರಿಂದ ಪರಿಹಾರ ಸಿಗುತ್ತಿಲ್ಲ. ಇನ್ನು, ಕಳಪೆ ಕಾಮಗಾರಿಯಿಂದಾಗಿಯೇ ಸೃಷ್ಟಿಯಾಗುತ್ತಿರುವ ರಸ್ತೆ ಗುಂಡಿಗೆ ಕಾರಣರಾದ ಗುತ್ತಿಗೆದಾರ, ಎಂಜಿನಿಯರ್‌ಗಳಿಗೆ ಕನಿಷ್ಠ ಶಿಸ್ತುಕ್ರಮದ ಶಿಕ್ಷೆಯೂ ಆಗುತ್ತಿಲ್ಲ.



ಬೆಂಗಳೂರಿನ ಬೇಗೂರು – ಬೊಮ್ಮನಹಳ್ಳಿ ಮುಖ್ಯರಸ್ತೆಯ ದುಸ್ಥಿತಿ
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಒಳನೋಟ
ಈ ಸಾವು ನ್ಯಾಯವೇ?
ಪ್ರತಿಕ್ರಿಯಿಸಿ: 9606038256
feedback@prajavani.co.in

ದಾವಣಗೆರೆಯ ಚಳ್ಳಕೆರೆಯಲ್ಲಿ ಗುಂಡಿ ತಪ್ಪಿಸಲು ಹೋಗಿ ಆಯತಪ್ಪಿ ಬಿದ್ದ ಜಗಳೂರು ತಾಲ್ಲೂಕಿನ ಮುಸ್ಟೂರು ಗ್ರಾಮದ ಪಶು ಆಸ್ಪತ್ರೆ ನೌಕರ ಹರೀಶ್ ಸ್ಥಳದಲ್ಲೇ ಮೃತಪಟ್ಟಿದ್ದರು. ಅವರಿಗೆ ಎರಡು ವರ್ಷದ ಮಗು ಸೇರಿದಂತೆ ಇಬ್ಬರು ಮಕ್ಕಳು. ಪತ್ನಿಗೆ ಆದಾಯದ ಮೂಲವಿಲ್ಲ. ‘ಇಲ್ಲಿಯವರೆಗೆ ಯಾವುದೇ ಪರಿಹಾರ ಬಂದಿಲ್ಲ. ಇಬ್ಬರು ಮಕ್ಕಳನ್ನು ಸಾಕಿ ಸಲಹುವುದು ಕಷ್ಟವಾಗಿದೆ’ ಎಂದು ಪತ್ನಿ ಐಶ್ವರ್ಯ ಅಳಲು ತೋಡಿಕೊಂಡರೂ ಕೇಳುವವರು ಇಲ್ಲದಂತಾಗಿದೆ. ಜಿಲ್ಲೆಯ ಆವಲಗೆರೆಯ ನಾಗರಾಜ್ ಕೂಡ ರೈಲ್ವೆ ಕೆಳಸೇತುವೆಯಲ್ಲಿ ರಸ್ತೆಗುಂಡಿಗೆ ಬಿದ್ದು ಮೃತಪಟ್ಟರು. ಅವರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ.

ರಸ್ತೆ ಗುಂಡಿಯಿಂದಾಗಿ ಅಪಘಾತ ಸಂಭವಿಸಿದರೆ, ಆ ರಸ್ತೆಯನ್ನು ಸರಿಯಾಗಿ ನಿರ್ವಹಣೆ ಮಾಡಬೇಕಾದ ಹೊಣೆ ಹೊತ್ತ ಇಲಾಖೆಯೇ ಸಂತ್ರಸ್ತರಿಗೆ ಪರಿಹಾರ ನೀಡಬೇಕು ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ. ಇಂತಹ ಪ್ರಕರಣಗಳಲ್ಲಿ ಸಂತ್ರಸ್ತರು ದೂರು ನೀಡಲು ನಗರ ಸ್ಥಳೀಯ ಸಂಸ್ಥೆಗಳು ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಆದರೆ, ಸ್ಥಳೀಯ ಸಂಸ್ಥೆಗಳು ಈ ನಿರ್ದೇಶನವನ್ನೂ ಪಾಲಿಸುತ್ತಿಲ್ಲ.

‘ರಸ್ತೆ ಗುಂಡಿಯಿಂದಾಗಿ ಸತ್ತವರ ಕುಟುಂಬದವರಿಗೆ ನಾವು ಇದುವರೆಗೂ ಪರಿಹಾರ ನೀಡಿದ ಉದಾಹರಣೆ ಇಲ್ಲ. ಇಂತಹ ಪರಿಪಾಟವೇ ನಮ್ಮ ಪಾಲಿಕೆಯಲ್ಲಿಲ್ಲ’ ಎಂದು ಮಂಗಳೂರು ಪಾಲಿಕೆ ಆಯುಕ್ತ ಅಕ್ಷಯ್ ಶ್ರೀಧರ್ ಹೇಳುತ್ತಾರೆ.

ರಸ್ತೆ ಹೇಗಿರಬೇಕು? ನಿಯಮವೇನು?

ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಗ್ರೇಡ್ 80/100 ಬಿಟುಮಿನ್ (ಜಲ್ಲಿಕಲ್ಲಿನಂತೆ ಕಪ್ಪಗಿರುವ ಸಾಮಗ್ರಿ) ಬಳಸಬೇಕು. ತಂಪು ವಾತಾವರಣದಲ್ಲಿ ಗ್ರೇಡ್ 30/40 ಬಿಟುಮಿನ್ ಬಳಸಬೇಕು. ಬಿಟುಮಿನ್ ಹಾಕುವ ಮೊದಲು ಮತ್ತು ನಂತರ ರೋಲರ್‌ಗಳಲ್ಲಿ 10ರಿಂದ 20 ಬಾರಿ ಕಾಂಪ್ಯಾಕ್ಷನ್ ಮಾಡಬೇಕು. ಬಿಟುಮಿನ್ ರಸ್ತೆಗೆ ಹಾಕುವಾಗ 140 ಡಿಗ್ರಿಯಿಂದ 165 ಡಿಗ್ರಿ ಉಷ್ಣಾಂಶ ಹೊಂದಿರಬೇಕು. ಅಂಟುಪದರಗಳನ್ನು ಅಗತ್ಯಕ್ಕೆ ಅನುಸಾರವಾಗಿ ಸರಿಯಾದ ಪ್ರಮಾಣದಲ್ಲಿ ಬಳಸಬೇಕು. ರಸ್ತೆಯಲ್ಲಿ ನೀರು ನಿಲ್ಲದಂತೆ ಇಳಿಜಾರು ಇರಬೇಕು. ರಸ್ತೆ ಬದಿಯೂ ನೀರು ನಿಲ್ಲದಂತೆ ಶೋಲ್ಡರ್ ಡ್ರೈನ್, ಚರಂಡಿಗಳ ನಿರ್ಮಾಣವಾಗಬೇಕು ಎಂಬುದು ಐಆರ್‌ಸಿ ನಿಯಮ.

ರಸ್ತೆ ಗುಂಡಿ ದುರಸ್ತಿ: ರಸ್ತೆ ಗುಂಡಿ ದುರಸ್ತಿ ಸಂದರ್ಭದಲ್ಲಿ ಗುಂಡಿ ಸುತ್ತಲು ಆಯತಾಕಾರದಲ್ಲಿ (ರೆಕ್ಟಾಂಗಲ್) ರಸ್ತೆ ಅಗೆದುಕೊಂಡು, ಮೂಲವಾಗಿ ಹಾಕಲಾಗಿರುವ ಪದರ ಕಾಣುವಂತಾಗಬೇಕು. ನಂತರ ಅಲ್ಲಿರುವ ಎಲ್ಲ ದೂಳು ತೆಗೆದು ಅಂಟು ಪದರವನ್ನು ಹಾಕಬೇಕು. ಬಿಟುಮಿನ್ ಹಾಕಿ ನಂತರ ಸೀಲೆಂಟ್ ಅಥವಾ ಎಮಲ್ಷನ್ ಹಾಕಬೇಕು. ಸೂಕ್ತ ರೀತಿಯಲ್ಲಿ ಕಾಂಪ್ಯಾಕ್ಷನ್ ಮಾಡಬೇಕು.

‘ರಸ್ತೆ ನಿರ್ಮಾಣ ಅಥವಾ ರಸ್ತೆ ಮೇಲ್ಮೈ ಅಭಿವೃದ್ಧಿ ಸಂದರ್ಭದಲ್ಲಿ ಎಲ್ಲ ರೀತಿಯ ತಪಾಸಣೆ ಮಾಡಬೇಕಿದೆ. ಒಂದು ಯೋಜನೆಗೆ ನಿರ್ವಹಣಾ ಸಂಸ್ಥೆ ಇರುತ್ತದೆ. ಗುತ್ತಿಗೆದಾರರಿರುತ್ತಾರೆ. ಸೈಟ್ ಎಂಜಿನಿಯರ್ ಇರುತ್ತಾರೆ. ಎಂಜಿನಿಯರ್‌ಗಳ ಮೇಲ್ವಿಚಾರಣೆಯಲ್ಲಿ ಕಾಮಗಾರಿ ನಡೆಯುತ್ತದೆ. ಪ್ರತಿ ಚದರ ಅಡಿಗೆ ತಪಾಸಣೆಯಾಗಬೇಕು. ಆದರೆ ಇದ್ಯಾವುದೂ ನಿಯಮಾನುಸಾರ ನಡೆಯದೇ ಇರುವುದರಿಂದ ಕಾಮಗಾರಿ ಕಳಪೆಯಾಗುತ್ತದೆ. ಲೋಕೋಪಯೋಗಿ ಇಲಾಖೆಯ ಕೋಡಲ್ ರೂಲ್ ಪ್ರಕಾರ, ಇದರ ಜವಾಬ್ದಾರಿ ಸಹಾಯಕ ಎಂಜಿನಿಯರ್ (ಎಇ) ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳದ್ದೇ (ಎಇಇ). ಕಾರ್ಯಪಾಲಕ ಎಂಜಿನಿಯರ್‌ಗೂ (ಇಇ) ಸಮನಾಂತರ ಜವಾಬ್ದಾರಿ ಇರುತ್ತದೆ. ಇವರ ಮೇಲೆ ಕ್ರಮ ಕೈಗೊಳ್ಳಬಹುದು’ ಎಂದು ಹಿರಿಯ ಎಂಜಿನಿಯರ್‌ಗಳೇ ಹೇಳುತ್ತಾರೆ. ‘ಯಾವುದೇ ಇಲಾಖೆಯಲ್ಲಿ ಕಳಪೆ ಕಾಮಗಾರಿ ನಡೆದರೆ ಆಂತರಿಕವಾಗಿ ತನಿಖೆ ನಡೆಸಿ ಶಿಕ್ಷೆ ನೀಡಬಹುದು. ಎಂಜಿನಿಯರ್‌ಗಳಿಗೆ ಬಡ್ತಿ, ವೇತನ ಹೆಚ್ಚಳ ತಡೆಯಬಹುದು, ಕಡಿಮೆಯನ್ನೂ ಮಾಡಬಹುದು. ಇನ್ನು ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಯಾವುದೇ ಕಾಮಗಾರಿ ನೀಡದಂತೆ ಮಾಡಬಹುದು. ಇವೆಲ್ಲವೂ ನಿಯಮಗಳ ಪುಸ್ತಕದಲ್ಲಿವೆ. ಇವೆಲ್ಲ ಆಚರಣೆಯಲ್ಲಿ ಇಲ್ಲದ ಕಾರಣ ಈ ವರ್ಷ ನಿರ್ಮಾಣವಾದ ರಸ್ತೆಯಲ್ಲಿ ಮುಂದಿನ ವರ್ಷವೇ ಗುಂಡಿಗಳಾಗುತ್ತವೆ’ ಎನ್ನುತ್ತಾರೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4



ಸಾಹಿತ್ಯ ಉತ್ಸವ ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಶನಿವಾರ ಸಂವಾದ ಕಾರ್ಯಕ್ರಮದಲ್ಲಿ ತಲ್ಲೀನರಾಗಿದ್ದ ಸಾಹಿತ್ಯಾಸಕ್ತರು –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಸುದ್ದಿ 6

ಮುರುಘಾ ಮಠಕ್ಕೆ ನೂತನ ಪೀಠಾಧ್ಯಕ್ಷ ನೇಮಕ ವಿಚಾರ

ಕೋರ್ಟ್‌ಗೆ ಮೊರೆ: ತೀರ್ಮಾನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠಕ್ಕೆ ನೂತನ ಪೀಠಾಧ್ಯಕ್ಷ ಅಥವಾ ಆಡಳಿತಾಧಿಕಾರಿ ನೇಮಕ ಮಾಡುವಲ್ಲಿ ಸರ್ಕಾರ ವಿಳಂಬ ನೀತಿ ಮುಂದುವರಿಸಿದರೆ ನ್ಯಾಯಾಲಯದ ಮೆಟ್ಟಿಲೇರಲು ವೀರಶೈವ ಲಿಂಗಾಯತ ಸಮಾಜದ ಸಭೆ ಶನಿವಾರ ಒಮ್ಮತದ ನಿರ್ಣಯ ಕೈಗೊಂಡಿತು.

ತಾಲ್ಲೂಕಿನ ಸೀಬಾರದಲ್ಲಿರುವ ಎಸ್. ನಿಜಲಿಂಗಪ್ಪ ಸ್ಮಾರಕದಲ್ಲಿ ಮಾಜಿ ಸಚಿವ ಎಚ್. ಏಕಾಂತಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಮೂರು ನಿರ್ಣಯಗಳನ್ನು ಅನುಮೋದಿಸಿತು. ಸಭೆಯ ತೀರ್ಮಾನದ ಕುರಿತು ಮುಖ್ಯಮಂತ್ರಿಗೆ ಪತ್ರ ಬರೆಯಲು ನಿರ್ಧರಿಸಲಾಯಿತು.

‘ಶಿವಮೂರ್ತಿ ಶರಣರ ಬಂಧನದ ಬಳಿಕ ಮುರುಘಾ ಮಠ ಹಾಗೂ ಎಸ್‌ಜೆಎಂ ವಿದ್ಯಾಪೀಠದಲ್ಲಿರುವ ವಿಷಮ ಸ್ಥಿತಿಯ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚಿಸಲಾಗಿದೆ. ನೂತನ ಪೀಠಾಧ್ಯಕ್ಷರು ಅಥವಾ ಆಡಳಿತಾಧಿಕಾರಿ ನೇಮಕ ಮಾಡುವಂತೆ ಅಕ್ಟೋಬರ್ 14ರಂದು ಕೋರಲಾಗಿತ್ತು. ಸರ್ಕಾರ ಈವರೆಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಒಂದು ವಾರ ಕಾದುನೋಡಿ ಮುಂದಿನ ಹೆಜ್ಜೆ ಇಡಲಾಗುವುದು’ ಎಂದು ಏಕಾಂತಯ್ಯ ಮಾಹಿತಿ ನೀಡಿದರು.

ಸಂಚು ಆರೋಪ: ಒಬ್ಬನ ಬಂಧನ

ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸುವಂತೆ ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಹಾಗೂ ಸಂಚು ರೂಪಿಸಿದ ಆರೋಪದಡಿ ಗ್ರಾಮಾಂತರ ಠಾಣೆಯ ಪೊಲೀಸರು ಛಾಯಾಗ್ರಾಹಕ ಮಯೂರ ಎಂಬಾತನನ್ನು ಬಂಧಿಸಿದ್ದಾರೆ.

ಈ ಪ್ರಕರಣದಲ್ಲಿ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಹಾಗೂ ಶಿಕ್ಷಕ ಬಸವರಾಜೇಂದ್ರ ನ್ಯಾಯಾಂಗ ಬಂಧನದಲ್ಲಿದ್ದಾರೆ. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ ತಲೆಮರೆಸಿಕೊಂಡಿದ್ದಾರೆ.

ಚಿತ್ರದುರ್ಗದ ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಿಸಲು ನಮ್ಮ ವಿರೋಧವಿಲ್ಲ. ಲಿಂಗಾಯತ ಪರಂಪರೆ, ಶರಣ ತತ್ವ ಅರಿತವರನ್ನೇ ನೇಮಿಸಬೇಕು
ಶಿವಾನಂದ ಎಂ. ಜಾಮದಾರ, ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ

‘ಸರ್ಕಾರ ಯಾವುದೇ ತೀರ್ಮಾನ ಕೈಗೊಳ್ಳದಿದ್ದರೆ ಅಥವಾ ನಕಾರಾತ್ಮಕ ನಿರ್ಧಾರ ಪ್ರಕಟಿಸಿದರೆ ಕಾನೂನು ಹೋರಾಟಕ್ಕೆ ಸಮುದಾಯ ಸಿದ್ಧವಿದೆ. ಇದಕ್ಕೆ ಸಮಿತಿಯೊಂದನ್ನು ರಚಿಸಲು ಹಾಗೂ ತೀರ್ಮಾನ ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ಅದಕ್ಕೆ ನೀಡಲು ನಿರ್ಧರಿಸಲಾಗಿದೆ. ಮುರುಘಾ ಮಠದ ಪೀಠಾಧ್ಯಕ್ಷ ಸ್ಥಾನ ಒಂದು ವೇಳೆ ತೆರವಾದರೆ ಮಠದ ಪರಂಪರೆ ಮತ್ತು ಸಂಪ್ರದಾಯದ ಪ್ರಕಾರ ನೂತನ ಪೀಠಾಧ್ಯಕ್ಷರನ್ನು ನೇಮಕ ಮಾಡಲು ಮತ್ತೊಂದು ಸಮಿತಿ ರಚಿಸಲಾಗುವುದು’ ಎಂದು ವಿವರಿಸಿದರು.

ಚಿರತೆ ದಾಳಿ: ₹ 15 ಲಕ್ಷ ಪರಿಹಾರ– ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆನೆ ದಾಳಿಯಿಂದ ಮೃತಪಟ್ಟವರ ಕುಟುಂಬದವರಿಗೆ ನೀಡಿದಂತೆ, ಚಿರತೆ ದಾಳಿಯಿಂದ ಮೃತಪಟ್ಟವರ ಕುಟುಂಬದವರಿಗೂ ₹ 15 ಲಕ್ಷ ಪರಿಹಾರ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಚಿರತೆ ದಾಳಿ ತಡೆಯಲು ವಿಶೇಷ ತಂಡ ರಚಿಸಲಾಗಿದ್ದು, ನಿರ್ದಿಷ್ಟವಾಗಿ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ’ ಎಂದರು.

‘ಮೈಸೂರು ಮತ್ತು ಬೆಂಗಳೂರು ವಲಯದಲ್ಲಿ ಆನೆ ಕಾರಿಡಾರ್ ಸುತ್ತಮುತ್ತ ಚಿರತೆಗಳೂ ಇವೆ. ದಾಳಿಗಳನ್ನು ನಿಯಂತ್ರಿಸಲು ಹಾಗೂ ಕಾಡು ಬಿಟ್ಟು ಆಚೆ ಬಂದಿರುವ ಚಿರತೆಗಳನ್ನು ಹಿಡಿಯಲು ವಿಶೇಷ ತಂಡ ಕಾರ್ಯಾಚರಣೆ ಮಾಡಲಿದೆ’ ಎಂದರು.

‘ಚಿರತೆ ದಾಳಿಗಳು ಮೊದಲು ಕಾಡು ಪಕ್ಕದಲ್ಲಿ ಆಗುತ್ತಿತ್ತು. ಆದರೆ, ಈಗ ಬೆಂಗಳೂರಿನ ಆಸುಪಾಸಿನಲ್ಲಿ ಆಗುತ್ತಿದೆ. ಈ ವಿಷಯವನ್ನು ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಹಲವು ದಿನಗಳಿಂದ ಚಿರತೆ ಬೇಟೆಗೆ ಪ್ರಯತ್ನಿಸಲಾಗುತ್ತಿದೆ. ಅದನ್ನು ಜೀವಂತವಾಗಿ ಹಿಡಿದು ಕಾಡಿಗೆ ಬಿಡಲು ಇಲಾಖೆಗೆ ಸೂಚನೆ ನೀಡಲಾಗಿದೆ’ ತಿಳಿಸಿದರು.

ದೇಶದಲ್ಲೇ ಅತ್ಯಧಿಕ ಬೆಳವಣಿಗೆ ದರ • 7 ತಿಂಗಳಲ್ಲಿ ₹ 20 ಸಾವಿರ ಕೋಟಿ ಹೆಚ್ಚಳ

ಜಿಎಸ್‌ಟಿ: ಕರ್ನಾಟಕ ನಾಗಾಲೋಟ

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದಲ್ಲಿ ನವೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು ₹ 80,269 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ರಾಜ್ಯವು ಜಿಎಸ್‌ಟಿ ಸಂಗ್ರಹದಲ್ಲಿ ಶೇಕಡ 34ರಷ್ಟು ಪ್ರಗತಿ ಸಾಧಿಸಿದ್ದು, ಬೆಳವಣಿಗೆ ದರದಲ್ಲಿ ದೇಶದಲ್ಲೇ ಅಗ್ರ ಸ್ಥಾನಕ್ಕೇರಿದೆ.

2021-22ರಲ್ಲಿ ಕೇಂದ್ರ ಜಿಎಸ್‌ಟಿ (ಸಿಜಿಎಸ್‌ಟಿ) ಮತ್ತು ರಾಜ್ಯದ ಪಾಲಿನ ಜಿಎಸ್‌ಟಿ (ಎಸ್‌ಜಿಎಸ್‌ಟಿ) ಸೇರಿದಂತೆ ₹ 1 ಲಕ್ಷ ಕೋಟಿಗಿಂತಲೂ ಹೆಚ್ಚು ತೆರಿಗೆ ಸಂಗ್ರಹವಾಗಿತ್ತು. ರಾಜ್ಯದ ಪಾಲಿನ ಜಿಎಸ್‌ಟಿ ಮೂಲದಿಂದ ₹ 45,947 ಕೋಟಿ ವರಮಾನ ಸಂಗ್ರಹದ ಗುರಿ ಇತ್ತು. ಅದನ್ನು ಮೀರಿದ ಸಾಧನೆಯಾಗಿದ್ದು, ರಾಜ್ಯಕ್ಕೆ ಎಸ್‌ಜಿಎಸ್‌ಟಿ ರೂಪದಲ್ಲಿ ₹ 54,796 ಕೋಟಿ ಲಭಿಸಿತ್ತು.

‘ಈ ಆರ್ಥಿಕ ವರ್ಷದಲ್ಲಿ ಎಸ್‌ಜಿಎಸ್‌ಟಿ ಮೂಲದಿಂದ ₹ 59,280 ಕೋಟಿ ಜಿಎಸ್‌ಟಿ ಸಂಗ್ರಹದ ಗುರಿ ಇದೆ. ಏಳು ತಿಂಗಳ ಅವಧಿಯಲ್ಲಿ ₹ 43,230 ಕೋಟಿ ರಾಜ್ಯದ ಬೊಕ್ಕಸಕ್ಕೆ ಬಂದಿದೆ. 2021–22ನೇ ಆರ್ಥಿಕ ವರ್ಷದಲ್ಲಿ ಜಿಎಸ್‌ಟಿ ಸಂಗ್ರಹದ ಬೆಳವಣಿಗೆ ದರದಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಮುಂದಿದ್ದವು. ಈ ವರ್ಷ ಎರಡೂ ರಾಜ್ಯಗಳನ್ನು ಹಿಂದಿಕ್ಕಿರುವ ಕರ್ನಾಟಕ, ಮೊದಲ ಸ್ಥಾನಕ್ಕೇರಿದೆ’ ಎಂದು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ. ಶಿಖಾ ‘ಪ್ರಜಾವಾಣಿ’ಗೆ ತಿಳಿಸಿದರು.


ದೇಶದಲ್ಲಿನ ಜಿಎಸ್‌ಟಿ ಸಂಗ್ರಹದ ಸರಾಸರಿ ಬೆಳವಣಿಗೆ ದರ ಶೇ 24ರಷ್ಟಿದೆ. ಕೇರಳ ರಾಜ್ಯದ ಎರಡನೇ ಸ್ಥಾನದಲ್ಲಿದ್ದರೆ, ಅತ್ಯಧಿಕ ಜಿಎಸ್‌ಟಿ ಸಂಗ್ರಹವಾಗುವ ಮಹಾರಾಷ್ಟ್ರ ಮೂರನೇ ಸ್ಥಾನದಲ್ಲಿದೆ.

‘ತೆರಿಗೆದಾರರು ಸಲ್ಲಿಸುವ ಲೆಕ್ಕಪತ್ರಗಳ ಪರಿಶೀಲನೆಗೆ ಕರ್ನಾಟಕ ಜಿಎಸ್‌ಟಿ ಕಾಯ್ದೆಯ ಅಡಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಇದರಿಂದ ಹೆಚ್ಚಿನ ತೆರಿಗೆ ಸಂಗ್ರಹ ಸಾಧ್ಯವಾಗಿದೆ. ತನಿಖಾ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿ, ಸಿಬ್ಬಂದಿಯನ್ನು ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಿಗೆ ನಿಯೋಜಿಸಿ, ತೆರಿಗೆ ಸೋರಿಕೆ ತಡೆಗೆ ಕ್ರಮ ವಹಿಸಲಾಗಿದೆ. ಇವೆಲ್ಲವೂ ರಾಜ್ಯ ಜಿಎಸ್‌ಟಿ ಸಂಗ್ರಹದಲ್ಲಿ ಅತ್ಯಧಿಕ ಬೆಳವಣಿಗೆ ಸಾಧಿಸಲು ಕಾರಣ’ ಎಂದು ಶಿಖಾ ತಿಳಿಸಿದರು.

ತೆರಿಗೆ ವಂಚನೆ ಪತ್ತೆಗೆ ತಂತ್ರಾಂಶ ಆಧಾರಿತ ಕಣ್ಗಾವಲು ವ್ಯವಸ್ಥೆ ರೂಪಿಸಲಾಗಿದೆ. ಹೊರ ರಾಜ್ಯಗಳಲ್ಲಿನ ಬಿಲ್ಲಿಂಗ್ ಮಾಹಿತಿ ಪಡೆದು ರಾಜ್ಯದಲ್ಲಿ ತೆರಿಗೆ ಸೋರಿಕೆ ತಡೆಯಲಾಗುತ್ತಿದೆ. ವಹಿವಾಟಿನ ಮಾಹಿತಿ ಸಲ್ಲಿಸದವರನ್ನು ಪತ್ತೆಮಾಡಿ ನೋಟಿಸ್ ನೀಡಿ, ತೆರಿಗೆ ಸಂಗ್ರಹಿಸಲಾಗುತ್ತಿದೆ ಎಂದರು.

ಒಟ್ಟು ತೆರಿಗೆ ಸಂಗ್ರಹದ ವಿವರ

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಇಳಿಕೆ ಮಾಡಿರುವುದು ಹಾಗೂ ಜಿಎಸ್‌ಟಿ ನಷ್ಟ ಪರಿಹಾರ ಸ್ಥಗಿತವಾಗಿರುವುದರಿಂದ ರಾಜ್ಯದ ಒಟ್ಟು ತೆರಿಗೆ ಆದಾಯದಲ್ಲಿ ಶೇ 6.30ರಷ್ಟು ಕುಸಿತವಾಗಿದೆ. ಜಿಎಸ್‌ಟಿ ಮತ್ತು ವೃತ್ತಿಪರ ತೆರಿಗೆ ಸಂಗ್ರಹದಲ್ಲಿ ಗಣನೀಯ ಹೆಚ್ಚಳವಾದರೂ ಒಟ್ಟು ಆದಾಯದಲ್ಲಿ ₹ 4,518 ಕೋಟಿ ಕುಸಿತವಾಗಿದೆ.



ನವೆಂಬರ್‌ವರೆಗೆ ರಾಜ್ಯಗಳಲ್ಲಿ ಜಿಎಸ್‌ಟಿ ಸಂಗ್ರಹ

ರಾಜ್ಯ	2021-22	2022-23	ಶೇಕಡಾವಾರು ಬೆಳವಣಿಗೆ ದರ
	(₹ ಕೋಟಿಗಳಲ್ಲಿ)		
ಮಹಾರಾಷ್ಟ್ರ	1,37,969	1,77,192	28
ಕರ್ನಾಟಕ	60,068	80,269	34
ಗುಜರಾತ್	63,173	75,481	19
ತಮಿಳುನಾಡು	55,462	69,224	25
ತೆಲಂಗಾಣ	28,506	33,683	18
ಆಂಧ್ರಪ್ರದೇಶ	21,015	26,528	26
ಕೇರಳ	13,723	17,936	31

ಎರಡು ಪ್ರತ್ಯೇಕ ವಿಭಾಗ: ಆರ್ಥಿಕ ಇಲಾಖೆಗೆ ಪ್ರಸ್ತಾವ

‘ಕೆಇಎ’ಗೆ ಹೊಸ ಸ್ವರೂಪ

• ರಾಜೇಶ್ ರೈ ಚಟ್ಲ

ಬೆಂಗಳೂರು: ಎಲ್ಲ ವೃತ್ತಿಪರ ಕೋರ್ಸ್‌ಗಳ ಸೀಟು ಹಂಚಿಕೆ ಮತ್ತು ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಸರಳೀಕರಿಸಲು ಎರಡು ಪ್ರತ್ಯೇಕ ವಿಭಾಗಗಳನ್ನು ಸೃಜಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮುಂದಾಗಿದೆ.

ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮೂಲಕ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ನಡೆಸಿ, ಸೀಟು ಹಂಚಿಕೆಗೆಂದೇ ಒಂದು ವಿಭಾಗ ಮೀಸಲಿರಿಸಲು ಕೆಇಎ ಉದ್ದೇಶಿಸಿದೆ. ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ಆಯ್ಕೆ ಪಟ್ಟಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲು ಮತ್ತೊಂದು ವಿಭಾಗವನ್ನು ರಚಿಸಲು ತೀರ್ಮಾನಿಸಿದೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ, ‘ಸದ್ಯದ ವ್ಯವಸ್ಥೆಯಲ್ಲಿ ಈ ಪ್ರಕ್ರಿಯೆಗಳನ್ನು ನಿಗದಿತ ಸಮಯದಲ್ಲಿ ಮಾಡಲು ಕಷ್ಟವಾಗುತ್ತಿದೆ. ಕೆಲಸದ ಒತ್ತಡ ಕಡಿಮೆ ಮಾಡಲು ಪ್ರತ್ಯೇಕ ವಿಭಾಗದ ಅಗತ್ಯವಿದೆ. ಹೀಗಾಗಿ, ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದರು.

ಸಿಇಟಿಗೆ ಅರ್ಜಿ ಸಲ್ಲಿಕೆ, ದಾಖಲಾತಿಗಳ ಪರಿಶೀಲನೆ ವ್ಯವಸ್ಥೆ ಸರಳೀಕರಿಸಲಾಗುವುದು. ಏಕರೂಪದ ಅರ್ಜಿ ಶುಲ್ಕ, ಅಂಚೆ ಕಚೇರಿಯಲ್ಲೂ ಶುಲ್ಕ ಪಾವತಿ ವ್ಯವಸ್ಥೆಗೆ ಚಿಂತನೆ ನಡೆದಿದೆ
ಎಸ್. ರಮ್ಯಾ, ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

ಪ್ರಜಾವಾಣಿ ವಿಶೇಷ

ಪ್ರಸ್ತಾವದಲ್ಲಿ ಏನಿದೆ?: ‘ಎರಡೂ ವಿಭಾಗಗಳಿಗೆ ಪ್ರತ್ಯೇಕ ಕೆಎಎಸ್ ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ಆಡಳಿತಾಧಿಕಾರಿಯಾಗಿ ನಿಯೋಜಿಸಲು ಹಾಗೂ ಪ್ರಥಮ ದರ್ಜೆ, ದ್ವಿತೀಯ ದರ್ಜೆ ಸಹಾಯಕರು, ಲೆಕ್ಕ ಶಾಖೆಯ ಸಿಬ್ಬಂದಿ, ಕಾನೂನು ಸಲಹೆಗಾರರ ಹುದ್ದೆ ಸೃಜಿಸಬೇಕು. ಎಲ್ಲ ಕೆಲಸಗಳು ಆನ್‌ಲೈನ್ ಮೂಲಕ ನಡೆಯುವುದರಿಂದ ಗಣಕ ಶಾಖೆಯನ್ನು ಬಲಪಡಿಸಬೇಕು. ಅಲ್ಲಿಗೆ ಹಿರಿಯ, ಕಿರಿಯ ಪ್ರೋಗ್ರಾಮರ್, ಡಾಟಾ ಬೇಸ್ ಅಡ್ಮಿನಿಸ್ಟ್ರೇಟರ್, ಡಾಟಾ ಅನಲಿಸ್ಟ್ ಮುಂತಾದ 20 ಹುದ್ದೆಗಳನ್ನು ಸೃಜಿಸಬೇಕು’ ಎಂದು ಪ್ರಸ್ತಾವದಲ್ಲಿ ತಿಳಿಸಲಾಗಿದೆ.

‘ನೀಟ್ ವ್ಯವಸ್ಥೆಯ ಬಳಿಕ ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಸೀಟು ಹಂಚಿಕೆ ಕೌನ್ಸೆಲಿಂಗ್ ಪ್ರತ್ಯೇಕವಾಗಿ ನಡೆಸಲಾಗುತ್ತದೆ. ಇದರಿಂದಾಗಿ ಎಂಜಿನಿಯರಿಂಗ್ ಸೀಟು ರದ್ದುಗೊಳಿಸದೆ ಕೆಲವರು ವೈದ್ಯಕೀಯ ಸೀಟು ಪಡೆಯುತ್ತಿದ್ದಾರೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಎರಡೂ ಸೀಟು ಒಬ್ಬ ಪಡೆಯಲು ಯತ್ನಿಸುವುದರಿಂದ ಮೆರಿಟ್ ಇರುವ ಅನೇಕ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಈ ಗೊಂದಲ ನಿವಾರಿಸಲು ಕೈಪಿಡಿಯೊಂದನ್ನು ತಯಾರಿಸಲು ಉದ್ದೇಶಿಸಲಾಗಿದೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಸೀಟು ಹಂಚಿಕೆಗೆ ಸಂಬಂಧಿಸಿದ ಷರತ್ತು, ದಾಖಲಾತಿ ಪರಿಶೀಲನೆ ವೇಳೆ ವಿದ್ಯಾರ್ಥಿಗಳು ಮಾಡುವ ತಪ್ಪುಗಳು, ಅರ್ಜಿ ಸಲ್ಲಿಸಲು ಮಾರ್ಗಸೂಚಿ ಕೈಪಿಡಿಯಲ್ಲಿ ಇರಲಿದೆ. ಪಿಯು ಕಾಲೇಜುಗಳಲ್ಲಿ ಸೃಜಿಸಲು ಉದ್ದೇಶಿಸಿರುವ ಸಿಇಟಿ ಸಹಾಯ ಕೇಂದ್ರಗಳಲ್ಲಿ ಈ ಕೈಪಿಡಿಯನ್ನು ವಿತರಿಸಲಾಗುವುದು’ ಎಂದು ರಮ್ಯಾ ತಿಳಿಸಿದರು.

‘ಸೀಟು ಹಂಚಿಕೆಗೆ ದಾಖಲಾತಿಗಳ ಪರಿಶೀಲನೆ ವೇಳೆ ಸಾವಿರಾರು ಸಂಖ್ಯೆಯಲ್ಲಿ ಪೋಷಕರು, ವಿದ್ಯಾರ್ಥಿಗಳು ಕೆಇಎಗೆ ಬರುತ್ತಾರೆ. ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ತಾತ್ಕಾಲಿಕ ಝೆರಾಕ್ಸ್ ಯಂತ್ರ, ಲಘು ಉಪಾಹಾರ ಕೇಂದ್ರ ಸ್ಥಾಪಿಸಲಾಗುವುದು’ ಎಂದೂ ವಿವರಿಸಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ತಿಪಟೂರು, ತುಮಕೂರು ನಗರ, ಗ್ರಾಮಾಂತರ ಪ್ರದೇಶಗಳಿಗೆ ಪೂರೈಕೆ


ಅಂಗನವಾಡಿಗೆ ಅವಧಿ ಮೀರಿದ ಆಹಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳು ಮತ್ತು ಗರ್ಭಿಣಿಯರಿಗೆ ಪೌಷ್ಟಿಕ ಆಹಾರದ ಹೆಸರಿನಲ್ಲಿ ಬಳಕೆಗೆ ಯೋಗ್ಯವಲ್ಲದ ಆಹಾರ ಪದಾರ್ಥಗಳನ್ನು ಪೂರೈಸಿದೆಯೇ? ಹೌದು ಎನ್ನುತ್ತಿವೆ ತುಮಕೂರು ಜಿಲ್ಲೆಯ ಅಂಗನವಾಡಿಗಳಿಗೆ ಪೂರೈಕೆಯಾಗಿರುವ ಆಹಾರದ ಪಟ್ಟಣಗಳ ಮೇಲೆ ನಮೂದಾಗಿರುವ ದಿನಾಂಕಗಳು.

ತಿಪಟೂರು, ತುಮಕೂರು ನಗರ ಮತ್ತು ಗ್ರಾಮಾಂತರ ಪ್ರದೇಶದ ಅಂಗನವಾಡಿಗಳಿಗೆ ಪೂರೈಕೆಯಾಗಿರುವ ತೊಗರಿ ಬೇಳೆ, ಹೆಸರು ಕಾಳು ಮತ್ತು ಮಿಶ್ರಿತ ಪೌಷ್ಟಿಕ ಆಹಾರದ ಪೊಟ್ಟಣಗಳ ಮೇಲೆ ಪ್ಯಾಕ್ ಮಾಡಿದ ದಿನಾಂಕವನ್ನು 2022ರ ನವೆಂಬರ್ ಎಂದು ಅಚ್ಚು ಹಾಕಲಾಗಿದೆ. ಉಪಯೋಗಿಸಬಹುದಾದ ಕೊನೆಯ ದಿನಾಂಕವನ್ನು 2022 ಜನವರಿ 31 ಎಂದು ಮುದ್ರಿಸಲಾಗಿದೆ.

ಈ ಪೊಟ್ಟಣಗಳ ಚಿತ್ರಗಳು ಅಂಗನವಾಡಿ ನೌಕರರ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡುತ್ತಿವೆ.



ಅಂಗನವಾಡಿಗಳಿಗೆ ಪೂರೈಕೆಯಾಗಿರುವ ಆಹಾರದ ಪೊಟ್ಟಣಗಳು

ಇವುಗಳ ಜತೆ ಸಂದೇಶವೊಂದು ರವಾನೆಯಾಗುತ್ತಿದ್ದು, ‘ಈ ತಿಂಗಳು ಸರಬರಾಜಾಗಿರುವ ಆಹಾರ ದಾಸ್ತಾನಿನಲ್ಲಿ ಉಪಯೋಗಿಸುವ ಕೊನೆಯ ದಿನಾಂಕದಲ್ಲಿ 2023 ಬದಲು 2022 ಎಂದು ನಮೂದಾಗಿದೆ. ತಕ್ಷಣವೇ ಅದನ್ನು ಪೆನ್ನಿನಲ್ಲಿ ತಿದ್ದುವುದು’ ಎಂದು ತಿಳಿಸಲಾಗಿದೆ.

‘2023ರ ಬದಲು 2022 ಎಂದು ಅಚ್ಚಾಗಿದ್ದರೆ ಈ ಕುರಿತು ಸ್ಪಷ್ಟನೆಯನ್ನಾದರೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ನೀಡಬೇಕಿತ್ತು. ಅದ್ಯಾವುದನ್ನೂ ಮಾಡದೆ ಇಲಾಖೆ ಮೌನ ವಹಿಸಿದರೆ ಯಾರು ಜವಾಬ್ದಾರರು. ಬಳಕೆಗೆ ಯೋಗ್ಯವಲ್ಲದ ಆಹಾರ ಸೇವಿಸಿ ಮಹಿಳೆ ಅಥವಾ ಮಕ್ಕಳಿಗೆ ತೊಂದರೆಯಾದರೆ ಯಾರು ಹೊಣೆ’ ಎಂದು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಪ್ರಶ್ನಿಸಿದರು.

ಏನಾಗಿದೆ ಎಂಬುದರ ಕುರಿತು ಪರಿಶೀಲನೆ ಮಾಡಿಸುತ್ತೇನೆ. ತನಿಖೆ ನಡೆಸಿ ವರದಿ ನೀಡಲು ಇಲಾಖೆಯ ಕಾರ್ಯದರ್ಶಿಗೆ ಸೂಚಿಸುತ್ತೇನೆ
ಹಾಲಪ್ಪ ಆಚಾರ್
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವ

ಕಾರ್ಖಾನೆ ಮಾಲೀಕರಿಂದ ಲಂಚ ಪಡೆದ ಆರೋಪ ಸಾಬೀತು

ಅಧಿಕಾರಿಗೆ 4 ವರ್ಷ ಜೈಲು, ₹ 4 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಧಿಕಾರ ದುರುಪಯೋಗ ಪಡಿಸಿಕೊಂಡು, ಕಾರ್ಖಾನೆಗಳ ಮಾಲೀಕರಿಂದ ಪಡೆದ ಲಂಚದ ಹಣದ ಸಮೇತ 2016ರಲ್ಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ಕ್ಕೆ ಸಿಕ್ಕಿಬಿದ್ದಿದ್ದ ಕಾರ್ಖಾನೆಗಳ ಇಲಾಖೆ ಸಹಾಯಕ ನಿರ್ದೇಶಕ ಎಚ್.ಸುರೇಶ್‌ಗೆ ನಾಲ್ಕು ವರ್ಷ ಶಿಕ್ಷೆ ಹಾಗೂ ₹ 4 ಲಕ್ಷ ದಂಡ ವಿಧಿಸಿ ಇಲ್ಲಿಯ ಮೂರನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ಮತ್ತು ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.



ಎಚ್.ಸುರೇಶ್

ದಂಡ ಕಟ್ಟಲು ವಿಫಲವಾದರೆ ಮತ್ತೆ ಆರು ತಿಂಗಳು ಸಾದಾ ಸಜೆ ಅನುಭವಿಸಬೇಕು ಎಂದೂ ನ್ಯಾಯಾಧೀಶ ಬಿ.ಬಿ.ಜಕಾತಿ ಆದೇಶಿಸಿದ್ದಾರೆ.

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಮಂಗಳೂರು ಉಪವಿಭಾಗ–2ರಲ್ಲಿ ಸಹಾಯಕ ನಿರ್ದೇಶಕರಾಗಿದ್ದ ಎಚ್.ಸುರೇಶ್ ನಗರದ ಕೊಟ್ಟಾರದ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಕಾರ್ಖಾನೆಗಳಿಗೆ ಪರವಾನಗಿ ನೀಡಲು ಹಾಗೂ ಪರವಾನಗಿ ನವೀಕರಣಕ್ಕೆ ನಿರಾಕ್ಷೇಪಣಾ ಪತ್ರ ನೀಡಲು ಕಾರ್ಖಾನೆ ಮಾಲೀಕರನ್ನು ಲಂಚಕ್ಕಾಗಿ ಪೀಡಿಸುತ್ತಿದ್ದ ಬಗ್ಗೆ ಎಸಿಬಿಯಲ್ಲಿ ದೂರು ದಾಖಲಾಗಿತ್ತು.

ಎಸಿಬಿ ಅಧಿಕಾರಿಗಳು 2016ರ ನ. 30ರಂದು ಅವರ ಕಚೇರಿಗೆ ದಾಳಿ ನಡೆಸಿದಾಗ ₹ 3,49,515 ನಗದು ಪತ್ತೆಯಾಗಿತ್ತು ಎಂದು ಲೋಕಾಯುಕ್ತ ಸಂಸ್ಥೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಲಕ್ಷ್ಮೀ ಗಣೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನಗರದ ಎಸಿಬಿ ಠಾಣೆ ಇನ್‌ಸ್ಪೆಕ್ಟರ್ ಯೋಗೀಶ್ ಕುಮಾರ್ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ರವೀಂದ್ರ ಮುನ್ನಿಪಾಡಿ ಅವರು ಎಸಿಬಿ ಹಾಗೂ ಲೋಕಾಯುಕ್ತ ಸಂಸ್ಥೆಯ ಪರ ವಾದ ಮಂಡಿಸಿದ್ದರು.

ಎಚ್.ಸುರೇಶ್ ಪ್ರಸ್ತುತ ಕಾರ್ಖಾನೆ ಇಲಾಖೆಯ ಮೈಸೂರಿನ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕಸಾಪ: ನಗರ ಜಿಲ್ಲೆ ಕಚೇರಿ ತೆರವು ಸೂಚನೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲೆ ಘಟಕದ ಕಚೇರಿ ಸ್ಥಳಾಂತರಕ್ಕೆ ಕಸಾಪ ಕೇಂದ್ರ ಘಟಕ ನೋಟಿಸ್ ನೀಡಿರುವುದು ಸಾಂಸ್ಕೃತಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ನಗರ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷರು ಕೇಂದ್ರ ಘಟಕದ ನಡೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಕಚೇರಿ ಆವರಣದಲ್ಲಿರುವ ನಗರ ಜಿಲ್ಲೆ ಘಟಕದ ಕಚೇರಿಯ ಸ್ಥಳವನ್ನು ಒದಗಿಸುವಂತೆ ಕೇಂದ್ರ ಘಟಕವು ಎರಡು ಬಾರಿ ನೋಟಿಸ್ ನೀಡಿದ್ದು, ಆ ಸ್ಥಳವು ಶಾಶ್ವತ ತರಗತಿ ಸೇರಿ ವಿವಿಧ ಕಾರ್ಯಚಟುವಟಿಕೆಗಳಿಗೆ ಅಗತ್ಯವಿದೆ ಎಂದು ತಿಳಿಸಲಾಗಿದೆ. ಅದೇ ರೀತಿ, ಪರಿಷತ್ತಿನ ಸಭಾಂಗಣದಲ್ಲಿ ನಡೆಸುವ ಕಾರ್ಯಕ್ರಮಗಳಿಗೆ ಬಾಡಿಗೆ ಪಾವತಿಸುವಂತೆ ಸೂಚಿಸಲಾಗಿದೆ. ನಗರ ಜಿಲ್ಲೆ ಘಟಕ ಪ್ರಾರಂಭವಾದಾಗಿನಿಂದ ಕೇಂದ್ರ ಕಚೇರಿಯ ಆವರಣದಲ್ಲಿಯೇ ಕಾರ್ಯನಿರ್ವಹಿಸುತ್ತಿದೆ.

ಕೇಂದ್ರ ಘಟಕದ ನಡೆಗೆ ಕಸಾಪ ನಗರ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷರಾದ ರಾಮಣ್ಣ ಎಚ್. ಕೋಡಿಹೊಸಳ್ಳಿ, ಸಿ.ಕೆ. ರಾಮೇಗೌಡ, ಟಿ. ತಿಮ್ಮೇಶ್ ಹಾಗೂ ಶ್ರ.ದೇ. ಪಾರ್ಶ್ವನಾಥ್ ಅವರು ವಿರೋಧ ವ್ಯಕ್ತಪಡಿಸಿದ್ದಾರೆ.

'ಬೆಂಗಳೂರು ನಗರ ಜಿಲ್ಲಾ ಘಟಕದಿಂದ ಹಮ್ಮಿಕೊಳ್ಳುವ ಕಾರ್ಯ ಚಟುವಟಿಕೆಗಳಿಗೆ ಖಾಲಿ ಇದ್ದ ದಿನಗಳಲ್ಲಿ ಸಭಾಂಗಣ ಉಚಿತವಾಗಿ ಕೊಡಲಾಗುತ್ತಿತ್ತು. ಆದರೆ, ಸಭಾಂಗಣಕ್ಕೆ ಬಾಡಿಗೆ ಪಾವತಿ ಸೂಚಿಸಿರುವುದು ಸರಿಯಲ್ಲ. ಕಸಾಪ ನಗರ ಜಿಲ್ಲಾ ಘಟಕವು ತನ್ನ ಕ್ರಿಯಾಶೀಲ ಚಟುವಟಿಕೆ ಮೂಲಕ ಸಾಂಸ್ಕೃತಿಕ ಘನತೆ ಹೆಚ್ಚಿಸುತ್ತಿದೆ' ಎಂದು ನಗರ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷರು ತಿಳಿಸಿದ್ದಾರೆ.

34,337 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ; ಕುಲಪತಿ ಜಯಕರ

ನಾಳೆ ಬೆಂಗಳೂರು ವಿವಿ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಡಿ.5ರಂದು ಬೆಂಗಳೂರು ವಿಶ್ವವಿದ್ಯಾಲಯದ 57ನೇ ಘಟಿಕೋತ್ಸವ ನಡೆಯಲಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು. ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷ ಎಂ. ಜಗದೇಶ್ ಕುಮಾರ್ ಅವರು ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಉಪಸ್ಥಿತರಿರುವರು ಎಂದು ಕುಲಪತಿ ಎಸ್.ಎಂ.ಜಯಕರ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಘಟಿಕೋತ್ಸವದಲ್ಲಿ 167 ವಿದ್ಯಾರ್ಥಿಗಳಿಗೆ 300 ಬಂಗಾರದ ಪದಕಗಳು, 73 ನಗದು ಬಹುಮಾನ ವಿತರಿಸಲಾಗುವುದು. 267 ಅಭ್ಯರ್ಥಿಗಳಿಗೆ ಡಾಕ್ಟರೇಟ್ ಪ್ರದಾನ ಮಾಡಲಾಗುವುದು. 34,337 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ ಪಡೆಯುವರು ಎಂದು ತಿಳಿಸಿದರು.

ಪರೀಕ್ಷೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಲಾಗಿದೆ. ಅಂಕಪಟ್ಟಿಗಳನ್ನೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪರೀಕ್ಷೆಯು ಮುಗಿದ ಒಂದು ವಾರದ ಒಳಗೆ ಫಲಿತಾಂಶ ಪ್ರಕಟಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ಸ್ನಾತಕೋತ್ತರ ಕೋರ್ಸ್‌ಗಳಿಗೆ ಬೇಗನೆ ಪ್ರವೇಶ ಪಡೆಯಲು ಸಾಧ್ಯವಾಗುತ್ತಿದೆ ಎಂದರು.

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿ ಕೀರ್ತಿ ನೇಗಿನಾಳ್, ಬೆಂಗಳೂರು ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಕೆ.ಅರ್ಚನಾ ಅವರು ತಲಾ ಏಳು ಚಿನ್ನದ ಪದಕ ಪಡೆದಿದ್ದಾರೆ. ಸಂಸ್ಕೃತ ವಿಭಾಗದ ಮಯೂರ ಆರು ಪದಕ, ಅರ್ಥಶಾಸ್ತ್ರ ವಿಭಾಗದ ಬಿ.ಜೆ. ಚಂದ್ರಿಕಾ, ಭೌತಶಾಸ್ತ್ರ ವಿಭಾಗದ ಎಸ್. ಚೇತನ್‌ಸೂರ್ಯ, ಸಸ್ಯಶಾಸ್ತ್ರ ವಿಭಾಗದ ಎನ್.ಅರ್ಚನಾ, ಪ್ರಾಣಿಶಾಸ್ತ್ರ ವಿಭಾಗದ ಆರ್ಷಿಯಾ ನಾಜ್ ತಲಾ ಐದು ಪದಕ ಗಳಿಸಿದ್ದಾರೆ.

ಸ್ನಾತಕ ಪದವಿಯಲ್ಲಿ ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಪಿ.ಸಿ. ರಾಮ್ ಕುಮಾರ್, ಜ್ಞಾನವಿಕಾಸದ ಆರ್. ಸ್ಫೂರ್ತಿ ತಲಾ ಆರು, ಸುರಾನ ಕಾಲೇಜಿನ ಎಂ.ಎನ್.ಧನುಷ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಕೆ.ವಿ. ವಿನೋದ್ ಕುಮಾರ್ ತಲಾ ಐದು ಪದಕ ಪಡೆದಿದ್ದಾರೆ.

ಗೋಷ್ಠಿಯಲ್ಲಿ ಕುಲಸಚಿವ ಎನ್. ಮಹೇಶ್ ಬಾಬು, ಮೌಲ್ಯಮಾಪನ ಕುಲಸಚಿವ, ಜೆ.ಟಿ.ದೇವರಾಜ್, ಹಣಕಾಸು ಅಧಿಕಾರಿ ಎಸ್.ಅಜಿತ್‌ಕುಮಾರ್ ಹೆಗ್ಡೆ ಇದ್ದರು.

'ಹಗರಣದ ನಂತರ ಹೊಸ ಅಂಕಪಟ್ಟಿ'

ಬೆಂಗಳೂರು: ವಿಶ್ವವಿದ್ಯಾಲಯದಲ್ಲಿ ನಾಲ್ಕು ವರ್ಷಗಳ ಹಿಂದೆ ನಡೆದ ಅಂಕಪಟ್ಟಿ ಹಗರಣದ ತನಿಖೆಯನ್ನು ಸಿಐಡಿ ನಡೆಸುತ್ತಿದ್ದು, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಮರು ಮೌಲ್ಯಮಾಪನ ಮಾಡಿಸಿ, ಆಯಾ ಕಾಲೇಜುಗಳಿಗೆ ಹೊಸ ಅಂಕಪಟ್ಟಿ ರವಾನಿಸಲಾಗಿದೆ ಎಂದು ಕುಲಪತಿ ಎಸ್.ಎಂ.ಜಯಕರ್ ಹೇಳಿದರು.

ಹೊರಗುತ್ತಿಗೆ ಪಡೆದಿದ್ದ ಕಂಪನಿ ಅಂಕಗಳನ್ನು ದಾಖಲಿಸುವಾಗ ಅನುತ್ತೀರ್ಣರಾದವರಿಗೂ ಅಧಿಕ ಅಂಕಗಳನ್ನು ನೀಡಿದೆ ಎಂಬ ಆರೋಪ ಕೇಳಿಬಂದಿತ್ತು. ಸುಮಾರು ಮೂರು ಸಾವಿರದಷ್ಟು ವಿದ್ಯಾರ್ಥಿಗಳ ಅಂಕಗಳು ಏರುಪೇರಾಗಿವೆ ಎಂಬ ದೂರಿನ ಹಿನ್ನೆಲೆಯಲ್ಲಿ ಸಿಐಡಿಗೆ ವಹಿಸಲಾಗಿತ್ತು. ಆರೋಪ ಕೇಳಿಬಂದ ವಿದ್ಯಾರ್ಥಿಗಳ ಪತ್ರಿಕೆಗಳ ಮರು ಮೌಲ್ಯಮಾಪನದ ನಂತರ ಶೇ 80ರಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ ಎಂದು ವಿವರ ನೀಡಿದರು.

ಮೃತ ವಿದ್ಯಾರ್ಥಿನಿಗೆ ಪರಿಹಾರ: ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದು ಹೋಗುತ್ತಿದ್ದ ವಿದ್ಯಾರ್ಥಿನಿ ಶಿಲ್ಪಾ ಅವರ ಮೇಲೆ ಬಸ್ ಚಲಿಸಿ ಈಚೆಗೆ ಮೃತಪಟ್ಟಿದ್ದರು. ಅವರ ಪೋಷಕರಿಗೆ ಪರಿಹಾರ ನೀಡಲು ಸಿಂಡಿಕೇಟ್ ಸಭೆಯಲ್ಲಿ ಸಮ್ಮತಿ ಪಡೆಯಲಾಗಿದೆ. ಹೆಚ್ಚಿನ ಹಣ ಸಂಗ್ರಹಿಸಿ ಅವರ ಕುಟುಂಬಕ್ಕೆ ನೀಡಲಾಗುವುದು ಎಂದರು.

ವಿಶ್ವವಿದ್ಯಾಲಯದ ಆವರಣದಲ್ಲಿ ಹಾದು ಹೋಗುವ ರಸ್ತೆ ಅಪಾಯಕಾರಿಯಾಗಿದೆ. ಹಲವು ಅಪಘಾತಗಳು ನಡೆಯುತ್ತಿವೆ. ಆವರಣದ ಗೇಟ್ ಬಂದ್ ಮಾಡಿ, ವಾಹನಗಳಿಗೆ ಪರ್ಯಾಯ ಮಾರ್ಗ ನೀಡುವಂತೆ ಬಿಬಿಎಂಪಿ, ಪೊಲೀಸರಿಗೆ ಮನವಿ ಸಲ್ಲಿಸುವ ಕುರಿತು ಚರ್ಚಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

'ಕಾರ್ಪೊರೇಟ್ ಕಂಪನಿ ಅಧಿಕಾರಿ ನಾಮ ನಿರ್ದೇಶನ ಖಂಡನೀಯ'

ಬೆಂಗಳೂರು: 'ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕೌನ್ಸಿಲ್‌ಗೆ ಕಾರ್ಪೊರೇಟ್ ಕಂಪನಿಗಳ ಅಧಿಕಾರಿಗಳ ನಾಮ ನಿರ್ದೇಶನ ಮಾಡಿರುವುದು ಖಂಡನೀಯ' ಎಂದು ಎಐಡಿಎಸ್‌ಒ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ರಾಜ್ಯದ ಉನ್ನತ ಶಿಕ್ಷಣದ ನೀತಿಗಳು, ರೂಪುರೇಷೆ ಸಿದ್ಧಪಡಿಸುವ ಹಕ್ಕನ್ನು ಸರ್ಕಾರ ಲಾಭಕೋರ ಕಾರ್ಪೊರೇಟ್ ಕಂಪನಿಗಳ ಅಧಿಕಾರಿಗಳಿಗೆ ದಯಪಾಲಿಸಿದೆ. ಶೈಕ್ಷಣಿಕ ರಚನೆಯ ಮಹತ್ವದ ಜವಾಬ್ದಾರಿಯಿರುವ ಸಮಿತಿಗಳಲ್ಲಿ ಶಿಕ್ಷಣ ತಜ್ಞರು, ಉಪನ್ಯಾಸಕರು, ಬರಹಗಾರರು, ವಿಜ್ಞಾನಿಗಳು, ಶಿಕ್ಷಕರು ಇರಬೇಕು ಎಂಬುದು ಪ್ರಜಾತಂತ್ರದ ಆಶಯ. ವಿಜ್ಞಾನಿಗಳು, ಪ್ರಗತಿಪರ ಚಿಂತಕರು ಈ ಆಶಯವನ್ನೇ ಪ್ರತಿಪಾದಿಸಿದ್ದರು. ಆದರೆ ಸರ್ಕಾರವು ಆಶಯಕ್ಕೆ ವ್ಯತಿರಿಕ್ತವಾಗಿ ಶಿಕ್ಷಣ ತಜ್ಞರಲ್ಲದ ಉದ್ಯಮಿಗಳನ್ನು ಆ ಸ್ಥಾನದಲ್ಲಿ ಕೂರಿಸಲು ಮುಂದಾಗಿದೆ ಎಂದು ಆಪಾದಿಸಿದ್ದಾರೆ.

ರಾಷ್ಟ್ರೋತ್ಥಾನ ಆಸ್ಪತ್ರೆಗೆ ನಾಳೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್ ರಾಜರಾಜೇಶ್ವರಿ ನಗರದಲ್ಲಿ ನಿರ್ಮಿಸಿರುವ ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ಸೋಮವಾರ ಚಾಲನೆ ಸಿಗಲಿದೆ.



ಆಸ್ಪತ್ರೆಯ ವೈದ್ಯಕೀಯ ಉಪಕರಣಗಳನ್ನು ನಾ. ದಿನೇಶ್ ಹೆಗ್ಡೆ ವೀಕ್ಷಿಸಿದರು. ಸುಧೀರ್ ಪೈ ಹಾಗೂ ಡಾ. ಸಂಧ್ಯಾ ರವಿ ಇದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, 'ಸಂಜೆ 6 ಗಂಟೆಗೆ ಆಸ್ಪತ್ರೆ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸುತ್ತೂರು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಇನ್ಫೊಸಿಸ್ ಪ್ರತಿಷ್ಠಾನದ ಸ್ಥಾಪಕರಾದ ಸುಧಾ ಮೂರ್ತಿ, ನಾರಾಯಣ ಹೆಲ್ತ್‌ನ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪಾಲ್ಗೊಳ್ಳಲಿದ್ದಾರೆ. ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುವ ಉದ್ದೇಶದಿಂದ ಆಸ್ಪತ್ರೆಯನ್ನು ಪ್ರಾರಂಭಿಸಲಾಗುತ್ತಿದೆ' ಎಂದರು.

'ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕರಾಗಿದ್ದ ಮೈ.ಚ. ಜಯದೇವ ಹೆಸರನ್ನು ಆಸ್ಪತ್ರೆಗೆ ಇಡಲಾಗಿದೆ. ಆಧುನಿಕ ವೈದ್ಯಕೀಯ ಪದ್ಧತಿ, ಆಯುರ್ವೇದ, ಹೋಮಿಯೋಪಥಿ, ಯೋಗ, ನ್ಯಾಚುರೋಪಥಿ ಮೊದಲಾದ ಚಿಕಿತ್ಸಾ ಸೌಲಭ್ಯವನ್ನು ಆಸ್ಪತ್ರೆ ಹೊಂದಿದೆ. ಪ್ರಸ್ತುತ ಸಮಾಜ ಜೀವನವನ್ನು ಪ್ರಭಾವಿಸುವ 18ಕ್ಕೂ ಅಧಿಕ ಕಾರ್ಯಯೋಜನೆಗಳನ್ನು ನಡೆಸುತ್ತಿದ್ದೇವೆ' ಎಂದು ಹೇಳಿದರು.

ಡಾ. ಸಂಧ್ಯಾ ರವಿ, 'ಜನರಲ್ ಮೆಡಿಸಿನ್, ಕಾರ್ಡಿಯಾಲಜಿ, ನ್ಯೂರಾಲಜಿ ಸೇರಿ ಆಧುನಿಕ ವೈದ್ಯಕೀಯ ಪದ್ಧತಿಯ ವಿವಿಧ ವಿಭಾಗಗಳ ಜತೆಗೆ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಯ ವಿಭಾಗಗಳೂ ಇರಲಿವೆ' ಎಂದರು.



ಯಶವಂತಪುರ ಹಾಗೂ ಪೀಣ್ಯ ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ 500 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡ ಬಿಬಿಎಂಪಿ ಸಿಬ್ಬಂದಿ, ಪ್ಲಾಸ್ಟಿಕ್ ತಯಾರಿಕಾ ಘಟಕಗಳಿಗೆ ₹34 ಸಾವಿರ ದಂಡ ವಿಧಿಸಿದರು

ದಲಿತ ಯುವಕನ ಆತ್ಮಹತ್ಯೆ ಖಂಡನೀಯ

ಬೆಂಗಳೂರು: ರಾಜ್ಯದಲ್ಲಿ ದಲಿತರ ಮೇಲಿನ ದಬ್ಬಾಳಿಕೆಯ ಹೆಚ್ಚಾಗುತ್ತಿದ್ದು, ಕೋಲಾರದ ಬಳಿ ದಲಿತ ಯುವಕ ಆತ್ಮಹತ್ಯೆ ಮಾಡಿಕೊಂಡಿರುವುದು ಖಂಡನೀಯ ಎಂದು ಕನ್ನಡ ಕಂಠೀರವ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘ ಮತ್ತು ಕರ್ನಾಟಕ ಬಲಿಜ ಜಾಗೃತಿ ವೇದಿಕೆ ತಿಳಿಸಿದೆ.

ಬೈಕ್ ಹಿಂದಿಕ್ಕಿದ ಎಂಬ ಕಾರಣಕ್ಕಾಗಿ ಉದಯ್ ಕಿರಣ್ ಎಂಬ ಪರಿಶಿಷ್ಟ ಜಾತಿಯ ಯುವಕನನ್ನು ಒಕ್ಕಲಿಗ ಸಮುದಾಯದ ನಾಲ್ವರು ಬುಧವಾರ ಪೆತ್ತಾಂಡ್ಲಹಳ್ಳಿ ಗ್ರಾಮದಲ್ಲಿ ಮರಕ್ಕೆ ಕಟ್ಟಿಹಾಕಿ ಥಳಿಸಿದ್ದರು. ಇದರಿಂದ ಮನನೊಂದ ಆತ ಆತ್ಮಹತ್ಯೆ ಮಾಡಿಕೊಂಡಿದ್ದ ಎಂದು ಸಂಘದ ಜಿ.ಜ್ಞಾನೇಶ ಆರೋಪಿಸಿದರು.

ದಲಿತರನ್ನು ಹಿಂಸಿಸುವ ಘಟನೆಗಳು ಬಿಹಾರ, ಉತ್ತರ ಪ್ರದೇಶದಲ್ಲಿ ನಡೆಯುತ್ತಿದ್ದವು. ಈ ವಿದ್ಯಮಾನ ನೋಡಿದರೆ ಕರ್ನಾಟಕಕ್ಕೂ ಅದು ವಿಸ್ತರಿಸಿದೆ. ಅವಮಾನದಿಂದ ಆತ್ಮಹತ್ಯೆ ಮಾಡಿಕೊಂಡ ದಲಿತ ಯುವಕನ ಸಾವು ಆಕಸ್ಮಿಕವಲ್ಲ, ಇದು ಮೇಲ್ಜಾತಿಯ ಪಾಳೆಗಾರಿಕೆ ವ್ಯವಸ್ಥೆಯಿಂದ ನಡೆದ ಕೊಲೆಯೆಂದೆ ಪರಿಗಣಿಸಿ ಪ್ರಕರಣ ದಾಖಲಿಸಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಲೈಂಗಿಕ ದೌರ್ಜನ್ಯ: ಶಿಕ್ಷಕರಿಗೆ ಥಳಿತ

ಗೌರಿಬಿದನೂರು: ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ತಾಲ್ಲೂಕಿನ ಸರ್ಕಾರಿ ಶಾಲೆಯೊಂದರ ಪ್ರಭಾರ ಮುಖ್ಯ ಶಿಕ್ಷಕರನ್ನು ಪೊಲೀಸರು ಬಂಧಿಸಿದ್ದಾರೆ. ಇದಕ್ಕೆ ಶಾಲೆಯ ಸಹ ಶಿಕ್ಷಕರ ಚಿತಾವಣೆ ಕಾರಣ ಎಂದು ಆರೋಪಿಸಿ ಪೋಷಕರು ಸಹ ಶಿಕ್ಷಕರನ್ನು ಥಳಿಸಿದ್ದಾರೆ.

ಮುಖ್ಯಶಿಕ್ಷಕ ಸ್ಥಾನಕ್ಕೆ ಸಹ ಶಿಕ್ಷಕರನ್ನು ಪ್ರಭಾರವಾಗಿ ನೇಮಿಸಲಾಗಿತ್ತು. ಇದನ್ನು ಸಹಿಸದ ಇಬ್ಬರು ಸಹಶಿಕ್ಷಕರು ವಿದ್ಯಾರ್ಥಿನಿಯರನ್ನು ತಮ್ಮ ಮನೆಗೆ ಕರೆಸಿಕೊಂಡು ಪ್ರಭಾರ ಮುಖ್ಯಶಿಕ್ಷಕರು ಶಾಲಾ ಅವಧಿಯಲ್ಲಿ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳಿಗೆ ತಿಳಿಸಿದರೆ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ನೀಡುತ್ತೇವೆ ಎಂದು ಆಮಿಷವೊಡ್ಡಿದ್ದರು ಎನ್ನಲಾಗುತ್ತಿದೆ.

ಮಕ್ಕಳು ಪ್ರಭಾರ ಮುಖ್ಯ ಶಿಕ್ಷಕರು ಲೈಂಗಿಕ ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಮಕ್ಕಳ ಸಹಾಯವಾಣಿಗೆ ದೂರು ನೀಡಿದ್ದರು. ಮಕ್ಕಳ ಸಹಾಯವಾಣಿ, ಜಿಲ್ಲಾ ಮಕ್ಕಳ ಸಂರಕ್ಷಣಾಧಿಕಾರಿ, ಶಿಕ್ಷಣ ಇಲಾಖೆ ಅಧಿಕಾರಿಗಳು, ಸಿಡಿಪಿಒ ಹಾಗೂ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿನಿಯರಿಂದ ಹೇಳಿಕೆ ಪಡೆದಿದ್ದರು.

ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಗೆ ಚಾಲನೆ

ತೆರೆದುಕೊಂಡ ಬಹುಭಾಷಿಕ ಜಗತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಲೋಕದ ಆಗುಹೋಗುಗಳ ಬಗ್ಗೆ ಒಂದೆಡೆ ಚಿಂತನ- ಮಂಥನ ನಡೆದರೆ, ಇನ್ನೊಂದೆಡೆ ಹೊಸ ಪುಸ್ತಕಗಳ ಹೂರಣಗಳ ಬಗ್ಗೆ ಅವಲೋಕನ ನಡೆಯಿತು. ಏಕಕಾಲದಲ್ಲಿ ನಾಲ್ಕು ವೇದಿಕೆಗಳಲ್ಲಿ ನಡೆದ ವಿಚಾರಗೋಷ್ಠಿಗಳು, ಸಾಹಿತ್ಯಾಸಕ್ತರನ್ನು ತನ್ನಡೆಗೆ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾದವು.

ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಗೆ ಶನಿವಾರ ಚಾಲನೆ ದೊರೆಯಿತು. ನಗರದ ವಿವಿಧೆಡೆಯಿಂದ ಬಂದ ಸಾಹಿತ್ಯಾಸಕ್ತರು, ಬೆಳಿಗ್ಗೆಯಿಂದ ಸಂಜೆಯವರೆಗೆ ಉತ್ಸಾಹದಿಂದ ಗಹನವಾದ ಚರ್ಚೆಗಳನ್ನು ಆಲಿಸಿದರು. ದೇಶದ ವಿವಿಧೆಡೆಗಳಿಂದ ಬಂದಿದ್ದ ವಿದ್ವಾಂಸರು, ಲೇಖಕರು ಹಾಗೂ ವಿವಿಧ ಕ್ಷೇತ್ರಗಳ ಪ್ರಮುಖರು ಹಂಚಿಕೊಂಡ ಹೊಳಹುಗಳ ಬೆಳಕಿನೊಂದಿಗೆ ಈ ಉತ್ಸವ ಕಳೆಗಟ್ಟಿತು. ತಮ್ಮಿಷ್ಟದ ಸಾಹಿತಿಗಳ ಮಾತುಗಳನ್ನು ಆಲಿಸಿದ ಅಭಿಮಾನಿ ಬಳಗ, ಪುಸ್ತಕಗಳಿಗೆ ಅವರ ಹಸ್ತಾಕ್ಷರಗಳನ್ನು ಪಡೆದು ಸಂಭ್ರಮಿಸಿತು.

ಕನ್ನಡ ಸೇರಿ ವಿವಿಧ ಭಾಷೆಗಳ ಹೊಸ ಪುಸ್ತಕಗಳ ಖರೀದಿ ಭರಾಟೆಯೂ ಜೋರಾಗಿ ನಡೆಯಿತು. ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಸಂಗೀತ, ಸಿನಿಮಾ, ಕ್ರೀಡೆಗೆ ಸಂಬಂಧಿಸಿದ ಗೋಷ್ಠಿಗಳಲ್ಲಿ ದೇಶದ ವಿವೆಧೆಡೆಯಿಂದ ಬಂದ ವಿದ್ವಾಂಸರು ವಿಷಯ ಮಂಡಿಸಿದರು.



ಬೆಂಗಳೂರು ಸಾಹಿತ್ಯ ಉತ್ಸವದ ಮೊದಲ ದಿನವಾದ ಶನಿವಾರ ಸಾಹಿತ್ಯಾಸಕ್ತರು ಪರಸ್ಪರ ಚರ್ಚಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

BANGALORE LITERATURE FESTIVAL

ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಪ್ರಮುಖರು, ಓದುಗರು, ಪ್ರಕಾಶಕರು, ವಿದ್ಯಾರ್ಥಿಗಳು ಮತ್ತು ಯುವ ವೃತ್ತಿಪರರು ಒಂದೆಡೆ ಸೇರಿಸಿ, ವಿಚಾರ ವಿನಿಮಯ ಮಾಡಲು ಉತ್ಸವದ ವೇದಿಕೆ ಸಹಕಾರಿಯಾಯಿತು. ಮಕ್ಕಳಿಗೆ ಪ್ರತ್ಯೇಕವಾಗಿ ಎರಡು ವೇದಿಕೆಗಳನ್ನು ರೂಪಿಸಲಾಗಿತ್ತು. ಮಕ್ಕಳ ಜತೆಗೆ ಸಂಭಾಷಣೆ ನಡೆಸಿದ ಲೇಖಕರು, ಕಥೆಗಳನ್ನು ಹೇಳಿ ರಂಜಿಸಿದರು.

ಅಮರ ಚಿತ್ರಕಥಾ ರಸಪ್ರಶ್ನೆ, ಮನರಂಜನೆಯ ಕಾರ್ಯಕ್ರಮಗಳನ್ನೂ ಮಕ್ಕಳಿಗಾಗಿ ರೂಪಿಸಲಾಗಿತ್ತು. ಇದರಿಂದಾಗಿ ವಿವಿಧ ವಯೋಮಾನದ ಮಕ್ಕಳು ಆಟಗಳನ್ನು ಆಡಿ ಸಂಭ್ರಮಿಸಿದರು.



ಮಕ್ಕಳು ಸಂಭ್ರಮಿಸಿದ ಪರಿ –ಪ್ರಜಾವಾಣಿ ಚಿತ್ರ

ಭಾನುವಾರವೂ ಬೆಳಿಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ ಲಲಿತ್ ಅಶೋಕ್ ಹೋಟೆಲ್ ಆವರಣದ ನಾಲ್ಕು ವೇದಿಕೆಯಲ್ಲಿ ವಿಚಾರಗೋಷ್ಠಿಗಳು ನಡೆಯಲಿವೆ. ವಿವಿಧ ವಿಷಯಗಳ ಬಗ್ಗೆ ತಜ್ಞರು ಚರ್ಚಿಸಲಿದ್ದಾರೆ. ಪ್ರವೇಶ ಉಚಿತ ಇರಲಿದೆ.

ಅದಾನಿ ಜೀವನಚರಿತ್ರೆ ಬರೆಯುವ ಪ್ರಸ್ತಾವ ತಿರಸ್ಕರಿಸಿದ್ದೆ: ಗುಹಾ



ಬೆಂಗಳೂರು: ‘ತಮ್ಮ ಜೀವನಚರಿತ್ರೆ ಬರೆಯುವಂತೆ ಉದ್ಯಮಿ ಗೌತಮ್ ಅದಾನಿ ಅವರಿಂದ ನನಗೆ 2013ರಲ್ಲಿ ಪ್ರಸ್ತಾವ ಬಂದಿತ್ತು’ ಎಂದು ಖ್ಯಾತ ಇತಿಹಾಸಕಾರ ರಾಮಚಂದ್ರ ಗುಹಾ ಅವರು ನೆನಪಿಸಿಕೊಂಡರು.

‘ಗೆಟ್ಟಿಂಗ್ ಟು ನೋ ಗಾಂಧಿ: ಎ ಬಯೊಗ್ರಫರ್ಸ್ ಜರ್ನಿ’ ಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ಗಾಂಧಿ ಕುರಿತು ಬರೆಯುತ್ತಿದ್ದೇನೆ. ಆದ್ದರಿಂದ ಈ ಪುಸ್ತಕ ಬರೆಯಲಾಗುವುದಿಲ್ಲ ಎಂದು ಅದಾನಿ ಅವರಿಗೆ ತಿಳಿಸಿದ್ದೆ. ಇದನ್ನು ತಿಳಿದ ನನ್ನ ಸ್ನೇಹಿತರು ಇಂಥ ಅವಕಾಶ ಬಿಟ್ಟು ಕೊಡಬಾರದಿತ್ತು. ಒಂದು ವೇಳೆ ನೀನು ನಿನ್ನ ಆತ್ಮಕಥೆ ಬರೆದುಕೊಳ್ಳುವಾಗ ‘ಫ್ರಂ ಗಾಂಧಿ ಟು ಅದಾನಿ, ಎ ಬಯೊಗ್ರಫರ್ಸ್ ಜರ್ನಿ’ ಎಂದು ಪುಸ್ತಕಕ್ಕೆ ಹೆಸರಿಡಬಹುದಿತ್ತು ಎಂದು ಹೇಳಿದರು’ ಎಂದು ಗುಹಾ ಅವರು ಹೇಳುತ್ತಿದ್ದಂತೆ ಸಭಿಕರು ನಗೆಗಡಲಲ್ಲಿ ತೇಲಿದರು.

‘ಇದೇ ನಗರದ ನಿವೃತ್ತ ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟಿಗರೊಬ್ಬರು ಅವರ ಜೀವನಚರಿತ್ರೆ ಬರೆದುಕೊಡುವಂತೆ ಕೇಳಿದ್ದರು. ಇದೇ ರೀತಿ ನಗರದಲ್ಲೇ ಇರುವ ಖ್ಯಾತ ವಿಜ್ಞಾನಿಯೊಬ್ಬರೂ ಪ್ರಸ್ತಾವ ಇಟ್ಟಿದ್ದರು’ ಎಂದರು.

‘ವಾಜಪೇಯಿ ಪ್ರಸ್ತಾವವನ್ನು ತಿರಸ್ಕರಿಸಿದ್ದೆ’: ‘ವಾಜಪೇಯಿ ಅವರು ಪ್ರಧಾನಿ ಆಗಿದ್ದ ಸಂದರ್ಭದಲ್ಲಿ, ಅವರ ಸಂಬಂಧಿಕರೊಬ್ಬರು ನನ್ನ ಬಳಿ ವಾಜಪೇಯಿ ಅವರ ಜೀವನಚರಿತ್ರೆ ಬರೆಯುವಂತೆ ಕೇಳಿಕೊಂಡಿದ್ದರು. ಈ ಪುಸ್ತಕಗಳು ಒಳ್ಳೆಯ ಸಂಖ್ಯೆಯಲ್ಲಿ ಮಾರಾಟವಾಗುತ್ತವೆ. ಪ್ರಧಾನಿ ಅವರೊಂದಿಗೆ ಫೋಟೊ ಕೂಡ ತೆಗೆದುಕೊಳ್ಳಬಹುದು ಎಂದಿದ್ದರು. ನಾನು ಈ ಪ್ರಸ್ತಾವವನ್ನು ವಿನಯದಿಂದಲೇ ತಿರಸ್ಕರಿಸಿದ್ದೆ. ನಾನು ಒಬ್ಬ ಸಣ್ಣ ಬರಹಗಾರ. ಪ್ರಧಾನಿ ಅವರಂಥ ವ್ಯಕ್ತಿಗಳ ಬಗ್ಗೆ ಬರೆಯುವಷ್ಟು ದೊಡ್ಡವನಲ್ಲ ಎಂದು ಹೇಳಿದ್ದೆ’ ಎಂದರು.

‘ಅನುವಾದಗೊಂಡಾಗ ವಿವಾದವಾಗಲಿಲ್ಲ’

ಬೆಂಗಳೂರು: ಬೆಂಗಳೂರು ಸಾಹಿತ್ಯ ಉತ್ಸವ 11ನೇ ಅವೃತ್ತಿಯಲ್ಲಿ ತೇಜೋ ತುಂಗಭದ್ರ ಪುಸ್ತಕವನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿರುವ ಬಗ್ಗೆ ಲೇಖಕ ವಸುಧೇಂದ್ರ, ಮೈತ್ರೇಯಿ ಕರ್ನೂರು ಮತ್ತು ಕಾರ್ತಿಕ ವೆಂಕಟೇಶ್ ಚರ್ಚಿಸಿದರು.

‘ಮಾತೃಭಾಷೆಯಲ್ಲಿ ಕಾದಂಬರಿ ಬರೆದಾಗ ಬಳಸಿದ ಕೆಲ ಪದಗಳು ವಿವಾದಕ್ಕೆ ಕಾರಣವಾಗಿದ್ದವು. ಆದರೆ ಅದೇ ಕಾದಂಬರಿ ಆಂಗ್ಲ ಭಾಷೆಗೆ ಅನುವಾದಗೊಂಡಾಗ ಇಂತಹ ವಿವಾದ ಸೃಷ್ಟಿಯಾಗಲಿಲ್ಲ’ ಎಂದು ಸಭಿಕರ ಪ್ರಶ್ನೆಗೆ ವಸುಧೇಂದ್ರ ಉತ್ತರಿಸಿದರು.

ಸುಧಾ– ಮಯೂರ ಓದಿರಿ



ಸಡಗರ, ಸಂಭ್ರಮದ ಮಕ್ಕಳ ಸಾಹಿತ್ಯೋತ್ಸವ

ಬೆಂಗಳೂರು: ಮಕ್ಕಳಲ್ಲಿ ಸಾಹಿತ್ಯ ಆಸಕ್ತಿಯನ್ನು ಬೆಳೆಸಲು ಬೆಂಗಳೂರು ಸಾಹಿತ್ಯೋತ್ಸವ ವೇದಿಕೆಯಾಯಿತು.

ಈ ಉತ್ಸವದಲ್ಲಿ ಮಕ್ಕಳ ಸಾಹಿತ್ಯ ಹಾಗೂ ಮೋಜು ಎಂಬ ಮಾಲ್ಗುಡಿ ಮತ್ತು ಸಿಯೋನಿ ಎಂಬ ವೇದಿಕೆ ನಿರ್ಮಿಸಲಾಗಿತ್ತು. ಸಿಯೋನಿ ವೇದಿಕೆಯಲ್ಲಿ ಮಕ್ಕಳ ವಿವಿಧ ಚಟುವಟಿಕೆಗೆ ಅವಕಾಶ ಕಲ್ಪಿಸಿದರೇ, ಮಾಲ್ಗುಡಿ ವೇದಿಕೆಯನ್ನು ಸಾಹಿತ್ಯಕ್ಕೆ ಮೀಸಲಿಡಲಾಗಿತ್ತು.

ಲಲಿತ್ ಅಶೋಕ್ ಹೋಟೆಲ್‌ನ ಮನೋಹರ ಉದ್ಯಾನವು ನೂರಾರು ಉತ್ಸಾಹಿ ಮಕ್ಕಳಿಂದ ತುಂಬಿತ್ತು. ಸಿಯೋನಿ ವೇದಿಕೆಯಲ್ಲಿ ನಾಲ್ಕು ವರ್ಷದ ಮೇಲ್ಪಟ್ಟ ಮಕ್ಕಳಿಗೆ ಸಂವಾದಾತ್ಮಕ ಆಟದ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಮಾಲ್ಗುಡಿ ವೇದಿಕೆಯಲ್ಲಿ ಮಕ್ಕಳ ನೆಚ್ಚಿನ ಪುಸ್ತಕದ ಲೇಖಕರನ್ನು ಭೇಟಿ ಮಾಡುವ ಮತ್ತು ಅವರೊಂದಿಗೆ ಸಂವಾದ ಮಾಡುವ ಅವಕಾಶ ಕಲ್ಪಿಸಲಾಗಿತ್ತು. ಇದರ ಜೊತೆಗೆ ಸಂಗೀತ, ನಾಟಕ ಚಟುವಟಿಕೆಗಳಲ್ಲಿ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಮಕ್ಕಳಲ್ಲಿ ಸಾಹಿತ್ಯ ಆಸಕ್ತಿಯನ್ನು ಬೆಳೆಸಲು ಇದೊಂದು ಉತ್ತಮ ವೇದಿಕೆಯಾಗಿದೆ. ನನ್ನ ಇಬ್ಬರೂ ಮಕ್ಕಳು ಈ ಸಾಹಿತ್ಯೋತ್ಸವದಲ್ಲಿ ಭಾಗವಹಿಸಿದ್ದಾರೆ ಎಂದು ಪೋಷಕಿ ವಿದ್ಯಾ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಾಹಿತ್ಯೋತ್ಸದಲ್ಲಿ ಆಂಗ್ಲ ಸಾಹಿತ್ಯಕ್ಕೆ ಹೆಚ್ಚು ಆದ್ಯತೆ ನೀಡಲಾಗಿದ್ದು, ಇದರ ಜೊತೆಗೆ ಕನ್ನಡ ಸಾಹಿತ್ಯವನ್ನೂ ಮಕ್ಕಳಿಗೆ ಪರಿಚಯಿಸಬೇಕು ಎಂದು ಪೋಷಕ ನಾರಾಯಣ್ ಅವರು ಸಲಹೆ ನೀಡಿದರು.

ಮಕ್ಕಳನ್ನು ಸಾಹಿತ್ಯದ ಜಗತ್ತಿಗೆ ಪರಿಚಯಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಕೋವಿಡ್‌ನಿಂದಾಗಿ ಎರಡು ವರ್ಷಗಳ ಕಾಲ ಮಕ್ಕಳಿಗೆ ಯಾವ ರೀತಿಯ ಚಟುವಟಿಕೆ ನಡೆಸಲೂ ಸಾಧ್ಯವಾಗಿರಲಿಲ್ಲ. ಆದರೆ ಈ ವರ್ಷ ಮತ್ತೆ ಮಕ್ಕಳ ಕಲರವ ಎಲ್ಲರ ಕಣ್ಮನ ಸೆಳೆಯುತ್ತಿದೆ ಎಂದು ಕಾರ್ಯಕ್ರಮದ ಆಯೋಜಕ ವಿಕ್ರಮ್ ಶ್ರೀಧರ್ ಅವರು ತಿಳಿಸಿದರು.







ಇದೇ 8ರಿಂದ 'ಫ್ಯೂಚರ್ ಡಿಸೈನ್' ಸಮಾವೇಶ: ಅಶ್ವತ್ಥನಾರಾಯಣ

ಬೆಂಗಳೂರು: ನಗರದ ಅಶೋಕ ಹೋಟೆಲ್‌ನಲ್ಲಿ ಇದೇ 8ರಿಂದ 10ರವರೆಗೆ 'ಫ್ಯೂಚರ್ ಡಿಸೈನ್' ಸಮಾವೇಶ ನಡೆಯಲಿದ್ದು, ಈ ಸಮಾವೇಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ' ಎಂದು ಐಟಿ-ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

'ನ. 11ರಿಂದ ನಡೆಯುತ್ತಿರುವ 'ಬೆಂಗಳೂರು ಡಿಸೈನ್ ಫೆಸ್ಟಿವಲ್'ನ ಮುಂದುವರಿದ ಭಾಗವಾಗಿ ಈ ಸಮಾವೇಶವನ್ನು ಏರ್ಪಡಿಸಲಾಗುತ್ತಿದೆ. ಅಂತರರಾಷ್ಟ್ರೀಯ ಕೌಶಲ ಅಭಿವೃದ್ಧಿ ಸಮಿತಿ, ಭಾರತೀಯ ವಿನ್ಯಾಸಗಾರರ ಒಕ್ಕೂಟ, ಸಿಐಐ ಮತ್ತು ಜೈನ್ ಸ್ಕೂಲ್ ಆಫ್ ಆರ್ಕಿಟೆಕ್ಟ್ ಸಹಯೋಗದಲ್ಲಿ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದರು.

'ವಿಶ್ವದಾದ್ಯಂತ 300ಕ್ಕೂ ಹೆಚ್ಚು ಡಿಸೈನ್ ಪರಿಣತರು ಈ ಸಮಾವೇಶದಲ್ಲಿ ಮಾತನಾಡಲಿದ್ದು, 3 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದರಲ್ಲಿ ವರ್ಲ್ಡ್ ಡಿಸೈನ್ ಆರ್ಗನೈಸೇಶನ್, ವರ್ಲ್ಡ್ ಡಿಸೈನ್ ಕೌನ್ಸಿಲ್, ಬೆಂಗಳೂರು ಡಿಸೈನ್ ಫೆಸ್ಟಿವಲ್ ಮತ್ತು ಬೆಂಗಳೂರು ಡಿಸೈನ್ ಸಪ್ತಾಹದ ಪ್ರತಿನಿಧಿಗಳು ಇರಲಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಒಟ್ಟು 3 ವಿಭಾಗಗಳಲ್ಲಿ ಸಮಾವೇಶದ ಗೋಷ್ಠಿಗಳು ನಡೆಯಲಿವೆ. ಇದರಲ್ಲಿ ವಿನ್ಯಾಸದ ಆಯಾಮಗಳು, ಒಳಾಂಗಣ ವಿನ್ಯಾಸ, ವಾಸ್ತುಶಿಲ್ಪ, ಮೆಟಾವರ್ಸ್ ಮತ್ತು ಎವಿಜಿಸಿ ಮುಂತಾದವನ್ನು ಕುರಿತು ವಿಚಾರ ವಿನಿಮಯ ನಡೆಯಲಿದೆ. ಸಮಾವೇಶಕ್ಕೆ ವಿದ್ಯಾರ್ಥಿಗಳು, ಸಾಮಾನ್ಯರ ವಿಭಾಗಗಳಲ್ಲಿ ಟಿಕೆಟ್ ಆಧಾರಿತ ಪ್ರವೇಶಾವಕಾಶ ಇದೆ. ಡಿಸೈನ್ ಪ್ರದರ್ಶನ ಮೇಳ ಕೂಡ ಇರಲಿದೆ. ಮಾಹಿತಿಗೆ https://bengalurudesign festival.org/ ವೆಬ್‌ಸೈಟ್ ನೋಡಬಹುದು' ಎಂದರು.

ಮತದಾರರ ಸಮೀಕ್ಷೆ: ಪರಸ್ಪರ ಆರೋಪ– ಪ್ರತ್ಯಾರೋಪ

ಠಾಣೆ ಎದುರು ಬಿಜೆಪಿ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಿಜೆಪಿ, ಕಾಂಗ್ರೆಸ್ ಕಾರ್ಯಕರ್ತರ ಪೈಪೋಟಿ
- ಬಿಗುವಿನ ವಾತಾವರಣ ನಿರ್ಮಾಣ

ಬೆಂಗಳೂರು: ಮತದಾರರ ಸಮೀಕ್ಷೆ ವಿಚಾರವಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಯಶವಂತಪುರ ಠಾಣೆ ಎದುರು ಶನಿವಾರ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.

ಮಾಜಿ ಕಾರ್ಪೊರೇಟರ್ ಬಿಜೆಪಿಯ ವೆಂಕಟೇಶ್ ಹಾಗೂ ಕಾಂಗ್ರೆಸ್‌ನ ಎಸ್. ಕುಸುಮಾ ನೇತೃತ್ವದಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು, ಪರಸ್ಪರ ಆರೋಪ– ಪ್ರತ್ಯಾರೋಪ ಮಾಡಿ ಘೋಷಣೆ ಕೂಗಿದರು.

ಎರಡೂ ಪಕ್ಷದವರು ಠಾಣೆ ಎದುರು ಏಕಕಾಲದಲ್ಲಿ ಸೇರಿದ್ದರಿಂದ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸ್ಥಳದಿಂದ ಹೋಗುವಂತೆ ಪೊಲೀಸರು ಸೂಚಿಸಿದರೂ ಪ್ರತಿಭಟನಕಾರರು ಕ್ಯಾರೆ ಎನ್ನಲಿಲ್ಲ.

'ಯಶವಂತಪುರ ಬಿ.ಕೆ. ನಗರದ 8ನೇ ಅಡ್ಡರಸ್ತೆ ಮನೆಯೊಂದಕ್ಕೆ ಬಂದಿದ್ದ ಇಬ್ಬರು, ಮತದಾರರ ಮಾಹಿತಿ ಕಲೆಹಾಕುತ್ತಿದ್ದರು. ಆಮಿಷವೊಡ್ಡಿ ಮತದಾನ ಗುರುತಿನ ಚೀಟಿ ಪಡೆದುಕೊಳ್ಳಲು ಯತ್ನಿಸುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಅವರಿಬ್ಬರನ್ನು ಹಿಡಿದುಕೊಂಡು ಪರಿಶೀಲಿಸಲಾಯಿತು. ಅವರ ಬಳಿ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿ, ಸಂಸದ ಡಿ.ಕೆ. ಸುರೇಶ್ ಹಾಗೂ ಎಸ್. ಕುಸುಮಾ ಅವರ ಫೋಟೊಗಳಿದ್ದವು. ಅಕ್ರಮ ಸಮೀಕ್ಷೆ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಬೇಕು' ಎಂದು ಬಿಜೆಪಿ ಕಾರ್ಯಕರ್ತರು ಒತ್ತಾಯಿಸಿದರು.

ಹೆಸರು ಅಳಿಸಿದ್ದಕ್ಕೆ ಪರಿಶೀಲನೆ: ಬಿಜೆಪಿ ವಿರುದ್ಧ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, 'ಬಿಜೆಪಿಯವರೇ ಅಕ್ರಮವಾಗಿ ಸಮೀಕ್ಷೆ ನಡೆಸಿ, ಕಾಂಗ್ರೆಸ್‌ನ 40 ಸಾವಿರ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಅಳಿಸಿ ಹಾಕಿದ್ದಾರೆ. ಅಂಥ ಮತದಾರರಿಂದ ಮಾಹಿತಿ ಪಡೆದು ಚುನಾವಣೆ ಆಯೋಗಕ್ಕೆ ದೂರು ಕೊಡಿಸಲು ಹೋಗಿದ್ದ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಲಾಗಿದೆ' ಎಂದು ಆರೋಪಿಸಿದರು.

'ಮತದಾರರ ಪಟ್ಟಿ ಸಂಬಂಧ ತಕರಾರು ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ಹೀಗಾಗಿ, ಪೊಲೀಸರಿಗೆ ಮಾಹಿತಿ ನೀಡಿಯೇ ಪರಿಶೀಲನೆ ಪ್ರಕ್ರಿಯೆ ಆರಂಭಿಸಲಾಗಿದೆ. ಪರಿಶೀಲನೆಗೆ ಅಡ್ಡಿಪಡಿಸಿ ಹಲ್ಲೆ ಮಾಡಿರುವ ಬಿಜೆಪಿ ಕಾರ್ಯಕರ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

ಎರಡೂ ಪಕ್ಷದವರಿಂದಲೂ ಮನವಿ ಸ್ವೀಕರಿಸಿದ ಪೊಲೀಸರು, ಪ್ರತಿಭಟನಕಾರರನ್ನು ಸ್ಥಳದಿಂದ ಕಳುಹಿಸಿದರು. ಬಳಿಕವೇ ಪರಿಸ್ಥಿತಿ ತಿಳಿಯಾಯಿತು.

'ರಾಯಚೂರಿಗೆ ಏಮ್ಸ್ ಬೇಡಿಕೆ: ಸಿಎಂ ಜೊತೆ ಚರ್ಚೆ'


ಶಿವರಾಜ್ ಕುಮಾರ್

ರಾಯಚೂರು: 'ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸುವಂತೆ ನಡೆಯುತ್ತಿರುವ ಹೋರಾಟಕ್ಕೆ ನನ್ನ ಬೆಂಬಲವಿದೆ. ಈ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಲಾಗುವುದು' ಎಂದು ನಟ ಶಿವರಾಜಕುಮಾರ್ ಹೇಳಿದರು.

ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ 'ವೇದ' ಸಿನಿಮಾ ಬಿಡುಗಡೆ ಪೂರ್ವ ಪ್ರಚಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ನನ್ನನ್ನು ಭೇಟಿಯಾದ ರಾಯಚೂರು ಜನರು ಇಲ್ಲಿರುವ ಸಮಸ್ಯೆಗಳು ಮತ್ತು ಹೋರಾಟಗಳ ಬಗ್ಗೆ ಯಾವತ್ತು ಹೇಳಿಲ್ಲ. ರಾಯಚೂರಿನಲ್ಲಿ ಮಾಧ್ಯಮದವರು ಪ್ರಶ್ನಿಸಿದಾಗಲೇ ಜನರ ಬೇಡಿಕೆ ಗೊತ್ತಾಗಿದೆ' ಎಂದರು. 'ಈ ಭಾಗದಲ್ಲಿ ನಡೆಯುವ ನೆಲ, ಜಲ ಪರ ಹೋರಾಟಗಳನ್ನು ಕನ್ನಡ ಚಿತ್ರರಂಗ ಬೆಂಬಲಿಸುತ್ತದೆ ಎಂಬುದನ್ನು ಎಲ್ಲ ಕಲಾವಿದರ ಪರವಾಗಿ ನಾನು ಮಾತು ಕೊಡುತ್ತೇನೆ' ಎಂದರು.

'ಮಂತ್ರಾಲಯದಲ್ಲಿ ರಾಯರ ದರ್ಶನ ಮಾಡಿದ್ದು ತುಂಬಾ ಸಂತೃಪ್ತಿ ನೀಡಿದೆ'ಎಂದರು.

ಸುದ್ದಿ 2 ನಿಮಿಷ

ಹತಾಶೆಯಿಂದ ಕಾಂಗ್ರೆಸ್ ಆರೋಪ: ಪ್ರಭು ಚವ್ಹಾಣ

ಬೆಂಗಳೂರು: ಗೋಹತ್ಯೆ ನಿಷೇಧ ಮಸೂದೆ ತಿದ್ದುಪಡಿಯಿಂದ ಯಾರಿಗೂ ತೊಂದರೆ, ನಷ್ಟವಾಗಿಲ್ಲ. ಈ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದವರು ಹತಾಶೆಯಿಂದ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಸ್. ನಿಜಲಿಂಗಪ್ಪ ನೇತೃತ್ವದ ಕಾಂಗ್ರೆಸ್ ಸರ್ಕಾರವೇ ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿತ್ತು. ಅದರಲ್ಲಿ ದಂಡನಾ ಕ್ರಮಗಳನ್ನು ಮಾತ್ರ ನಮ್ಮ ಸರ್ಕಾರದ ಅವಧಿಯಲ್ಲಿ ಹೆಚ್ಚಿಸಲಾಗಿದೆ. ಈ ತಿದ್ದುಪಡಿಯಿಂದಾಗಿ ರಾಜ್ಯದಲ್ಲಿ ಗೋವುಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ' ಎಂದರು.



ಪುಣ್ಯಕೋಟಿ ದತ್ತು ಯೋಜನೆಗೆ ದೇಣಿಗೆ ನೀಡುವಂತೆ ಸರ್ಕಾರಿ ನೌಕರರ ಮೇಲೆ ಯಾರೂ ಒತ್ತಡ ಹೇರಿಲ್ಲ. ನೌಕರರು ಸ್ವಯಂಪ್ರೇರಣೆಯಿಂದ ದೇಣಿಗೆ ನೀಡಲು ಮುಂದಾಗಿದ್ದಾರೆ. ಈ ಬಗ್ಗೆ ಕಾಂಗ್ರೆಸ್ ನಾಯಕರು ಮಾಡುತ್ತಿರುವ ಆರೋಪಗಳಲ್ಲಿ ಹುರುಳಿಲ್ಲ ಎಂದು ಹೇಳಿದರು.

ಪುಣ್ಯಕೋಟಿ ದತ್ತು ಯೋಜನೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈವರೆಗೆ 2,665 ಜನರು ₹ 21.45 ಲಕ್ಷ ದೇಣಿಗೆ ನೀಡಿದ್ದಾರೆ ಎಂದರು.

ಎಲ್ಲ ಜಿಲ್ಲೆಗಳಲ್ಲಿ ಗೋಶಾಲೆಗಳ ನಿರ್ಮಾಣ ಪ್ರಗತಿಯಲ್ಲಿದೆ. ಪಶು ಚಿಕಿತ್ಸಾಲಯಗಳ ಆರಂಭ, ಸಂಚಾರಿ ಪಶು ಚಿಕಿತ್ಸಾಲಯಗಳ ಸೇವೆ ಒದಗಿಸುವುದಕ್ಕೂ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಗೋಶಾಲೆಗಳಲ್ಲಿ ಪಶು ಆಹಾರ ಪೂರೈಕೆಯಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಕಾಂಗ್ರೆಸ್ ಪಕ್ಷದವರು ಮಾಡಿರುವ ಆರೋಪಗಳಿಗೆ ಆಧಾರವಿಲ್ಲ. ಮೇವು ಖರೀದಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಡೆಯುತ್ತಿದೆ. ಭ್ರಷ್ಟಾಚಾರಕ್ಕೆ ಯಾವುದೇ ಅವಕಾಶ ಇಲ್ಲ ಎಂದು ಚವ್ಹಾಣ ತಿಳಿಸಿದರು.

ದತ್ತಾತ್ರೇಯ ಆಸ್ತಿ ಅಕ್ರಮವಾಗಿ ಮಂಜೂರು: ತನಿಖೆಗೆ ಆಗ್ರಹ

ಬೆಂಗಳೂರು: 'ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ದತ್ತಾತ್ರೇಯ ದೇವರ ಹೆಸರಿನ 1,861 ಎಕರೆ ಜಾಗವನ್ನು ಗೇಣಿದಾರರು ಅಲ್ಲದವರಿಗೆ ಅಕ್ರಮವಾಗಿ ಮಂಜೂರು ಮಾಡಿರುವ ಮಾಹಿತಿ ಲಭಿಸಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಅಕ್ರಮ ಮಂಜೂರಾತಿ ರದ್ದು ಮಾಡಬೇಕು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ದತ್ತ ಪೀಠ ವಿಚಾರದಲ್ಲಿ ಕಾಂಗ್ರೆಸ್ ವಿರೋಧದ ಹಿಂದೆ ಮತೀಯ ಓಲೈಕೆ ಜೊತೆಗೇ ದತ್ತಾತ್ರೇಯ ದೇವರ ಹೆಸರಿನಲ್ಲಿದ್ದ ಆಸ್ತಿ ಹೊಡೆಯುವ ಸಂಚು ಇತ್ತು' ಎಂದು ದೂರಿದರು. 'ದತ್ತಾತ್ರೇಯ ದೇವರ ಹೆಸರಿಗೆ ಜಮೀನು ಕಾಯ್ದಿರಿಸಬೇಕು. ತನಿಖೆಗೆ ರಾಜ್ಯಮಟ್ಟದ ಅಧಿಕಾರಿಗಳ ತಂಡ ರಚಿಸಬೇಕು' ಎಂದು ಒತ್ತಾಯಿಸಿದರು.

'ದತ್ತಪೀಠದ ವಿಚಾರದಲ್ಲಿ ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿದೆ. ಈ ಬಾರಿಯ ದತ್ತ ಜಯಂತಿ 4-5 ದಶಕಗಳ ಹೋರಾಟ ಈಡೇರಿದ ಸಂತೃಪ್ತಿಯ ಜಯಂತಿ ಆಗಲಿದೆ' ಎಂದರು.

ಇ–ಎಫ್‌ಐಆರ್: ಆರೋಪಿ ಸೆರೆ, 13 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳತನ ಸಂಬಂಧ ಆನ್‌ಲೈನ್ ಮೂಲಕ ಸಲ್ಲಿಕೆಯಾಗಿದ್ದ ದೂರು ಆಧರಿಸಿ ತನಿಖೆ ಕೈಗೊಂಡಿದ್ದ ಕೆಂಗೇರಿ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿ 13 ವಾಹನ ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

'ಭೈರವನಗರದ 2ನೇ ಅಡ್ಡರಸ್ತೆಯ ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನವಾಗಿದ್ದ ಬಗ್ಗೆ ಯುವತಿಯೊಬ್ಬರು, ಪೊಲೀಸ್ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿ ದೂರು ದಾಖಲಿಸಿದ್ದರು. ಇ–ಎಫ್‌ಐಆರ್ ದಾಖಲಿಸಿಕೊಂಡು, ಆರೋಪಿ ಇಮ್ರಾನ್ ಖಾನ್ (32) ಎಂಬಾತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಂಗೇರಿ ಕೊಮ್ಮಘಟ್ಟ ರಸ್ತೆಯ ಬೀಡಿ ಕಾರ್ಮಿಕರ ಕಾಲೊನಿ ನಿವಾಸಿ ಇಮ್ರಾನ್, ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ಈತನಿಂದ ₹ 8.30 ಲಕ್ಷ ಮೌಲ್ಯದ 11 ದ್ವಿಚಕ್ರ ವಾಹನ ಹಾಗೂ 2 ಆಟೊ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿ, ಮನೆಗಳ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ವಾಹನಗಳನ್ನು ಗುರುತಿಸುತ್ತಿದ್ದ. ಹ್ಯಾಂಡಲ್ ಲಾಕ್ ಮುರಿದು ವಾಹನಗಳನ್ನು ಕದ್ದೊಯ್ಯುತ್ತಿದ್ದ. ಕೆಲ ದಿನ ನಿರ್ಜನ ಸ್ಥಳಗಳಲ್ಲಿ ವಾಹನಗಳನ್ನು ಇರಿಸುತ್ತಿದ್ದ. ನೋಂದಣಿ ಸಂಖ್ಯೆ ಫಲಕ ಬದಲಿಸಿ ಕೆಲ ವಾಹನ ಮಾರಿದ್ದ' ಎಂದು ಹೇಳಿದರು.

'ದೊರೆ' ಆಗಲು ಹೊರಟಿದ್ದ ಯುವಜೋಡಿ

ಫ್ಲ್ಯಾಟ್‌ನಲ್ಲಿ ₹ 25 ಲಕ್ಷ ಮೌಲ್ಯದ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಬಂಧಿಸಲಾಗಿದ್ದ ಕೇರಳದ ಆರೋಪಿಗಳಿಬ್ಬರ ಫ್ಲ್ಯಾಟ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ₹25 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಎಸ್. ವಿಷ್ಣುಪ್ರಿಯಾ ಹಾಗೂ ಸ್ನೇಹಿತ ಸಿಗಿಲ್ ವರ್ಗೀಸ್ ಎಂಬುವವರನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಇವರಿಂದ 11.37 ಗ್ರಾಂ ತೂಕದ 23 ಎಂಡಿಎಂಎ ಮಾತ್ರೆಗಳು, 0.53 ಗ್ರಾಂ ತೂಕದ ಎಲ್‌ಎಸ್‌ಡಿ ಕಾಗದ ಚೂರುಗಳನ್ನು ಜಪ್ತಿ ಮಾಡಲಾಗಿತ್ತು' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಆರೋಪಿಗಳನ್ನು ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಿದಾಗ, ಅವರಿಬ್ಬರು ಚಂದಾಪುರ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ವಾಸವಿದ್ದ ಮಾಹಿತಿ ಗೊತ್ತಾಗಿತ್ತು. ಫ್ಲ್ಯಾಟ್ ಮೇಲೆ ದಾಳಿ ಮಾಡಿದಾಗ, 100 ಗ್ರಾಂ ಎಂಡಿಎಂಎ, 150 ಎಲ್‌ಎಸ್‌ಡಿ ಕಾಗದ ಚೂರು, 25 ಎಕ್ಸ್‌ಟೆಸ್ಸಿ ಮಾತ್ರೆಗಳು, ಡೈರಿ ಹಾಗೂ ಕೊಲಂಬಿಯಾ 'ಡ್ರಗ್ಸ್' ಜಾಲದ ದೊರೆ ಪಾಬ್ಲೊ ಎಸ್ಕೊಬರ್ ಭಾವಚಿತ್ರ ಪತ್ತೆಯಾಗಿದೆ' ಎಂದು ತಿಳಿಸಿದರು.


ಸಿಸಿಬಿ ಪೊಲೀಸರು ಆರೋಪಿಗಳ ಫ್ಲ್ಯಾಟ್‌ನಲ್ಲಿ ಜಪ್ತಿ ಮಾಡಿರುವ ಡ್ರಗ್ಸ್

ದೊರೆ ಆಗಲು ಹೊರಟಿದ್ದ ಯುವಜೋಡಿ: 'ಕೇರಳದ ವಿಷ್ಣುಪ್ರಿಯಾ ಹಾಗೂ ಸಿಗಿಲ್, ಹಲವು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದರು. ಟ್ಯಾಟೂ ಕಲಾವಿದರಾಗಿ ಕೆಲಸ ಮಾಡುತ್ತಿದ್ದರು. ಅದರ ಜೊತೆಯಲ್ಲೇ ಅಕ್ರಮವಾಗಿ ಹಣ ಸಂಪಾದಿಸಲು ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದರು' ಎಂದು ಪೊಲೀಸರು ಹೇಳಿದರು.

'ಒಂದೇ ಫ್ಲ್ಯಾಟ್‌ನಲ್ಲಿ ವಾಸವಿದ್ದ ಆರೋಪಿಗಳು, ಸಹಜೀವನ ನಡೆಸುತ್ತಿದ್ದರು. ಕೊಲಂಬಿಯಾದ ಪಾಬ್ಲೊ ಎಸ್ಕೊಬರ್ ರೀತಿಯಲ್ಲೇ ಭಾರತದ ಡ್ರಗ್ಸ್ ಜಾಲದ ದೊರೆ ಆಗಬೇಕೆಂಬ ಗುರಿ ಇವರದ್ದಾಗಿತ್ತು. ಹೀಗಾಗಿ, ಆಫ್ರಿಕಾ ಪ್ರಜೆಗಳಿಂದ ಡ್ರಗ್ಸ್ ಖರೀದಿಸಿ ತಂದು ಫ್ಲ್ಯಾಟ್‌ನಲ್ಲಿ ಇಟ್ಟುಕೊಳ್ಳುತ್ತಿದ್ದರು. ಅದನ್ನೇ ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಲೋಕೇಶನ್ ಕಳುಹಿಸಿ ಡ್ರಗ್ಸ್ ಪೂರೈಕೆ: 'ವಿದ್ಯುತ್ ಕಂಬ, ಮರ, ಕಸದ ತೊಟ್ಟಿ ಹಾಗೂ ಇತರೆ ಜಾಗಗಳಲ್ಲಿ ಆರೋಪಿಗಳು ಡ್ರಗ್ಸ್ ಪೊಟ್ಟಣ ಮುಚ್ಚಿಡುತ್ತಿದ್ದರು. ಗ್ರಾಹಕರಿಗೆ ಜಾಗದ ಲೊಕೇಶನ್ ಕಳುಹಿಸುತ್ತಿದ್ದರು. ಅದೇ ಜಾಗಕ್ಕೆ ಹೋಗಿ ಗ್ರಾಹಕರು ಡ್ರಗ್ಸ್ ತೆಗೆದುಕೊಂಡು ಹೋಗುತ್ತಿದ್ದರು. ಆನ್‌ಲೈನ್ ಮೂಲಕವೇ ಹಣ ವರ್ಗಾವಣೆ ಮಾಡಲಾಗುತ್ತಿತ್ತು' ಎಂದು ಪೊಲೀಸರು ತಿಳಿಸಿದರು.

13 ಕೆ.ಜಿ ಹಶೀಷ್ ಜಪ್ತಿ: 'ಬಂಧಿತ ವಿಷ್ಣುಪ್ರಿಯಾ ಹಾಗೂ ಸಿಗಿಲ್‌ನನ್ನು ಹುಳಿಮಾವು ಪೊಲೀಸರು ಹಲವು ತಿಂಗಳ ಹಿಂದೆಯೇ ಬಂಧಿಸಿದ್ದರು. 13 ಕೆ.ಜಿ ಹಶೀಷ್ ಜಪ್ತಿ ಮಾಡಿದ್ದರು. ಜೈಲಿಗೆ ಹೋಗಿದ್ದ ಆರೋಪಿಗಳು, ಜಾಮೀನು ಮೇಲೆ ಹೊರಬಂದು ಪುನಃ ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದರು' ಎಂದು ಹೇಳಿದರು.

'ಗೀತಾ ದಾನ ಯಜ್ಞ ಮಹೋತ್ಸವ'ದಲ್ಲಿ ರಾಜನಾಥ್ ಸಿಂಗ್

ಭಗವದ್ಗೀತೆ ಸಾಧಕರಿಗೆ ಪ್ರೇರಣಾ ಶಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಗವದ್ಗೀತೆಯ ನೀತಿಯನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ವಸಂತಪುರದ ಇಸ್ಕಾನ್‌ನ ರಾಜಾಧಿರಾಜ ಗೋವಿಂದ ಮಂದಿರದಲ್ಲಿ ಗೀತಾ ಜಯಂತಿ ಪ್ರಯುಕ್ತ ಆಯೋಜಿಸಿದ್ದ 'ಗೀತಾ ದಾನ ಯಜ್ಞ ಮಹೋತ್ಸವ' ಉದ್ಘಾಟಿಸಿ ಅವರು ಮಾತನಾಡಿದರು.

ಸತ್ಯ, ಧರ್ಮ, ಅಹಿಂಸೆಯನ್ನು ಪ್ರತಿಪಾದಿಸುವ ಭಗವದ್ಗೀತೆ ಮಹಾಕವಿಗಳು, ಸಾಧಕರಿಗೂ ಪ್ರೇರಣಾ ಶಕ್ತಿ. ಜೀವನಕ್ಕೆ ಹತ್ತಿರವಾಗಿದೆ. ನಾವು ಹೇಗೆ ಶೋಕದಿಂದ ಮುಕ್ತವಾಗಬಹುದೆಂದು ತಿಳಿಸಿಕೊಡುತ್ತದೆ. ಮೃತ್ಯುವಿನ ಭಯ ಹೋಗಲಾಡಿಸುತ್ತದೆ. ಅಧ್ಯಾತ್ಮದ ಕಡೆ ಕರೆದುಕೊಂಡು ಹೋಗುತ್ತದೆ ಎಂದು ಬಣ್ಣಿಸಿದರು.

ಪಠ್ಯ ಕಲಿಕೆಗೆ ಶಿಕ್ಷಕರ ಅವಶ್ಯಕತೆ ಇರುತ್ತದೆ. ಆದರೆ, ಶಾಂತ, ಕ್ರೌರ್ಯ, ಸಂತಸ, ದುಃಖ ಮತ್ತಿತರ ಭಾವನೆಗಳನ್ನು ಯಾರೂ ಕಲಿಸುವುದಿಲ್ಲ. ಅವು ನಮ್ಮಲ್ಲೇ ಪ್ರಕಟಗೊಳ್ಳುತ್ತವೆ. ಸಕಾರಾತ್ಮಕವಾಗಿ ಆಲೋಚನೆ ಮಾಡಿ ಒಳ್ಳೆಯ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಅದೇ ತೆರನಾದ ಜೀವನ ಶೈಲಿಯನ್ನು ಮುಂದಿನ ಯುವ ಪೀಳಿಗೆಗೂ ತಲುಪಿಸಬೇಕು ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಗೀತದಾನ ಯಜ್ಞದ ಅವಧಿಯಲ್ಲಿ ಒಂದು ಲಕ್ಷ ಭಗವದ್ಗೀತೆ ಪ್ರತಿಗಳನ್ನು ಜನರಿಗೆ ಹಂಚುವ ಕೆಲಸ ಶ್ಲಾಘನೀಯ ಎಂದರು.

ಮಕ್ಕಳು ಮತ್ತು ಯುವಜನರ ವಿವಿಧ ತಂಡಗಳು ಭಗವದ್ಗೀತೆಯ ಶ್ಲೋಕಗಳನ್ನು ಪಠಿಸಿದರು. ವಿದ್ವಾಂಸ ವಿದ್ಯಾಭೂಷಣ ಅವರು ಭಗವದ್ಗೀತೆಯ ವಾಚನದ ಯೂಟ್ಯೂಬ್ ವೀಡಿಯೊ ಬಿಡುಗಡೆ ಮಾಡಿದರು.

ಇಸ್ಕಾನ್ ಉಪಾಧ್ಯಕ್ಷ ಚಂಚಲ ದಾಸ್, ಇಸ್ಕಾನ್ ಅಕ್ಷಯ ಪಾತ್ರ ಅಧ್ಯಕ್ಷ ಮಧುಪಂಡಿತ್ ದಾಸ್, ಕಂದಾಯ ಸಚಿವ ಆರ್. ಅಶೋಕ್, ಸಂಸದ ತೇಜಸ್ವಿ ಸೂರ್ಯ, ಶಾಸಕ ಎಂ. ಕೃಷ್ಣಪ್ಪ ಉಪಸ್ಥಿತರಿದ್ದರು.


ನಗರದ ವಸಂತಪುರದ ಇಸ್ಕಾನ್‌ನಲ್ಲಿ ಶನಿವಾರ ಆಯೋಜಿಸಿದ್ದ 'ಗೀತಾ ದಾನ ಯಜ್ಞ ಮಹೋತ್ಸವ'ದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಗವದ್ಗೀತೆಯ ಪುಸ್ತಕಗಳನ್ನು ಇಸ್ರೊ ಅಧ್ಯಕ್ಷ ಎಸ್‌.ಸೋಮನಾಥ್ ಅವರಿಗೆ ನೀಡಿದರು.

'ಸಂಸ್ಕೃತಿ ಪುನರ್ ಸ್ಥಾಪನೆಯಾಗುತ್ತಿದೆ'

ದೇಶದಲ್ಲಿ ಸಂಸ್ಕೃತಿ, ಸಂಸ್ಕಾರಗಳು ಆಳವಾಗಿ ಬೇರೂರುತ್ತಿದ್ದು, ಭಾರತೀಯ ಸಂಸ್ಕೃತಿ ಪುನರ್ ಸ್ಥಾಪನೆಯಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾರತದಲ್ಲಿ 70ರಿಂದ 90ರ ದಶಕದವರೆಗೂ ಪಾಶ್ಚಿಮಾತ್ಯ ಪ್ರಭಾವವಿತ್ತು. ಹಾಗಾಗಿ, ಮೌಲ್ಯಗಳು ಕಡಿಮೆಯಾಗಿದ್ದವು. ಭಾರತದ ಮೂಲದಲ್ಲಿ ಸಂಸ್ಕೃತಿಯ ಬೇರುಗಳು ಆಳವಾಗಿವೆ. ದೇಶಕ್ಕೆ ಸ್ವಾತಂತ್ರ್ಯ ದೊರಕಲು ಭಕ್ತಿ ಚಳವಳಿಗಳು ಮಹತ್ವದ ಪಾತ್ರ ವಹಿಸಿವೆ ಎಂದರು.

'ಸಮಸ್ಯೆಗಳಿಗೆ ಒಳಪಟ್ಟ ವ್ಯಕ್ತಿ ಭಗವದ್ಗೀತೆಯ ಪುಟಗಳನ್ನು ತಿರುವಿ ಹಾಕಿದರೆ ಸಮಸ್ಯೆಗೆ ಪರಿಹಾರ ದೊರಕುತ್ತದೆ. ಪ್ರಯತ್ನ ಮಾಡಿ ನೋಡಿ. ಇದು ನನ್ನ ಅನುಭವದ ಮಾತು. ಪ್ರತಿ ಶ್ಲೋಕದಲ್ಲೂ ಬದುಕಿನ ಸಾರದ ಜತೆಗೆ ಪರಿಹಾರವೂ ಇದೆ' ಎಂದು ಅನುಭವ ಹಂಚಿಕೊಂಡರು.

ಅಂಗವಿಕಲರಿಗೆ ವಿಶೇಷ ಶಕ್ತಿಯಿದೆ, ಕೀಳರಿಮೆ ಬೇಡ: ಬೊಮ್ಮಾಯಿ

ಕ್ರೀಡಾಂಗಣದಲ್ಲಿ ಮಕ್ಕಳ ಕಲರವ

ಪ್ರಜಾವಾಣಿ ವಾರ್ತೆ



ವಿಶ್ವ ಅಂಗವಿಕಲರ ದಿನಾಚರಣೆಯಲ್ಲಿ ಗಾಯನದ ಮೂಲಕ ರಂಜಿಸಿದ ಕಲಾವಿದರು

ಬೆಂಗಳೂರು: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ನಗರದ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ವಿಶ್ವ ವಿಕಲಚೇತನರ ದಿನಾಚರಣೆ'ಯಲ್ಲಿ ಅಂಗವಿಕಲ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವು ರಂಜಿಸಿತು.

ಅಂಗವಿಕಲ ಶಾಲೆಗಳ ಮಕ್ಕಳು ನೃತ್ಯದ ಮೂಲಕ ದಿನಾಚರಣೆಗೆ ಮೆರುಗು ನೀಡಿದರು.

ಮೈಸೂರಿನ ಡಾಟರ್ ಆಫ್ ಅವರ್ ಲೇಡಿ ಮರ್ಸಿ ಸಂಸ್ಥೆಯ ಶ್ರವಣದೋಷವುಳ್ಳ ಮಕ್ಕಳು ಯಶೋದಗಾಥೆ ನೃತ್ಯ ಪ್ರದರ್ಶಿಸಿದ್ದು ಆಕರ್ಷಕವಾಗಿತ್ತು.

ರಮಣ ಮಹರ್ಷಿ ಅಂಧ ಮಕ್ಕಳ ಸಂಸ್ಥೆ, ಹ್ಯಾಂಡಿಕ್ಯಾಪ್ಡ್ ವೆಲ್‌ಫೇರ್ ಅಸೋಸಿಯೇಶನ್ ಸಂಸ್ಥೆ, ಮಾತ್ರು ಅಂಧರ ಸಂಸ್ಥೆಯ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಪ್ಪಾಳೆಯ ಪ್ರೋತ್ಸಾಹ ಸಿಕ್ಕಿತು.

ಒಳಾಂಗಣ ಕ್ರೀಡಾಂಗಣವು ಮಕ್ಕಳು, ಶಿಕ್ಷಕರು ಹಾಗೂ ಪೋಷಕರಿಂದ ಭರ್ತಿಯಾಗಿತ್ತು. ಕೈಪಿಡಿ, 2023ನೇ ಸಾಲಿನ 'ಬ್ರೈಲ್ ಕ್ಯಾಲೆಂಡರ್', ಸಾಧಕ ಅಂಗವಿಕಲರಿಗೆ ಸನ್ಮಾನ, ಮಹಿಳಾ ಅಂಧ ಕ್ರಿಕೆಟ್ ತಂಡದ ಆಟಗಾರರಿಗೆ ಅಭಿನಂದನೆ, ಸಾಧಕ ವಿಕಲಚೇತನ ಸಂಸ್ಥೆ, ವೈಯಕ್ತಿಕ ಹಾಗೂ ವಿಶೇಷ ಶಿಕ್ಷಕರಿಗೆ ಬಹುಮಾನ ವಿತರಿಸಲಾಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, 'ಅಂಗವಿಕಲ ಮಕ್ಕಳು ಯಾರಿಗೂ ಕಡಿಮೆ ಇಲ್ಲ. ಕೀಳರಿಮೆ ಬಿಟ್ಟು, ಸಾಧನೆ ಮಾಡಬೇಕು. ನೀವು ದೇವರ ಮಕ್ಕಳು. ಬೇರೆಯವರಿಗಿಂತಲೂ ಶಕ್ತಿಶಾಲಿಗಳು. ಆತ್ಮವಿಶ್ವಾಸ ಕಳೆದುಕೊಳ್ಳುವುದು ಬೇಡ' ಎಂದರು.

'ಕೆಳಗೆ ಬೀಳುವ ವ್ಯಕ್ತಿಗಳ ಮೇಲಕ್ಕೆತ್ತುವುದೇ ಮಾನವ ಧರ್ಮ. ಪರಸ್ಪರ ಸಹಾಯದಿಂದ ಬದುಕು ನಡೆಸಬೇಕು' ಎಂದರು.

'ಸವಾಲು ಎದುರಿಸುವ ವಿಶೇಷ ಶಕ್ತಿ ಹಾಗೂ ಸ್ಥೈರ್ಯವನ್ನು ಅಂಗವಿಕಲರಿಗೆ ದೇವರು ನೀಡಿದ್ದಾನೆ. ಆತ್ಮವಿಶ್ವಾಸದಿಂದ ಇರಬೇಕು. ಛಲ ಮತ್ತು ನಂಬಿಕೆ ಇರಬೇಕು' ಎಂದು ಹೇಳಿದರು.

ರಾಜ್ಯದಲ್ಲಿ ಅಂದಾಜು 50 ಲಕ್ಷದಷ್ಟು ಅಂಗವಿಕಲರಿದ್ದು, ಪ್ರತಿಯೊಬ್ಬ ಕನ್ನಡಿಗ ಅವರಿಗೆ ನೆರವು ನೀಡಬೇಕು. ಈ ಮಕ್ಕಳನ್ನು ಬೆಳೆಸುವ ಪ್ರತಿಜ್ಞೆ ತೆಗೆದುಕೊಳ್ಳಬೇಕು' ಎಂದರು.

ಸಚಿವ ಹಾಲಪ್ಪ ಆಚಾರ್ ಮಾತನಾಡಿ, 'ಅಂಗವಿಕಲರಿಗೆ ಶಿಕ್ಷಣ, ಉದ್ಯೋಗ ಹಾಗೂ ಆರ್ಥಿಕ ನೆರವು ನೀಡಲಾಗುತ್ತಿದೆ. ಅವರಿಗೂ ಸಮಾನ ಅವಕಾಶಗಳು ಲಭಿಸಬೇಕು ಎಂಬುದು ಸರ್ಕಾರದ ಉದ್ದೇಶ' ಎಂದರು.

ಶಾಸಕ ರಿಜ್ವಾನ್ ಅರ್ಷದ್ ಅವರು, 'ಮನಸ್ಸಿನಲ್ಲಿ ಕೀಳರಿಮೆ ಬಿಡಬೇಕು. ಅಂಗವಿಕಲರದ್ದು ಹೋರಾಟದ ಬದುಕು. ಆತ್ಮವಿಶ್ವಾಸದಿಂದ ಬದುಕಿ. ಅಂಗವಿಕಲ ಮಕ್ಕಳಿಗೆ ನೆರವು ಕಲ್ಪಿಸುವುದು ಎಲ್ಲರ ಜವಾಬ್ದಾರಿ' ಎಂದು ಸಲಹೆ ನೀಡಿದರು.

ಸಂಸದ ಪಿ.ಸಿ.ಮೋಹನ್, ಸಚಿವ ಆರ್.ಅಶೋಕ್ ಹಾಜರಿದ್ದರು.

ರಸ್ತೆ, ವೃತ್ತಕ್ಕೆ ಅಂಗವಿಕಲ ಸಾಧಕರ ಹೆಸರಿಡಲು ಅಶ್ವಿನಿ ಅಂಗಡಿ ಆಗ್ರಹ

'ರಸ್ತೆ, ಪ್ರಮುಖ ವೃತ್ತಕ್ಕೆ ಸಾಧಕರ ಹೆಸರು ಇಡಲಾಗುತ್ತಿದೆ. ಅದರಂತೆ ಸಾಧಕ ಅಂಗವಿಕಲರ ಹೆಸರನ್ನೂ ಪರಿಗಣಿಸಬೇಕು' ಎಂದು ವಿಶ್ವಸಂಸ್ಥೆಯ ಯುವ ಸಾಧಕಿ ಪ್ರಶಸ್ತಿ ಪುರಸ್ಕೃತರಾದ ಅಶ್ವಿನಿ ಅಂಗಡಿ ಕೋರಿದರು.

ಬಸ್‌ನಿಲ್ದಾಣ, ಉದ್ಯಾನಗಳಲ್ಲಿ ಮಹಿಳೆ, ಪುರುಷರಿಗೆ ಪ್ರತ್ಯೇಕ ಶೌಚಾಲಯವಿದೆ. ಅದೇ ಅಂಗವಿಕಲರಿಗೆ ಅನುಕೂಲ ಆಗುವ ಶೈಲಿಯಲ್ಲಿ ಶೌಚಾಲಯ ನಿರ್ಮಿಸಬೇಕು ಎಂದು ಕೋರಿದರು.

'ವಿಶ್ವಸಂಸ್ಥೆಯಲ್ಲಿ ಭಾರತವನ್ನು ಪ್ರತಿನಿಧಿಸಿದ ಹೆಮ್ಮೆಯಿದೆ. ಅನುಕಂಪದ ಬದಲಿಗೆ ಅವಕಾಶ ನೀಡಿದ್ದಕ್ಕೆ ಲಂಡನ್‌ಗೂ ತೆರಳಲು ಸಾಧ್ಯವಾಗಿತ್ತು. ದುಬೈನಲ್ಲಿ ನಡೆದಿದ್ದ ಸಮ್ಮೇಳನದಲ್ಲಿ 104 ದೇಶಗಳ ಪ್ರತಿನಿಧಿಗಳಿಂದ ಮೆಚ್ಚುಗೆ ಗಳಿಸಿದ್ದೆ. ಬೇರೆ ರಾಜ್ಯಕ್ಕಿಂತ ಕರ್ನಾಟಕದಲ್ಲಿ ಅಂಗವಿಕಲ ಮಕ್ಕಳಿಗೆ ಹೆಚ್ಚಿನ ಸೌಲಭ್ಯಗಳಿದ್ದು ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಮನವಿ ಮಾಡಿದರು.

ಸಾಧಕರಿಗೆ ಪ್ರಶಸ್ತಿ

ಚಿಕ್ಕಬಳ್ಳಾಪುರದ ವೆಂಕಟೇಶ್, ಚಿತ್ರದುರ್ಗದ ರಾಧಾ, ಬೆಂಗಳೂರಿನ ಕೆ.ಗೋಪಿನಾಥ್, ಶಿವಮೊಗ್ಗದ ಎಸ್.ಜ್ಯೋತಿ, ದಾವಣಗೆರೆಯ ಅನಿತಾ ಎಚ್. ಪಾಟೀಲ್, ಶಿವಮೊಗ್ಗದ ಸಿ.ಆರ್. ಶಿವಕುಮಾರ್, ಉಡುಪಿಯ ರಾಜಶೇಖರ್ ಪಿ. ಶಾಮರಾವ್, ಬಾಗಲಕೋಟೆಯ ಬಸವರಾಜ ತಮ್ಮಣ್ಣಪ್ಪ ಹೊರಡ್ಡಿ, ಧಾರವಾಡದ ನಿಧಿ ಶಿವರಾಮ ಸುಲ್ಲಾಖೆ, ಬೆಳಗಾವಿಯ ಸುರಜ, ಗದಗದ ತುಳಸಮ್ಮ ಜಿ. ಕೆಲೂರ, ಕೊಪ್ಪಳದ ಶಿವನಗೌಡ, ಕಲಬುರಗಿಯ ಸಿದ್ಧರಾಮ, ಕೊಪ್ಪಳದ ಸಿದ್ಧಲಿಂಗಮ್ಮ, ಬೀದರ್ ಬಾಬುರಾವ ಅವರಿಗೆ ವೈಯಕ್ತಿಕ ಸಾಧಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈದಾನದಲ್ಲಿ ಶಾಲೆ ನಿರ್ಮಾಣಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ



ಶ್ರೀನಗರ ವಾರ್ಡ್ ವ್ಯಾಪ್ತಿಯ ಮದ್ದೂರಮ್ಮ ಮೈದಾನದಲ್ಲಿ ಶಾಲೆ ನಿರ್ಮಾಣಕ್ಕೆ ಮುಂದಾಗಿರುವುದನ್ನು ಸ್ಥಳೀಯರು ಪ್ರತಿಭಟಿಸಿದರು

ಬೆಂಗಳೂರು: ಬಸವನಗುಡಿ ಕ್ಷೇತ್ರದ ಶ್ರೀನಗರ ವಾರ್ಡ್ ವ್ಯಾಪ್ತಿಯ ಮದ್ದೂರಮ್ಮ ಮೈದಾನದಲ್ಲಿ ಸ್ಥಳೀಯರ ಆಶಯಕ್ಕೆ ವಿರುದ್ಧವಾಗಿ ಶಾಲೆ ನಿರ್ಮಾಣಕ್ಕೆ ಮುಂದಾಗಿದ್ದು, ಇದಕ್ಕೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ.

ದೇವೇಗೌಡ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಇದನ್ನು ಆಟದ ಮೈದಾನವಾಗಿಯೇ ಉಳಿಸಲು ತೀರ್ಮಾನ ಕೈಗೊಂಡಿದ್ದರು. ಆದರೆ, ಈಗ ಬಿಜೆಪಿ ಸರ್ಕಾರದ ಆಡಳಿತ ಅವಧಿಯಲ್ಲಿ ಶಾಸಕ ರವಿ ಸುಬ್ರಹ್ಮಣ್ಯ ಮತ್ತು ಸಂಸದ ತೇಜಸ್ವಿ ಸೂರ್ಯ ಶಾಲೆ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಡಾ.ಶಂಕರ ಗುಹಾ ದ್ವಾರಕಾನಾಥ್ ದೂರಿದ್ದಾರೆ.

ಮೈದಾನದಲ್ಲಿ ಉಚಿತ ಕ್ರಿಕೆಟ್ ತರಬೇತಿ, ಕ್ರೀಡೆಗಳ ಅಭ್ಯಾಸ ನಡೆಯುತ್ತಿದೆ. ಸ್ಥಳೀಯರಿಗೆ ಸುತ್ತಮುತ್ತ ಯಾವುದೇ ಮೈದಾನ ಇಲ್ಲ. ಕ್ರೀಡಾಪಟುಗಳು ಹಾಗೂ ಸ್ಥಳೀಯರು ಈ ಮೈದಾನ ಅವಲಂಬಿಸಿದ್ದಾರೆ. ಆದರೆ, ಇತ್ತೀಚೆಗೆ ಸಾರ್ವಜನಿಕರಿಂದ ಈ ಮೈದಾನವನ್ನು ದೂರ ಮಾಡಬೇಕು ಎಂಬ ಉದ್ದೇಶದಿಂದ ಯಾವುದೇ ನಿರ್ವಹಣೆಗಳು ನಡೆಯುತ್ತಿಲ್ಲ. ಕಸದ ರಾಶಿ ಹಾಗೂ ಅನುಪಯುಕ್ತ ವಸ್ತು ತಂದು ಸುರಿಯಲಾಗುತ್ತಿದೆ. ಸಾರ್ವಜನಿಕರು ಈ ಮೈದಾನ ಬಳಸಲಾಗದೆ ತಾವೇ ಬಿಟ್ಟು ಹೋಗಲಿ ಎಂಬ ದುರುದ್ದೇಶ ಹೊಂದಿದಂತೆ ಕಾಣುತ್ತದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಜನಪ್ರತಿನಿಧಿಗಳು ಸ್ಥಳೀಯರ ಅವಶ್ಯಕತೆ ಹಾಗೂ ಆಶಯ ಏನು ಎಂಬುದರ ಕುರಿತು ಸಾರ್ವಜನಿಕರ ಬಳಿ ಚರ್ಚಿಸಬೇಕಿತ್ತು. ಆದರೆ, ಯಾವುದೇ ಚರ್ಚೆ ನಡೆಸಿಲ್ಲ. ಹೊಸ ಶಾಲೆ ನಿರ್ಮಾಣದ ಬದಲಿಗೆ ಬಸವನಗುಡಿ ವ್ಯಾಪ್ತಿಯಲ್ಲಿರುವ ಶಾಲೆಗಳ ಗುಣಮಟ್ಟ ಸುಧಾರಿಸಬೇಕು ಎಂದು ಸ್ಥಳೀಯರು ಕೋರಿದರು.

ಕಮಿಷನ್ ಆಸೆಗೆ ಕಾಮಗಾರಿ ಆರಂಭಿಸಬೇಕು ಎಂಬ ದುರುದ್ದೇಶ ಸಲ್ಲದು. ಆಟದ ಮೈದಾನಗಳು ಮಾಯವಾಗಿ ಕಟ್ಟಡಗಳ ನಿರ್ಮಾಣವಾಗುತ್ತಿದೆ ಎಂದು ಶಂಕರ್ ಗುಹಾ ದೂರಿದ್ದಾರೆ.

ನಗರದಲ್ಲಿ ಇಂದು

ಬ್ಯುಸಿನೆಸ್ ಸಕ್ಸಸ್ ಮಂತ್ರ 500 ದಿನದ ಸಂಭ್ರಮ: ಅತಿಥಿಗಳು: ವಿಶ್ವೇಶ್ವರ ಭಟ್, ಭಾಷಣಕಾರರು: ಕೃಷ್ಣ ವೆಂಕಟೇಶ್, ಮನೋಹರ್ ಮಸ್ಕಿ, ಪದ್ಮಾಕ್ಷಿ ಲೋಕೇಶ್, ಸ್ಥಳ: ಆರ್‌ಐಸಿಎಂ, ಪದ್ಮನಾಭನಗರ, ಬೆಳಿಗ್ಗೆ 9.30

ಗೀತಾಜಯಂತಿ ಮಹೋತ್ಸವ: ಸಾನ್ನಿಧ್ಯ: ವಿದ್ಯಾವಿಶ್ವೇಶ್ವರ ಭಾರತೀ ಸ್ವಾಮೀಜಿ, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಉದ್ಘಾಟನೆ: ಭಾಸ್ಕರ್ ರಾವ್, ಉಪನ್ಯಾಸ: ಪಾವಗಡ ಪ್ರಕಾಶರಾವ್, ಅಧ್ಯಕ್ಷತೆ: ಪ್ರಮೋದ್ ಮುತಾಲಿಕ್, ಅತಿಥಿಗಳು: ಎಂ.ಎನ್. ಶಶಿಧರ್, ರಾಧಾಕೃಷ್ಣ ಅಡಿಗ, ಸಂಪತ್ ರವಿನಾರಾಯಣನ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮಪ್ರಚಾರ ಪರಿಷತ್ ಹಾಗೂ ಮಲ್ಲೇಶ್ವರ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ: ರಾಮಾನುಜ ಸಂಸ್ಕೃತಿ ಭವನ, ಯದುಗಿರಿ ಯತಿರಾಜ ಮಠದ ಆವರಣ ಮಲ್ಲೇಶ್ವರ, ಬೆಳಿಗ್ಗೆ 10

ಕನ್ನಡ ನುಡಿ ಸಮ್ಮೇಳನ ಮತ್ತು 'ಮಂಗಲದ ಮಾಣಿಕ್ಯ' ಕೃತಿ ಬಿಡುಗಡೆ: ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಪುಸ್ತಕ ಬಿಡುಗಡೆ: ಪಿ. ರಾಮಯ್ಯ, ಸಮ್ಮೇಳನಾಧ್ಯಕ್ಷ: ಟಿ. ತಿಮ್ಮೇಗೌಡ, ಅತಿಥಿಗಳು: ಟಿ. ಸತೀಶ್ ಜವರೇಗೌಡ, ಸೂರಿ ಮೀರಡೆ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ನಟಭೈರವ ವಿ. ವಜ್ರಮುನಿ ರಸ್ತೆಯ ನಾಮಕರಣ ಕಾರ್ಯಕ್ರಮ: ಉದ್ಘಾಟನೆ: ಆರ್. ಅಶೋಕ್, ಅಧ್ಯಕ್ಷತೆ: ಉದಯ್. ಬಿ. ಗರುಡಾಚಾರ್, ಅತಿಥಿಗಳು: ಜಯರಾಮ್ ರಾಯಪುರ್, ಜಗದೀಶ್. ಕೆ. ನಾಯಕ್, ಆಯೋಜನೆ: ನಟಭೈರವ ವಿ. ವಜ್ರಮುನಿ ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ಕಮ್ಯುನಿಟಿ ಸೆಂಟರ್ ಆಡಿಟೋರಿಯಂ, ಜಯನಗರ 2ನೇ ಬ್ಲಾಕ್, ಬೆಳಿಗ್ಗೆ 10

ಲಾಂಛನ ಬಿಡುಗಡೆ ಸಮಾರಂಭ: ಉದ್ಘಾಟನೆ: ರಘುನಾಥ್‌ರಾವ್ ಮಲ್ಕಾಪುರೆ, ಅಧ್ಯಕ್ಷತೆ: ಎಸ್.ಜಿ. ಸಿದ್ದರಾಮಯ್ಯ, ಲಾಂಛನ ಬಿಡುಗಡೆ: ವಸುಂಧರ ಭೂಪತಿ, ಎಸ್.ಪಿ. ದಯಾನಂದ್, ಆಯೋಜನೆ: ನಮ್ಮ ಕರ್ನಾಟಕ ಸೇನೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಶಿವಾನಂದ ವೃತ್ತ, ಬೆಳಿಗ್ಗೆ 10.30

ನ್ಯಾಷನಲ್ ಕಾಲೇಜಿನ 12ನೇ ಘಟಿಕೋತ್ಸವ: ಅತಿಥಿಗಳು: ಪಿ. ಬಲರಾಮ್, ಎ.ಎಚ್. ರಾಮಾರಾವ್, ಎಸ್.ಎನ್. ನಾಗರಾಜ ರೆಡ್ಡಿ, ಪಿ. ಸದಾನಂದ ಮಯ್ಯ, ಆಯೋಜನೆ ಮತ್ತು ಸ್ಥಳ: ಎಚ್.ಎನ್. ಕಲಾಕ್ಷೇತ್ರ, ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 10.30

ಶತಮಾನದ ಶಾಂತವೇರಿ ವಿಚಾರಸಂಕಿರಣ ಮತ್ತು ನೆನಪು: ಉದ್ಘಾಟನೆ: ಕಾಳೇಗೌಡ ನಾಗವಾರ, ಅಧ್ಯಕ್ಷತೆ: ಎಚ್.ಎನ್. ನಾಗಮೋಹನದಾಸ್, ಅತಿಥಿಗಳು: ಬಂಜಗೆರೆ ಜಯಪ್ರಕಾಶ್, ಉಪಸ್ಥಿತಿ: ರಾಮಮನೋಹರ ಶಾಂತವೇರಿ, ಶ್ರೀಪತಿ ಹಳಗುಂದ, ಜಯರಾಮಭಟ್ ಹೊಸನಗರ, ರಾಜಶೇಖರ್ ಕಿಗ್ಗ, ಆಯೋಜನೆ: ಮಲೆನಾಡಿನ ಸಮಾನ ಮನಸ್ಸುಗಳ ಚಿಂತನ ಸಂಗಮ, ಸ್ಥಳ: ಗಾಂಧಿಭವನ, ಕುಮಾರಪಾರ್ಕ್ ರಸ್ತೆ, ಬೆಳಿಗ್ಗೆ 10.30

ಗೀತಾ ಜಯಂತಿ ಕಾರ್ಯಕ್ರಮ: ಅತಿಥಿಗಳು: ಎಲ್. ಮಂಜುನಾಥಸ್ವಾಮಿ, ಉಪನ್ಯಾಸ: ಎಚ್.ಎಸ್. ಮಂಡ್ಯ ಬಾಲಸುಬ್ರಹ್ಮಣ್ಯಂ, ಅಧ್ಯಕ್ಷತೆ: ವಿ. ರಾಣಿ ಗೋವಿದಂರಾಜು, ಉಪಸ್ಥಿತಿ: ಕೆ.ವಿ. ಲಕ್ಷ್ಮಣಮೂರ್ತಿ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಸಂಧ್ಯಾ ಎಸ್. ಪೈ ಅವರ 'ಸ್ಮೃತಿ ಗಂಧವತೀ' ಪುಸ್ತಕ ಬಿಡುಗಡೆ: ಎಚ್. ಎಸ್. ವೆಂಕಟೇಶಮೂರ್ತಿ, ಅತಿಥಿಗಳು: ನಂ. ನಾಗಲಕ್ಷ್ಮಿ, ಉಪಸ್ಥಿತಿ: ಸಂಧ್ಯಾ ಎಸ್. ಪೈ, ಆಯೋಜನೆ: ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಬೆಳಿಗ್ಗೆ 11, (ಆನ್‌ಲೈನ್ ಕಾರ್ಯಕ್ರಮ)

ರಮೇಶ ರಜಿನಿ ಅವರ 'ಫ್ರೀಕ್ಷನ್–ಫ್ರೀ ಪೇರೆಂಟಿಂಗ್' ಪುಸ್ತಕದ ಬಿಡುಗಡೆ: ಅತಿಥಿಗಳು: ಶ್ರೀನಿವಾಸ ಪಾರ್ಥಸಾರಥಿ, ವಿಶ್ವೇಶ ಭಟ್, ದಿವ್ಯಾ ಅಮರನಾಥ್, ಯತೀಶ ಸಿದ್ದನಕಟ್ಟೆ, ಡಾ. ಉಮಾಕಾಂತ ಅಡಿಗ, ಸ್ಥಳ: ಚೋರ್ಡ್ ರಸ್ತೆಯ ರೆಸಿಡೆಂಟ್ಸ್ ಅಸೋಸಿಯೇಷನ್ ಹಾಲ್, ವಿಜಯನಗರ, ಬೆಳಿಗ್ಗೆ 11

ಉಪನ್ಯಾಸ: ವಿಷಯ: ತುಳು–ತಿಗಳಾರಿ ಲಿಪಿಯನ್ನು ಕುರಿತು ಒಂದು ಅವಲೋಕನ, ಉಪನ್ಯಾಸಕರು: ವೈಷ್ಣವಿಮೂರ್ತಿ, ವಿಷಯ: ಋಗ್ವೇದದಲ್ಲಿ ವಿಶ್ವ ಸೂಕ್ತದ ನಭೋಮಂಡಲ ದೃಷ್ಟಿ, ಉಪನ್ಯಾಸಕರು: ಸುದರ್ಶನ ಎಚ್. ಎಸ್., ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿಯ ಸ್ಮಾರಕ ಸಭಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 11

ವೈಟ್ ಕ್ರಿಸ್‌ಮಸ್ ಆಚರಣೆಯ ಸಂಗೀತ ಸ್ಪರ್ಧೆ: ಅತಿಥಿಗಳು: ಪ್ರಸನ್ನ ಕುಮಾರ್ ಸ್ಯಾಮ್ಯುಯಲ್, ವಿನ್ಸೆಂಟ್ ವಿನೋದ್‌ಕುಮಾರ್, ಆಯೋಜನೆ: ರೈಸ್ ಮೆಮೋರಿಯಲ್ ಚರ್ಚ್, ಸ್ಥಳ: ಸೇಂಟ್ ಜಾನ್ಸ್ ಚರ್ಚ್ ಕಮ್ಯುನಿಟಿ ಸೆಂಟರ್, ಜಾನ್ ಚರ್ಚ್ ರಸ್ತೆ, ಕ್ಲಿವ್‌ಲ್ಯಾಂಡ್ ಟೌನ್, ಬೆಳಿಗ್ಗೆ 11

ಕರ್ನಾಟಕ ರಾಜ್ಯೋತ್ಸವ ಹಾಗೂ ಸಾಂಸ್ಕೃತಿಕ ಸಮಾರಂಭ: ಉದ್ಘಾಟನೆ: ವಿಜಯ್‌ಕುಮಾರ್ ಕಮ್ಮಾರ್, ಅತಿಥಿಗಳು: ಶೀಲಾದೇವಿ.ಎಸ್. ಮಳೀಮಠ, ಬಿ. ವಿಶಾಲಾಕ್ಷಿ, ಬಿ. ರೇವತಿ, ಎಸ್.ಸಿ. ಇಂದಿರಾ, ಅಧ್ಯಕ್ಷತೆ: ಎಸ್.ವಿ. ಅಂಬಾಮಣಿಮೂರ್ತಿ, ಆಯೋಜನೆ: ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಕಲಾ ಅಕಾಡೆಮಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

'ಸ್ವರಯಾತ್ರ' ಹಿಂದುಸ್ಥಾನಿ ಸಂಗೀತ: ಅತಿಥಿಗಳು: ಸುಚೇಂದ್ರ ಪ್ರಸಾದ್, ಉಪಸ್ಥಿತಿ: ರವೀಂದ್ರ ಗುರುರಾಜ ಕಟೋಟಿ, ಗಣಪತಿ.ಎಸ್. ಹೆಗಡೆ, ಗಾಯನ: ಕೌಸ್ತವ ಕಾಂತಿ ಗಂಗೊಲಿ, ಹಾರ್ಮೋನಿಯಂ: ರವೀಂದ್ರ ಗುರುರಾಜ ಕಟೋಟಿ, ತಬಲಾ: ಸುಮಿತ್ ನಾಯ್ಕ, ಆಯೋಜನೆ ಮತ್ತು ಸ್ಥಳ: ಕೋಬಾಲ್ಟ್ ಫೋರಂ ಆಫ್ ಆರ್ಟ್ ಆ್ಯಂಡ್ ಮ್ಯೂಸಿಕ್, ಬಿಇಎಂಎಲ್ ಲೇಔಟ್ 5ನೇ ಹಂತ, ಆರ್. ಆರ್. ನಗರ, ಸಂಜೆ 5

ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' ನಾಟಕ ಪ್ರದರ್ಶನ: ನಿರ್ದೇಶನ: ಸವಿತಾ ಬಿ., ಆಯೋಜನೆ: ಕಲಾ ಪ್ರೇಮಿ ಫೌಂಡೇಷನ್, ಸ್ಥಳ: ಸೇವಾ ಸದನ ಸಭಾಂಗಣ, ಎಂ.ಎಲ್.ಎ ಕಾಲೇಜು ಎದುರು, 14ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 6

'ಮಾವಿನ ಗುಡಿ ಕಾಲೊನಿ' ನಾಟಕ ಪ್ರದರ್ಶನ: ನಿರ್ದೇಶನ: ಶಂಕರ್ ಗಣೇಶ್, ಆಯೋಜನೆ: ರಂಗಸೌಧ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30



'ಮಾವಿನ ಗುಡಿ ಕಾಲೊನಿ' ನಾಟಕದ ದೃಶ್ಯ



ವಿದ್ಯಾರ್ಥಿಗಳು ತಾವು ತಯಾರಿಸಿದ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಿದರು

ನ್ಯಾಷನಲ್ ಪಬ್ಲಿಕ್ ಶಾಲೆ: ವಿಜ್ಞಾನ ವಸ್ತು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಿಜ್ಞಾನ–ತಂತ್ರಜ್ಞಾನಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದು ನ್ಯಾಷನಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಅಲ್ಕಗುಪ್ತ ತಿಳಿಸಿದರು.

ವೈಟ್‌ಫೀಲ್ಡ್‌ನ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಊರ್ಜಾ ವಿಜ್ಞಾನ ಪ್ರದರ್ಶನ (ವಿಕಾಸದತ್ತ ಒಂದು ಹೆಜ್ಜೆ)ದಲ್ಲಿ ಅವರು ಮಾತನಾಡಿದರು.

ಈಗಿನ ಯುಗದಲ್ಲಿ ತಂತ್ರಜ್ಞಾನದ ಬಳಕೆ ಹೆಚ್ಚಾಗುತ್ತಿದೆ. ಮಕ್ಕಳಿಗೆ ಅರಿವು ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಎಂದು ಅವರು ಹೇಳಿದರು.

ಎರಡು ದಿನಗಳ ಕಾಲ ನಡೆದ ವಿಜ್ಞಾನ ಪ್ರದರ್ಶನದಲ್ಲಿ ಮೊದಲನೇ ದಿನ 2ನೇ ತರಗತಿಯಿಂದ 5ನೇ ತರಗತಿವರೆಗಿನ ಮಕ್ಕಳಿಗೆ ಪ್ರದರ್ಶನ ಇಡಲಾಗಿತ್ತು. ಎರಡನೇ ದಿನ ಆರರಿಂದ 10ನೇ ತರಗತಿ ಮಕ್ಕಳಿಗೆ ವಿಜ್ಞಾನ ಪ್ರದರ್ಶನ ಏರ್ಪಡಿಸಲಾಗಿತ್ತು.

ಹೃದಯ ಹೇಗೆ ಬ್ಲಾಕ್ ಆಗುತ್ತದೆ, ತಿನ್ನುವ ಆಹಾರ ಹೇಗೆ ಜೀರ್ಣವಾಗುತ್ತದೆ, ಸೋಪು ತಯಾರಿಕೆ ಹೇಗೆ ಎಂಬುದನ್ನು ಮಕ್ಕಳು ಪೋಷಕರ ಮುಂದೆ ಪ್ರದರ್ಶನ ಮಾಡಿ ತೋರಿಸಿದರು. ಬೊಂಬೆಗಳ ನಾಡು ಚನ್ನಪಟ್ಟಣ, ತಲಕಾವೇರಿಯ ಅಣುಕು ಪ್ರದರ್ಶನ ಮಾಡಲಾಯಿತು.

ನಿರ್ದೇಶಕರಾದ ತನೂಜ್ ಗಾರ್ಗ್, ಮಾಜಿ ಪ್ರಾಂಶುಪಾಲರಾದ ಶಾಂತಾ ಚಂದ್ರನ್ ಹಾಜರಿದ್ದರು.

ರಸ್ತೆಗುಂಡಿಗೆ ಯಾರು ಹೊಣೆ?

ಒಂದನೇ ಪುಟದಿಂದ..

ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರ ಉತ್ತರವೂ ಇದೇ ಆಗಿದೆ. ಎಫ್‌ಐಆರ್‌ನಲ್ಲಿ 'ಸ್ಥಳೀಯ ಸಂಸ್ಥೆ ನಿರ್ಲಕ್ಷ್ಯದಿಂದಾಗಿರುವ ಗುಂಡಿಯಿಂದ ಸಂಭವಿಸಿದ ಅಪಘಾತ' ಎಂದು ನಮೂದಿಸಿದರೆ ಮಾತ್ರ ಪರಿಹಾರ ನೀಡಲು ಸಾಧ್ಯ' ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಹೇಳುತ್ತಾರೆ.

'ಗುಂಡಿ ಬಿದ್ದ ರಸ್ತೆ ಹಾಗೂ ಬೆಳಕಿನ ವ್ಯವಸ್ಥೆಯಿಲ್ಲದ ರಸ್ತೆಗಳನ್ನು ಗುರುತಿಸಿ ಸಂಬಂಧಪಟ್ಟ ಏಜೆನ್ಸಿಗಳು ಹಾಗೂ ಇಲಾಖೆಗಳಿಗೆ ನೋಟಿಸ್ ನೀಡಲಾಗುತ್ತಿದೆ. ಪೊಲೀಸ್ ಇಲಾಖೆಯಿಂದ ನೋಟಿಸ್ ಜಾರಿ ಮಾಡಿದ್ದರೂ ಕ್ರಮ ಕೈಗೊಳ್ಳಲು ನಿರ್ಲಕ್ಷ್ಯ ವಹಿಸಿದ್ದರಿಂದಲೇ ಅಪಘಾತಗಳು ನಡೆದರೆ ಮಾತ್ರ ಎಫ್‌ಐಆರ್‌ನಲ್ಲಿ ರಸ್ತೆ ಅವ್ಯವಸ್ಥೆಯ ಕಾರಣ ದಾಖಲಿಸಲಾಗುವುದು' ಎಂದು ಬೆಂಗಳೂರು ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ. ಅಬ್ದುಲ್ ಸಲೀಂ ತಾಂತ್ರಿಕ ಕಾರಣವನ್ನು ತಿಳಿಸುತ್ತಾರೆ.

ರಾಜಧಾನಿ ಬೆಂಗಳೂರು ಸೇರಿ ನಗರ, ಪಟ್ಟಣಗಳಲ್ಲಿ ಗುಣಮಟ್ಟದ ರಸ್ತೆ ನಿರ್ಮಿಸದಿರುವುದೇ ರಸ್ತೆ ಗುಂಡಿಗಳು ಹೆಚ್ಚಾಗಲು ಕಾರಣ. ನಿಯಮಗಳ ಪ್ರಕಾರ ನಿರ್ಮಾಣವಾದ ಒಂದು ರಸ್ತೆ ಕನಿಷ್ಠ 10 ವರ್ಷ ಬಾಳಿಕೆ ಬರಬೇಕು. ಆದರೆ, ಕಳಪೆ ಕಾಮಗಾರಿಯಿಂದ ಒಂದು ಮಳೆಗೇ ರಸ್ತೆಗಳಲ್ಲಿ ಗುಂಡಿಗಳು ಬೀಳತೊಡಗುತ್ತವೆ. ಒಂದು ಕಿ.ಮೀ ರಸ್ತೆ ನಿರ್ಮಾಣಕ್ಕೆ ₹2.5 ಕೋಟಿ ವೆಚ್ಚ ಮಾಡಲಾಗುತ್ತದೆ. ಎಲ್ಲ ನಿಯಮಗಳನ್ನೂ ಟೆಂಡರ್ ದಾಖಲೆ ಹಾಗೂ ಪ್ರಕ್ರಿಯೆಗಳಲ್ಲಿ ತೋರಲಾಗಿರುತ್ತದೆ. ದರಂತೆಯೇ ಕಾಮಗಾರಿ ಅನುಷ್ಠಾನವಾಗುತ್ತಿಲ್ಲ. ಕಾಮಗಾರಿಗೆ ಒಂದು ವಿಸ್ತೃತ ಯೋಜನಾ ವರದಿ ಇರುತ್ತದೆ. ಗುತ್ತಿಗೆದಾರರು, ನಿರ್ವಹಣಾ ಸಂಸ್ಥೆ, ಎಂಜಿನಿಯರ್‌ಗಳ ಮೇಲ್ವಿಚಾರಣೆಯೂ ಇರುತ್ತದೆ. ಆದರೆ, ಕಳಪೆ ಕಾಮಗಾರಿಯಾದರೂ ಇವರ ಮೇಲೆ ಕ್ರಮ ಕೈಗೊಳ್ಳುವುದಿಲ್ಲ. ಎಲ್ಲ ಹಂತದಲ್ಲಿ ಈ ಅಧಿಕಾರಿಗಳೂ ಈ ಕಳಪೆ ಕಾಮಗಾರಿಗೆ ಕಾರಣವಾಗಿದ್ದರೂ ಶಿಸ್ತುಕ್ರಮವಾಗುವುದಿಲ್ಲ.

ರಸ್ತೆ ನಿರ್ಮಾಣಕ್ಕೆ ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ನಿಯಮಾವಳಿಗಳನ್ನು ರೂಪಿಸಿದೆ. ಇದನ್ನೇ ರಾಜ್ಯದಾದ್ಯಂತ ಎಲ್ಲ ಇಲಾಖೆಗಳು ಪಾಲಿಸುವುದು. ಐಆರ್‌ಸಿ ಪ್ರಕಾರ, ಒಂದು ರಸ್ತೆ 8 ರಿಂದ 10 ವರ್ಷ ಬಾಳಿಕೆ ಬರಬೇಕು. ಆದರೆ, ಒಂದೇ ವರ್ಷಕ್ಕೆ ರಸ್ತೆಯಲ್ಲಿ ಗುಂಡಿಗಳು ಕಾಣಿಸಿಕೊಳ್ಳುತ್ತವೆ. ಗುಂಡಿಗಳಾಗುವುದು ಸ್ಥಳೀಯ ಸಂಸ್ಥೆಗೆ ಮೊದಲೇ ಗೊತ್ತಿರುತ್ತದೆ ಎಂಬಂತೆ ಪ್ರತಿ ವರ್ಷ ಬಜೆಟ್‌ನಲ್ಲಿ ಹತ್ತಾರು ಕೋಟಿ ರೂಪಾಯಿಯನ್ನು ರಸ್ತೆ ಗುಂಡಿ ದುರಸ್ತಿಗೇ ಮೀಸಲಿಡಲಾಗುತ್ತದೆ. ಇದು ರಸ್ತೆ ಕಾಮಗಾರಿ ಮೇಲೆ ಬಿಬಿಎಂಪಿ ಎಂಜಿನಿಯರ್‌ಗಳಿಗೆ ಇರುವ ಭರವಸೆಯನ್ನು ತೋರುತ್ತದೆ! ಬಿಬಿಎಂಪಿಯು ಕಳೆದ ಸಾಲಿನಲ್ಲಿ ₹30 ಕೋಟಿ ವೆಚ್ಚ ಮಾಡಿದೆ. ಈ ವರ್ಷ 33 ಸಾವಿರ ಗುಂಡಿಗಳನ್ನು ಮುಚ್ಚಿದೆ. ಮೈಸೂರು ಮಹಾನಗರ ಪಾಲಿಕೆ ₹ 5.80 ಕೋಟಿ, ಮಂಗಳೂರು ಮಹಾನಗರ ಪಾಲಿಕೆ ₹ 5.25 ಕೋಟಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ₹ 3.21 ಕೋಟಿ, ಯಾದಗಿರಿ ನಗರಸಭೆ ₹6 ಕೋಟಿ ವೆಚ್ಚದಲ್ಲಿ ರಸ್ತೆ ಗುಂಡಿ ಮುಚ್ಚಲು ಮುಂದಾಗಿವೆ. ಆದರೆ, ಗುಂಡಿಯಿಂದಾಗಿರುವ ದುರಂತಗಳಿಗೆ ಪರಿಹಾರದ ಬಗ್ಗೆ ಮಾತ್ರ ಯಾರೂ ಚಕಾರ ಎತ್ತುವುದಿಲ್ಲ.



ಮಂಡ್ಯದ ಕಾರೆಮನೆ ಗೇಟ್ ಬಳಿ ನಿವೃತ್ತ ಯೋಧ ಕುಮಾರ್ ಸಾವಿಗೆ ಕಾರಣವಾದ ರಸ್ತೆ ಗುಂಡಿ (ಸಂಗ್ರಹ ಚಿತ್ರ)

ಕಲಬುರಗಿ ಜಿಲ್ಲೆ ಕಾಳಗಿ ಪಟ್ಟಣದಿಂದ ಚಿಂಚೋಳಿಗೆ ಹೋಗುವ ಮಾರ್ಗದಲ್ಲಿ ಎರಡು, ಮೂರು ಅಡಿ ಆಳ ಅಗೆದಿರುವುದಿಂದ ಪ್ರತಿ ನಿತ್ಯವೂ ವಾಹನ ಸವಾರರು ಆಯತಪ್ಪಿ ಬೀಳುತ್ತಿದ್ದಾರೆ. ರಾಯಚೂರು ಜಿಲ್ಲೆಯ ಲಿಂಗಸುಗೂರಿನಿಂದ ತಿಂಥಣಿ ಬ್ರಿಜ್ ಮಾರ್ಗದ ರಾಷ್ಟ್ರೀಯ ಹೆದ್ದಾರಿ (ಸಂಖ್ಯೆ 150 ಎ)ಯ ಅಕ್ಕಪಕ್ಕದ ಮಣ್ಣಿನ ಬಾಹುಗಳು ಸವಕಳಿಯಾಗಿದ್ದು, ಹಟ್ಟಿ ಚಿನ್ನದ ಗಣಿ, ಗುರಗುಂಟಾ, ಗೊಲಪಲ್ಲಿ ಹತ್ತಿರ ಪ್ರತಿನಿತ್ಯವೂ ಒಂದಾದರೂ ಅಪಘಾತ ಸಂಭವಿಸುತ್ತಿದೆ. ಯಾದಗಿರಿ ನಗರದ ಮುಂಡರಗಿ ರಸ್ತೆ ಮಾರ್ಗದಲ್ಲಿ ಸೆ.9ರಂದು ಬೈಕ್ ಸವಾರ ಭೀಮೇಶ ಗುಂಡಿಗೆ ಬಿದ್ದು, ಅವರ ಮೇಲೆ ಲಾರಿ ಹರಿಯಿತು. ಅವರು ಸ್ಥಳದಲ್ಲೇ ಮೃತಪಟ್ಟರು. ಅವರ ಕುಟುಂಬಕ್ಕೂ ಪರಿಹಾರ ನೀಡಿಲ್ಲ. ಆ ಗುಂಡಿಯನ್ನು ಮುಚ್ಚುವ ಕನಿಷ್ಠ ಕೆಲಸವನ್ನೂ ಎಂಜಿನಿಯರ್‌ಗಳು ಮಾಡಿಲ್ಲ.

ತುಮಕೂರು 'ಸ್ಮಾರ್ಟ್ ಸಿಟಿ'ಯಾಗುವ ಸಮಯದಲ್ಲೂ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳದ್ದೇ ಕಾರುಬಾರು. ಗುಂಡಿಗಳನ್ನು ಮುಚ್ಚಲು ಮಹಾನಗರ ಪಾಲಿಕೆ ಈ ವರ್ಷವೂ ₹ 30 ಲಕ್ಷ ಅನುದಾನ ಮೀಸಲಿಟ್ಟಿದೆ. ಆದರೂ ರಸ್ತೆಯ ದುಃಸ್ಥಿತಿ ಬದಲಾಗಿಲ್ಲ. ನಗರದ ಕುಣಿಗಲ್ ರಸ್ತೆ, ಕೋತಿತೋಪು ಮುಖ್ಯ ರಸ್ತೆ, ಶಿರಾ ಗೇಟ್ ಸೇರಿ ವಿವಿಧ ರಸ್ತೆಗಳಲ್ಲಿ ಸಂಚರಿಸಿದರೆ ಗುಂಡಿಗಳದ್ದೇ ದರ್ಶನ. ಇನ್ನು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ ನಗರಸಭೆ ₹ 16 ಲಕ್ಷ, ಗೌರಿಬಿದನೂರು ನಗರಸಭೆ ₹ 2 ಲಕ್ಷ ವೆಚ್ಚ ಮಾಡಿದ್ದರೂ ರಸ್ತೆಗಳು ಗುಂಡಿಮುಕ್ತವಾಗಿಲ್ಲ. ಕೊಡಗು ಜಿಲ್ಲೆಯಲ್ಲಿ ಗುಂಡಿ ಇಲ್ಲದ ರಸ್ತೆಗಳನ್ನು ಹುಡುಕಬೇಕಾದ ಸ್ಥಿತಿ ಇದೆ. ಹಾಸನ ಜಿಲ್ಲೆಯಾದ್ಯಂತ ಮಳೆಯಿಂದಾಗಿ ರಸ್ತೆಗಳು ಗುಂಡಿ ಬಿದ್ದು ಹಾಳಾಗಿವೆ. ಸರ್ಕಾರದಿಂದ ಅನುದಾನ ಸಿಕ್ಕಿಲ್ಲ ಎಂದು ಗುಂಡಿಗಳನ್ನು ಮುಚ್ಚಿಲ್ಲ.

ಪರ್ಸೆಂಟೇಜ್ ಕೊಡಬೇಕಲ್ಲ...: 'ನಾನು ದಶಕಗಳಿಂದ ಗುತ್ತಿಗೆದಾರರ ಕೆಲಸ ಮಾಡುತ್ತಿದ್ದೇವೆ. ಐಆರ್‌ಸಿ ಸೇರಿ ಗುಣಮಟ್ಟದ, ಹಲವು ವರ್ಷ ಬಾಳಿಕೆ ಬರುವ ರಸ್ತೆ ನಿರ್ಮಿಸುವ ಕೆಲಸ ನಮಗೂ ಬರುತ್ತದೆ. ಟೆಂಡರ್ ಪ್ರಕ್ರಿಯೆಯಿಂದ ಹಿಡಿದು ಕಾರ್ಯಾದೇಶ, ಕಾಮಗಾರಿಗೆ ಚಾಲನೆ, ಕಾಮಗಾರಿ ನಡೆಯುತ್ತಿರುವಾಗ, ಮುಗಿದು ಬಿಲ್ ಪಡೆಯುವ ಎಲ್ಲ ಹಂತದಲ್ಲೂ ಎಲ್ಲರಿಗೂ ಪರ್ಸೆಂಟೇಜ್ ಕೊಡಲೇಬೇಕು. ನಿಯಮ ಪಾಲಿಸುತ್ತಾ ಕಾಮಗಾರಿ ಮಾಡಲು ನಾವು ಮುಂದಾದರೂ ಪರ್ಸೆಂಟೇಜ್ ಪಡೆಯುವವರು ಬಿಡುವುದಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಗುತ್ತಿಗೆದಾರರು ಹೇಳಿದರು.

ಮುಂಜಾಗ್ರತೆ ಇಲ್ಲ...: 'ರಸ್ತೆ ನಿರ್ಮಾಣ ಅಥವಾ ಗುಂಡಿ ದುರಸ್ತಿ ತಂತ್ರಜ್ಞಾನ ಬೇರೆ ದೇಶಗಳಲ್ಲಿ ವಿಭಿನ್ನವಾಗೇನೂ ಇಲ್ಲ. ಬಿಟುಮಿನ್ ಮಿಕ್ಸ್ ಹಾಕುವುದರಲ್ಲಿ ವ್ಯತ್ಯಾಸವಾಗಬಹುದು. ಶ್ರೀಲಂಕಾ, ಥಾಯ್ಲೆಂಡ್ ಸೇರಿ ಹೆಚ್ಚು ಮಳೆ ಬರುವ ದೇಶಗಳಲ್ಲಿ ರಸ್ತೆಗಳು ಇಷ್ಟು ಹಾಳಾಗುವುದಿಲ್ಲ ಎಂದರೆ ಅದಕ್ಕೆ ಗುಣಮಟ್ಟ, ಮುಂಜಾಗ್ರತೆ ಕಾರಣ. ಇದಕ್ಕಿಂತ ಹೆಚ್ಚಿನದಾಗಿ 'ಕಳಪೆ ಕಾಮಗಾರಿ' ಎಂದು ಗೊತ್ತಾದರೆ ಅವರಿಗೆ ಉಗ್ರ ಶಿಕ್ಷೆ ಕಾದಿರುತ್ತದೆ. ಹೀಗಾಗಿ ರಸ್ತೆಗಳು ಚೆನ್ನಾಗಿರುತ್ತವೆ. ನಮ್ಮಲ್ಲಿ ಇಂತಹ ವ್ಯವಸ್ಥೆ ಇಲ್ಲ. ಕಾಮಗಾರಿ ನಡೆದ ಮೇಲೆ ಮೂರನೇ ಸಂಸ್ಥೆಯಿಂದ ಪರಿಶೀಲನೆಯನ್ನೂ ಮಾಡಿಸುವುದಿಲ್ಲ. ರಸ್ತೆ ಗುಂಡಿ ಬೀಳುವುದೇ ಇವರಿಗೆಲ್ಲ ಬೇಕಿರುವುದು. ಗುತ್ತಿಗೆದಾರ, ಮೇಲ್ವಿಚಾರಣೆ ಹೊಂದಿರುವ ಎಂಜಿನಿಯರ್‌ಗಳಿಗೆ ಉಗ್ರ ಶಿಕ್ಷೆಯಾಗಿ ಎಲ್ಲರಿಗೂ ಅದು ಬಹಿರಂಗವಾದರೆ ನಮ್ಮ ರಸ್ತೆಗಳ ಗುಣಮಟ್ಟ ಹೆಚ್ಚಾಗುತ್ತದೆ' ಎಂದು ತಾಂತ್ರಿಕ ತಜ್ಞ ಶ್ರೀಹರಿ ಹೇಳುತ್ತಾರೆ.

ಮಾಹಿತಿ: ಪ್ರವೀಣ್‌ಕುಮಾರ್ ಪಿ.ವಿ, ಡಿ.ಕೆ. ಬಸವರಾಜು, ಎಂ.ಮಹೇಶ್, ಎಂ.ಎನ್. ಯೋಗೇಶ್, ಚಂದ್ರಕಾಂತ ಮಸಾನಿ, ಮನೋಜಕುಮಾರ್ ಗುದ್ದಿ, ನಾಗರಾಜ ಚಿನಗುಂಡಿ, ಬಿ.ಜಿ. ಪ್ರವೀಣಕುಮಾರ್, ಆದಿತ್ಯ ಕೆ.ಎ.



ಮಂಡ್ಯದಲ್ಲಿ ರಸ್ತೆಗುಂಡಿಯಲ್ಲಿ ಬಿದ್ದು ಮೃತಪಟ್ಟ ಎಸ್.ಎನ್.ಕುಮಾರ್ ಭಾವಚಿತ್ರದೊಂದಿಗೆ ಪೋಷಕರು

ತರಾತುರಿಯಲ್ಲಿ ಎಫ್‌ಐಆರ್

'ಮಂಗಳೂರು ನಗರದ ಬಿಕರ್ನಕಟ್ಟೆಯಲ್ಲಿ ಆ.5ರಂದು ಸಂಜೆ 6.45ಕ್ಕೆ ಸಂಭವಿಸಿದ ಅಪಘಾತದಲ್ಲಿ ನನ್ನ ಮಗ ಆತಿಶ್ ಕೊನೆಯುಸಿರೆಳೆದಿದ್ದ. ರಸ್ತೆ ಗುಂಡಿಯೇ ಅಪಘಾತಕ್ಕೆ ಕಾರಣ ಎಂಬುದಕ್ಕೆ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾದ ದೃಶ್ಯಗಳೇ ಸಾಕ್ಷಿ. ಆದರೆ ಪೊಲೀಸರು ರಾತ್ರಿ 10 ಗಂಟೆಗೆ ತರಾತುರಿಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಮರುದಿನವೇ ಆ ಗುಂಡಿ ಮುಚ್ಚಲಾಗಿದೆ. ಅಪಘಾತ ರಸ್ತೆ ಗುಂಡಿಯಿಂದಾಗಿಯೇ ಸಂಭವಿಸಿತ್ತು ಎಂಬುದನ್ನು ಸಾಬೀತುಪಡಿಸಲು ನಾನು ಕಾನೂನು ಸಮರ ನಡೆಸಬೇಕಾಗಿದೆ

ಯಶವಂತ ಎಸ್. ಬಂಗೇರ, ಮಾಲೆಮಾರ್, ಮಂಗಳೂರು

'ಅಧಿಕಾರಿಗಳಿಗೆ ದಂಡ ಯಾವಾಗ?'

ನಾನು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ (ಪರಿಸರ ವಿಜ್ಞಾನ) ಕೊನೆಯ ಸೆಮಿಸ್ಟರ್‌ನಲ್ಲಿ ಕಲಿಯುತ್ತಿದ್ದಾಗ (ಜುಲೈ 28ರಂದು) ರಸ್ತೆಗುಂಡಿಯಿಂದಾಗಿ ಉಂಟಾದ ಅಪಘಾತದಲ್ಲಿ ಬಲಗೈ ಮೂಳೆ ಮುರಿಯಿತು. ಗುಂಡಿಯಲ್ಲಿದ್ದ ಕಬ್ಬಿಣದ ರಾಡ್ ಚಕ್ರಕ್ಕೆ ಸಿಲುಕಿತ್ತು. ಬಲಗೈ ಮೂಳೆ ಮುರಿತದಿಂದ ಶಿಕ್ಷಣಕ್ಕೂ ಅಡ್ಡಿಯಾಯಿತು. ಹೆಲ್ಮೆಟ್ ಧರಿಸದೇ ಇದ್ದರೆ, ದಾಖಲೆಗಳನ್ನು ತೋರಿಸದಿದ್ದರೆ ಪೊಲೀಸರು ನಮಗೆ ದಂಡ ವಿಧಿಸುತ್ತಾರೆ. ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳದ ಅಧಿಕಾರಿಗಳಿಗೆ ದಂಡ ವಿಧಿಸುವವರು ಯಾರು?

ನಿಶ್ಮಿತಾ ಪಿ.ಎಸ್., ಕೊಟ್ಟಾರಚೌಕಿ, ಮಂಗಳೂರು

ಪತಿ ಚಿಕಿತ್ಸೆಗೆ ಸಾಲ...

ಬೆಂಗಳೂರಿನ ಗಂಗಮ್ಮ ವೃತ್ತದಲ್ಲಿ ನನ್ನ ಪತಿ ಸಂದೀಪ್ ರಸ್ತೆ ಗುಂಡಿಯಿಂದಾಗ ಬಿದ್ದು ಅಪಘಾತಕ್ಕೆ ಒಳಗಾದರು. ಪ್ರಾಥಮಿಕ ಚಿಕಿತ್ಸೆ ನಂತರ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಿದಾಗ ಅವರು ಕೋಮಾಗೆ ಹೋದರು. ಕೋಮಾದಿಂದ ಹೊರಬಂದು ಸ್ವಲ್ಪ ಚೇತರಿಸಿಕೊಳ್ಳುವ ಹೊತ್ತಿಗೆ ₹13 ಲಕ್ಷ ಖರ್ಚಾಗಿದೆ. ನಮ್ಮೆಲ್ಲ ಉಳಿತಾಯ ಖಾಲಿಯಾಗಿ, ಸಾಲವನ್ನೂ ಮಾಡಿಕೊಂಡಿದ್ದೇವೆ. ಸ್ನೇಹಿತರು, ಒಂದಷ್ಟು ದಾನಿಗಳು ಹಣ ನೀಡಿದ್ದಾರೆ. ಎಫ್‌ಐಆರ್‌ನಲ್ಲಿ 'ನಿರ್ಲಕ್ಷ್ಯದ ಚಾಲನೆ' ಎಂದಿದೆ. ಹೀಗಾಗಿ ಬಿಬಿಎಂಪಿ ಪರಿಹಾರ ನೀಡುತ್ತಿಲ್ಲ

ಸೀಮಾ, ಸಂದೀಪ್ ಅವರ ಪತ್ನಿ, ಬೆಂಗಳೂರು

ಉಕ್ಕು ಉತ್ಪಾದನೆಯಲ್ಲಿ ರಾಜ್ಯ ಅಗ್ರಸ್ಥಾನಕ್ಕೇರಲಿದೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಕೆಲವೇ ವರ್ಷಗಳಲ್ಲಿ ಕರ್ನಾಟಕವು ವಿಶ್ವದಲ್ಲೇ ಅತ್ಯಧಿಕ ಪ್ರಮಾಣದ ಉಕ್ಕು ಉತ್ಪಾದಿಸುವ ರಾಜ್ಯವಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವಾಲಯವು ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಲ್ಲಿದ್ದಲು ಗಣಿ ಹರಾಜು ಹಾಗೂ ಗಣಿಗಾರಿಕೆ ವಲಯದಲ್ಲಿನ ಅವಕಾಶಗಳಿಗೆ ಸಂಬಂಧಿಸಿದ ಹೂಡಿಕೆದಾರರ ಸಮಾವೇಶದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಈಗ ಅತಿದೊಡ್ಡ ಉಕ್ಕು ಉತ್ಪಾದನಾ ಕೈಗಾರಿಕೆಗಳಿವೆ. ಇಲ್ಲಿರುವ ಗುಣಮಟ್ಟದ ಕಬ್ಬಿಣದ ಅದಿರಿನ ಗಣಿಗಳಿಂದ ಇದು ಸಾಧ್ಯವಾಗಿದೆ. ಮುಂದಿನ ನಾಲ್ಕೈದು ವರ್ಷಗಳಲ್ಲಿ ಜಗತ್ತಿನಲ್ಲೇ ಅತ್ಯಧಿಕ ಪ್ರಮಾಣದ ಉಕ್ಕು ಉತ್ಪಾದಕ ರಾಜ್ಯವಾಗಿ ಕರ್ನಾಟಕ ಹೊರ ಹೊಮ್ಮಲಿದೆ' ಎಂದರು.

ರಾಜ್ಯದಲ್ಲಿ ಕಬ್ಬಿಣ ಸೇರಿದಂತೆ ಹಲವು ಬಗೆಯ ಖನಿಜಗಳ ಲಭ್ಯತೆ ಇದೆ. ಅತ್ಯಂತ ಎಚ್ಚರದಿಂದ ಗಣಿಗಾರಿಕೆಯನ್ನು ನಿರ್ವಹಿಸಬೇಕಿದೆ. ಗಣಿಗಾರಿಕೆ ಪರಿಸರದ ಶೋಷಣೆಗೆ ಕಾರಣವಾಗಬಾರದು. ಹಿಂದೆ ರಾಜ್ಯದಲ್ಲಿ ಅಂತಹ ಸ್ಥಿತಿ ಉದ್ಭವಿಸಿತ್ತು. ನ್ಯಾಯಾಲಯಗಳ ಮಧ್ಯ ಪ್ರವೇಶದಿಂದ ಈಗ ಪರಿಸ್ಥಿತಿ ಸುಧಾರಿಸಿದೆ. ನ್ಯಾಯಾಲಯಗಳು, ಹಸಿರು ನ್ಯಾಯಮಂಡಳಿ ನಿರ್ದೇಶನದಂತೆ ಈಗ ಪಾರದರ್ಶಕ ರೀತಿಯಲ್ಲಿ ಅದಿರಿನ ಹರಾಜು ನಡೆಯುತ್ತಿದೆ ಎಂದು ಹೇಳಿದರು.

'ಇನ್ನೂ 25 ಗಣಿ ಬ್ಲಾಕ್ ಹರಾಜು'

ರಾಜ್ಯದಲ್ಲಿ ಈಗ 16 ಕಬ್ಬಿಣದ ಅದಿರಿನ ಗಣಿ ಬ್ಲಾಕ್‌ಗಳ ಹರಾಜು ಪ್ರಕ್ರಿಯೆ ನಡೆಯುತ್ತಿದೆ. ಇನ್ನೂ 25 ಬ್ಲಾಕ್‌ಗಳ ಹರಾಜಿಗೆ ಸಿದ್ಧತೆ ನಡೆದಿದೆ. ಹೂಡಿಕೆದಾರರು ರಾಜ್ಯದಲ್ಲಿರುವ ಅವಕಾಶಗಳನ್ನು ಬಳಸಿಕೊಳ್ಳಬೇಕು. ಇಲ್ಲಿ ಅತ್ಯುತ್ತಮವಾದ ಗಣಿ ನೀತಿ ಜಾರಿಯಲ್ಲಿದ್ದು, ಉದ್ಯಮಿಗಳಿಗೆ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ ಎಂದು ಬೊಮ್ಮಾಯಿ ಹೇಳಿದರು.

ಕೆಜಿಎಫ್‌ನಲ್ಲಿ ಚಿನ್ನದ ಗಣಿ ಪುನರಾರಂಭಕ್ಕೆ ಒಂದು ಕಂಪನಿ ಆಸಕ್ತಿ ವ್ಯಕ್ತಪಡಿಸಿದೆ. ಈ ಕುರಿತು ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಅದು ಕಾರ್ಯಗತವಾದರೆ 5,000 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೇಳಿದರು.

ಕೇಂದ್ರ ಸರ್ಕಾರವು ಕಲ್ಲಿದ್ದಲು ಗಣಿಗಳ ಹರಾಜಿನಲ್ಲಿ ಪಾರದರ್ಶಕತೆ ತಂದಿದೆ ಎಂದರು.

ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, 'ಕರ್ನಾಟಕದ 31 ಜಿಲ್ಲೆಗಳ ಪೈಕಿ 29 ಜಿಲ್ಲೆಗಳಲ್ಲಿ ವಿವಿಧ ಬಗೆಯ ಖನಿಜಗಳ ನಿಕ್ಷೇಪಗಳಿವೆ. ಇಲ್ಲಿ ಗಣಿಗಾರಿಕೆ ಕ್ಷೇತ್ರದಲ್ಲಿ ಹೂಡಿಕೆಗೆ ಉತ್ತಮ ಅವಕಾಶವಿದೆ' ಎಂದು ಹೇಳಿದರು.

ರಾಜ್ಯದ ಗಣಿ ಸಚಿವ ಹಾಲಪ್ಪ ಆಚಾರ್, ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಇಲಾಖೆ ಕಾರ್ಯದರ್ಶಿ ಅಮೃತ್ ಲಾಲ್ ಮೀನಾ, ಹೆಚ್ಚುವರಿ ಕಾರ್ಯದರ್ಶಿಗಳಾದ ನಾಗರಾಜ್, ಸಂಜಯ್ ಇದ್ದರು.

ವಸತಿ ಯೋಜನೆ ಅಡಿ ಶೇ 3ರಷ್ಟು ಮೀಸಲು: ಸಿ.ಎಂ

ಅಂಗವಿಕಲರಿಗೆ ₹5 ಲಕ್ಷದ ಆರೋಗ್ಯ ವಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗವಿಕಲರ ಆರೋಗ್ಯ ರಕ್ಷಣೆಗೆ ವಿಶೇಷ ವಿಮಾ ಯೋಜನೆ ಜಾರಿಗೆ ತರಲಾಗುತ್ತಿದ್ದು, ಈ ಯೋಜನೆ ಅಡಿ ₹ 5 ಲಕ್ಷದ ವರೆಗೆ ಚಿಕಿತ್ಸೆ ಪಡೆದುಕೊಳ್ಳಬಹುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯವು ಶನಿವಾರ ಇಲ್ಲಿ ಆಯೋಜಿಸಿದ್ದ ವಿಶ್ವ ಅಂಗವಿಕಲರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಅಂಗವಿಕಲರಿಗೆ ಈಗಲೂ ವಿಮಾ ಯೋಜನೆ ಇದೆ. ಇನ್ನೂ ಹೆಚ್ಚಿನ ಆರೋಗ್ಯ ಸೌಲಭ್ಯಗಳನ್ನು ಸೇರಿಸಿ ಹೊಸ ಯೋಜನೆ ಜಾರಿಗೆ ತರುತ್ತೇವೆ' ಎಂದರು.

'ವಿವಿಧ ವಸತಿ ಯೋಜನೆಗಳ ಅಡಿ ಅಂಗವಿಕಲರಿಗೆ ಶೇ 3ರಷ್ಟು ಮೀಸಲು ಕಲ್ಪಿಸಲಾಗುವುದು' ಎಂದು ಭರವಸೆ ನೀಡಿದರು.


'ಬುದ್ಧಿಮಾಂದ್ಯ ಮಕ್ಕಳಿಗೆ ಶೆಲ್ಟರ್ ವರ್ಕ್‌ಶಾಪ್ ನಿರ್ಮಿಸಿ ಸ್ವಉದ್ಯೋಗಕ್ಕೆ ನೆರವು ನೀಡಲಾಗುವುದು. 2 ಸಾವಿರ ಟ್ರೈಸಿಕಲ್ ಖರೀದಿಸಿ ಎಲ್ಲ ಜಿಲ್ಲೆಗಳ ಅಂಗವಿಕಲರಿಗೆ ಮಾರ್ಚ್ ವೇಳೆಗೆ ವಿತರಣೆ ಮಾಡಲಾಗುವುದು. ಈಗ ಟ್ರೈಸಿಕಲ್‌ಗೆ ನೀಡುತ್ತಿದ್ದ ಅನುದಾನವನ್ನು ₹ 15 ಕೋಟಿಯಿಂದ ₹ 25 ಕೋಟಿಗೆ ಏರಿಕೆ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಹೇಳಿದರು.

'ನಾನು ಮುಖ್ಯಮಂತ್ರಿಯಾದ ಮೇಲೆ ಅಂಗವಿಕಲ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹಧನ ಹೆಚ್ಚಿಸಿದ್ದೇನೆ. ವೃದ್ಧಾಶ್ರಮ ನಿರ್ವಹಣೆಯ ಅನುದಾನವು ₹ 8 ಲಕ್ಷದಿಂದ ₹ 12 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಮುಂದಿನ ಬಜೆಟ್‌ನಲ್ಲಿ ಅಂಗವಿಕಲ ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಅನುದಾನ ಮೀಸಲು ಇಡಲಾಗುವುದು' ಎಂದು ಅವರು ಹೇಳಿದರು.



ಬೆಂಗಳೂರಿನಲ್ಲಿ ಶನಿವಾರ ನಡೆದ ವಿಶ್ವ ಅಂಗವಿಕಲರ ದಿನಾಚರಣೆಯಲ್ಲಿ ಚಿತ್ರಕಲೆಗಳ ಪ್ರದರ್ಶನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 4-12-1997

● ಲೋಕಸಭೆ ವಿಸರ್ಜನೆಗೆ ಕೇಂದ್ರ ಸಚಿವ ಸಂಪುಟ ಶಿಫಾರಸು

ನವದೆಹಲಿ, ಡಿ. 3– ಲೋಕಸಭೆಯನ್ನು ವಿಸರ್ಜಿಸುವಂತೆ ಕೇಂದ್ರ ಮಂತ್ರಿಮಂಡಲ ಇಂದು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರಿಗೆ ಶಿಫಾರಸು ಮಾಡುವುದರೊಂದಿಗೆ ಕಳೆದ ಮೂರು ವಾರಗಳಿಂದ ತಲೆದೋರಿದ್ದ ರಾಜಕೀಯ ಬಿಕ್ಕಟ್ಟು ಅಂತ್ಯ ಗೊಂಡಂತಾಗಿದೆ.

ಇಂದು ಸಂಜೆ 6.15ಕ್ಕೆ ಸೌತ್ ಬ್ಲಾಕ್‌ನಲ್ಲಿ ನಡೆದ ಪೂರ್ಣ ಪ್ರಮಾಣದ ಮಂತ್ರಿ ಮಂಡಲ ಸಭೆಯು ಲೋಕಸಭೆ ವಿಸರ್ಜನೆಗೆ ಶಿಫಾರಸು ಮಾಡುವ ಒಮ್ಮತದ ತೀರ್ಮಾನ ಕೈಗೊಂಡಿತು.

50 ವರ್ಷಗಳ ಹಿಂದೆ

ಸೋಮವಾರ, 4-12-1972

● ಸ್ಪೇನ್ ವಿಮಾನ ಸ್ಫೋಟ: 155 ಜನರ ಸಾವು

ಫ್ರಾಂಕ್‌ಫರ್ಟ್, ಡಿ.3– ಸ್ಪೇನ್ ವಿಮಾನ ಸಂಸ್ಥೆ ಸ್ಪಾನ್ ಟ್ಯಾಕ್ಸ್‌ಗೆ ಸೇರಿದ ಪ್ರಯಾಣಿಕ ವಿಮಾನವೊಂದು ಇಂದು ಬೆಳಿಗ್ಗೆ ಕ್ಯಾನರಿ ದ್ವೀಪದ ಟೆನೆರಿಫೆ ವಿಮಾನ ನಿಲ್ದಾಣದ ರನ್ ವೇ ಮೇಲೆಯೇ ಅಪಘಾತಕ್ಕೀಡಾಯಿತು. ಅದರಲ್ಲಿದ್ದ 155 ಮಂದಿ ಪ್ರಯಾಣಿಕರು ಹಾಗೂ ಚಾಲಕ ವರ್ಗದವರು ಸತ್ತಿದ್ದಾರೆ.

● ಭಾರತ ನೌಕಾಪಡೆಗೆ ರಷ್ಯಾ ಸಬ್‌ಮೆರಿನ್

ನವದೆಹಲಿ, ಡಿ. 3– ರಷ್ಯಾ ಒದಗಿಸುವ ಕೆಲವು ಸಬ್ ಮೆರಿನ್‌ಗಳು ಇನ್ನು 2 ವರ್ಷಗಳ ಅವಧಿಯಲ್ಲಿ ಭಾರತೀಯ ನೌಕಾಪಡೆಯನ್ನು ಸೇರಲಿವೆ ಎಂದು ತಿಳಿದುಬಂದಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಡಿಸೆಂಬರ್ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ದ್ವಾದಶಿ ಗಂ. 29-58 ನಕ್ಷತ್ರ: ಅಶ್ವಿನಿ ಅಹೋರಾತ್ರ ಯೋಗ: ವರಿಯಾನ್ ಗಂ. 27-40, ಕರಣ: ಬವ ಗಂ. 17-43, ವೃಶ್ಚಿಕ ಮಾಸದ 17 ನೇ ದಿನ.
ರಾಹುಕಾಲ : ಸಾಯಂಕಾಲ 04-30 –06-00
ಸೂರ್ಯೋದಯ : 06-43 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 09 ಜುಮಾದುಲ್ಲಾವಲ್
ದಿನ ವಿಶೇಷ : ಅಖಂಡ ದ್ವಾದಶಿ ಅದೃಷ್ಟ ಸಂಖ್ಯೆ : 5, 10

ಮೇಷ: ಹೊಸ ವಾತಾವರಣದಲ್ಲಿ ಬದುಕುವುದನ್ನು ಅಭ್ಯಾಸ ಮಾಡಿಕೊಳ್ಳಿ. ವಾಸ ಸ್ಥಾನ ಬದಲಾವಣೆಯಾಗುವ ಲಕ್ಷಣ ಹೆಚ್ಚಾಗಿದೆ. ವ್ಯಾಪಾರ ವ್ಯವಹಾರದಲ್ಲಿ ನಡೆದಂತಹ ಆಂತರಿಕ ಒಪ್ಪಂದಗಳಿಂದ ಲಾಭವನ್ನು ಹೊಂದುವಿರಿ.

ವೃಷಭ: ಖಾದ್ಯ ಪದಾರ್ಥಗಳ ಉತ್ಪಾದನಾ ಕೆಲಸಗಳು ಚುರುಕುಗತಿಯಿಂದ ಸಾಗುವುದು. ಆರೋಗ್ಯ ಸ್ಥಿತಿಯು ಉತ್ತಮವಿದ್ದು, ದಾಂಪತ್ಯ ಜೀವನವು ಸುಖಮಯವಾಗಿರುವುದು. ಯೋಗಾಭ್ಯಾಸವನ್ನು ದಿನಚರಿಯಲ್ಲಿ ರೂಢಿಸಿಕೊಳ್ಳಿರಿ.

ಮಿಥುನ: ಈ ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಮಾರ್ಪಾಟು ಮಾಡಿಕೊಂಡಲ್ಲಿ ವ್ಯಾಪಾರ ವ್ಯವಹಾರವು ಧನಲಾಭವನ್ನು ಕಾಣುವುದು. ಪ್ರೀತಿಪಾತ್ರರೊಂದಿಗೆ ಮನಬಿಚ್ಚಿ ಮಾತನಾಡುವ ಇಚ್ಛೆ ನಿಮಗಾಗಲಿದೆ.

ಕರ್ಕಾಟಕ: ಮಾನಸಿಕ ಅಸ್ಥಿರತೆ ಹಾಗೂ ಋಣಾತ್ಮಕ ಚಿಂತನೆ ಆಗಾಗ ಕಾಡಲಿದೆ. ವೃತ್ತಿಯಲ್ಲಿ ಶ್ರಮಪಡುವ ಮನೋಭಾವ ಬೆಳೆಸಿಕೊಳ್ಳಿರಿ. ದೇಹದಲ್ಲಿ ರಕ್ತದ ಒತ್ತಡ ಅಥವಾ ಮೂತ್ರ ಸಂಬಂಧದ ದೋಷಗಳ ಬಗ್ಗೆ ಜಾಗ್ರತೆ ವಹಿಸಿ.

ಸಿಂಹ: ಷೇರು ಖರೀದಿಯಿಂದ ಲಾಭ ಉಂಟಾಗಲಿದೆ. ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆ ನಡೆಯುವುದು ಉತ್ತಮ. ದೇವತಾ ಕಾರ್ಯಗಳಿಗಾಗಿ ಪ್ರಯಾಣ ಮಾಡಬೇಕಾಗುವುದು.

ಕನ್ಯಾ: ಸಾಮಾಜಿಕ ಕ್ಷೇತ್ರದಲ್ಲಿನ ನಿಮ್ಮ ಸಮರ್ಥ ಕಾರ್ಯನಿರ್ವಹಣೆಯು ಕೆಟ್ಟ ಜನರ ದೃಷ್ಟಿ ದೋಷಕ್ಕೆ ಕಾರಣವಾಗುವುದು. ಕೆಲಸಗಳು ಪೂರ್ವ ಯೋಜನೆಯಂತೆ ನಡೆಯುವುದು ಕಷ್ಟಕರ ವಿಷಯ.

ತುಲಾ: ಸಾಂಸಾರಿಕ ಜೀವನ ಉತ್ತಮವಾಗಿದ್ದರೂ ಅನಾವಶ್ಯಕವಾದ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿಬಂದು ಕಲಹ ಉಂಟಾಗಬಹುದು. ಕೆಲಸದ ವಿಚಾರದಲ್ಲಿ ಹಿರಿಯರ ಮಾತಿನಂತೆ ನಡೆದುಕೊಳ್ಳುವುದು ಉತ್ತಮ.

ವೃಶ್ಚಿಕ: ಈ ದಿನ ನಿಮ್ಮ ಕೆಲಸಕಾರ್ಯಗಳಿಗೆ ಅಪೇಕ್ಷಿಸಿದ ಬೆಂಬಲ ನಿಮಗೆ ದೊರೆಯಲಿದೆ. ಹೊಸದೊಂದು ಆದಾಯದ ದಾರಿ ನಿಮ್ಮ ಮುಂದೆ ಬರಲಿದೆ. ಧೈರ್ಯಂ ಸರ್ವತ್ರ ಸಾಧನಂ ಎನ್ನುವಂತೆ ಹೆದರದೆ ಧೈರ್ಯದಿಂದ ಮುನ್ನುಗ್ಗಿ.

ಧನು: ಕಾಗದದ ರಫ್ತು ಉದ್ಯಮದವರಿಗೆ ಉತ್ತಮ ಆದಾಯವಿರುವುದು. ಗುತ್ತಿಗೆ ಕೆಲಸದ ಬಾಕಿ ಹಣವು ಇಂದು ಸಂದಾಯವಾಗುತ್ತದೆ. ವೈಯಕ್ತಿಕವಾಗಿ ಹೊಸ ಅಧಿಕಾರಿಗಳನ್ನು ಬೇಟಿ ಮಾಡಲು ಒಳ್ಳೆಯ ದಿನವಾಗಿದೆ.

ಮಕರ: ನಿಮ್ಮ ಸಾಂಸಾರಿಕ ವಿಚಾರ ಮತ್ತು ವ್ಯಾಪಾರ ವ್ಯವಹಾರದ ವಿಚಾರಗಳಲ್ಲಿ ಗೌಪ್ಯತೆಯನ್ನು ಕಾಪಾಡಿಕೊಳ್ಳಿರಿ. ಎಣಿಸಿದಂತೆ ಎಲ್ಲಾ ಕಾರ್ಯಗಳೂ ನಡೆಯುವ ಸಲುವಾಗಿ ವಿಘ್ನ ನಿವಾರಕ ಗಣಪತಿಯನ್ನು ಆರಾಧಿಸಿ.

ಕುಂಭ: ಮತ್ತೊಬ್ಬರನ್ನು ಗೌರವಿಸುವುದರಿಂದ ನಿಮ್ಮ ಗೌರವ ಕೂಡ ಹೆಚ್ಚುತ್ತದೆ. ಈ ದಿನದ ನಿಮ್ಮ ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ. ಹೊಸ ವಾಹನ ಖರೀದಿಯ ಬಗ್ಗೆ ಮಾಹಿತಿಗಳನ್ನು ಪಡೆಯುವಿರಿ.


ಮೀನ: ಹಿತಶತ್ರುಗಳ ದ್ವೇಷ ಅಸೂಯೆಯಿಂದ ಬರುತಿದ್ದ ಮನದ ಕ್ಲೇಶವು ದೂರಾಗುತ್ತದೆ. ಕಿಂಚಿತ್ ಕಾರ್ಯಸಿದ್ಧಿಯಿಂದಲೂ ನೆಮ್ಮದಿ ಕಂಡು ಬರಲಿದೆ. ಅನೇಕ ಬಗೆಯ ಶುಭ ವಾರ್ತೆಗಳು ನೆಮ್ಮದಿಗೆ ಕಾರಣವಾದೀತು.

ಪದಬಂಧ 5158

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3. ಗಂಡ ಕೊನೆಗಿದ್ದಾಗಲೇ ಈ ಸಲ್ಲದ ವ್ಯವಹಾರ! (4)
5. ಮಾನವುಳ್ಳ ಹುಟ್ಟು ಗುಣ (4)
6. ಕಣ್ಣಿನ ಕೊನೆಯ ನೋಟ (4)
8. ಮಡಿ ಮಡಿ ಎನ್ನುತ್ತಿರುವ ಅಗಸ (4)
12. ಮನಸನು ಸೆಳೆದ ಕಾಡು ಹೂ(4)
14. ಒಪ್ಪವಾಗಿ ಬಂದಿರುವ ಸಂಬಂಧ (4)
15. ಅಂತರಾತ್ಮನ ಧ್ವನಿಯಿದು (4)
16. ನರಕಾಧಿಪತಿ ಹೆಗಲೇರಿದ ಅಧಿಕ ಒಜ್ಜೆ! (4)

ಮೇಲಿಂದ ಕೆಳಕ್ಕೆ
1. ಶತ್ರುವೇ ಹುಟ್ಟಿಲ್ಲದವನು (5)
2. ಮಗ ಕೊನೆಗೆ ತಿರುಗಿದಾಗಲೇ ಸೇರುವಿಕೆ (4)
3. ಕುಳ್ಳ ಕೊನೆಗೆ ಕೊಟ್ಟ ತೊಂದರೆ! (4)
4. ತಿಕ್ಕಲನ ಆಟ ಘರ್ಷಣೆಯಲ್ಲಿ ಕೊನೆಗೊಂಡಿತಲ್ಲಾ? (3)
7. ನಲಿವಿನ ವಿರುದ್ಧ ಪದ (2)
9. ಮನದ ಕೊನೆಯಲ್ಲಿ ನೆಲೆಸಿಹ ಕುಳ್ಳ! (3)
10. ಲಗ್ನವಾಗುತ್ತಿರುವ ಗಂಡು (5)
11. ಪುಸ್ತಕದ ಹಾಳೆ (2)
12. ಅಪರಾಧಿಗಳನ್ನು ಕೊಲ್ಲಲು ನಿಯುಕ್ತನಾದವನು (4)
13. ಮನದೊಳಗಿರುವ ಕುಲ (4)
14. ದಶಮಗ್ರಹ ಎನಿಸಿಕೊಂಡವನು! (3)



5157ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಆಗಮಿಕ 3.ಶಾಖಾಚರ 5.ಸಿಕತ 7.ಪರಧನ 9.ಪ್ಲವ 10.ವರ್ಣ 11.ರಣಾಂಗಣ 13.ಸಂತತಿ 16.ಕಡುದಾಹ 17.ಅತಿಸಾರ

ಮೇಲಿಂದ ಕೆಳಕ್ಕೆ: 1. ಆಲಸಿ 2.ಮಿಡಿತ 3.ಶಾಕಾಹಾರ 4.ರಸ್ತೆ 6.ಕಡವರ 7.ಪಯಣ 8.ನವಜಾತ 12.ಗರ್ಭಗೃಹ 13.ಸಂಗಾತಿ 14.ತಿಮಿರ 15.ಅಂಕ

ಸುಡೊಕು 5544

7		5	9				2	
					2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5543 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ಸುತ್ತೂರು ಜಾತ್ರೆ: ಉಚಿತ ಸಾಮೂಹಿಕ ವಿವಾಹ

ಮೈಸೂರು: ಜಿಲ್ಲೆಯ ಸುತ್ತೂರು ಕ್ಷೇತ್ರದಲ್ಲಿ ಜ.18 ರಿಂದ 23ರವರೆಗೆ ನಡೆಯಲಿರುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಜ.19ರಂದು ಉಚಿತ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ.

ವಧುವಿಗೆ ಮಾಂಗಲ್ಯ, ಸೀರೆ, ಕುಪ್ಪಸ, ಕಾಲುಂಗುರಗಳು ಹಾಗೂ ವರನಿಗೆ ಪಂಚೆ, ಶಲ್ಯ, ಷರ್ಟ್‌ಗಳನ್ನು ನೀಡಲಾಗುವುದು. ಸಮಾಜದ ಎಲ್ಲ ವರ್ಗದವರಿಗೂ ಮುಕ್ತ ಅವಕಾಶವಿದೆ. ವಧು-ವರರು ಹಾಗೂ ಜೊತೆಯಲ್ಲಿ ಬರುವ ಬಂಧುಗಳಿಗೆ ಪ್ರಸಾದ ಮತ್ತು ಹಿಂದಿನ ದಿನ ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ವಿವಾಹವಾಗಲು ಬಯಸುವವರು ನಿಗದಿತ ಅರ್ಜಿ ಪಡೆದು ಪೂರ್ಣ ವಿವರ ಹಾಗೂ ಅಗತ್ಯ ದಾಖಲೆಗಳೊಂದಿಗೆ ಜ.7ರ ಒಳಗೆ ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ದೂ.ಸಂಖ್ಯೆ: 0821-2548212/122 ಸಂಪರ್ಕಿಸಬಹುದು ಎಂದು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಸಮಿತಿ ಸಂಚಾಲಕ ಆರ್‌.ಕುಮಾರಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೊಮ್ಮಾಯಿ ಹೇಳಿಕೆಗೆ ಮೌನ: ಎನ್‌ಸಿಪಿ ಟೀಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಕನ್ನಡ ಭಾಷಿಕ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂದು ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿದ್ದ ಹೇಳಿಕೆ ವಿರುದ್ಧ ಮಹಾರಾಷ್ಟ್ರ ಸರ್ಕಾರ ಮತ್ತು ಬಿಜೆಪಿ ಮೌನ ವಹಿಸಿರುವುದನ್ನು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಶನಿವಾರ ಪ್ರಶ್ನಿಸಿದೆ.

‘ಗಡಿ ಬಿಕ್ಕಟ್ಟಿಗೆ ಸಂಬಂಧಿಸಿ ಕರ್ನಾಟಕ ಮುಖ್ಯಮಂತ್ರಿ ನೀಡಿರುವ ಹೇಳಿಕೆಗಳಿಗೆ ಮತ್ತು ಎತ್ತಿರುವ ಪ್ರಶ್ನೆಗಳಿಗೆ ಕೇಂದ್ರ ಸರ್ಕಾರ, ಮಹಾರಾಷ್ಟ್ರ ಮುಖ್ಯಮಂತ್ರಿ ಮತ್ತು ಬಿಜೆಪಿ ಏಕೆ ಈ ವಿಚಿತ್ರವಾದ ಮೌನವನ್ನು ಮುಂದುವರೆಸಿದೆ’ ಎಂದು ಎನ್‌ಸಿಪಿ ರಾಷ್ಟ್ರೀಯ ವಕ್ತಾರ ಕ್ಲೈಡೆ ಕ್ರಾಸ್ಟೊ ಪ್ರಕಟಣೆಯೊಂದರಲ್ಲಿ ಹೇಳಿದ್ದಾರೆ.

‘ಈ ವಿಷಮ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರ ಸಚಿವರು ಬೆಳಗಾವಿಗೆ ಬರಬಾರದು’ ಎಂದು ಬೊಮ್ಮಾಯಿ ಅವರು ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿದ ಅವರು, ‘ಉಭಯ ರಾಜ್ಯಗಳು ಚರ್ಚೆ ನಡೆಸುವುದರಿಂದ ಸಮಸ್ಯೆಗೆ ಪರಿಹಾರ ದೊರಕುತ್ತದೆ. ಆದರೆ ಬೊಮ್ಮಾಯಿ ಅವರು ಏಕೆ ಚರ್ಚೆಗೆ ಅವಕಾಶ ನೀಡುತ್ತಿಲ್ಲ’ ಎಂದು ಪ್ರಶ್ನಿಸಿದ್ದಾರೆ.

ಕುಮಾರಸ್ವಾಮಿಯೇ ಸಿ.ಎಂ: ಇಬ್ರಾಹಿಂ

ಹುಬ್ಬಳ್ಳಿ: ಜೆಡಿಎಸ್ ಅಧಿಕಾರಕ್ಕೆ ಬಂದರೆ ಎಚ್‌.ಡಿ. ಕುಮಾರಸ್ವಾಮಿ ಅವರೇ ಮುಖ್ಯಮಂತ್ರಿಯಾಗಲಿದ್ದಾರೆ. ಪಂಚರತ್ನ ಯಾತ್ರೆ ಮೂಲಕ ರಾಜ್ಯದ ಜನರಿಗೆ ನೀಡಿರುವ ಭರವಸೆಗಳನ್ನು ಈಡೇರಿಸಲು ಅವರೇ ಮುಖ್ಯಮಂತ್ರಿ ಆಗಬೇಕು ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್‌ಗೆ ಸಂಪೂರ್ಣ ಬಹುಮತ ಬಂದರೆ ಮುಸ್ಲಿಂ ಸಮುದಾಯದ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಲಾಗುತ್ತದೆ ಎಂಬ ಕುಮಾರಸ್ವಾಮಿ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಚುನಾವಣಾ ಆಮಿಷ ಕೋರ್ಟ್‌ಗೆ ಮೊರೆ: ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುವ ಮೊದಲು ಮತದಾರರಿಗೆ ಹಣ, ವಸ್ತುಗಳನ್ನು ಹಂಚುವ ವಿಷಯವನ್ನು ಜೆಡಿಎಸ್ ಗಂಭೀರವಾಗಿ ಪರಿಗಣಿಸಿದೆ. ಈ ವಿಷಯವನ್ನು ನ್ಯಾಯಾಲಯಕ್ಕೆ ಪಕ್ಷ ಕೊಂಡೊಯ್ಯಲಿದೆ. ಇಂತಹ ಆಮಿಷ ಪ್ರಕರಣಗಳನ್ನು ಪತ್ತೆ ಹಚ್ಚುವ ಸಲುವಾಗಿಯೇ ಬೆಂಗಳೂರಿನಲ್ಲಿ ವಾರ್‌ರೂಂ ಆರಂಭಿಸಲಾಗಿದ್ದು, 400 ಯುವಕರು ಇದಕ್ಕಾಗಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ವಕ್ಫ್‌ಬೋರ್ಡ್ ಶಿಕ್ಷಣ ಸಂಸ್ಥೆ ಆರಂಭಿಸಿ ಅದಕ್ಕೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಎಂಬ ಮಾನ್ಯತೆ ಪಡೆಯಲಿ. ಆದರೆ, ಮುಸ್ಲಿಂ ವಿದ್ಯಾರ್ಥಿಗಳಿಗಾಗಿಯೇ ಶಿಕ್ಷಣ ಸಂಸ್ಥೆ ಆರಂಭಿಸುವುದು ಸರಿಯಲ್ಲ. ಶಿಕ್ಷಣ ಸಂಸ್ಥೆಯಲ್ಲಿ ಎಲ್ಲ ಜಾತಿ- ಧರ್ಮದವರಿಗೂ ಅವಕಾಶ ಇರಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವರದಕ್ಷಿಣೆ ಹಿಂದಿರುಗಿಸಿದ ಮದುಮಗ

ಮುಜಾಫರ್‌ನಗರ(ಉತ್ತರಪ್ರದೇಶ): ಇಲ್ಲಿನ ಲಖನ್ ಗ್ರಾಮದಲ್ಲಿ ಮದುವೆ ಗಂಡು ತನಗೆ ವರದಕ್ಷಿಣೆಯಾಗಿ ಲಭಿಸಿದ್ದ ₹11ಲಕ್ಷ ನಗದು ಹಾಗೂ ಚಿನ್ನಾಭರಣವನ್ನು ವಧುವಿನ ಪೋಷಕರಿಗೆ ಹಿಂದಿರುಗಿಸುವ ಮೂಲಕ ಗ್ರಾಮಸ್ಥರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಮದುಮಗ ಸೌರಭ್ ಚೌಹಾಣ್ ಅವರು ಕಂದಾಯ ಅಧಿಕಾರಿಯಾಗಿದ್ದಾರೆ (ಲೋಕಪಾಲ್). ವಧು ಪ್ರಿನ್ಸ್ ಅವರು ನಿವೃತ್ತ ಯೋಧರ ಪುತ್ರಿ.

ರಾಜಸ್ಥಾನ: ಗುಂಡು ಹಾರಿಸಿ ಗ್ಯಾಂಗ್‌ಸ್ಟರ್ ಹತ್ಯೆ

ಸಿಕರ್: ರಾಜಸ್ಥಾನದ ಸಿಕರ್ ಜಿಲ್ಲೆಯಲ್ಲಿ ಗ್ಯಾಂಗ್‌ಸ್ಟರ್ ರಾಜು ಥೇಠ್ ಎಂಬಾತನನ್ನು ನಾಲ್ವರು ಗುಂಡಿಟ್ಟು ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಉದ್ಯೋಗ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪಿಪ್ರಾಲಿ ರಸ್ತೆಯಲ್ಲಿರುವ ತನ್ನ ಮನೆಯ ಗೇಟ್ ಬಳಿ ನಿಂತಿದ್ದಾಗ ರಾಜು ಮೇಲೆ ಗುಂಡಿನ ದಾಳಿ ನಡೆದಿದೆ ಎಂದೂ ಹೇಳಿದ್ದಾರೆ.

ರಾಜು ಥೇಠ್ ಹಲವಾರು ಪ್ರಕರಣಗಳಲ್ಲಿ ಆರೋಪಿಯಾಗಿದ್ದು, ಜಾಮೀನು ಪಡೆದು ಹೊರಬಂದಿದ್ದ. 2017ರಲ್ಲಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತನಾಗಿದ್ದ ಗ್ಯಾಂಗ್‌ಸ್ಟರ್ ಆನಂದ್‌ಪಾಲ್ ಸಿಂಗ್‌ನ ಪ್ರತಿಸ್ಪರ್ಧಿ ಗುಂಪಿನಲ್ಲಿ ಈತ ಗುರುತಿಸಿಕೊಂಡಿದ್ದ ಎಂದೂ ಹೇಳಿದ್ದಾರೆ.

ಲಾರೆನ್ಸ್ ಬಿಷ್ಣೋಯ್ ತಂಡದವನೆಂದು ಫೇಸ್‌ಬುಕ್‌ನಲ್ಲಿ ಹೇಳಿಕೊಂಡಿರುವ ರೋಹಿತ್ ಗೋದಾರ ಎಂಬಾತ ಈ ಕೃತ್ಯದ ಹೊಣೆ ಹೊತ್ತುಕೊಂಡಿದ್ದಾನೆ. ಆನಂದ್‌ಪಾಲ್ ಸಿಂಗ್ ಮತ್ತು ಬಲ್ಬೀರ್ ಬಾನುಡಾ ಅವರ ಹತ್ಯೆಗೆ ಪ್ರತೀಕಾರವಾಗಿ ಈ ಕೃತ್ಯ ಎಸಗಿರುವುದಾಗಿಯೂ ಆತ ಹೇಳಿಕೊಂಡಿದ್ದಾನೆ.

ಆನಂದ್‌ಪಾಲ್ ಸಿಂಗ್ ತಂಡದ ಸದಸ್ಯನಾಗಿದ್ದ ಬಲ್ಬೀರ್ ಬಾನುಡಾ 2014ರಲ್ಲಿ ಬಿಕಾನೇರ್ ಜೈಲಿನಲ್ಲಿ ನಡೆದಿದ್ದ ಗ್ಯಾಂಗ್ ವಾರ್‌ನಲ್ಲಿ ಹತ್ಯೆಗೀಡಾಗಿದ್ದ ಎಂದೂ ಪೊಲೀಸರು ತಿಳಿಸಿದ್ದಾರೆ.

ಅಭಿಷೇಕ್ ಬ್ಯಾನರ್ಜಿ ರ‍್ಯಾಲಿ ಸ್ಥಳದಲ್ಲಿ ಸ್ಫೋಟ: ಮೂವರ ಸಾವು

ಕೊಂಟೈ: ಪಶ್ಚಿಮ ಬಂಗಾಳದ ಪರ್ಬಾ ಮೇದಿನಿಪುರ ಜಿಲ್ಲೆಯ ಭೂಪತಿ ನಗರ ಪ್ರದೇಶದಲ್ಲಿ ಟಿಎಂಸಿ ಮುಖಂಡ ಅಭಿಷೇಕ್ ಬ್ಯಾನರ್ಜಿ ಅವರು ರ‍್ಯಾಲಿ ಹಮ್ಮಿಕೊಂಡಿದ್ದ ಸ್ಥಳದ ಬಳಿ ಸ್ಫೋಟ ಸಂಭವಿಸಿ ಮೂವರು ಮೃತಪಟ್ಟು ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಶನಿವಾರ ಹೇಳಿದ್ದಾರೆ.

‘ಮಣ್ಣಿನ ಮನೆಯೊಂದರಲ್ಲಿ ಶುಕ್ರವಾರ ರಾತ್ರಿ ಸ್ಫೋಟ ಸಂಭವಿಸಿದ್ದು, ಶನಿವಾರ ಮೂರು ಮೃತದೇಹಗಳು ಪತ್ತೆಯಾಗಿವೆ’ ಎಂದಿದ್ದಾರೆ.

‘ಸ್ಫೋಟದ ತೀವ್ರತೆಗೆ ಮನೆಯ ಛಾವಣಿ ಹಾರಿ ಹೋಗಿದೆ. ಸ್ಫೋಟಕ್ಕೆ ಕಾರಣ ತಿಳಿದುಬಂದಿಲ್ಲ. ತನಿಖೆ ನಡೆಯುತ್ತಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ಸ್ಫೋಟಕ್ಕೆ ಟಿಎಂಸಿಯೇ ಹೊಣೆ. ರಾಜ್ಯದಲ್ಲಿ ಬಾಂಬ್ ತಯಾರಿಕಾ ಉದ್ಯಮ ಪ್ರಗತಿ ಸಾಧಿಸುತ್ತಿದೆ’ ಎಂದು ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ದಿಲೀಪ್ ಘೋಷ್ ಹೇಳಿದ್ದಾರೆ.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಕೆಳಗೆ ಸೂಚಿಸಿರುವ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಗಳ ಅಧಿಸೂಚನೆ ದಿನಾಂಕ: 01.12.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಮೈಸೂರು, ನಂಜನಗೂಡು ಮತ್ತು ಟಿ.ನರಸೀಪುರ ತಾಲ್ಲೂಕಿನ ಕಾಮಗಾರಿಗಳಿಗೆ KW-1,KW-3&KW-4 ನಿಬಂಧನೆ ಮತ್ತು ಷರತ್ತುಗಳನ್ವಯ ಟೆಂಡರ್‌ನ್ನು ಏಕ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಅಲ್ಪಾವದಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಟೆಂಡರಿಗಿಟ್ಟ ಕನಿಷ್ಟ ಮೊತ್ತ ರೂ.6.00 ಲಕ್ಷ ಗರಿಷ್ಟ ಮೊತ್ತ ರೂ.210.48 ಲಕ್ಷ ಮತ್ತು ಕನಿಷ್ಟ ಇ.ಎಂ.ಡಿ ಮೊತ್ತ ರೂ.0.127 ಲಕ್ಷ ಗರಿಷ್ಟ ಇ.ಎಂ.ಡಿ ಮೊತ್ತ ರೂ.3.16 ಲಕ್ಷಗಳು ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ನೋಂದಾಯಿತ ಲೋಕೋಪಯೋಗಿ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಪ್ರಕಟಣೆ ಸಂಖ್ಯೆ:17/2022-23 ರ ಪೂರ್ವಭಾವಿ ಸಭೆಯನ್ನು ದಿನಾಂಕ 08.12.2022ರಂದು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಬೆಳಿಗ್ಗೆ 11.30 ಕ್ಕೆ ನಿಗದಿಪಡಿಸಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಕೊನೆಯ ದಿನಾಂಕ
1.	17/2022-23	01	ಕರೆ-1	3ನೇ ದರ್ಜೆ &ಮೇಲ್ಪಟ್ಟು	15-12-2022
		02		2ನೇ ದರ್ಜೆ &ಮೇಲ್ಪಟ್ಟು	
2.	15/2022-23	01	ಕರೆ-2	3ನೇ ದರ್ಜೆ &ಮೇಲ್ಪಟ್ಟು	08-12-2022
3.	13/2022-23	1 (ಇ.ನಂ:158200)	ಕರೆ-2	4ನೇ ದರ್ಜೆ &ಮೇಲ್ಪಟ್ಟು	08-12-2022

ಕಾರ್ಯಪಾಲಕ ಇಂಜನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು (ಪ)ರವರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು-570024. ಇಮೇಲ್: eewmccmys@gmail.com

ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ-09/2022-23 ದಿನಾಂಕ: 01.12.2022

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ನಗರಪಾಲಿಕೆಯ ವಿವಿಧ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಬೆಳಿಗ್ಗೆ 11 ಗಂಟೆಯ ನಂತರ (ಇ-ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಸಂಜೆ 5.30 ಗಂಟೆಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 5.30 ಗಂಟೆಯ ನಂತರ ಟೆಂಡರ್ ತೆರೆಯುವ ದಿನಾಂಕ
1.	ಕಾರ್ಯಪಾಲಕ ಅಭಿಯಂತರರು (ಸಿವಿಲ್ ವಿಭಾಗ)	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ಟಿಎನ್-57/2022-23, ದಿನಾಂಕ: 01.12.2022	112	1804.92	05.12.2022	26.12.2022	27.12.2022
2.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ&ಪ)/ಟಿಎನ್-54/2022-23, ದಿನಾಂಕ: 29.11.2022	14	340.55	01.12.2022	09.12.2022	12.12.2022
3.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ&ಪ)/ಟಿಎನ್-55/2022-23, ದಿನಾಂಕ: 29.11.2022	18	4081.77	05.12.2022	19.12.2022	20.12.2022
	ಸರ್ವಿಸ್ ಟೆಂಡರ್						
4.	ಕಾರ್ಯಪಾಲಕ ಅಭಿಯಂತರರು (ಸಿವಿಲ್ ವಿಭಾಗ)	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ಟಿಎನ್-58/2022-23, ದಿ:01.12.2022	01	35.35	02.12.2022	20.12.2022	21.12.2022
5.		ಟೆಂ.ಪ್ರ.ಸಂಖ್ಯೆ:ಹೆಚ್1/ಪವಿ/140/2022-23, ದಿನಾಂಕ:28.11.2022	01	49.34	02.12.2022	20.12.2022	21.12.2022

ಇ-ಪೋರ್ಟಲ್ ಮುಖಾಂತರ ಸಿಂಗಲ್ ಕವರ್ ಹಾಗು ದ್ವಿಲಕೋಟೆ ಕವರ್ ಡಾಕ್ಯುಮೆಂಟ್ ಪದ್ಧತಿ ಮತ್ತು ಸರ್ವಿಸ್ ಟೆಂಡರ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ **(https://eproc.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ ಹಾಗೂ ಕಾಮಗಾರಿ ನಿರ್ವಹಿಸಿರುವ ಧೃಢೀಕರಣ ಪ್ರಮಾಣ ಪತ್ರದಲ್ಲಿ ಇಂಡೆಟ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.

ಸಹಿ/- ಕಾರ್ಯಪಾಲಕ ಅಭಿಯಂತರರು(ಪಶ್ಚಿಮ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/728/22-23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮ)

ಅಧೀಕ್ಷಕ ಇಂಜನೀಯರರ ಕಚೇರಿ, ಕೃಭಾಜನಿ(ನಿ) ಅಣೆಕಟ್ಟು ವೃತ್ತ, ಆಲಮಟ್ಟಿ.

ಸಂ/ಕೃಭಾಜನಿನಿ/ಆವಅ/ಸಇಂ-1/ನೀಸಸ/2022-23/3018 ದಿನಾಂಕ: 29-11-2022

ಪತ್ರಿಕಾ ಪ್ರಕಟಣೆ

ವಿಷಯ:- ಆಲಮಟ್ಟಿ ಆಣೆಕಟ್ಟು ವೃತ್ತದಡಿ ಬರುವ ಕಾಲುವೆ ಜಾಲಕ್ಕೆ 2022-23 ರ ಹಿಂಗಾರು ಹಂಗಾಮಿಗೆ ಕಾಲುವೆ ಜಾಲಕ್ಕೆ ನೀರು ಹರಿಸುವದನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ:- ದಿನಾಂಕ: **23-11-2022** ರಂದು ಜರುಗಿದ 2022-23 ನೇ ಸಾಲಿನ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯ ನಡುವಳಿಗಳು ಹಾಗೂ ಪತ್ರಿಕಾ ವರದಿಗಳು ದಿನಾಂಕ: **24-11-2022**

ಕೃಷ್ಣಾ ಮೇಲ್ದಂಡೆ ಯೋಜನೆಯ 2022-23ನೇ ಸಾಲಿನ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ದಿನಾಂಕ :**23-11-2022** ರಂದು ಸನ್ಮಾನ್ಯ ಶ್ರೀ ಸಿ.ಸಿ ಪಾಟೀಲ, ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಬಾಗಲಕೋಟ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕೃ.ಮೇ.ಯೋ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಹಿಂಗಾರು ಹಂಗಾಮಿಗೆ ಅವಶ್ಯವಿರುವ **68.977** ಟಿ.ಎಂ.ಸಿ ಹಾಗೂ ಇತರ ಬಳಕೆಗೆ ಅವಶ್ಯವಿರುವ **38.544** ಟಿ.ಎಂ.ಸಿ ಒಟ್ಟಾರೆ **107.521** ಟಿ.ಎಂ.ಸಿ ಇರುವುದು. ಈ ಹಿನ್ನಲೆಯಲ್ಲಿ ಹಿಂಗಾರು ಹಂಗಾಮಿಗೆ ಕಾಲುವೆ ಜಾಲಕ್ಕೆ ನೀರು ಪೂರೈಸುವದನ್ನು ಪ್ರಾರಂಭಿಸುವ ಹಾಗೂ ಮುಕ್ತಾಯಗೊಳಿಸುವ ಕುರಿತು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು.

ಸಭೆಯ ನಿರ್ಣಯದಂತೆ ಆಣೆಕಟ್ಟು ವೃತ್ತ, ಆಲಮಟ್ಟಿ ಅಡಿ ಬರುವ ಆಲಮಟ್ಟಿ ಎಡದಂಡೆ ಏತ ನೀರಾವರಿ, ಚಿಮ್ಮಲಗಿ ಪಶ್ಚಿಮ ಕಾಲುವೆ, ಆಲಮಟ್ಟಿ ಬಲದಂಡೆ ಕಾಲುವೆ, ತಿಮ್ಮಾಪೂರ ಏತ ನೀರಾವರಿ, ಮರೋಳ ಏತ ನೀರಾವರಿ ಹಂತ-1 ರ ಪೂರ್ವ ಮತ್ತು ಪಶ್ಚಿಮ ಕಾಲುವೆಗಳ ಅಡಿ ದಿನಾಂಕ: **12-12-2022** ರಿಂದ ಹಿಂಗಾರು ಹಂಗಾಮಿಗೆ ದಿನಗಳಿಗೆ **14** ದಿನ ಚಾಲೂ ಹಾಗೂ **10** ದಿನ ಬಂದ ಪದ್ಧತಿಯನ್ನು ಈ ಕೆಳಗಿನಂತೆ ಅನುಸರಿಸಲಾಗುವುದು.

ಕ್ರ.ಸಂ.	ಕಾಲುವೆ ಚಾಲೂ ಇರುವ ದಿನಾಂಕಗಳು	ಒಟ್ಟು ದಿನಗಳು	ಕಾಲುವೆ ಬಂದ ಇರುವ ದಿನಾಂಕಗಳು	ಒಟ್ಟು ದಿನಗಳು
1	12-12-2022 ರಿಂದ 25-12-2022	14	26-12-2022 ರಿಂದ 04-01-2023	10
2	05-01-2023 ರಿಂದ 18-01-2023	14	19-01-2023 ರಿಂದ 28-01-2023	10
3	29-01-2023 ರಿಂದ 11-02-2023	14	12-02-2023 ರಿಂದ 21-02-2023	10
4	22-02-2023 ರಿಂದ 07-03-2023	14	08-03-2023 ರಿಂದ 17-03-2023	10
5	18-03-2023 ರಿಂದ 30-03-2023	13	31-03-2023 ರಿಂದ 09-04-2023	10
	ಒಟ್ಟು:	69		50

ಕಾಲುವೆ ಜಾಲದ ಗೇಟ್‌ಗಳನ್ನು ಹಾನಿ ಮಾಡುವುದು, ಎಸ್ಕೇಪಗಳ ಮೂಲಕ ಹಳ್ಳಕ್ಕೆ ನೀರು ಹರಿಸುವುದು, ಸೈಪನಗಳ ಮೂಲಕ ಮಣ್ಣಿನ ಏರಿಯಲ್ಲಿ ನೀರನ್ನು ಎತ್ತಿಕೊಳ್ಳುವುದು, ಕಾಲುವೆ ಜಾಲದಲ್ಲಿ ಪಂಪುಗಳ ಮೂಲಕ ನೀರನ್ನು ಎತ್ತುವುದನ್ನು ನಿರ್ಭಂದಿಸಲಾಗಿದೆ. ಈ ಪರಿಸ್ಥಿತಿ ಕಂಡು ಬಂದರೆ ಸಂಬಂಧಿಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕಾಗುವುದು. ರೈತ ಬಾಂಧವರು ಕೃಷ್ಣಾ ಮೇಲ್ದಂಡೆ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿ **119** ದಿನಗಳಲ್ಲಿ ಬರುವ ಲಘು ನೀರಾವರಿ ಬೆಳೆಗಳನ್ನು ಮಾತ್ರ ತಮ್ಮ ಕ್ಷೇತ್ರದ **50** ಪ್ರತಿಶತ ಕ್ಷೇತ್ರಕ್ಕೆ (**35** ಪ್ರತಿಶತ ಹಿಂಗಾರು ಹಾಗೂ **15** ಪ್ರತಿಶತ ದ್ವಿಋತು) ಬೆಳೆಯಲು ವಿನಂತಿಸಲಾಗಿದೆ. **ಕಬ್ಬು, ಬಾಳೆ ಮತ್ತು ಭತ್ತದ ಬೆಳೆಗಳನ್ನು ನೀರಾವರಿ ಆಶ್ರಯದಲ್ಲಿ ಬೆಳೆಯುವುದನ್ನು ನಿಷೇಧಿಸಲಾಗಿದೆ.**

ರೈತ ಬಾಂಧವರು ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಹಾಗೂ ಈ ದಿಶೆಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳಿಗೆ ಸಹಕಾರ ನೀಡಲು ಕೋರಲಾಗಿದೆ. **30-03-2023** ರ ನಂತರದ ಉಳಿತಾಯದ ನೀರಿನ ಲಭ್ಯತೆ ಅನುಸಾರ, ಹಿಂಗಾರು ಹಂಗಾಮನ್ನು ದಿನಾಂಕ: **10-04-2023** ರಿಂದ ವಿಸ್ತರಿಸಬಹುದಾಗಿದೆ.

“ ಜೀವ ಜಲ ಅತೀ ಅಮೂಲ್ಯ ಅದನ್ನು ಪೋಲು ಮಾಡಬೇಡಿ ”

ಸಹಿ/- ಬಸವರಾಜ ಡಿ
ಅಧೀಕ್ಷಕ ಅಭಿಯಂತರರು,
ಕೃಭಾಜನಿ(ನಿ) ಆಣೆಕಟ್ಟು ವೃತ್ತ, ಆಲಮಟ್ಟಿ

ವಾ.ಸಾ.ಇ/ಬಾಗಲಕೋಟೆ/643/2022-23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಶಿವಮೊಗ್ಗ ತಾಲ್ಲೂಕ್ ಪಂಚಾಯತ್, ಸಾಗರ.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಸಾಗರ.

Ph.No: 08183-226804 ಇ-ಮೇಲ್: sagarcdpo@yahoo.com

ಸಂ:ಶಿಅಯೋಸಾ/ಕೋಳಿಮೊಟ್ಟೆ.ಟೆ/ಇ-ಪ್ರಕ್ಯೂ.ಟೆಂಡರ್/2022-23

ದಿನಾಂಕ:01-12-2022

ಮರು ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಸಾಗರ ಶಿಶು ಅಭಿವೃದ್ಧಿ ಯೋಜನೆಯ 342 ಅಂಗನವಾಡಿ ಕೇಂದ್ರಗಳಿಗೆ 2022-23 ಸಾಲಿಗೆ ಅಂಗನವಾಡಿ ಫಲಾನುಭವಿಗಳಿಗೆ ವಿತರಿಸಲು ಮೊಟ್ಟೆ ಪೂರೈಕೆಗೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ್ ಕರೆಯಲಾಗಿದೆ. ಟೆಂಡರ್ ಹಾಕಲು ಇಚ್ಛೆಯುಳ್ಳವರು ಅರ್ಜಿ ಫಾರಂಗಳನ್ನು ದಿ: 01-12-2022 ರಿಂದ 15-12-2022 ರವರೆಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಭರ್ತಿಮಾಡಿದ ಅರ್ಜಿ ಫಾರಂಗಳನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕವೇ ದಿನಾಂಕ:15-12-2022 ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಸಾಗರ ಇವರನ್ನು ಸಂಪರ್ಕಿಸಬಹುದು.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಾಗರ.

ವಾ.ಸಾ.ಸಂ.ಇ/ಎಂಸಿಎ/ಶಿ/25/12/22-23/1356

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ Construction of Samudhaya Bhavana Building for Shri. Rudramuni Swamiji Shadakshara Mutt in Tiptur Taluk of Tumkur District ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.413.22 ಲಕ್ಷಗಳಿಗೆ “ಶೇಕಡಾವಾರು ದರಗಳಲ್ಲಿ” ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ-ಪೋರ್ಟಲ್‌ನಲ್ಲಿ ದಿ: **05.12.2022 ರಿಂದ ದಿ:. 14.12.2022** ರವರೆಗೆ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ಪ್ರೀಬಿಡ್ ಸಭೆ/ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://eproc.karnataka. gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: **14.12.2022** ರವರೆಗೆ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ-ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816-2201844, ಇಮೇಲ್ ವಿಳಾಸ- eeypd2tmk@gmail.com

---

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

ಟೆಂಡರ್ ಪ್ರಕಟಣೆ ಸಂಖ್ಯೆ: 19/2022-23, Date: 31.10.2022/Call-2

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1ರ ನಿಯಮದನ್ವಯ ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.) ಬೆಂಗಳೂರು ರವರ ಪರವಾಗಿ PWD Class-IV and above of any State/Central Government/Public Sector organization (Class-I Electrical Licence) ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ಏಕಲಕೋಟೆ ಪದ್ಧತಿಯಲ್ಲಿ 1 ಕಾಮಗಾರಿಗೆ, ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.12.63ಲಕ್ಷ. EMD ಮತ್ತು ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://eproc.karnataka.gov.in ಮೂಲಕ ದಿನಾಂಕ: 05.12.2022 ರಿಂದ 20.12.2022 ರ ವರೆಗೆ ಪಡೆಯಬಹುದು (Down load), ಆರ್ಥಿಕ ಬಿಡ್ ತೆರೆಯುವ ದಿನಾಂಕ 21.12.2022 ರ ಸಂಜೆ 5.00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://eproc.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ,
ಕಾನೀನಿನಿ, ಗೊರೂರು

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/791/2022-23

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.
ದೂರವಾಣಿ ಸಂಖ್ಯೆ: 080-22133370 ಫ್ಯಾಕ್ಸ್ ಸಂಖ್ಯೆ: 080-22133365
Email ID: eepwdbngdn@yahoo.com E-Portal : https://eproc.karnataka.gov.in

ಟೆಂಡರ್ ಪ್ರಕಟಣೆ ಸಂಖ್ಯೆ: 33/2022-23
ದಿನಾಂಕ: 02.12.2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಒಂದು ಹಾಗೂ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನೆಲಮಂಗಲ ಉಪವಿಭಾಗಕ್ಕೆ ಸಂಬಂಧಿಸಿದಂತೆ **01** ಸಂಖ್ಯೆಯ (ರೂ. 325.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: **02.12.2022** ರಿಂದ. (2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿಃ **16.12.2022** ಸಂಜೆ **4.00** ಗಂಟೆ ಯವರೆಗೆ. (3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ **17.12.2022** ಸಂಜೆ **4.30** ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://eproc.karnataka.gov.in)** ಮೂಲಕ ಪಡೆಯಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/3372/Zenkar/2022-23

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/40/2022-23 ದಿನಾಂಕ: 02-12-2022

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Public Schools Grants / 2022-23 ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **06-01-2023ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/3366/ಅಡ್ವರ್ಟೋರ್/2022-23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು,

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಕಂಟೋನ್‌ಮೆಂಟ್ ಬಳ್ಳಾರಿ. ದೂರವಾಣಿ: 08392-242293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ/2022-23/2287 ದಿ:01.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಕೆ.ಡಬ್ಲ್ಯೂ- 3 & 4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ ಸಂಡೂರು ತಾಲ್ಲೂಕಿನ ಲೆಕ್ಕಶೀರ್ಷಿಕೆ 4702 ಪ್ರಧಾನ ಕಾಮಗಾರಿ ಕೆರೆಗಳ ಆಧುನೀಕರಣಯಡಿ ಒಟ್ಟು 04 ಕಾಮಗಾರಿಗಳಿಗೆ ಹಾಗೂ ಕೂಡ್ಲಿಗಿ ತಾಲ್ಲೂಕಿನ ವಿಶೇಷ ಘಟಕ ಯೋಜನೆಯಡಿ 01 ಕಾಮಗಾರಿಗೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ **ಗರಿಷ್ಠ ಅಂದಾಜು ಮೊತ್ತ ರೂ.169.11 ಲಕ್ಷಗಳು ಹಾಗೂ ಕನಿಷ್ಠ ಅಂದಾಜು ಮೊತ್ತ ರೂ.84.21 ಲಕ್ಷಗಳಿರುತ್ತದೆ.** ಟೆಂಡರ್‌ನ್ನು **ದಿನಾಂಕ: 02.12.2022 ರಿಂದ ದಿನಾಂಕ: 09.12.2022 ಸಂಜೆ 5.30** ಗಂಟೆಯವರೆಗೆ ಸಲ್ಲಿಸಬಹುದು. ಟೆಂಡರಿನ ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 13.12.2022 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಆರ್ಥಿಕ ಬಿಡ್‌ಗಳನ್ನು **ದಿನಾಂಕ: 19.12.2022 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು “ಇ-ಪ್ರಕ್ಯೂರ್‌ಮೆಂಟ್” ವೆಬ್‌ಸೈಟ್ http://eproc.karntaka.gov.in/e-portal/index.seam ನಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/683/ಎಂಸಿಎ/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ, ಶಾಸಕರ ಭವನ, 1ನೇ ಮಹಡಿ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560040.

ಸಂಖ್ಯೆ:ಕಾ.ಪಾ.ಅ(ವಿಜನ)/ಸ.ಅ/ಟಿ.ಎನ್/ಜಿಎಲ್-14/2022-23 ದಿನಾಂಕ: 02-12-2022

ತಿದ್ದುಪಡಿ-1

ವಿಷಯ: ಟೆಂಡರ್ ಷೆಡ್ಯೂಲ್ ‘ಬಿ’ ಗಳನ್ನು ಸ್ವೀಕರಿಸುವ ಮತ್ತು ಟೆಂಡರ್ ತೆರೆಯುವ ದಿನಾಂಕವನ್ನು ಮುಂದೂಡಿರುವ ಬಗ್ಗೆ.

ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ಪಾ.ಅ/ವಿಜನ/ಸ.ಅ/ಟಿ.ಎನ್/ಜಿಎಲ್-14/22-23 ದಿನಾಂಕ: 17-11-2022.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ್‌ನಲ್ಲಿನ **ಕ್ರಮ ಸಂಖ್ಯೆ. 04** – ವಾರ್ಡ್ ಸಂಖ್ಯೆ. 124 ರಲ್ಲಿನ ಹೊಸಹಳ್ಳಿಯಲ್ಲಿ ಸರ್ಕಾರಿ ಓಣಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿನ ರಸ್ತೆಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು. ಅಂದಾಜು ಮೊತ್ತ: **ರೂ. 75.00 ಲಕ್ಷಗಳು** ಮತ್ತು **ಕ್ರಮ ಸಂಖ್ಯೆ. 06** – ವಾರ್ಡ್ ಸಂಖ್ಯೆ. 124 ರಲ್ಲಿನ ಹೊಸಹಳ್ಳಿಯಲ್ಲಿ ಪೈಪ್‌ಲೈನ್ ರಸ್ತೆ ಚರ್ಚ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿನ ರಸ್ತೆಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು. ಅಂದಾಜು ಮೊತ್ತ: **ರೂ. 51.00 ಲಕ್ಷಗಳ** ಕಾಮಗಾರಿಗಳಿಗೆ ತಾಂತ್ರಿಕ ಕಾರಣಗಳಿಂದಾಗಿ ದಿನಾಂಕವನ್ನು ಮುಂದೂಡಲಾಗಿದ್ದು, ದಿನಾಂಕವನ್ನು ಮುಂದೆ ತಿಳಿಸಲಾಗುವುದು. ಉಳಿದಂತೆ ಟೆಂಡರ್ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಶಿವಮೊಗ್ಗ ತಾಲ್ಲೂಕ್ ಪಂಚಾಯತ್,ಹೊಸನಗರ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಹೊಸನಗರ

ಸ:ಐಸಿಡಿಎಸ್‌ಹೊ/ಆ.ಸಾ/ಮರು ಇ-ಪ್ರಕ್ಯೂ.ಟೆಂಡರ್/22-23/239 ದಿ:01.12.2022

ಮರು ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಹೊಸನಗರ ಶಿಶು ಅಭಿವೃದ್ಧಿ ಯೋಜನೆಯ 345 ಅಂಗನವಾಡಿ ಕೇಂದ್ರಗಳಿಗೆ 2022-23ನೇ ಸಾಲಿಗೆ ಆಹಾರ ಪದಾರ್ಥಗಳನ್ನು ಸಾಗಾಣಿಕೆ ಮಾಡಲು ಹೊಸನಗರ ತಾಲ್ಲೂಕು ವ್ಯಾಪ್ತಿಯ ಮಹಿಳಾ ಮಂಡಳಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು ಹಾಗೂ ಗ್ರಾಮ ಸಮುದಾಯದವರಿಂದ ಮಾತ್ರ ನಿಯಮಾನುಸಾರ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ಹಾಕಲು ಇಚ್ಛೆಯುಳ್ಳವರು ಅರ್ಜಿ ಫಾರಂಗಳನ್ನು ದಿ: 01-12-2022 ರಿಂದ 15-12-2022 ರವರೆಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಭರ್ತಿಮಾಡಿದ ಅರ್ಜಿ ಫಾರಂಗಳನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕವೇ ದಿನಾಂಕ: 15-12-2022 ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಹೊಸನಗರ ಇವರನ್ನು ಸಂಪರ್ಕಿಸಬಹುದು.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಹೊಸನಗರ

ವಾ.ಸಾ.ಸಂ.ಇ/ಎಂಸಿಎ/ಶಿ/17/12/22-23/1360

ಕರ್ನಾಟಕ ಸರ್ಕಾರ

(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)

ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.

ದೂರವಾಣಿ ಸಂ:(0831)2463850/ಫ್ಯಾಕ್ಸ್ ಸಂ:(0831) 2423008

No.EE/MI&GWDDD/BGM/TND/JE/2022-23/ 4315 Date: 02-12-2022

ಅಲ್ಪಾವಧಿ ಟೆಂಡರ ಪ್ರಕಟಣೆ (KW-3 & 4)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ-2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು “ಇ ಪ್ರೋಕ್ಯೂರಮೆಂಟ್” ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಬೆಳಗಾವಿ / ಗೋಕಾಕ ಉಪ ವಿಭಾಗದ ವ್ಯಾಪ್ತಿಯಲ್ಲಿಯ ಬೈಲಹೊಂಗಲ ತಾಲ್ಲೂಕು ಹಾಗೂ ಗೋಕಾಕ ತಾಲ್ಲೂಕಿನ 2022-23 ನೇ ಸಾಲಿನ 4702 / ಟಿ.ಎಸ್.ಪಿ ಲೆಕ್ಕ ಶೀರ್ಷಿಕೆಯಡಿಯಲ್ಲಿಯ 3 ಕಾಮಗಾರಿಗಳಿಗಾಗಿ ಟೆಂಡರ ಕರೆಯಲಾಗಿದ್ದು, ಅಂದಾಜು ಮೊತ್ತ ಕನಿಷ್ಠ ರೂ.51.00ಲಕ್ಷಗಳು ಹಾಗೂ ಗರಿಷ್ಟ ರೂ.251.00ಲಕ್ಷಗಳು. ಸದರಿ ಕಾಮಗಾರಿಗಳಿಗೆ ಗುತ್ತಿಗೆದಾರರು ದರಗಳನ್ನು GST ರಹಿತ (ಏ.ನಿ.ಯೋ.ವಿದ್ಯುತ್ತೀಕರಣ ಹೊರತುಪಡಿಸಿ) ನಮೂದಿಸುವುದು ಮತ್ತು ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ GST ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ಹೆಚ್ಚುವರಿ ಗುತ್ತಿಗೆ ಅವಧಿಯಲ್ಲಿ GST ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಸದರಿ ಕಾಮಗಾರಿಗಳ ವಿವರಗಳನ್ನು “ಇ-ಪ್ರೋಕ್ಯೂರಮೆಂಟ್”ನಲ್ಲಿ ದಿನಾಂಕ:06-12-2022 ರಿಂದ ದಿನಾಂಕ:13-12-2022 ರವರೆಗೆ ಪಡೆಯಬಹುದು.


Note: The intending bidder should visit the concerned works spot and get familiar with the nature of work. Certificate has to be obtained from the concerned Assistant Executive Engineer about visiting the above works spot and it should be uploaded in the tender.

1. ಪೂರ್ವ ಟೆಂಡರ ಸಭೆ ದಿನಾಂಕ:12-12-2022 ಬೆಳಿಗ್ಗೆ 11.00 ಗಂಟೆಗೆ 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ 14-12-2022 ಸಾಯಂಕಾಲ 4.00 ಗಂಟೆಯವರೆಗೆ 3. ಟೆಂಡರ ತೆರೆಯುವ ದಿನಾಂಕ 15-12-2022 ಬೆಳಿಗ್ಗೆ 4.30 ಗಂಟೆ ಮುಂದುವರೆದು 4. ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ. 5. ಅಂತರಜಾಲ ತಾಣದ ವಿಳಾಸ www.e-proc.karnataka.gov.in

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.

DIPR/BGM/RO-NO-1309/MCA/2022-23

‘ಅಭಿವ್ಯಕ್ತಿ ಸ್ವಾತಂತ್ರ್ಯದ ಸ್ಥಿತಿ ಕಳವಳಕಾರಿ’



ಪಿ. ಸಾಯಿನಾಥ್

ಬೆಂಗಳೂರು: ‘ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಸ್ಥಿತಿ ಕಳವಳಕಾರಿಯಾಗಿದೆ. ಅಂತರರಾಷ್ಟ್ರೀಯ ಮಟ್ಟದ ಅಭಿವ್ಯಕ್ತಿ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ 150ನೇ ಸ್ಥಾನದಲ್ಲಿದೆ. ನಿಜವಾಗಿಯೂ ಹೇಳಬೇಕೆಂದರೆ ಅದಕ್ಕಿಂತಲೂ ಕೆಳಮಟ್ಟದಲ್ಲಿದೆ’ ಎಂದು ಪತ್ರಕರ್ತ ಪಿ. ಸಾಯಿನಾಥ್ ಹೇಳಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಶನಿವಾರ ಬರ್ಖಾ ದತ್ ಮತ್ತು ಶಶಿಕುಮಾರ್ ಜತೆಗಿನ ಸಂವಾದದಲ್ಲಿ ಮಾತನಾಡಿದ ಅವರು, ‘ಪತ್ರಕರ್ತರ ಮೇಲೆ 160 ಕಾನೂನುಗಳ ಕತ್ತಿಗಳು ತೂಗಾಡುತ್ತಿವೆ. ಅವುಗಳ ಮೂಲಕವೇ ಪತ್ರಕರ್ತರನ್ನು ನಿಯಂತ್ರಿಸಲಾಗುತ್ತಿದೆ’ ಎಂದರು.

‘ನೀವು ಸವಾಲಿನ ಪತ್ರಿಕೋದ್ಯಮ ನಡೆಸುತ್ತೀರಿ ಎಂದಾದರೆ ನಿಮಗೇ ಸವಾಲು ಹಾಕುತ್ತಾರೆ’ ಎಂದ ಅವರು, ‘ಕೋವಿಡ್‌ನಿಂದ 720 ಪತ್ರಕರ್ತರು ಮೃತಪಟ್ಟಿದ್ದಾರೆ. ಅವರಲ್ಲಿ ಬಹುತೇಕ ಮಂದಿ ಅರೆಕಾಲಿಕ ವರದಿಗಾರರಾಗಿದ್ದರು’ ಎಂದು ಅಂಕಿಅಂಶ ನೀಡಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಸರ್ಕಾರದ ನಡೆಯ ಬಗ್ಗೆ ಭಾಷಾ ತಜ್ಞರ ಕಳವಳ

ಅವನತಿಯತ್ತ ಸಣ್ಣ ಭಾಷೆಗಳು

• ವರುಣ ಹೆಗಡೆ

ಬೆಂಗಳೂರು: ‘ಭಾಷಾ ರಾಜಕಾರಣ ದೇಶದಲ್ಲಿ ಗಂಭೀರ ಸ್ವರೂಪ ಪಡೆದಿದೆ. ‘ಹಿಂದಿ ಪಡಾವೋ’ ಎಂದು ಹೇಳುವ ಮೂಲಕ ಪ್ರಬಲ ಭಾಷೆಗಳನ್ನು ಪ್ರೋತ್ಸಾಹಿಸುತ್ತಿರುವ ಸರ್ಕಾರಗಳು, ಸಣ್ಣ ಭಾಷೆಗಳನ್ನು ವಿನಾಶದತ್ತ ನೂಕುತ್ತಿವೆ’ ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದರು.

ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಯ ಮೊದಲ ದಿನವಾದ ಶನಿವಾರ ‘ಸಣ್ಣ ಭಾಷೆಗಳ ಸಬಲೀಕರಣ’ ಗೋಷ್ಠಿಯಲ್ಲಿ ಭಾಗವಹಿಸಿ, ಮಾತನಾಡಿದರು. ‘ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಇರುವ 22 ಭಾಷೆಗಳಲ್ಲಿ 18 ಭಾಷೆಗಳು ಉತ್ತರ ಭಾರತದ್ದಾಗಿವೆ. ದಕ್ಷಿಣ ಭಾರತದ 4 ಭಾಷೆಗಳಿಗೆ ಮಾತ್ರ ಸ್ಥಾನ ಸಿಕ್ಕಿದೆ. ಇದೊಂದು ಅಪಾಯಕಾರಿಯಾದ ಪ್ರಾದೇಶಿಕ ಅಸಮತೋಲನವಾಗಿದೆ. ತುಳು, ಕೊಡವದಂತಹ ನೂರಾರು ಸಣ್ಣ ಭಾಷೆಗಳ ಮುಂದೆ ಇಂದು ಹಲವಾರು ಸವಾಲುಗಳಿವೆ’ ಎಂದು ಹೇಳಿದರು.



ಗೋಷ್ಠಿಯಲ್ಲಿ ಮೆಲ್ವಿನ್ ರೊಡ್ರಿಗಸ್ ಅವರು ಕೊಂಕಣಿ ಕವನ ವಾಚಿಸಿದರು. ಪುರುಷೋತ್ತಮ ಬಿಳಿಮಲೆ, ಸ್ಮಿತಾ ಅಮೃತರಾಜ್ ಮತ್ತು ಮುಹಮ್ಮದ್ ಕುಳಾಯಿ ಇದ್ದಾರೆ —ಪ್ರಜಾವಾಣಿ ಚಿತ್ರ

‘2011ರ ಜನಗಣತಿ ಪ್ರಕಾರ ಭಾರತದಲ್ಲಿ 19,569 ಮಾತೃಭಾಷೆಗಳಿವೆ. 99 ಭಾಷೆಗಳು ಸಂವಿಧಾನದ ಎಂಟನೇ ಪರಿಚ್ಛೇದ ಸೇರಲು ಹೋರಾಟ ನಡೆಸುತ್ತಿವೆ. ಆದರೆ, ಸರ್ಕಾರಗಳು ಭಾಷಾ ಬಲವರ್ಧನೆಯ ಬಗ್ಗೆ ಆಸಕ್ತಿ ಹೊಂದಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಅರೆಭಾಷೆಯ ಬಗ್ಗೆ ಮಾತನಾಡಿದ ಸ್ಮಿತಾ ಅಮೃತರಾಜ್, ‘ಅರೆ ಭಾಷೆಯು ಕನ್ನಡದ ಉಪ ಭಾಷೆಯಾಗಿದೆ. ಕೊಡಗು ಮತ್ತು ದಕ್ಷಿಣ ಕನ್ನಡದಲ್ಲಿ ಗೌಡ ಸಮುದಾಯದವರು ಈ ಭಾಷೆಯಲ್ಲಿ ಮಾತನಾಡುತ್ತಾರೆ. ಈ ಭಾಷೆ ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿದೆ. 3ರಿಂದ 4 ಲಕ್ಷ ಮಂದಿ ಅರೆಭಾಷೆಯನ್ನು ಬಳಸುತ್ತಾರೆ. ಆದರೆ, ಈ ಭಾಷೆ ಸಾಹಿತ್ಯಿಕವಾಗಿ ಮುಂದುವರೆದಿರಲಿಲ್ಲ. 10 ವರ್ಷದ ಹಿಂದೆ ಅಕಾಡೆಮಿಯ ಮಾನ್ಯತೆ ಸಿಕ್ಕ ಬಳಿಕ ಭಾಷೆಯು ಕಲೆಯ ಮೂಲಕ ಅಭಿವ್ಯಕ್ತವಾಯಿತು’ ಎಂದು ಹೇಳಿದರು.

ಬ್ಯಾರಿಗಳು ತುಳುವರು: ಬ್ಯಾರಿ ಭಾಷೆಯ ಬಗ್ಗೆ ಮಾತನಾಡಿದ ಮುಹಮ್ಮದ್ ಕುಳಾಯಿ, ‘ಈ ಭಾಷೆಯನ್ನು 25 ಲಕ್ಷ ಮಂದಿ ಮಾತನಾಡುತ್ತಾರೆ. ಬ್ಯಾರಿ ಎಂಬ ಪದವು ತುಳುವಿನ ಬ್ಯಾರ ಎಂಬ ಶಬ್ದದಿಂದ ಉದ್ಭವಗೊಂಡಿದೆ. ಈ ಭಾಷೆಯಲ್ಲಿ ತಮಿಳು, ಅರೇಬಿಕ್, ಪರ್ಷಿಯನ್, ತುಳು, ಮಲಯಾಳಂ, ಕನ್ನಡ ಸೇರಿ ವಿವಿಧ ಭಾಷೆಗಳ ಪದಗಳಿವೆ. ಆದ್ದರಿಂದ ಇದೊಂದು ವಿಶೇಷವಾದ ಭಾಷೆಯಾಗಿದೆ. ತುಳು ಸಮುದಾಯದ ಎಲ್ಲ ಆಚಾರಣೆಗಳು ಬ್ಯಾರಿಗಳಲ್ಲಿ ಇವೆ. ಹಾಗಾಗಿ, ಬ್ಯಾರಿಗಳೂ ತುಳುವರು’ ಎಂದರು.

ಕೊಂಕಣಿ ಭಾಷೆಯ ಕವಿ ಮೆಲ್ವಿನ್ ರೊಡ್ರಿಗಸ್ ಹಾಗೂ ತುಳು ಭಾಷೆಯ ಕವಿ ಕಾತ್ಯಾಯಿನಿ ಕುಂಜಿಬೆಟ್ಟು ಅವರು ಕವಿತೆಗಳನ್ನು ವಾಚಿಸಿದರು.

‘ಸವಾಲಾದ ಭಾಷಾ ರಾಜಕೀಯ’

‘ಯಾವುದೇ ಭಾಷೆ ರಾಜ್ಯದ ಅಧಿಕೃತ ಭಾಷೆಯೆಂದು ಘೋಷಣೆಯಾದ ಬಳಿಕ ಸಹಜವಾಗಿ ಎಂಟನೇ ಪರಿಚ್ಛೇದಕ್ಕೆ ಸೇರುತ್ತದೆ. ಆದರೆ, 2003ರಲ್ಲಿ ಭಾರತದ ಸಂವಿಧಾನದಲ್ಲಿ 92ನೇ ತಿದ್ದುಪಡಿ ಮಾಡಿ, ಯಾವುದೇ ರಾಜ್ಯದ ಅಧಿಕೃತ ಭಾಷೆಗಳಲ್ಲದ ಬೋಡೋ, ಡೋಗ್ರಿ, ಸಂತಾಲಿ ಮತ್ತು ಮೈಥಿಲಿ ಭಾಷೆಯನ್ನು ಸೇರಿಸಲಾಯಿತು. ಇದು ಭಾಷಾ ರಾಜಕೀಯಕ್ಕೆ ಉತ್ತಮ ಉದಾಹರಣೆ’ ಎಂದು ಪುರುಷೋತ್ತಮ ಬಿಳಿಮಲೆ ಹೇಳಿದರು.

‘ಸಣ್ಣ ಭಾಷೆಗಳ ಅಭಿವೃದ್ಧಿಯ ಕುರಿತು ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಗಂಭೀರವಾಗಿ ಯೋಚಿಸುತ್ತಿಲ್ಲ. 2001ರ ಜನಗಣತಿ ಪ್ರಕಾರ 1.66 ಲಕ್ಷ ಮಂದಿ ಕೊಡವ ಭಾಷೆಯನ್ನು ಮಾತನಾಡುತ್ತಿದ್ದರು. ಆ ಸಂಖ್ಯೆ 2011ರ ಜನಗಣತಿ ಪ್ರಕಾರ 1.36 ಲಕ್ಷಕ್ಕೆ ಇಳಿಕೆಯಾಗಿದೆ. ಸಮುದಾಯ, ಭಾಷೆ ಅವನತಿಯ ಹಾದಿ ಹಿಡಿದಿರುವುದನ್ನು ಇದು ತೋರಿಸುತ್ತದೆ’ ಎಂದರು.

ಸುದ್ದಿ 2 ನಿಮಿಷ

ಹನುಮಮಾಲಾ ವಿಸರ್ಜನೆ: 50 ಸಾವಿರ ಲಾಡು ತಯಾರಿ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಅಂಜನಾದ್ರಿ ಬೆಟ್ಟದಲ್ಲಿ ಡಿಸೆಂಬರ್ 5ರಂದು ನಡೆಯಲಿರುವ ಹನುಮಮಾಲಾ ವಿಸರ್ಜನೆಗೆ ಬರುವ ಭಕ್ತಾದಿಗಳಿಗೆ ವಿತರಿಸಲು 50 ಸಾವಿರ ಲಾಡುಗಳನ್ನು ಸಿದ್ಧಪಡಿಸಲಾಗಿದೆ.

ಸುಮಾರು 1.5 ಲಕ್ಷ ಭಕ್ತರು ಬರುವ ನಿರೀಕ್ಷೆಯಿದ್ದು, ವಾರದಿಂದ ಲಾಡು ತಯಾರಿ ನಡೆದಿದೆ. 200 ಕ್ವಿಂಟಲ್ ಕಡಲೆಹಿಟ್ಟು, 40 ಕ್ವಿಂಟಲ್ ಸಕ್ಕರೆ, 120 ಡಬ್ಬಿ ಅಡುಗೆ ಎಣ್ಣೆ, 120 ಕೆ.ಜಿ ಗೊಡಂಬಿ, 100 ಕೆಜಿ ದ್ರಾಕ್ಷಿ, 9 ಕೆಜಿ ಏಲಕ್ಕಿ ಬಳಸಿ ಲಾಡು ತಯಾರಿಸಲಾಗಿದೆ. 25 ಸಾವಿರ ತೀರ್ಥದ ಬಾಟಲ್ ಸಿದ್ಧವಾಗಿದೆ.

‘ವೇದಪಾಠದ ಶಾಲೆ ಬಳಿ ಬೃಹತ್ ಪೆಂಡಾಲ್ ಹಾಕಲಾಗಿದೆ. ಸೋಮವಾರ 25 ಸಾವಿರ ಭಕ್ತರಿಗೆ ಬೆಳಿಗ್ಗೆ ಸಿರಾ, ಉಪ್ಪಿಟ್ಟು ಮತ್ತು ಮಧ್ಯಾಹ್ನ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರಸಾದ ವಿತರಣೆಯಲ್ಲಿ ತೊಂದರೆಯಾಗದಂತೆ ಅಚ್ಚುಕಟ್ಟಾಗಿ ಯೋಜನೆ ರೂಪಿಸಲಾಗಿದೆ’ ಎಂದು ಹನುಮಮಾಲಾ ಕಾರ್ಯಕ್ರಮದ ನೋಡಲ್ ಅಧಿಕಾರಿ ಬಸವಣ್ಣೆಪ್ಪ ಕಲಶೆಟ್ಟಿ ತಿಳಿಸಿದರು.

ಬೆಕ್ಕಿನ ಕಣ್ಣಿನ ಹಾವು ಪತ್ತೆ



ಕೊರಟಗೆರೆ (ತುಮಕೂರು): ತಾಲ್ಲೂಕಿನ ತಣ್ಣೇನಹಳ್ಳಿ ಗ್ರಾಮದ ತೋಟದ ಮನೆಯೊಂದರಲ್ಲಿ ಬೆಕ್ಕಿನ ಕಣ್ಣಿನ ಹಾವು (ಕ್ಯಾಟ್ ಸ್ನೇಕ್/ಕ್ಯಾಟ್ ಐಯ್ಡ್ ಸ್ನೇಕ್) ಪತ್ತೆಯಾಗಿದೆ.

ಬೆಂಗಳೂರು ನಿವಾಸಿ ಮುರಳೀಧರ್ ಎಂಬುವರಿಗೆ ಸೇರಿದ ತಣ್ಣೇನಹಳ್ಳಿ ತೋಟದ ಮನೆಯಲ್ಲಿ ಇಟ್ಟಿದ್ದ ಪೆಟ್ಟಿಗೆಯಲ್ಲಿ ಶುಕ್ರವಾರ ಸಂಜೆ ಈ ಹಾವು ಪತ್ತೆಯಾಗಿದೆ. ಕೂಡಲೇ ಅವರು ವಾರಂಗಲ್ ಫೌಂಡೇಷನ್ ವನ್ಯಜೀವಿ ಜಾಗೃತ ಹಾಗೂ ಉರಗ ರಕ್ಷಣೆ ಸಂಸ್ಥೆಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಉರಗ ಪ್ರೇಮಿ ದಿಲೀಪ್ ಹಾವನ್ನು ಹಿಡಿದು ಜಿಲ್ಲೆಯ ದೇವರಾಯನ ದುರ್ಗ ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.

ಸಾಮಾನ್ಯವಾಗಿ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶದಲ್ಲಿ ಕಂಡು ಬರುವ ಈ ಹಾವು ಬಯಲುಸೀಮೆಯಲ್ಲಿ ಕಾಣಸಿಗುವುದು ಅಪರೂಪ. ಹಿಂಬದಿ ಕೋರೆ ಹಲ್ಲು ಹೊಂದಿರುವ ಈ ಹಾವು ಅಷ್ಟೇನೂ ವಿಷಕಾರಿಯಲ್ಲ.

‘ಬೊಯ್ಗಾ ಫಾರ್ಸ್ಟೆನ್’ ವೈಜ್ಞಾನಿಕ ಹೆಸರಿನ ಹಾವನ್ನು ಇಂಗ್ಲಿಷ್‌ನಲ್ಲಿ ಕ್ಯಾಟ್ ಸ್ನೇಕ್, ಕ್ಯಾಟ್ ಐಯ್ಡ್ ಸ್ನೇಕ್, ಫಾರ್ಸ್ಟೆನ್ ಕ್ಯಾಟ್ ಸ್ನೇಕ್ ಮತ್ತು ಕನ್ನಡದಲ್ಲಿ ‘ಬೆಕ್ಕಿನ ಕಣ್ಣಿನ ಹಾವು’ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ದಕ್ಷಿಣ ಏಷ್ಯಾದಲ್ಲಿ ಹೆಚ್ಚಾಗಿ ಈ ಹಾವು ಕಂಡು ಬರುತ್ತವೆ’ ಎಂದರು.

‘ಮೂಲನಿವಾಸಿ ವಿರೋಧಿ ಸರ್ಕಾರ’

ಇದೇ 6ರಂದು ದಲಿತರ ಸಾಂಸ್ಕೃತಿಕ ಪ್ರತಿರೋಧದ ಐಕ್ಯತಾ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನದ ಅಂಗವಾಗಿ ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯಿಂದ ಇದೇ 6ರಂದು ‘ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ದಲಿತರ ಸಾಂಸ್ಕೃತಿಕ ಪ್ರತಿರೋಧ ಮತ್ತು ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ’ವನ್ನು ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಿದೆ.

‘ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿವೆ. ದೇಶದ ಮೂಲ ನಿವಾಸಿಗಳ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿವೆ. ಆದ್ದರಿಂದ ಈ ದಲಿತ ಸಮಾವೇಶವನ್ನು ಜನ ಚಳವಳಿಯಾಗಿ ಪರಿವರ್ತನೆ ಮಾಡಬೇಕಿದೆ’ ಎಂದು ಚಾಲನಾ ಸಮಿತಿಯ ಅಧ್ಯಕ್ಷ ಎನ್. ವೆಂಕಟೇಶ ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸಂವಿಧಾನದ ಆಶಯಗಳು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳು ಕುಸಿಯುತ್ತಿವೆ. ಸಾಮಾಜಿಕ ನ್ಯಾಯವೆಂಬುದು ಕನಸಿನ ಮಾತಾಗಿದೆ. ನಿರುದ್ಯೋಗ ಯುವ ಜನಾಂಗವನ್ನು ಹತಾಶೆಗೆ ದೂಡಿದೆ. ದೇಶದಲ್ಲಿ ಕೋಮು ರಾಜಕೀಯ ವಿಜೃಂಭಿಸುತ್ತಿದೆ. ಸಮ ಸಮಾಜದ ಕನಸು ಬಿತ್ತಿದ್ದ ಬುದ್ಧ, ಬಸವ, ಅಂಬೇಡ್ಕರ್ ಮರೆಯಾಗಿ ಕೋಮು ವಿಷದ ಗೋಡ್ಸೆ, ಸಾವರ್ಕರ್ ಮುನ್ನೆಲೆಗೆ ಬರುತ್ತಿದ್ದಾರೆ’ ಎಂದು ಅವರು ಹೇಳಿದರು.

‘ಬ್ರಾಹ್ಮಣ ಶ್ರೇಷ್ಠತೆ ಪ್ರತಿಪಾದಿಸುವ ಜಾತಿ ವ್ಯವಸ್ಥೆಯನ್ನು ಮರುಸ್ಥಾಪನೆ ಮಾಡುವುದೇ ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಉದ್ದೇಶವಾಗಿದೆ. ಈ ದೇಶದ ದಲಿತ, ಆದಿವಾಸಿ, ಅಲೆಮಾರಿ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಬೆಂಬಲ ಸಿಗುವುದಿಲ್ಲ ಎಂಬ ಕಾರಣಕ್ಕೆ ಪ್ರತಿಯೊಂದು ಜಾತಿಯೊಳಗೆ ಉಪಜಾತಿಯ ವಿಷ ಬೀಜವನ್ನು ಬಿತ್ತುತ್ತಿದ್ದಾರೆ. ದಲಿತ ಸಮುದಾಯವನ್ನು ಜಾತಿ– ಉಪಜಾತಿಯ ಹೆಸರಿನಲ್ಲಿ ಛಿದ್ರಗೊಳಿಸಲಾಗುತ್ತಿದೆ. ಹಿಂದುತ್ವದದ ಹೆಸರಿನಲ್ಲಿ ಅಲ್ಪಸಂಖ್ಯಾತರನ್ನು ಶತ್ರುಗಳಂತೆ ಬಿಂಬಿಸಲಾಗುತ್ತಿದೆ’ ಎಂದು ದಸಂಸ(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಬೇಸರ ವ್ಯಕ್ತಪಡಿಸಿದರು.

ಈ ಸಮಾವೇಶವನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗಳು ರಮಾಬಾಯಿ ಆನಂದ್ ತೇಲ್ತುಂಬ್ಡೆ ಉದ್ಘಾಟಿಸಲಿದ್ದಾರೆ. ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ, ರವಿವರ್ಮ ಕುಮಾರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಸಂಘರ್ಷ ಸಮಿತಿ ನಾಯಕರಾದ ಇಂದೂಧರ ಹೊನ್ನಾಪುರ, ಅಣ್ಣಯ್ಯ, ಜಿಗಣಿ ಶಂಕರ್ ಇದ್ದರು.

ಜನಪ್ರತಿನಿಧಿಗೂ ಅರ್ಹತೆ ನಿಗದಿ ಮಾಡಿ:ಬಯ್ಯಾಪುರ

ಕೊಪ್ಪಳ: ‘ಬೇರೆ ವೃತ್ತಿಗಳಿಗೆ ನಿರ್ದಿಷ್ಟ ಅರ್ಹತೆ ನಿಗದಿಪಡಿಸಿದಂತೆ ಶಾಸಕ ಹಾಗೂ ಸಂಸದರಾಗಲು ಜನಪ್ರತಿನಿಧಿಗಳಿಗೂ ಅರ್ಹತೆ ನಿಗದಿ ಆಗಬೇಕು. ಇದಕ್ಕಾಗಿ ಸಂವಿಧಾನ ಬದಲಾವಣೆ ಆಗಬೇಕು’ ಎಂದು ಕುಷ್ಟಗಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಮರೇಗೌಡ ಬಯ್ಯಾಪುರ ಹೇಳಿದರು.

ವಕೀಲರ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ‘ಸಂವಿಧಾನದ ಪ್ರಕಾರ, ಹೆಬ್ಬೆಟ್ಟು ಒತ್ತುವವರೂ ಮುಖ್ಯಮಂತ್ರಿ, ಪ್ರಧಾನಿ ಯಾಗಬಹುದು. ಅವರೇ ಕಾನೂನು ಮಾಡುತ್ತಾರೆ’ ಎಂದರು. ‘ಕಾನೂನು ನಮಗೆ ಗೊತ್ತಿಲ್ಲದಿದ್ದರೂ ಅದನ್ನು ಪಾಸ್ ಮಾಡುತ್ತೇವೆ. ಪರಿಸ್ಥಿತಿ ಹೀಗಿರುವಾಗ ಶಾಸಕ ಮತ್ತು ಸಂಸದರಿಗೆ ಕಾನೂನು ಜ್ಞಾನ ನಿಗದಿಪಡಿಸುವುದು ಉತ್ತಮ’ ಎಂದರು.

18ರಿಂದ ಕೆಎಎಸ್ ಪೂರ್ವಭಾವಿ ಪರೀಕ್ಷೆ ಸರಣಿ

ಬೆಂಗಳೂರು: ಕೆಎಎಸ್ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಸಹಯೋಗದಲ್ಲಿ ‘ಎಕ್ಸಾಮ್ ಮಾಸ್ಟರ್ ಮೈಂಡ್ ಕೆಎಎಸ್ ಪೂರ್ವಭಾವಿ ಪರೀಕ್ಷೆ ಆನ್‌ಲೈನ್ ಟೆಸ್ಟ್ ಸರಣಿ’ ಡಿ. 18ರಿಂದ ನಡೆಯಲಿದೆ.

ಈ ಸರಣಿಯು 12 ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿದ್ದು, 15 ದಿನಗಳಿಗೊಮ್ಮೆ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಕೆಎಎಸ್ ಪರೀಕ್ಷೆಗೆ ಅನುಗುಣವಾದ ಪ್ರಶ್ನೆಗಳು, ವಿಸ್ತೃತ ವಿವರಣೆಯ ಪಿಡಿಎಫ್ ಗಳು ಮರುದಿನವೇ ಲಭ್ಯವಾಗಲಿವೆ. ಪಠ್ಯಕ್ರಮದ ಸಮಗ್ರ ಭಾಗವನ್ನು ಒಳಗೊಂಡಿರುವ ಪ್ರಶ್ನೆಗಳು ಮತ್ತು ಪ್ರತಿ ಪರೀಕ್ಷೆಗೆ ರ‍್ಯಾಂಕಿಂಗ್ ಇರಲಿದೆ.

ಅರ್ಚಕರ ನೇಮಕಕ್ಕೆ ಅನುಮತಿ

ಚಿಕ್ಕಮಗಳೂರು: ತಾಲ್ಲೂಕಿನ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ/ಸಂಸ್ಥೆಗೆ ತಾತ್ಕಾಲಿಕವಾಗಿ ಇಬ್ಬರು ಅರ್ಚಕರ ನೇಮಕಕ್ಕೆ ಸರ್ಕಾರ ಶನಿವಾರ ಅನುಮತಿ ನೀಡಿದೆ.

ಬಾಗೇಪಲ್ಲಿಯ ಪಿ.ಎಂ.ಸಂದೀಪ್ ಹಾಗೂ ಶೃಂಗೇರಿ ತಾಲ್ಲೂಕಿನ ಬೊಮ್ಮನಕುಡಿಗೆಯ ಕೆ.ಶ್ರೀಧರ ಅವರನ್ನು ನಿಯೋಜಿಸಿಕೊಳ್ಳಲು ಒಪ್ಪಿಗೆ ನೀಡಿದೆ ಎಂದು ಜಿಲ್ಲಾಧಿಕಾರಿ ಕೆ.ಎನ್.ರಮೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸರ್ಕಾರಿ ಆಸ್ಪತ್ರೆಯಲ್ಲಿ ಜಿಯೊ ಟ್ಯಾಗಿಂಗ್

ತುಮಕೂರು: ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳ ವೈದ್ಯರು ಹಾಗೂ ಸಿಬ್ಬಂದಿ ಹಾಜರಾತಿ ಮತ್ತು ಚಲನವಲನದ ಮೇಲೆ ನಿಗಾ ಇಡಲು ಸದ್ಯದಲ್ಲಿಯೇ ಜಿಯೊ ಟ್ಯಾಗಿಂಗ್ ವ್ಯವಸ್ಥೆ ಜಾರಿ ಮಾಡಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿಯಲ್ಲಿ ಶುಕ್ರವಾರ ಚಿಕಿತ್ಸೆ ಸಿಗದೆ ಬಾಲಕ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಲು ಮಾಡಿರುವ ಟ್ವೀಟ್‌ನಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ. ಜಿಯೊ ಟ್ಯಾಗಿಂಗ್ ವ್ಯವಸ್ಥೆಯಿಂದ ಸರ್ಕಾರಿ ಆಸ್ಪತ್ರೆ ಸಿಬ್ಬಂದಿಯಲ್ಲಿ ಹೊಣೆಗಾರಿಕೆ ಹಾಗೂ ಶಿಸ್ತು ಹೆಚ್ಚಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ವೈದ್ಯ, ಚಾಲಕ ಅಮಾನತು

ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿಯಲ್ಲಿ ಚಿಕಿತ್ಸೆ ಸಿಗದೆ ಐದು ವರ್ಷದ ಬಾಲಕ ಮೃತಪಟ್ಟ ಪ್ರಕರಣದಲ್ಲಿ ಕರ್ತವ್ಯಲೋಪ ಎಸಗಿದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ.ಲೋಹಿತ್, ಆಂಬುಲೆನ್ಸ್ ಚಾಲಕನನ್ನು ಅಮಾನತು ಮಾಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಡಿಎಚ್‌ಒ ಡಾ. ಮಂಜುನಾಥ್ ಅವರಿಗೆ ನೋಟಿಸ್ ನೀಡಲಾಗಿದೆ.

ಈ ಪ್ರಕರಣ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದರು.

ನಾವೀನ್ಯ ಸಂಶೋಧನೆ ತಾಣ ಕರ್ನಾಟಕ: ಸಚಿವ

‘ಅನ್‌ಲೀಶ್’ 4ನೇ ಆವೃತ್ತಿ ಶುರು

ಪ್ರಜಾವಾಣಿ ವಾರ್ತೆ

ಮೈಸೂರು: ‘ಕರ್ನಾಟಕವು ಹೊಸ ಸಂಶೋಧನೆಗಳ ತಾಣವಾಗಿದ್ದು, ಇಲ್ಲಿ ನಡೆಯುವ ಹೊಸ ಸಂಶೋಧನೆಗಳನ್ನು ಇಡೀ ಜಗತ್ತು ಎದುರು ನೋಡುತ್ತಿದೆ’ ಎಂದು ಉನ್ನತ ಶಿಕ್ಷಣ, ಐಟಿ, ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಇಲ್ಲಿನ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಶನಿವಾರ ನಡೆದ ‘ಅನ್‌ಲೀಶ್–2022’ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

‘ವಿಶ್ವಸಂಸ್ಥೆ ನಿಗದಿಪಡಿಸಿರುವ ಸುಸ್ಥಿರ ಅಭಿವೃದ್ಧಿ ಗುರಿ ತಲುಪಲು, ಜಗತ್ತು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ವಿವಿಧ ದೇಶಗಳ ಎಲ್ಲರೂ ಒಂದೆಡೆ ಸೇರಿದ್ದೇವೆ. ಈ ಗುರಿ ತಲುಪಲು ಪ್ರತಿಯೊಬ್ಬರೂ ಪ್ರಮುಖ ಆದ್ಯತೆ ನೀಡಿ, ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು’ ಎಂದು ಹೇಳಿದರು.

ಐಟಿ–ಬಿಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣರೆಡ್ಡಿ ಮಾತನಾಡಿ, ‘ಭಾರತವು ಜಗತ್ತಿನ 5ನೇ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗಿದೆ. ಕೋವಿಡ್ ನಂತರವೂ ಜಿಡಿಪಿಯು ಉತ್ತಮ ಪ್ರಗತಿ (6.5) ದಾಖಲಿಸಿದೆ. ದೇಶದಲ್ಲಿ ಕರ್ನಾಟಕವೇ ಹೊಸ ಸಂಶೋಧನೆಯಲ್ಲಿ ಮೊದಲ ಕ್ರಮಾಂಕ ಪಡೆದಿದ್ದು, ದೇಶದಲ್ಲಿರುವ 100 ಯುನಿಕಾರ್ನ್‌ಗಳ ಪೈಕಿ ರಾಜ್ಯದಲ್ಲಿಯೇ 40 ಸಂಸ್ಥೆಗಳಿವೆ. ವಿಶ್ವದಲ್ಲಿಯೇ ಬೆಂಗಳೂರು 4ನೇ ಅತೀ ದೊಡ್ಡ ತಾಂತ್ರಿಕ ಕ್ಲಸ್ಟರ್ ಹೊಂದಿದೆ’ ಎಂದು ಹೇಳಿದರು.

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಟಲ್ ಇನ್ನೋವೇಷನ್ ಮಿಷನ್‌ನ ನಿರ್ದೇಶಕ ಡಾ.ಚಿಂತನ್ ವೈಷ್ಣವ್, ಕೆಐಟಿಎಸ್‌ನ ನಿರ್ದೇಶಕ ಮೀನಾ ನಾಗರಾಜ್ ಇದ್ದರು.



ಮೈಸೂರಿನ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಶನಿವಾರ ಆರಂಭವಾದ ‘ಅನ್‌ಲೀಶ್–2022’ ಅಂತರರಾಷ್ಟ್ರೀಯ ಸಮ್ಮೇಳನಕ್ಕೂ ಮುನ್ನ ದೇಶದ ಸಾಂಸ್ಕೃತಿಕ ವೈಭವ ಬಿಂಬಿಸುವ ಕಾರ್ಯಕ್ರಮ ನಡೆಯಿತು/ ಪ್ರಜಾವಾಣಿ ಚಿತ್ರ

ಏನಿದು ಅನ್‌ಲೀಶ್?

ಸುಸ್ಥಿರ ಅಭಿವೃದ್ಧಿಯ ಗುರಿ ತಲುಪುವ ನಿಟ್ಟಿನಲ್ಲಿ ಯುವಕರನ್ನು ಒಂದೇ ವೇದಿಕೆಗೆ ತಂದು ವಿನೂತನ ಆಲೋಚನೆಗಳು ಹಾಗೂ ಯೋಜಿತ ಜಾಲ ರೂಪಿಸುವುದು ಅನ್‌ಲೀಶ್ ಮುಖ್ಯ ಉದ್ದೇಶವಾಗಿದೆ. ವಿಶ್ವದ 167 ದೇಶಗಳ 5 ಸಾವಿರ ಯುವ ಜನರು ಭಾಗವಹಿಸುತ್ತಿದ್ದು, 300 ಸಂಸ್ಥೆಗಳು ಕೈ ಜೋಡಿಸಿವೆ. 2017ರಿಂದ ಮೂರು ಆವೃತ್ತಿಗಳು ಕ್ರಮವಾಗಿ ಡೆನ್ಮಾರ್ಕ್, ಸಿಂಗಪುರ ಹಾಗೂ ಚೀನಾದಲ್ಲಿ ನಡೆದಿದ್ದವು. 4ನೇ ಆವೃತ್ತಿಯು ಇಲ್ಲಿ ಒಂದು ವಾರದವರೆಗೆ ನಡೆಯಲಿದೆ.

ಒಂದಕ್ಕಿಂತ ಹೆಚ್ಚು ಪದವಿ; ಪರಿಶಿಷ್ಟರಿಗಿಲ್ಲ ಹಾಸ್ಟೆಲ್

ಬೆಂಗಳೂರು: ಒಂದು ವಿಷಯದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಪರಿಶಿಷ್ಟ ಜಾತಿ ಪಂಗಡದ ವಿದ್ಯಾರ್ಥಿಗಳು 2022–23ನೇ ಸಾಲಿನಲ್ಲಿ ಮತ್ತೊಂದು ಪದವಿಗೆ ಪ್ರವೇಶ ಬಯಸಿದರೆ ಅಂಥವರಿಗೆ ಹಾಸ್ಟೆಲ್‌ಗೆ ಪ್ರವೇಶ ನೀಡಬಾರದು ಎಂದು ಬೆಂಗಳೂರು ವಿಶ್ವವಿದ್ಯಾಲಯ ಸುತ್ತೋಲೆ ಹೊರಡಿಸಿದೆ.

ಈ ವಿಷಯವನ್ನು ಸೂಕ್ಷ್ಮವಾಗಿ ಪರಿಗಣಿಸಬೇಕು. ಪ್ರವೇಶ ನೀಡುವ ಸಮಯದಲ್ಲಿ ಎಲ್ಲ ದಾಖಲೆಗಳನ್ನು ಪರಿಶೀಲಿಸಬೇಕು. ಮೊದಲ ಪದವಿಯೇ, ಎರಡನೇ ಬಾರಿ ಪದವಿಗೆ ಪ್ರವೇಶ ಪಡೆಯುತ್ತಿದ್ದಾರೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಮುಚ್ಚಳಿಕೆ ಪಡೆದು ಪ್ರವೇಶ ನೀಡಬೇಕು ಎಂದು ಕುಲಸಚಿವರು ಸೂಚಿಸಿದ್ದಾರೆ.

ಕಾಂಗ್ರೆಸ್ ಆಕ್ರೋಶ: ಉನ್ನತ ಶಿಕ್ಷಣ ಸಚಿವರ ಸೂಚನೆಯಂತೆ ಸುತ್ತೋಲೆ ಹೊರಡಿಸಲಾಗಿದೆ. ಇಂತಹ ನಡೆ ಬಿಜೆಪಿಯ ದಲಿತ ವಿರೋಧಿ ಹಾಗೂ ದಲಿತರ ಶಿಕ್ಷಣಕ್ಕೆ ಅಡ್ಡಿಪಡಿಸುವ ಮನೋಸ್ಥಿತಿಯ ಗುಪ್ತ ಕಾರ್ಯಸೂಚಿ ಎಂದು ಕೆಪಿಸಿಸಿ ವಕ್ತಾರ ರಮೇಶ್ ಬಾಬು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಶತ ಶತಮಾನಗಳಿಂದ ಶೋಷಣೆ ಮತ್ತು ತುಳಿತಕ್ಕೆ ಒಳಗಾಗಿರುವ ದಲಿತ ಸಮುದಾಯದಲ್ಲಿ ಇಂದಿಗೂ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ತೀರ ಕಡಿಮೆ. ಸರ್ಕಾರದ ಬೆಂಬಲ, ಸಹಾಯದ ಮಧ್ಯೆಯೂ ಸ್ನಾತಕೋತ್ತರ ಶಿಕ್ಷಣ ಪಡೆಯಲು ಮುಂದೆ ಬರುತ್ತಿಲ್ಲ. ಇಂತಹ ಸಮಯದಲ್ಲಿ ವಿಶ್ವವಿದ್ಯಾಲಯ ಹೊರಡಿಸಿದ ಸುತ್ತೋಲೆ ಶಿಕ್ಷಣಕ್ಕೆ ಮಾರಕ’ ಎಂದು ದೂರಿದ್ದಾರೆ.

‘ಕೂಡಲೇ ಸುತ್ತೋಲೆ ಹಿಂದಕ್ಕೆ ಪಡೆಯಬೇಕು. ಬಿಜೆಪಿ ಹಾಗೂ ರಾಜ್ಯ ಸರ್ಕಾರ ಪರಿಶಿಷ್ಟರ ದಮನಕಾರಿ ನೀತಿ ಕೈಬಿಡಬೇಕು’ ಎಂದು ಆಗ್ರಹಿಸಿದ್ದಾರೆ.

ಮೂಡಿಗೆರೆ: ಮತ್ತೊಂದು ಆನೆ ಸೆರೆ

ಚಿಕ್ಕಮಗಳೂರು: ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕುಂದೂರು – ಬೆಳಗೋಡು ಭಾಗದಲ್ಲಿ ಶನಿವಾರ ಮತ್ತೊಂದು ಗಂಡಾನೆ ಸೆರೆ ಸಿಕ್ಕಿದೆ.

ದುಬಾರೆ, ಮತ್ತಿಗೂಡು ಶಿಬಿರದ ಆರು ಆನೆಗಳೊಂದಿಗೆ ಅರಣ್ಯ ಅಧಿಕಾರಿಗಳು, ಸಿಬ್ಬಂದಿ ತಂಡ ಆನೆ ಸೆರೆ ಕಾರ್ಯಾಚರಣೆಯಲ್ಲಿ ತೊಡಗಿದೆ. ತೋಟ ಭಾಗದಲ್ಲಿ ಮಧ್ಯಾಹ್ನ ಸಾಗುವಾಗ ಸೆರೆ ಸಿಕ್ಕಿದೆ.

‘ಸುಮಾರು 35 ವರ್ಷದ ಆನೆ ಸೆರೆ ಸಿಕ್ಕಿದೆ. ಅದನ್ನು ಮತ್ತಿಗೂಡು ಶಿಬಿರಕ್ಕೆ ಸಾಗಿಸಲು ಚಿಂತನೆ ನಡೆದಿದೆ’ ಎಂದು ಚಿಕ್ಕಮಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಎಂ.ಸಿ.ಸಿದ್ರಾಮಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.



ಗೋಳಗುಮ್ಮಟ ದೀಪಾಲಂಕಾರ...

ಭಾರತವು ಜಿ 20 ಅಧ್ಯಕ್ಷ ಸ್ಥಾನ ವಹಿಸಿಕೊಂಡ ಪ್ರಯುಕ್ತ ವಿಜಯಪುರದ ವಿಶ್ವ ಪ್ರಸಿದ್ಧ ಗೋಳಗುಮ್ಮಟವು ಡಿ. 7ರವರೆಗೆ ಪ್ರತಿ ದಿನ ಸಂಜೆ 7ರಿಂದ ರಾತ್ರಿ 11ರ ತನಕ ವಿದ್ಯುತ್ ದೀಪಗಳಿಂದ ಕಂಗೊಳಿಸಲಿದೆ. ಆದರೆ, ಪ್ರವಾಸಿಗರು ಹಾಗೂ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಿಲ್ಲ! ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

ಎಸ್‌ಸಿ ಯುವಕ ಆತ್ಮಹತ್ಯೆ: ನಾಲ್ವರ ಸೆರೆ

ನಂಗಲಿ (ಕೋಲಾರ ಜಿಲ್ಲೆ): ಬೇವಹಳ್ಳಿ ಗ್ರಾಮದ ಪರಿಶಿಷ್ಟ ಜಾತಿಯ ಯುವಕ ಉದಯ್ ಕಿರಣ್ ಆತ್ಮಹತ್ಯೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಎಲ್ಲ ನಾಲ್ವರೂ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಮುಖ ಆರೋಪಿ ಪೆತ್ತಾಂಡ್ಲಹಳ್ಳಿಯ ರಾಜು (24), ಅವರ ತಂದೆ ಗೋಪಾಲಕೃಷ್ಣ (54), ಶಿವರಾಜ್ (34) ಹಾಗೂ ಅವರ ತಂದೆ ಮುನಿವೆಂಕಟಪ್ಪ (70) ಬಂಧಿತರು. ಮುನಿವೆಂಕಟಪ್ಪ ಹಾಗೂ ಗೋಪಾಲಕೃಷ್ಣ ಅಣ್ಣ–ತಮ್ಮಂದಿರು. ಮುನಿವೆಂಕಟಪ್ಪ ಅವರನ್ನು ಶುಕ್ರವಾರವೇ ಬಂಧಿಸಲಾಗಿತ್ತು. ಇನ್ನುಳಿದ ಮೂವರನ್ನು ಶನಿವಾರ ಬಂಧಿಸಲಾಗಿದೆ. ‘ಎಲ್ಲರನ್ನೂ ಬಂಧಿಸಿ, ತನಿಖೆ ತೀವ್ರಗೊಳಿಸಿದ್ದೇವೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ತಿಳಿಸಿದರು.

‘ಸಿದ್ರಾಮುಲ್ಲಾ ಖಾನ್’ ಹೇಳಿಕೆ ಖಂಡಿಸಿ ಮುತ್ತಿಗೆಗೆ ಯತ್ನ

ಸಿ.ಟಿ ರವಿ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಕಾಂಗ್ರೆಸ್‌ನ ಸಿದ್ರಾಮುಲ್ಲಾ ಖಾನ್ (ಸಿದ್ದರಾಮಯ್ಯ) ಮತ್ತೆ ಅಧಿಕಾರಕ್ಕೆ ಬಂದರೆ ಹಿಂದೂ ಕಾರ್ಯಕರ್ತರ ಹತ್ಯೆಗಳು ನಡೆಯುತ್ತವೆ’ ಎಂಬ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿಕೆಯನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ನಿಂದ ಶನಿವಾರ ಪ್ರತಿಭಟನೆ, ರವಿ ಮನೆಗೆ ಮುತ್ತಿಗೆ ಯತ್ನ ನಡೆಯಿತು.

ತಾಲ್ಲೂಕು ಕಚೇರಿಯಿಂದ ರವಿ ಅವರ ಮನೆ ಕಡೆಗೆ ಹೊರಟ ಕಾಂಗ್ರೆಸ್ಸಿಗರು ಸ್ವಲ್ಪ ದೂರ ಸಾಗುತ್ತಿದ್ದಂತೆ, ಎದುರುಗಡೆಯಿಂದ ಬಿಜೆಪಿ ಕಾರ್ಯಕರ್ತರು ಪ್ರತಿರೋಧ ವ್ಯಕ್ತಪಡಿಸಿದರು. ಪೊಲೀಸರು ಎರಡೂ ಕಡೆ ರಸ್ತೆಗೆ ಅಡ್ಡಲಾಗಿ ಬ್ಯಾರಿಕೇಡ್ ಇಟ್ಟು ಪ್ರತಿಭಟನಕಾರರನ್ನು ತಡೆದರು.

ಕಾಂಗ್ರೆಸ್‌ನವರು ರವಿ ವಿರುದ್ಧ ಘೋಷಣೆ ಕೂಗಿದರು. ಬಸವನಹಳ್ಳಿ ಮುಖ್ಯರಸ್ತೆಯಲ್ಲಿ ಧರಣಿ ನಡೆಸಿ, ಭಾಷಣ ಮಾಡಿದರು. ಪೊಲೀಸರು ಸ್ವಲ್ಪ ಹೊತ್ತಿನ ನಂತರ ಕಾಂಗ್ರೆಸ್ ಪ್ರತಿಭಟನಕಾರರನ್ನು ವಶಕ್ಕೆ ಪಡೆದು ವಾಹನಗಳಿಗೆ ಹತ್ತಿಸಿದರು.

ಬಸವನಹಳ್ಳಿ ರಸ್ತೆಯಲ್ಲಿರುವ ರವಿ ಅವರ ನಿವಾಸಕ್ಕೆ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

ಬಿಜೆಪಿ: ಓಂಕಾರೇಶ್ವರ ದೇಗುಲ ಬಳಿ ಸೇರಿದ ಬಿಜೆಪಿಯವರು ‘ಸಿದ್ದರಾಮಯ್ಯ ಹಿಂದೂ ವಿರೋಧಿ’ ಎಂದು ಘೋಷಣೆ ಕೂಗಿದರು. ಪೊಲೀಸರು ಪ್ರತಿಭಟನಾನಿರತರನ್ನು ವಾಹನಕ್ಕೆ ಹತ್ತಿಸಲು ಮುಂದಾದರು. ಪರಸ್ಪರ ವಾಗ್ವಾದ ನಡೆಯಿತು.

‘ನಾರಾಯಣಪುರ ಬಡಾವಣೆ ತಿರುವಿನ ಮುಖ್ಯರಸ್ತೆಯಲ್ಲಿ ಕೆಲ ಕಾಂಗ್ರೆಸ್ ಕಾರ್ಯಕರ್ತರು ಸಾಗುವಾಗ ಬಿಜೆಪಿಯ ಪುಷ್ಪರಾಜ್ ಅವರು ಕಲ್ಲು ತೂರಿದ್ದು ಸಿದ್ದೇಶ್, ಸಚಿನ್ ಅವರಿಗೆ ಪೆಟ್ಟಾಗಿದೆ’ ಎಂದು ಕಾಂಗ್ರೆಸ್ ಜಿಲ್ಲಾ ವಕ್ತಾರ ಎಚ್.ಎಸ್.ಪುಟ್ಟಸ್ವಾಮಿ ದೂರಿದ್ದಾರೆ. ‘ಕಾಂಗ್ರೆಸ್‌ನ 83 ಮಂದಿಯನ್ನು ವಶಕ್ಕೆ ಪಡೆದು ಬಿಡುಗಡೆ ಮಾಡಲಾಗಿದೆ. ಪ್ರತಿಭಟನೆಗೆ ಯಾರಿಗೂ ಅನುಮತಿ ಕೊಟ್ಟಿರಲಿಲ್ಲ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಪ್ರತಿಕ್ರಿಯಿಸಿದರು.



ಚಿಕ್ಕಮಗಳೂರಿನಲ್ಲಿ ಶನಿವಾರ ಪೊಲೀಸರು ಕಾಂಗ್ರೆಸ್‌ನ ಪ್ರತಿಭಟನಕಾರರನ್ನು ವಶಕ್ಕೆ ಪಡೆದರು

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನೆ

‘ಆರೆಸ್ಸೆಸ್ ರೌಡಿ ಮೋರ್ಚಾ ಕಟ್ಟಲು ಸಲಹೆ ನೀಡಿದೆಯೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕೀಯ ನಾಯಕರು ರೌಡಿ ಶೀಟರ್‌ಗಳ ಜೊತೆ ಕಾಣಿಸಿಕೊಂಡಿರುವ ವಿಚಾರ ಕಾಂಗ್ರೆಸ್–ಬಿಜೆಪಿ ನಡುವೆ ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿದೆ.

ರೌಡಿ ರಾಜಕೀಯ ವಿಚಾರ ಪ್ರಸ್ತಾಪಿಸಿ ಸರಣಿ ಟ್ವೀಟ್ ಮಾಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಬಾಯಿ ಬಿಟ್ಟರೆ ಸಂಸ್ಕೃತಿ, ಆಚಾರದ ಮಂತ್ರ ಉದುರಿಸುವ ಆರೆಸ್ಸೆಸ್ ನಾಯಕರು, ಮುಖ್ಯಮಂತ್ರಿ ಅವರನ್ನು ಕರೆಸಿಕೊಂಡದ್ದು ರೌಡಿ ಮೋರ್ಚಾ ಕಟ್ಟಲು ಸಲಹೆ ನೀಡಲಿಕ್ಕಾಗಿಯೇ? ಆರೆಸ್ಸೆಸ್‌ನ ಮೌನ ಸಮ್ಮತಿ ಲಕ್ಷಣವೇ’ ಎಂದಿದ್ದಾರೆ.

‘ಗಣಿ ಲೂಟಿಕೋರ ರೌಡಿಗಳನ್ನು ಕಟ್ಟಿಕೊಂಡು ಅಧಿಕಾರಕ್ಕೆ ಬಂದಿದ್ದ ಬಿಜೆಪಿಯ ಮುಖ್ಯಮಂತ್ರಿ ಕೊನೆಗೆ ಜೈಲು ಪಾಲಾಗಬೇಕಾಯಿತು. ಈಗ ಹೊಸ ರೌಡಿ ಪಡೆ ಕಟ್ಟುತ್ತಿರುವುದು ಯಾರನ್ನು ಜೈಲಿಗೆ ಕಳಿಸಲು’ ಎಂದು ಟೀಕಿಸಿದ್ದಾರೆ.

‘ಬಿಜೆಪಿ ರೌಡಿಗಳನ್ನು ಕಟ್ಟಿಕೊಂಡು ಚುನಾವಣೆ ಗೆಲ್ಲಲು ಹೊರಟಿರುವುದು, ಧರ್ಮದ ಬಗ್ಗೆ ಬೊಗಳೆ ಬಿಡುವ ಸಂಘ ಪರಿವಾರದ ನೈತಿಕ ಅಧಃಪತನವಲ್ಲದೆ ಮತ್ತೇನು?’ ಎಂದೂ ಗುಡುಗಿದ್ದಾರೆ.

‘ಕೊತ್ವಾಲನ ಚಹಾ ಲೋಟ ಎತ್ತುತ್ತಿದ್ದ ರೌಡಿ’

‘ರೌಡಿಗಳ ಕಿಂಗ್ ಕೊತ್ವಾಲನ ಚಹಾ ಲೋಟ ಎತ್ತುತ್ತಿದ್ದ ಪುಡಿ ರೌಡಿ ಡಿ.ಕೆ.ಶಿವಕುಮಾರ್ ಅವರನ್ನು ರಾಜ್ಯ ಘಟಕದ ಅಧ್ಯಕ್ಷನನ್ನಾಗಿ ಮಾಡಿರುವ ಕಾಂಗ್ರೆಸ್‌ಗೆ ಬಿಜೆಪಿಯ ಬಗ್ಗೆ ಮಾತನಾಡುವ ನೈತಿಕತೆ ಇದೆಯೆ’ ಎಂದು ಬಿಜೆಪಿ ಪ್ರಶ್ನಿಸಿದೆ.

ಪಕ್ಷದ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಿಂದ ಶನಿವಾರ ಸರಣಿ ಟ್ವೀಟ್ ಮಾಡಿದ್ದು, ‘ಶಿವಕುಮಾರ್ ಅವರಿಂದ ಆರಂಭವಾಗುವ ಇವರ ಕ್ರೂರ ನಾಯಕರ ಪಟ್ಟಿ ಮೊನ್ನೆ ಮೊನ್ನೆ ಬಾರ್‌ನಲ್ಲಿ ಅಮಾಯಕರಿಗೆ ಹೊಡೆದ ಮರಿ ರೌಡಿ ಮೊಹಮ್ಮದ್ ನಲಪಾಡ್‌ವರೆಗೂ ಇದೆ’ ಎಂದಿದೆ.

‘ರೌಡಿಗಳು, ಕಳ್ಳರು, ಕೊಲೆಗಾರರು, ದರೋಡೆಕೋರರು, ಭ್ರಷ್ಟಾಚಾರಿಗಳೇ ನಾಯಕರಾಗಿರೋ ಕಾಂಗ್ರೆಸ್, ರೌಡಿ ರಾಜ್ಯದ ಬಗ್ಗೆ ಭಾಷಣ ಬಿಗಿಯುತ್ತಿರುವುದು, ಅಲ್ಲೆಲ್ಲೋ ಇರುವ ಅಲ್–ಖೈದಾದವನು ಶಾಂತಿಯ ಸಂದೇಶ ಸಾರಿದಂತೆ. ಭಯದಿಂದ ಅಣ್ಣಾ ಎಂದು ಕರೆಸಿಕೊಳ್ಳುವ ಡಿಕೆಶಿ ಪಟಾಲಮ್ಮಿನಿಂದ ಬಿಜೆಪಿಗೆ ಪಾಠ ಬೇಕಾಗಿಲ್ಲ’ ಎಂದು ಹೇಳಿದೆ.

‘ಅಪರಾಧ ಹಿನ್ನೆಲೆ: ಪ್ರವೇಶವಿಲ್ಲ’

ಬೆಂಗಳೂರು: ಅಪರಾಧ ಹಿನ್ನೆಲೆ ಇರುವವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ. ಈ ಬಗ್ಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಈಗಾಗಲೇ ಸ್ಪಷ್ಟನೆ ಕೊಟ್ಟಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು. ‘ಕಾಂಗ್ರೆಸ್‌ಗೆ ಕಾರ್ಯಸೂಚಿ ಇಲ್ಲ. ಅವರು ಆರೋಪ ಮಾಡುವುದರಲ್ಲೇ ಇರುತ್ತಾರೆ’ ಎಂದರು.


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

2047ರ ವೇಳೆಗೆ ಆತ್ಮನಿರ್ಭರ ಗುರಿ ಸಾಧನೆ: ನೌಕಾಪಡೆ ಮುಖ್ಯಸ್ಥ ಹರಿಕುಮಾರ್

ಚೀನಾ ಹಡಗುಗಳ ಕಾರ್ಯಾಚರಣೆ: ತೀವ್ರ ನಿಗಾ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) 4 ರಿಂದ 6 ಹಡಗುಗಳು ಹಾಗೂ ಚೀನಾದ ಇತರೆ ಸಣ್ಣಪುಟ್ಟ ಹಡಗುಗಳು ಹಿಂದೂ ಮಹಾಸಾಗರದಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಭಾರತೀಯ ನೌಕಾಪಡೆ ಅವುಗಳ ಮೇಲೆ ನಿಗಾ ಇರಿಸಿದೆ' ಎಂದು ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್.ಹರಿಕುಮಾರ್ ಅವರು ತಿಳಿಸಿದ್ದಾರೆ.


ಹರಿಕುಮಾರ್

ನೌಕಾ ದಿನದ ಹಿನ್ನೆಲೆಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಚೀನಾಗೆ ಸೇರಿದ ಕೆಲ ಸಂಶೋಧನಾ ಹಡಗುಗಳು ಹಾಗೂ ದೊಡ್ಡ ಸಂಖ್ಯೆಯ ಮೀನುಗಾರಿಕಾ ಹಡಗುಗಳು ಹಿಂದೂ ಮಹಾಸಾಗರದಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಇತರೆ ದೇಶಗಳ ಸುಮಾರು 60 ಹಡಗುಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಹಿಂದೂ ಮಹಾಸಾಗರವು ಬಹು ದೊಡ್ಡ ಕಾರ್ಯತಂತ್ರದ ಕಡಲ ಕ್ಷೇತ್ರವಾಗಿ ಹೊರಹೊಮ್ಮಿದೆ. ಎಲ್ಲಾ ಬೆಳವಣಿಗೆಗಳನ್ನೂ ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಭಾರತದ ಹಿತಾಸಕ್ತಿಗೆ ಧಕ್ಕೆ ಎದುರಾಗದಂತೆ ನೋಡಿಕೊಳ್ಳುತ್ತೇವೆ' ಎಂದಿದ್ದಾರೆ.

'ಕೇಂದ್ರ ಸರ್ಕಾರ ಆತ್ಮನಿರ್ಭರ ಭಾರತದ ಕುರಿತು ನಮಗೆ ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಿದೆ. 2047ರ ವೇಳೆಗೆ ಈ ಗುರಿ ಸಾಧಿಸುವುದಾಗಿ ನಾವು ಸರ್ಕಾರಕ್ಕೆ ಭರವಸೆ ನೀಡಿದ್ದು ಈ ದಿಸೆಯಲ್ಲಿ ಹಿಂದಿನ ಒಂದು ವರ್ಷದಲ್ಲಿ ಹಲವು ಕೆಲಸಗಳನ್ನು ಮಾಡಿದ್ದೇವೆ. ಯುದ್ಧವಿಮಾನ ವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್ ಅನ್ನು ನಿರ್ಮಾಣ ಮಾಡಿರುವುದು ಮಹತ್ವದ ಹೆಜ್ಜೆಯಾಗಿದೆ' ಎಂದಿದ್ದಾರೆ.

'ಅಮೆರಿಕದಿಂದ 'ಪ್ರಿಡೇಟರ್' ಡ್ರೋನ್ ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಒಟ್ಟು 30 ಶಸ್ತ್ರಸಜ್ಜಿತ ಎಂಕ್ಯೂ-9ಬಿ ಪ್ರಿಡೇಟರ್ ಡ್ರೋನ್‌ಗಳ ಖರೀದಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದಕ್ಕೆ ₹24,426 ಕೋಟಿಗೂ ಅಧಿಕ ಮೊತ್ತ ತಗುಲಲಿದೆ. ಚೀನಾಕ್ಕೆ ಹೊಂದಿಕೊಂಡಂತಿರುವ ಗಡಿ ಹಾಗೂ ಹಿಂದೂ ಮಹಾಸಾಗರ ಪ್ರದೇಶದ ಮೇಲೆ ಕಣ್ಣಾವಲು ಇಡುವುದಕ್ಕೆ ಈ ಡ್ರೋನ್‌ಗಳು ಸಹಕಾರಿಯಾಗಿವೆ' ಎಂದು ಹೇಳಿದ್ದಾರೆ.

'ಎಂಕ್ಯೂ-9ಬಿ ಡ್ರೋನ್, ಎಂಕ್ಯೂ-9 ರೀಪರ್ ಡ್ರೋನ್‌ನ ರೂಪಾಂತರಿಯಾಗಿದೆ. ಕರಾವಳಿ ಪ್ರದೇಶದ ಮೇಲೆ ಕಣ್ಣಾವಲು ಇಡುವ ಉದ್ದೇಶದಿಂದ ಭಾರತವು 2020ರಲ್ಲಿ ಒಂದು ವರ್ಷದ ಅವಧಿಗೆ ಎರಡು ಎಂಕ್ಯೂ-9ಬಿ ಡ್ರೋನ್‌ಗಳನ್ನು ಪಡೆದಿತ್ತು. ಈ ಡ್ರೋನ್‌ಗಳ ಗುತ್ತಿಗೆ ಅವಧಿಯನ್ನು ನೌಕಾಪಡೆ ವಿಸ್ತರಿಸಿದೆ.

'ಸದ್ಯ ನೌಕಾಪಡೆಯ 7 ರಿಂದ 8 ಶಾಖೆಗಳಲ್ಲಷ್ಟೇ ಮಹಿಳಾ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಮುಂದಿನ ವರ್ಷದಿಂದ ಎಲ್ಲಾ ವಿಭಾಗಗಳಲ್ಲೂ ಮಹಿಳಾ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಆಲೋಚನೆ ಇದೆ' ಎಂದಿದ್ದಾರೆ.

'200 ಹಡಗು ಹೊಂದುವ ಗುರಿ'

ಮುಂಬೈ: '2037ರ ವೇಳೆಗೆ ನೌಕಾಪಡೆಯು ಒಟ್ಟು 200 ಹಡಗುಗಳು ಹಾಗೂ ಸಬ್‌ಮರಿನ್‌ಗಳನ್ನು ಹೊಂದುವ ಗುರಿ ಇದೆ' ಎಂದು ವೆಸ್ಟರ್ನ್ ನೇವಲ್ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಆಗಿರುವ ವೈಸ್ ಅಡ್ಮಿರಲ್ ಅಜೇಂದ್ರ ಬಹದ್ದೂರ್ ಸಿಂಗ್ ಹೇಳಿದ್ದಾರೆ.

ಶನಿವಾರ ಇಲ್ಲಿ ಮಾತನಾಡಿದ ಅವರು,'2022–23ನೇ ಸಾಲಿನ ಸಮುದ್ರಯಾನ ಸಾಮರ್ಥ್ಯ ದೃಷ್ಟಿಕೋನ ಯೋಜನೆಯು (ಎಂಸಿಪಿಪಿ) ಈಗಿರುವ ಯಂತ್ರಗಳನ್ನು ನವೀಕರಿಸುವ ಹಾಗೂ ಹೊಸ ಹಾರ್ಡ್‌ವೇರ್‌ಗಳನ್ನು ಖರೀದಿಸುವ ಗುರಿ ಹೊಂದಿದೆ. ಸದ್ಯ ನೌಕಾಪಡೆಯು 130 ಹಡಗು ಹಾಗೂ ಸಬ್‌ಮರಿನ್‌ಗಳನ್ನು ಹೊಂದಿದೆ. ಇದನ್ನು 200ಕ್ಕೆ ಹೆಚ್ಚಿಸುವುದೂ ಎಂಸಿಪಿಪಿಯ ಗುರಿಯಾಗಿದೆ' ಎಂದಿದ್ದಾರೆ.

ಗೋಧ್ರಾ ಗಲಭೆ: ಅಪರಾಧಿಗಳ ಜಾಮೀನು ಅರ್ಜಿ ಪ್ರಶ್ನಿಸಿದ ಗುಜರಾತ್ ಸರ್ಕಾರ

ನವದೆಹಲಿ (ಪಿಟಿಐ): ಗೋಧ್ರಾದಲ್ಲಿ 2002ರಲ್ಲಿ ಸಬರಮತಿ ರೈಲಿಗೆ ಬೆಂಕಿ ಹಚ್ಚಿದ್ದ ಪ್ರಕರಣದ ಅಪರಾಧಿಗಳ ಪೈಕಿ ಕೆಲವರು ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನು ಅರ್ಜಿ ಸಲ್ಲಿಸಿರುವುದಕ್ಕೆ ಗುಜರಾತ್ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಶುಕ್ರವಾರ ಈ ಕುರಿತ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು, 'ಅಪರಾಧಿಗಳು ಈಗಾಗಲೇ 17 ರಿಂದ 18 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದಾರೆ. ಹೀಗಾಗಿ ಅವರ ಜಾಮೀನು ಅರ್ಜಿ ಪರಿಗಣಿಸಬಹುದು' ಎಂದು ಹೇಳಿತು.


'ಪ್ರಕರಣದಲ್ಲಿ ಪ್ರತಿಯೊಬ್ಬ ಅಪರಾಧಿಯ ಪಾತ್ರವೇನು ಎಂಬುದನ್ನು ಸ್ಪಷ್ಟಪಡಿಸಿ' ಎಂದೂ ಗುಜರಾತ್ ಸರ್ಕಾರಕ್ಕೆ ಸೂಚಿಸಿತು.

ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಅಪರಾಧಿಗಳು ಕೇವಲ ಕಲ್ಲು ತೂರಾಟಗಾರರಾಗಿರಲಿಲ್ಲ. ಹೊತ್ತಿ ಉರಿಯುತ್ತಿದ್ದ ರೈಲಿನ ಬೋಗಿಯಿಂದ ಪ್ರಯಾಣಿಕರು ತಪ್ಪಿಸಿಕೊಳ್ಳದಂತೆ ತಡೆಯುವುದು ಅವರ ಉದ್ದೇಶವಾಗಿತ್ತು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಪ್ರಕರಣದಲ್ಲಿ ಪ್ರತಿಯೊಬ್ಬ ಅಪರಾಧಿಯ ಪಾತ್ರವೇನು ಎಂಬುದನ್ನು ಪರಿಶೀಲಿಸಿ ಈ ಕುರಿತ ಮಾಹಿತಿಯನ್ನು ನ್ಯಾಯಾಪೀಠಕ್ಕೆ ಸಲ್ಲಿಸುತ್ತೇನೆ' ಎಂದು ಹೇಳಿದರು.

ನ್ಯಾಯಾಲಯವು ಪ್ರಕರಣದ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

ಉಮರ್ ಖಾಲಿದ್, ಸೈಫಿ ಬಿಡುಗಡೆ


ಉಮರ್ ಖಾಲಿದ್

2020ರಲ್ಲಿ ದೆಹಲಿಯಲ್ಲಿ ನಡೆದಿದ್ದ ಗಲಭೆಗೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಜೆಎನ್‌ಯು ವಿದ್ಯಾರ್ಥಿ ಉಮರ್ ಖಾಲಿದ್ ಮತ್ತು 'ಯುನೈಟೆಡ್ ಅಗೈನ್ಸ್ಟ್ ಹೇಟ್' ಸಂಸ್ಥಾಪಕ ಖಾಲಿದ್ ಸೈಫಿ ಅವರನ್ನು ಇಲ್ಲಿಯ ಕೋರ್ಟ್ ಒಂದು ಖುಲಾಸೆಗೊಳಿಸಿದೆ.

ಉಮರ್ ಮತ್ತು ಸೈಫಿ ಅವರನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಪುಲಸ್ತ್ಯ ಪ್ರಾಮಾಚಲ ಅವರು ದೆಹಲಿ ಗಲಭೆ ಮೊಕದ್ದಮೆಯಿಂದ ಬಿಡುಗಡೆಗೊಳಿಸಿದ್ದಾರೆ ಎಂದು ವಿಶೇಷ ಸರ್ಕಾರಿ ವಕೀಲ ಮಧುಕರ್ ಪಾಂಡೆ ದೃಢಪಡಿಸಿದರು. ಆದರೆ ಈ ಆದೇಶದಲ್ಲಿ ಏನು ಹೇಳಲಾಗಿದೆ ಎಂಬ ಸಂಪೂರ್ಣ ಮಾಹಿತಿಯನ್ನು ಅವರು ನೀಡಿಲ್ಲ.

ಗಲಭೆ ವೇಳೆ ಮೈನ್ ಕರಾವಲ್ ನಗರ ರಸ್ತೆಯಲ್ಲಿ ಗುಂಪೊಂದು ಕಲ್ಲು ತೂರಾಟ ನಡೆಸುತ್ತಿತ್ತು ಎಂದು ಪೊಲೀಸ್ ಕಾನ್‌ಸ್ಟೆಬಲ್ ಸಂಗ್ರಾಮ್ ಸಿಂಗ್ ಎಂಬುವವರು ನೀಡಿದ್ದ ಹೇಳಿಕೆ ಆಧರಿಸಿ ಉಮರ್, ಸೈಫಿ ಸೇರಿ ಹಲವರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಇದಕ್ಕೆ ಸಂಬಂಧಿಸಿದ ತನಿಖೆಯನ್ನು ಬಳಿಕ ಕ್ರೈಂ ಬ್ರಾಂಚ್‌ಗೆ ವರ್ಗಾಯಿಸಲಾಗಿತ್ತು.

'ದೇಗುಲಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸಿ'

ಮದುರೈ (ಪಿಟಿಐ): 'ಪರಿಶುದ್ಧತೆ ಹಾಗೂ ಪಾವಿತ್ರ್ಯತೆ ಕಾಪಾಡುವ ಉದ್ದೇಶದಿಂದ ರಾಜ್ಯದ ಎಲ್ಲಾ ದೇಗುಲಗಳಲ್ಲೂ ಮೊಬೈಲ್ ಬಳಕೆ ನಿಷೇಧಿಸಬೇಕು. ಇದನ್ನು ಕಡ್ಡಾಯವಾಗಿ ಕಾರ್ಯಗತಗೊಳಿಸಬೇಕು' ಎಂದು ಮದ್ರಾಸ್ ಹೈಕೋರ್ಟ್ ತಮಿಳುನಾಡು ಸರ್ಕಾರಕ್ಕೆ ಕಟ್ಟುನಿಟ್ಟಾಗಿ ಆದೇಶಿಸಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಆರ್.ಮಹಾದೇವನ್ ಮತ್ತು ಜೆ.ಸತ್ಯನಾರಾಯಣ ಪ್ರಸಾದ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಶುಕ್ರವಾರ ಈ ಸಂಬಂಧ ಸೂಚನೆ ನೀಡಿದೆ.



ತೂತ್ತುಕುಡಿ ಜಿಲ್ಲೆಯ ತಿರುಚೆಂಡೂರ್‌ನಲ್ಲಿರುವ ಪ್ರಸಿದ್ಧ ಅರುಳ್‌ಮಿಗು ಸುಬ್ರಮಣ್ಯಸ್ವಾಮಿ ದೇವಸ್ಥಾನದಲ್ಲಿ ಮೊಬೈಲ್ ಬಳಕೆ ನಿಷೇಧಿಸುವುದಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿ ಕ್ರಮ ಕೈಗೊಳ್ಳಲು ದೇವಸ್ಥಾನದ ಆಡಳಿತಕ್ಕೆ ಸೂಚನೆ ನೀಡಬೇಕು ಎಂದು ಎಂ.ಸೀತಾರಾಮನ್ ಎಂಬುವರು ಪಿಐಎಲ್‌ನಲ್ಲಿ ಆಗ್ರಹಿಸಿದ್ದರು.

'ಸುಬ್ರಹ್ಮಣ್ಯಸ್ವಾಮಿಯ ನೆಲೆಯಾಗಿರುವ ಈ ದೇಗುಲ ಪುರಾತನ ಕಾಲದ್ದಾಗಿದೆ. ಇಲ್ಲಿ ಉಚಿತ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ದೇವಸ್ಥಾನಕ್ಕೆ ಬರುವ ಭಕ್ತರು ತಮ್ಮ ಮೊಬೈಲ್‌ಗಳಲ್ಲಿ ಫೋಟೊ ಕ್ಲಿಕ್ಕಿಸಿಕೊಳ್ಳಲು ಹಾಗೂ ವಿಡಿಯೊ ಮಾಡಲು ಮುಂದಾಗುವುದರಿಂದ ದೀಪಾರತಿ, ಪೂಜೆ ಹಾಗೂ ಇತರೆ ಆಚರಣೆಗಳಿಗೆ ಅಡಚಣೆ ಉಂಟಾಗುತ್ತಿದೆ. ಫೋಟೊ ಕ್ಲಿಕ್ಕಿಸಿಕೊಳ್ಳುವ ಹಾಗೂ ವಿಡಿಯೊ ಚಿತ್ರೀಕರಿಸುವವರ ಮೇಲೆ ದೇವಸ್ಥಾನದ ಆಡಳಿತ ಯಾವುದೇ ನಿರ್ಬಂಧ ಹೇರಿಲ್ಲ' ಎಂದು ಅರ್ಜಿಯಲ್ಲಿ ದೂರಿದ್ದಾರೆ.

'ಬೆಲೆಬಾಳುವ ವಿಗ್ರಹಗಳ ಫೋಟೊಗಳನ್ನು ಕ್ಲಿಕ್ಕಿಸಿಕೊಳ್ಳುವುದು 'ಆಗಮ' ನಿಯಮಕ್ಕೆ ವಿರುದ್ಧವಾದುದಾಗಿದೆ. ಇದರಿಂದ ದೇವಸ್ಥಾನದ ಭದ್ರತೆ ಹಾಗೂ ಅದರೊಳಗಿರುವ ಬೆಲೆಬಾಳುವ ವಸ್ತುಗಳಿಗೂ ಅಪಾಯ ಎದುರಾಗುತ್ತದೆ' ಎಂದೂ ತಿಳಿಸಿದ್ದಾರೆ.

'ಕೆಲವರು ದೇವಸ್ಥಾನಕ್ಕೆ ಬರುವ ಮಹಿಳೆಯರ ಫೋಟೊಗಳನ್ನು ಅವರ ಅನುಮತಿ ಇಲ್ಲದೆಯೇ ತಮ್ಮ ಮೊಬೈಲ್‌ಗಳಲ್ಲಿ ಸೆರೆಹಿಡಿದುಕೊಳ್ಳುತ್ತಾರೆ. ಆ ಚಿತ್ರಗಳನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದೆ' ಎಂದೂ ಅರ್ಜಿಯಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

'ಪೂಜಾರಿಗಳು, ಭಕ್ತರು ಹಾಗೂ ಸಾರ್ವಜನಿಕರು ದೇವಸ್ಥಾನದೊಳಗೆ ಮೊಬೈಲ್ ಬಳಕೆ ಮಾಡುವುದನ್ನು ತಡೆಯಲು ಈಗಾಗಲೇ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರ ಮೇಲ್ವಿಚಾರಣೆಗೆ ತಂಡಗಳನ್ನೂ ರಚಿಸಲಾಗಿದೆ. ಭಕ್ತರು ತಮ್ಮ ಮೊಬೈಲ್‌ಗಳನ್ನು ಇಡಲು ಅನುವಾಗುವಂತೆ ಭದ್ರತಾ ಕೌಂಟರ್‌ಗಳನ್ನೂ ತೆರೆಯಲಾಗಿದೆ' ಎಂದು ಪ್ರತಿವಾದಿಗಳು ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

'ಮೊಬೈಲ್ ಬಳಕೆ ನಿಷೇಧಿಸುವ ಹಾಗೂ ವಸ್ತ್ರಸಂಹಿತೆ ರೂಪಿಸುವ ನಿಟ್ಟಿನಲ್ಲಿ ಈಗಾಗಲೇ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಎರಡನೇ ಪ್ರತಿವಾದಿಗಳು (ಕಾರ್ಯನಿರ್ವಹಣಾ ಅಧಿಕಾರಿ/ಜಂಟಿ ಆಯುಕ್ತರು) ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಅವರು ಸಲ್ಲಿಸಿರುವ ಪತ್ರದಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಜಾರಿಗೊಳಿಸುವಂತೆ ನಾವು ಸೂಚಿಸುತ್ತಿದ್ದೇವೆ. ಈ ಪತ್ರವನ್ನು ಅಂಗೀಕರಿಸುವಂತೆ ತೂತ್ತುಕುಡಿಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ನಿರ್ದೇಶಿಸುತ್ತಿದ್ದೇವೆ' ಎಂದು ನ್ಯಾಯಪೀಠ ಹೇಳಿದೆ.

'ರಾಜ್ಯದಲ್ಲಿರುವ ದೇವಸ್ಥಾನಗಳ ಪಾವಿತ್ರ್ಯತೆ ಹಾಗೂ ಪರಿಶುದ್ಧತೆ ಕಾಪಾಡುವ ನಿಟ್ಟಿನಲ್ಲಿ ಪತ್ರದಲ್ಲಿ ಉಲ್ಲೇಖಿಸಲಾಗಿರುವ ಎಲ್ಲಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಿಗೆ ನಿರ್ದೇಶನ ನೀಡುತ್ತಿದ್ದೇವೆ' ಎಂದೂ ತಿಳಿಸಿದೆ.

'ದೇವಸ್ಥಾನಗಳು ಶ್ರೇಷ್ಠ ಸಂಸ್ಥೆಗಳು. ಇವು ಸಾಂಪ್ರದಾಯಿಕವಾಗಿ ಪ್ರತಿಯೊಬ್ಬರ ಬದುಕಿನ ಕೇಂದ್ರಗಳಾಗಿವೆ. ಇವು ಪೂಜಾಸ್ಥಳಗಳಷ್ಟೇ ಅಲ್ಲ, ಜನರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಇವು ಜೀವಂತ ಸಂಪ್ರದಾಯಗಳಾಗಿದ್ದು, ಈಗಲೂ ಲಕ್ಷಾಂತರ ಭಕ್ತರನ್ನು ಸೆಳೆಯುತ್ತಿವೆ' ಎಂದೂ ಹೇಳಿದೆ.


ತರಣ್‌ಜಿತ್ ಸಿಂಗ್ ಸಂಧು ಅವರು ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಸುಂದರ್ ಪಿಚೈ ಅವರಿಗೆ ಪದ್ಮಭೂಷಣ ಗೌರವ ಪ್ರದಾನ ಮಾಡಿದರು–ಪಿಟಿಐ ಚಿತ್ರ

ಪದ್ಮಭೂಷಣ ಗೌರವ ಸ್ವೀಕರಿಸಿದ ಸುಂದರ್ ಪಿಚೈ

ವಾಷಿಂಗ್ಟನ್ (ಪಿಟಿಐ): ಗೂಗಲ್ ಸಿಇಒ ಸುಂದರ್ ಪಿಚೈ ಅವರು ಶುಕ್ರವಾರ ಪದ್ಮಭೂಷಣ ಗೌರವ ಸ್ವೀಕರಿಸಿದ್ದಾರೆ.

ವ್ಯಾಪಾರ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಪರಿಗಣಿಸಿ ಕೇಂದ್ರ ಸರ್ಕಾರವು ಪಿಚೈ ಅವರನ್ನು ಈ ಸಾಲಿನ ಪುರಸ್ಕಾರಕ್ಕೆ ಆಯ್ಕೆ ಮಾಡಿತ್ತು. ಅಮೆರಿಕದಲ್ಲಿರುವ ಭಾರತದ ರಾಯಭಾರಿ ತರಣ್‌ಜಿತ್ ಸಿಂಗ್ ಸಂಧು ಅವರು ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಪಿಚೈ ಅವರಿಗೆ ಗೌರವ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಸುಂದರ್ ಪಿಚೈ,'ನಾನು ಭಾರತೀಯ. ಎಲ್ಲಿಗೆ ಹೋದರೂ ಭಾರತೀಯತೆ ನನ್ನ ಜೊತೆಯಲ್ಲೇ ಇರುತ್ತದೆ' ಎಂದರು.

'ಭಾರತ ಸರ್ಕಾರ ಮತ್ತು ದೇಶದ ನಾಗರಿಕರಿಗೆ ಆಭಾರಿಯಾಗಿದ್ದೇನೆ. ನನ್ನನ್ನು ದೊಡ್ಡ ಸಾಧಕನನ್ನಾಗಿ ರೂಪಿಸಿದ ದೇಶವು ಅತ್ಯುನ್ನತ ಪುರಸ್ಕಾರ ನೀಡಿ ಗೌರವಿಸಿರುವುದು ಅರ್ಥಪೂರ್ಣವಾಗಿದೆ' ಎಂದು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಸುಂದರ್ ಪಿಚೈ ಅವರ ಕುಟುಂಬದ ಸದಸ್ಯರು ಭಾಗವಹಿಸಿದ್ದರು. ಸುಂದರ್ ಅವರು ಮದುರೈಯಲ್ಲಿ ಜನಿಸಿದ್ದರು.

ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘಿಸುವ ರಾಷ್ಟ್ರಗಳ ಪಟ್ಟಿಗೆ ಪಾಕ್

ವಾಷಿಂಗ್ಟನ್ (ಪಿಟಿಐ): ಅಮೆರಿಕವು ಪಾಕಿಸ್ತಾನ, ಚೀನಾ, ಮ್ಯಾನ್ಮಾರ್ ಸೇರಿದಂತೆ ಒಟ್ಟು 12 ರಾಷ್ಟ್ರಗಳನ್ನು ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘಿಸುವ ದೇಶಗಳ ಪಟ್ಟಿಗೆ ಸೇರ್ಪಡೆ ಮಾಡಿದೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಶುಕ್ರವಾರ ಈ ವಿಷಯವನ್ನು ಪ್ರಕಟಿಸಿದ್ದಾರೆ.

'ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ತಮ್ಮ ನಂಬಿಕೆಗಳ ಕಾರಣದಿಂದಾಗಿ ವ್ಯಕ್ತಿಗಳಿಗೆ ಕಿರುಕುಳ ನೀಡುವ, ಬೆದರಿಸುವ, ಜೈಲಿಗೆ ಹಾಕುವ, ಕೊನೆಗೆ ಕೊಲೆ ಮಾಡುವ ಕೆಲಸವನ್ನೂ ಮಾಡುತ್ತಿವೆ' ಎಂದು ಅವರು ತಿಳಿಸಿದ್ದಾರೆ.

ಜಾವಾದಲ್ಲಿ ಭೂಕಂಪ

ಜಕಾರ್ತ (ಎಪಿ): ಇಂಡೊನೇಷ್ಯಾದ ಜಾವಾ ದ್ವೀಪದ ಪ್ರಮುಖ ಪ್ರದೇಶಗಳಲ್ಲಿ ಶನಿವಾರ ಭೂಮಿ ಕಂಪಿಸಿದ್ದು, ಜನರು ಭಯಭೀತರಾಗಿ ಮನೆಯಿಂದ ಹೊರಬಂದಿದ್ದಾರೆ. ತಕ್ಷಣದ ಮಾಹಿತಿಯ ಪ್ರಕಾರ ಯಾವುದೇ ಅವಘಡ ಸಂಭವಿಸಿಲ್ಲ. ಜೊತೆಗೆ ಸುನಾಮಿಯ ಅಪಾಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಎನ್‌ಜೆಎಸಿ ರದ್ದಾದ ದಿನ ಸಂಸತ್ತಿನಲ್ಲಿ ಸದ್ದೇ ಕೇಳಲಿಲ್ಲ'

ನವದೆಹಲಿ(ಪಿಟಿಐ): ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾಯ್ದೆಯನ್ನು(ಎನ್‌ಜೆಎಸಿ) ಸುಪ್ರಿಂ ಕೋರ್ಟ್ ರದ್ದುಗೊಳಿಸಿದ ಬಳಿಕ ಲೋಕಸಭೆಯಲ್ಲಿ 'ಸದ್ದೇ ಕೇಳಲಿಲ್ಲ' ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ಶುಕ್ರವಾರ ಹೇಳಿದರು.

ಎಲ್.ಎಂ ಸಂಘ್ವಿ ಸ್ಮರಣಾರ್ಥ ಉಪನ್ಯಾಸದಲ್ಲಿ ಭಾಗವಹಿಸಿದ್ದ ಧನಕರ್ ಅವರು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಸಮ್ಮುಖದಲ್ಲಿ ಈ ಹೇಳಿಕೆ ನೀಡಿದರು.

ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾಯ್ದೆಯ ರದ್ದತಿಯನ್ನು ಗಂಭೀರ ವಿಚಾರ ಎಂದು ಕರೆದ ಅವರು, ಸಂಸತ್ತಿನಲ್ಲಿ ಜಾರಿಯಾಗುವ ಕಾನೂನುಗಳು ಜನರ ಇಚ್ಛೆಯನ್ನು ಪ್ರತಿಬಿಂಬಿಸುತ್ತವೆ. ಜನರ ಇಚ್ಛೆಯನ್ನು ಸುಪ್ರೀಂ ಕೋರ್ಟ್ ಅಲ್ಲಗಳೆದಿದೆ. ಈ ರೀತಿಯ ಮತ್ತೊಂದು ನಿದರ್ಶನ ಪ್ರಪಂಚದಲ್ಲಿ ಇನ್ನೊಂದಿಲ್ಲ ಎಂದು ಹೇಳಿದರು.

ಎನ್‌ಜೆಎಸಿ ರದ್ದುಗೊಳಿಸಿ ಸುಪ್ರಿಂ ಕೋರ್ಟ್ 2015ರಲ್ಲಿ ಆದೇಶ ನೀಡಿತ್ತು.

ಎಂಸಿಡಿ ಮತದಾನ ಇಂದು

ನವದೆಹಲಿ: ದೆಹಲಿ ಮಹಾನಗರ ಪಾಲಿಕೆಯ (ಎಂಸಿಡಿ) 250 ವಾರ್ಡ್‌ಗಳಿಗೆ ಭಾನುವಾರ ಮತದಾನ ನಡೆಯಲಿದ್ದು, ಬಿಗಿ ಭದ್ರತೆ ಏರ್ಪಡಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

40 ಸಾವಿರ ಪೊಲೀಸರನ್ನು, 20 ಸಾವಿರ ಗೃಹರಕ್ಷಕರನ್ನು ಮತ್ತು ಅರೆಸೇನಾ ಪಡೆಯ 108 ಕಂಪನಿಗಳನ್ನು ಹಾಗೂ ರಾಜ್ಯ ಸಶಸ್ತ್ರ ಪೊಲೀಸ್ ಪಡೆಯನ್ನೂ ಭದ್ರತೆಗಾಗಿ ನಿಯೋಜಿಸಲಾಗಿದೆ ಎಂದಿದ್ದಾರೆ.

ಸೂಕ್ಷ್ಮ ಪ್ರದೇಶಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಕಣ್ಗಾವಲಿಗಾಗಿ 60 ಡ್ರೋನ್‌ಗಳನ್ನು ಬಳಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಶಾಂತಿ ಸಮಿತಿ ಸದಸ್ಯರ ಜೊತೆ ಸಹಾಯಕ ಪೊಲೀಸ್ ಆಯುಕ್ತರು ಸಭೆ ನಡೆಸಿದ್ದಾರೆ ಎಂದಿದ್ದಾರೆ. ವಿದ್ಯುನ್ಮಾನ ಮತ ಯಂತ್ರಗಳನ್ನು (ಇವಿಎಂ) ಇರಿಸಿರುವ ಭದ್ರತಾ ಕೊಠಡಿಗಳು, ಮತದಾನ ಕೇಂದ್ರಗಳು ಹಾಗೂ ಮತಎಣಿಕೆ ಕೇಂದ್ರಗಳ ಮೇಲೆ ಪೊಲೀಸರು ನಿಗಾ ಇರಿಸಿದ್ದಾರೆ ಎಂದೂ ಮಾಹಿತಿ ನೀಡಿದ್ದಾರೆ. ಡಿಸೆಂಬರ್ 7ರಂದು ಮತಎಣಿಕೆ ನಡೆಯಲಿದೆ.

ಎಂಸಿಡಿ ಚುನಾವಣೆಯಲ್ಲಿ 1.45 ಕೋಟಿಗೂ ಅಧಿಕ ಮತದಾರರು ತಮ್ಮ ಹಕ್ಕು ಚಲಾಯಿಸಲು ಅರ್ಹರಾಗಿದ್ದಾರೆ. 1,349 ಅಭ್ಯರ್ಥಿಗಳು ಕಣದಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ಪ್ರಾಧ್ಯಾಪಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ವಿದೇಶಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಇಲ್ಲಿನ ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಪ್ರಾಧ್ಯಾಪಕ ರವಿ ರಂಜನ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದರು.

ಮಹಿಳೆಯ ಘನತೆಗೆ ಧಕ್ಕೆ ತಂದ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಆರೋಪಿಯು ಶುಕ್ರವಾರ ಸಂಜೆ ತಮ್ಮ ಮನೆಗೆ ವಿದ್ಯಾರ್ಥಿನಿಯನ್ನು ಕರೆದು ಚುಂಬಿಸಿ, ತಬ್ಬಿಕೊಳ್ಳಲು ಯತ್ನಿಸಿದ್ದರು ಎಂದು ಆರೋಪಿಸಲಾಗಿದೆ ಎಂದು ಹೇಳಿದರು.

'ವಿದ್ಯಾರ್ಥಿನಿ ಥಾಯ್ಲೆಂಡ್ ಮೂಲದವರು. ಅವರಿಗೆ ಇಂಗ್ಲಿಷ್ ಅಥವಾ ಹಿಂದಿ ಭಾಷೆ ಗೊತ್ತಿಲ್ಲ. ಹೀಗಾಗಿ ಅನುವಾದಕರ ನೆರವಿನಿಂದ ವಿದ್ಯಾರ್ಥಿನಿ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ರವಿ ರಂಜನ್ ಅವರ ದುಷ್ಕೃತ್ಯವನ್ನು ಖಂಡಿಸಿರುವ ವಿಶ್ವವಿದ್ಯಾಲಯದ ಅಧಿಕಾರಿಗಳು, ಅವರನ್ನು ಅಮಾನತುಗೊಳಿಸಿದ್ದಾರೆ.

ವಿದ್ಯಾರ್ಥಿನಿಗೆ ಕಿರುಕುಳ ನೀಡಿರುವ ವಿಚಾರವನ್ನು ಶುಕ್ರವಾರ ರಾತ್ರಿಯೇ ವಿಶ್ವವಿದ್ಯಾಲಯದ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ಅವರು ಸೂಕ್ತವಾಗಿ ಸ್ಪಂದಿಸಿಲ್ಲ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಆಕೆಗೆ ರಕ್ಷಣೆ ನೀಡಬೇಕೆಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ.

ಗೀತೆ: ಜೀವನಸಂಗ್ರಾಮದ ಕೈಪಿಡಿ

● ಎಸ್. ಸೂರ್ಯಪ್ರಕಾಶ ಪಂಡಿತ್



ಇಂದು ಗೀತಾ ಜಯಂತಿ

ಸನಾತನಧರ್ಮವು ಯಾವುದೇ ಒಂದು ನಿರ್ದಿಷ್ಟ ಗ್ರಂಥದ ವಿಚಾರಗಳ ಆಧಾರದ ಮೇಲೆ ನಿಂತಿಲ್ಲ; ಹೀಗೆಯೇ ಒಬ್ಬ ವ್ಯಕ್ತಿಯ ಜೀವನ–ದರ್ಶನಗಳ ಮೇಲೂ ನಿಂತಿಲ್ಲ. ಎಷ್ಟೋ ಸಾವಿರಾರು ವರ್ಷಗಳಿಂದ ಈ ಧರ್ಮ ಹಲವು ನೆಲೆಗಳಲ್ಲಿ, ಆಯಾಮಗಳಲ್ಲಿ ಅರಳುತ್ತಬಂದಿದೆ. ಹೀಗಿದ್ದರೂ ಆಗಾಗ ಭಗವದ್ಗೀತೆಯನ್ನು ಸನಾತನಧರ್ಮದ ಮೂಲಗ್ರಂಥ ಎಂಬಂತೆ ಕೆಲವರು ಅಭಿಪ್ರಾಯಿಸುವುದೂ ಉಂಟು. ಹೀಗೆ ಒಂದು ಗ್ರಂಥವನ್ನು ಸನಾತನಧರ್ಮದ ಮೂಲಗ್ರಂಥವನ್ನಾಗಿ ಕರೆಯುವುದು ಎಷ್ಟು ಸರಿಯಾದೀತು ಎಂಬ ತಾತ್ತ್ವಿಕ ಜಿಜ್ಞಾಸೆ ಸದ್ಯದ ನಮ್ಮ ಉದ್ದೇಶವಲ್ಲ; ಆದರೆ ತುಂಬ ಸಂಕೀರ್ಣವೂ ವಿಶಾಲವೂ ವಿಶಿಷ್ಟವೂ ಎನಿಸಿರುವ ಪ್ರಾಚೀನ ಸನಾತನಧರ್ಮದ ವಾರಸಿಕೆಯ ಸಂದರ್ಭದಲ್ಲಿ ಭಗವದ್ಗೀತೆಯ ಹೆಸರು ಮುನ್ನೆಲೆಗೆ ಬರುತ್ತಿದೆ ಎಂಬುದು ಗಮನಾರ್ಹ.

ಸನಾತನಧರ್ಮ ಪ್ರತಿಪಾದಿಸುವ ಪ್ರಧಾನ ಜೀವನಮೌಲ್ಯಗಳನ್ನು ಭಗವದ್ಗೀತೆ ತುಂಬ ಸಮರ್ಥವಾಗಿ ಎತ್ತಿಹಿಡಿಯುತ್ತದೆ ಎಂಬುದು ನಿರ್ವಿವಾದ. ಹೀಗಾಗಿಯೇ ಸನಾತನಧರ್ಮದ ಮೂಲತತ್ತ್ವಗಳ ನಿರೂಪಣೆಯ ಸಂದರ್ಭದಲ್ಲಿ ಭಗವದ್ಗೀತೆಯ ಉಲ್ಲೇಖಗಳು ಸಹಜವಾಗಿಯೇ ಕಾಣಿಸಿಕೊಳ್ಳುತ್ತವೆ. ಪ್ರಾಯಶಃ ಇದೇ ಕಾರಣದಿಂದಲೇ ಈ ಗ್ರಂಥದ ಹೆಸರಿನಲ್ಲಿಯೇ ಜಯಂತಿಯೊಂದನ್ನು ಸನಾತನಧರ್ಮದ ಸಂಸ್ಕೃತಿ ಸೃಷ್ಟಿಸಿಕೊಂಡಿರುವುದು ಉಚಿತವಾಗಿದೆಯೆನ್ನಬಹುದು.

ಪ್ರತಿವರ್ಷವೂ ನಮ್ಮ ದೇಶದಲ್ಲಿ 'ಗೀತಾಜಯಂತಿ'ಯನ್ನು ಭಗವದ್ಗೀತೆಯ ಹೆಸರಿನಲ್ಲಿ ಉತ್ಸವವನ್ನಾಗಿ ಆಚರಿಸಿಕೊಂಡುಬರುತ್ತಿದ್ದೇವೆ. ಈ ಸಂದರ್ಭದಲ್ಲಿ ಭಗದ್ಗೀತೆಯ ಪ್ರಸ್ತುತತೆಯ ಬಗ್ಗೆ ನಾವು ಮೆಲುಕು ಹಾಕಬಹುದು.

ಇಲ್ಲೊಂದು ಸ್ವಾರಸ್ಯವುಂಟು. ಭಗವದ್ಗೀತೆ ತಾನೇ ಒಂದು ಸ್ವತಂತ್ರ ಗ್ರಂಥವಲ್ಲ; ಇದು ಮಹಾಭಾರತ ಎಂಬ ಇತಿಹಾಸಮಹಾಕಾವ್ಯದ ಒಂದು ಸಣ್ಣ ಭಾಗವಷ್ಟೆ. ಆದರೆ ಇದು ನಮ್ಮ ಸಂಸ್ಕೃತಿಯಲ್ಲಿ ಪಡೆದುಕೊಂಡ ಸ್ಥಾನ ಒಂದು ಸ್ವತಂತ್ರ ಗ್ರಂಥಕ್ಕಿಂತಲೂ ಹೆಚ್ಚಿನದು. ಇಂಥದೊಂದು ಅರ್ಹತೆ ಹೇಗೆ ಈ 'ಸಣ್ಣ' ಕೃತಿಗೆ ಒದಗಿತು ಎಂಬುದರ ಅವಲೋಕನವೇ ನಮ್ಮ ಸಂಸ್ಕೃತಿಯ ಹಲವು ಆಯಾಮಗಳನ್ನು ನಮ್ಮೆದುರಿಗೆ ಅನಾವರಣಮಾಡುತ್ತದೆ. ಗೀತೆಯು ಮಹಾಭಾರತದಲ್ಲಿ ಯಾವ ಸಂದರ್ಭದಲ್ಲಿ ಕಾಣಿಸಿಕೊಂಡದ್ದು? ಯುದ್ಧಭೂಮಿಯಲ್ಲಿ ತಾನೆ! ಹೀಗೆ ಯುದ್ಧಭೂಮಿಯಲ್ಲಿ ಕಾಣಿಸಿಕೊಂಡ, ಅದೂ ಯುದ್ಧವನ್ನು ಮಾಡುವಂತೆ ಮನಸ್ಸನ್ನು ಸಿದ್ಧಗೊಳಿಸಿದ 'ಯುದ್ಧಸಂಹಿತೆ'ಯೊಂದನ್ನು ನಮ್ಮ ಜೀವನಕ್ಕೆ ಒದಗುವ ಮೌಲ್ಯಸಂಹಿತೆಯನ್ನಾಗಿ ಸ್ವೀಕರಿಸಿದ ನಮ್ಮ ಸಂಸ್ಕೃತಿಯ ಮಾನಸಿಕತೆ ತುಂಬ ವಿಶಿಷ್ಟವಾದುದು ಎಂಬುದರಲ್ಲಿ ಎರಡು ಮಾತಿಲ್ಲ. ಮಹಾಭಾರತದ ಯುದ್ಧ ಹದಿನೆಂಟು ದಿನಗಳಲ್ಲಿ ಮುಕ್ತಾಯವಾಯಿತು, ದಿಟ. ಆದರೆ ನಮ್ಮ ಜೀವನ ಎಂಬ 'ಭಾರತಯುದ್ಧ' ಹೀಗೆ ಹದಿನೆಂಟು ದಿನಗಳಲ್ಲಿ ಮುಕ್ತಾಯವಾಗುವಂಥದ್ದಲ್ಲ. ಯುದ್ಧದ ಜಯಕ್ಕೆ ಅತ್ಯಂತ ಮುಖ್ಯವಾಗಿರುವುದು ಏನು? ನಮ್ಮ ಬಲ, ಸೈನ್ಯ, ತಂತ್ರ – ಹೀಗೆ ಏನೇನನ್ನೋ ನಾವಿಲ್ಲಿ ಕಲ್ಪಿಸಿಕೊಳ್ಳಲಾದೀತು. ಇವೆಲ್ಲವೂ ಬೇಕು, ದಿಟ. ಆದರೆ ಇವೆಲ್ಲಕ್ಕೂ ಮುಖ್ಯವಾಗಿ ಬೇಕಾಗಿರುವುದು ಸದಾ ಎಚ್ಚರವಾಗಿರಬೇಕಾದ ನಮ್ಮ ಅರಿವು: ನಾವು ಯುದ್ಧಭೂಮಿಯಲ್ಲಿದ್ದೇವೆ ಎಂಬ ಅರಿವು. ಹೀಗಾಗಿ ಗೀತೆಯ ಸ್ಮರಣೆ ಎಂದರೆ ಜೀವನಸಂಗ್ರಾಮದ ನಿರಂತರ ಸ್ಮರಣೆಯೇ ಹೌದು. ಇದನ್ನು ಡಿವಿಜಿ ಅವರು ಸೊಗಸಾಗಿ ಕಾಣಿಸಿದ್ದಾರೆ: 'ಜಗದ್ರಣಾಂಗಣೇ ಯಸ್ಯಸ್ಮರಣಂ ಜಯಕಾರಣಮ್'. ಇಲ್ಲಿ ನಾವು ಗೀತೆಗೂ ಗೀತಾಚಾರ್ಯನಿಗೂ ಇರುವ ಏಕತೆಯನ್ನು ಗಮನಿಸಬೇಕು.

'ಜೀವನವನ್ನು ಯುದ್ಧವನ್ನಾಗಿ ಸ್ವೀಕರಿಸೋಣ. ಆದರೆ ಮಹಾಭಾರತದಲ್ಲಿ ಯುದ್ಧ ನಡೆದದ್ದು ಕೌರವ ಮತ್ತು ಪಾಂಡವರ ಮಧ್ಯೆ; ಧರ್ಮ ಮತ್ತು ಅಧರ್ಮಗಳ ನಡುವೆಯಷ್ಟೆ. ನಮ್ಮ ಜೀವನಯುದ್ಧ ಯಾರ ವಿರುದ್ಧ? ನಾವು ಕೌರವರೋ? ಅಥವಾ ಪಾಂಡವರೋ? ನಮ್ಮದು ಧರ್ಮಪಕ್ಷವೋ? ಅಧರ್ಮಪಕ್ಷವೋ?' – ಹೀಗೂ ನಮ್ಮಲ್ಲಿ ಪ್ರಶ್ನೆಗಳು ಹುಟ್ಟಿಕೊಳ್ಳಬಹುದು. ಇದಕ್ಕೆ ಗೀತೆಯ ಉಪದೇಶ: ಕೌರವರು–ಪಾಂಡವರು ಎಲ್ಲೋ ಹೊರಗೆ ಇಲ್ಲ; ನಿನ್ನಲ್ಲಿಯೇ ಇದ್ದು ಕದನ ಮಾಡುತ್ತಿದ್ದಾರೆ. ಹೀಗೆಯೇ ಧರ್ಮಾಧರ್ಮಗಳೂ ನಿನ್ನ ಅಂತರಂಗದಲ್ಲಿಯೇ ಹಗರಣ ಮಾಡುತ್ತಿವೆ. ಹೀಗಾಗಿ ಯಾರನ್ನು ಗೆಲ್ಲಿಸಬೇಕು, ಯಾವುದನ್ನು ಮಣಿಸಬೇಕು – ಎಂಬುದು ನಿನ್ನ ಬಲ, ಬುದ್ಧಿ, ತಂತ್ರ, ನಡೆ–ನುಡಿಗಳನ್ನೇ ಅವಲಂಬಿಸಿದೆ.

52 ಮಂದಿ ಅಂಗವಿಕಲ ಸಾಧಕರಿಗೆ ರಾಷ್ಟ್ರ ಪ್ರಶಸ್ತಿ ಪ್ರದಾನ

ಬೆಂಗಳೂರಿನ ವಿದ್ಯಾಗೂ ಪುರಸ್ಕಾರ

ನವದೆಹಲಿ (ಪಿಟಿಐ): ಬೆಂಗಳೂರಿನ ವೈ.ವಿದ್ಯಾ ಸೇರಿದಂತೆ ಒಟ್ಟು 52 ಮಂದಿ ಅಂಗವಿಕಲ ಸಾಧಕರು ರಾಷ್ಟ್ರಪ್ರಶಸ್ತಿಗೆ ಭಾಜನರಾಗಿದ್ದಾರೆ.

ಅಂತರರಾಷ್ಟ್ರೀಯ ಅಂಗವಿಕಲರ ದಿನಾಚರಣೆ ಅಂಗವಾಗಿ ಶನಿವಾರ ಇಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪದಕ ಪ್ರದಾನ ಮಾಡಿದರು.

ದೃಷ್ಟಿಹೀನತೆಯಿಂದ ಬಳಲುತ್ತಿರುವ 29 ವರ್ಷದ ವಿದ್ಯಾ ಅವರು ಬೆಂಗಳೂರಿನ ಐಐಟಿಯಲ್ಲಿ ಡಿಜಿಟಲ್ ಸೊಸೈಟಿ ವಿಷಯದಲ್ಲಿ ಎಂಎಸ್ಸಿ ಪೂರ್ಣಗೊಳಿಸಿದ್ದಾರೆ. ಅವರು 2017ರಲ್ಲಿ ವಿಷನ್ ಎಂಪವರ್ (ವಿಇ) ಎಂಬ ಟ್ರಸ್ಟ್ ಸ್ಥಾಪಿಸಿದ್ದಾರೆ. ಈ ಟ್ರಸ್ಟ್ ಮೂಲಕ ದೃಷ್ಟಿಹೀನತೆ ಸಮಸ್ಯೆ ಎದುರಿಸುತ್ತಿರುವವರಿಗೆ ಶಿಕ್ಷಣ ನೀಡಿ ಅವರನ್ನು ಸಶಕ್ತಗೊಳಿಸುವ ಕೆಲಸ ಮಾಡುತ್ತಿದ್ದಾರೆ.



ಸಮಾರಂಭದಲ್ಲಿ ಭಾಗವಹಿಸಿದ್ದ ಅಂಗವಿಕಲ ಸಾಧಕರು ಪದಕಗಳೊಂದಿಗೆ ಸಂಭ್ರಮಿಸಿದರು–ಪಿಟಿಐ ಚಿತ್ರ

ಅಂಗವಿಕಲರ ಪಿಂಚಣಿ ಹೆಚ್ಚಳ (ಚೆನ್ನೈ ವರದಿ): ದೃಷ್ಟಿಹೀನರು ಸೇರಿದಂತೆ ಅಂಗವಿಕಲರಿಗೆ ನೀಡುವ ಪಿಂಚಣಿಯನ್ನು ₹1,000 ದಿಂದ ₹1,500ಕ್ಕೆ ಏರಿಕೆ ಮಾಡಿರುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಶನಿವಾರ ಘೋಷಿಸಿದ್ದಾರೆ.

ತಮ್ಮ ಸರ್ಕಾರವು ಎಲ್ಲಾ ವರ್ಗದ ಜನರ ಕಲ್ಯಾಣಕ್ಕೆ ಬದ್ಧವಾಗಿದೆ ಎಂದೂ ಅವರು ಹೇಳಿದ್ದಾರೆ.

ಅಂಗವಿಕಲರು ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಯಾರನ್ನೂ ಅವಲಂಭಿಸದೆ ಕೆಲಸ ಮಾಡಲು ನೆರವಾಗುವ ತಂತ್ರಜ್ಞಾನ ಆಧರಿತ ಉಪಕರಣಗಳನ್ನು ಒದಗಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದ ತಜ್ಞರು ಮತ್ತು ಉನ್ನತ ಮಟ್ಟದ ಸಮಿತಿಗಳು ಕಾರ್ಯ ಪ್ರವೃತ್ತವಾಗಿವೆ ಎಂದೂ ತಿಳಿಸಿದ್ದಾರೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹55,300
ಒಡವೆ ಚಿನ್ನ 1ಗ್ರಾಂ	₹5,088
ಬೆಳ್ಳಿ ಕೆ.ಜಿಗೆ	₹66,600

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1515)
ಸೋಯಾ (ರಿಫೈನ್ಡ್)	₹1250 (1250)
ಸೂರ್ಯಕಾಂತಿ (ರಿಫೈನ್ಡ್)	₹1400 (1400)
ಪಾಮೋಲಿನ್	₹935 (940)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹298-678
ದ್ವಿತಳಿ (ಬಿ.ವಿ)	₹333-871

ದೀರ್ಘಾವಧಿಗೆ ದೇಶದ ಆರ್ಥಿಕ ಮುನ್ನೋಟ ಉತ್ತಮ

ಎಫ್‌ಐಐ ಒಳಹರಿವು ₹ 9,844 ಕೋಟಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಡಿಸೆಂಬರ್ 2ಕ್ಕೆ ಕೊನೆಗೊಂಡ ವಾರದ ವಹಿವಾಟಿನಲ್ಲಿ ಷೇರುಗಳ ಖರೀದಿಗೆ ಹೆಚ್ಚು ಗಮನ ಹರಿಸಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ನವೆಂಬರ್ 28ರಿಂದ ಡಿಸೆಂಬರ್ 2ರವರೆಗೆ ನಡೆದ ವಾರದ ವಹಿವಾಟಿನಲ್ಲಿ ಗುರುವಾರ ಹೊರತುಪಡಿಸಿ ಉಳಿದ ನಾಲ್ಕೂ ದಿನಗಳಲ್ಲಿ ಷೇರುಪೇಟೆಗಳಲ್ಲಿ ಬಂಡವಾಳ ಹೂಡಿಕೆ ಮಾಡಿದ್ದಾರೆ. ನಾಲ್ಕು ದಿನಗಳ ಒಟ್ಟು ಹೂಡಿಕೆ ಮೊತ್ತ ₹ 11,408 ಕೋಟಿ ಆಗಿದ್ದು, ಗುರುವಾರ ₹ 1,564 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಇದರಿಂದಾಗಿ ಒಟ್ಟು ಹೂಡಿಕೆಯು ₹ 9,844 ಕೋಟಿಯಷ್ಟು ಆಗಿದೆ. ನವೆಂಬರ್‌ನಲ್ಲಿ ಎಫ್‌ಐಐ ಒಳಹರಿವು ₹22,546 ಕೋಟಿಯಷ್ಟು ಆಗಿದೆ. ನವೆಂಬರ್ 30ರಂದು ಒಂದೇ ದಿನ ₹9,019 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ. 2021ರ ಫೆಬ್ರುವರಿ 24ರ ಬಳಿಕ ದಿನದ ವಹಿವಾಟಿನಲ್ಲಿ ಆಗಿರುವ ಗರಿಷ್ಠ ಹೂಡಿಕೆ ಇದಾಗಿದೆ.

'ಮಾರುಕಟ್ಟೆಯು ಸದ್ಯ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಯಾವಾಗ ಬೇಕಿದ್ದರೂ ಕುಸಿತ ಅನುಭವಿಸಬಹುದು. ಹೆಚ್ಚಿನ ಲಾಭ ಗಳಿಸಿಕೊಂಡಿರುವ ಹೂಡಿಕೆದಾರರು ಒಂದಿಷ್ಟು ಹಣವನ್ನು ನಿಶ್ಚಿತ ಆದಾಯ ಬರುವ ಕಡೆಗೆ ಹೂಡಿಕೆ ಮಾಡುವ ಸಾಧ್ಯತೆ ಇದೆ. ಇದು ಸೂಚ್ಯಂಕಗಳ ಇಳಿಕೆಗೆ ಕಾರಣವಾಗಬಹುದು. ಹೀಗಾಗಿ ಭಾರಿ ಪ್ರಮಾಣದಲ್ಲಿ ಹೂಡಿಕೆ ಮಾಡಲು ಇದು ಸೂಕ್ತ ಸಮಯ ಅಲ್ಲ' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

'ಮ್ಯೂಚುವಲ್ ಫಂಡ್ಸ್‌ಗಳಲ್ಲಿ ಎಸ್‌ಐಪಿಯಲ್ಲಿ ಹೂಡಿಕೆ ಮುಂದುವರಿಯಲಿ. ಭಾರತದ ಆರ್ಥಿಕ ಬೆಳವಣಿಗೆಯ ದೀರ್ಘಾವಧಿಯ ಮುನ್ನೋಟ ಉತ್ತಮವಾಗಿರುವ ಕಾರಣ ಆಶಾವಾದ ಹೊಂದಿರಿ. ಇದೇ ವೇಳೆ ಎಚ್ಚರಿಕೆಯೂ ಅಗತ್ಯ' ಎಂದು ಅವರು ಹೂಡಿಕೆದಾರರಿಗೆ ಸಲಹೆ ನೀಡಿದ್ದಾರೆ.



ಟಿಕ್‌ಟಾಕ್ ಸ್ಟಾರ್ ಮೇಘಾ ನಿಧನ

ನವದೆಹಲಿ (ಪಿಟಿಐ): ಕೆನಡಾದ ನೆಲೆಸಿರುವ ಭಾರತೀಯ ಮೂಲದ ಟಿಕ್‌ಟಾಕ್ ಸ್ಟಾರ್ ಮೇಘಾ ಠಾಕೂರ್ (21) ಮೃತಪಟ್ಟಿದ್ದಾರೆ. ಅವರ ಸಾವಿಗೆ ಕಾರಣ ತಿಳಿದುಬಂದಿಲ್ಲ. ಆದರೆ ಅವರ ಪೋಷಕರು ನವೆಂಬರ್ 24ರ ಮುಂಜಾನೆ ಮೇಘಾ ಹಠಾತ್ ನಿಧನರಾದರು ಎಂದು ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಪ್ರಕಟಿಸಿದ್ದಾರೆ.

600 ಸಿಬ್ಬಂದಿ ಕಡಿತ: ಓಯೊ

ನವದೆಹಲಿ (ಪಿಟಿಐ/ರಾಯಿಟರ್ಸ್): ಓಯೊ ಹೋಟೆಲ್ಸ್ ಆ್ಯಂಡ್ ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು 600 ಜನರನ್ನು ಕೆಲಸದಿಂದ ತೆಗೆಯಲು ನಿರ್ಧರಿಸಿದೆ. ಇದೇ ವೇಳೆ ನಿರ್ವಹಣಾ ತಂಡಕ್ಕೆ ಹೊಸದಾಗಿ 250 ಜನರನ್ನು ನೇಮಿಸಿಕೊಳ್ಳುವುದಾಗಿಯೂ ತಿಳಿಸಿದೆ.

ಸದ್ಯ ಕಂಪನಿಯಲ್ಲಿ ಒಟ್ಟು 3,700 ಸಿಬ್ಬಂದಿ ಇದ್ದು, ಸಿಬ್ಬಂದಿ ಕಡಿತವು ಶೇ 10ರಷ್ಟು ಆಗಲಿದೆ ಎಂದು ಶನಿವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಕಂಪನಿಯು ತನ್ನ ಸಾಂಸ್ಥಿಕ ರಚನೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಲು ಹೊರಟಿದ್ದು, ಈ ಉದ್ಯೋಗ ಕಡಿತವು ಅದರ ಒಂದು ಭಾಗವಾಗಿದೆ. ಉತ್ಪನ್ನ ಮತ್ತು ಎಂಜಿನಿಯರಿಂಗ್, ಕಾರ್ಪೊರೇಟ್ ಕಚೇರಿಗಳು ಮತ್ತು ಓಯೊ ವಕೇಷನ್ ಹೋಮ್ಸ್ ಟೀಮ್ಸ್‌ನಲ್ಲಿ ಸಿಬ್ಬಂದಿ ಸಂಖ್ಯೆ ತಗ್ಗಿಸಲು ಹಾಗೂ ಪಾಲುದಾರರ ಸಂಬಂಧ ನಿರ್ವಹಣೆ ಮತ್ತು ವಹಿವಾಟು ಅಭಿವೃದ್ಧಿ ತಂಡಗಳಿಗೆ ಹೆಚ್ಚಿನ ಜನರನ್ನು ನೇಮಿಸಿಕೊಳ್ಳಲು ಮುಂದಾಗಿದೆ.

ಕಾರ್ಯಾಚರಣೆಯನ್ನು ಸುಗಮಗೊಳಿಸಲು ಉತ್ಪನ್ನ ಮತ್ತು ಎಂಜಿನಿಯರಿಂಗ್ ತಂಡಗಳನ್ನು ವಿಲೀನಗೊಳಿಸಲಾಗುವುದು. ಗ್ರಾಹಕರು ಮತ್ತು ಪಾಲುದಾರರನ್ನು ತೃಪ್ತಿಪಡಿಸಲು ಹಾಗೂ ತನ್ನ ವೇದಿಕೆಯಲ್ಲಿ ಹೋಟೆಲ್ ಮತ್ತು ಹೋಮ್ಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ನೆರವಾಗುವಂತೆ ವಹಿವಾಟು ಅಭಿವೃದ್ಧಿ ತಂಡವನ್ನು ಬಲಪಡಿಸಲು 250 ಜನರನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದೆ.

ಮುಂಬೈ ಧಾರಣೆ

ಶೇಂಗಾ

3–12–2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಸೋಯಾ ಕಚ್ಚಾ	1200 (1200)
ಪಾಮ್ ವಾರದ ಡೆಲಿವರಿ	933 (938)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,500 (53,450)
ಬೆಳ್ಳಿ ಕೆ.ಜಿ 65,250 (64,4500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಕಾರ್ಕಳ	
ಹೊಸತು	25000-37500
ಹಳತು	40000-55500
ಕುಂದಾಪುರ	
ಹಳೆಚಾಲಿ	53000-56000
ಹೊಸಚಾಲಿ	40000-47500
ಶಿರಸಿ	
ಬೆಟ್ಟೆ	38999-43999
ಬಿಳಿಗೋಟು	25199-34799
ಚಾಲಿ	37000-40400
ಕೆಂಪುಗೋಟು	26111-29069
ರಾಶಿ	44518-45899
ಸೊರಬ	
ಗೊರಬಲು	30019-30019
ಕೋಳೆ	24019-27019
ರಾಶಿ	36001-44009

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	12700	---	162.60 ಸೆಂಟ್ಸ್
ಎಸಿ	---	6600	---	
ಆರ್‌ಪಿ	---	8500	---	ಲಂಡನ್
ಆರ್‌ಸಿ	---	4000	---	1888 ಡಾಲರ್ಸ್

ಬರೋಡ ಕಿಸಾನ್ ಪಾಕ್ಷಿಕ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತ ದಿನಾಚರಣೆಯ ಪ್ರಯುಕ್ತ ಬ್ಯಾಂಕ್ ಆಫ್ ಬರೋಡ (ಬಿಒಬಿ) ವತಿಯಿಂದ ಕೊಳ್ಳೇಗಾಲ ತಾಲ್ಲೂಕಿನ ಕೆಂಪನಪಾಳ್ಯ ಗ್ರಾಮದಲ್ಲಿ 'ಬರೋಡ ಕಿಸಾನ್ ಪಾಕ್ಷಿಕ ಅಭಿಯಾನ' ಆಯೋಜಿಸಲಾಗಿತ್ತು.

'ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವುದು ಇದರ ಉದ್ದೇಶ. ರೈತರ ಹಿತ ಮತ್ತು ಏಳಿಗೆಗೆ ಬ್ಯಾಂಕ್ ಶ್ರಮಿಸುತ್ತಿದೆ' ಎಂದು ಬ್ಯಾಂಕ್‌ನ ಮುಂಬೈನ ಮುಖ್ಯ ಮಹಾ ಪ್ರಬಂಧಕ ಜಗನ್‌ಮೋಹನ್ ಎಂ. ತಿಳಿಸಿದರು.

ಉದ್ಯೋಗ ಕೊಡಿ: ಮೋದಿ ಹುಟ್ಟೂರ ಜನರ ಅಳಲು


ವಡನಗರದ ನಿವಾಸಿಗಳಾದ ರೇಖಾಬೆನ್ ಸಾಧು, ಕಲ್ಪನಾಬೆನ್ ಮತ್ತಿತರರು

ವಡನಗರ: 'ದೇಶದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾನೊಂದು ಸಲಹೆ ನೀಡುವೆ' ಎಂದು ಹೇಳುತ್ತಾ ಒಂದು ಕ್ಷಣ ಮಾತು ನಿಲ್ಲಿಸಿದರು ವಡನಗರದ ಮಹಿಳೆ ರೇಖಾಬೆನ್ ಸಾಧು ಅವರು. 'ಏನು' ಎಂದು ಪ್ರಶ್ನಿಸಿದಾಗ, 'ನರೇಂದ್ರ ಮೋದಿ ಮುಖ್ಯಮಂತ್ರಿ ಹಾಗೂ ಪ್ರಧಾನಿಯಾದ ಮೇಲೆ ನಮ್ಮೂರಿನಲ್ಲಿ ಅದ್ಭುತ ಪ್ರಗತಿಯಾಗಿದೆ. ಆದರೆ, ಇಲ್ಲಿರುವುದು ಒಂದೇ ಒಂದು ಸಮಸ್ಯೆ. ನಮಗೆಲ್ಲ ಕೆಲಸಗಳೇ ಇಲ್ಲ' ಎಂದು ನೊಂದುಕೊಂಡರು.

ನರೇಂದ್ರ ಮೋದಿ ಅವರ ಹುಟ್ಟೂರು ವಡನಗರ. ಇಲ್ಲಿನ ಜನಸಂಖ್ಯೆ ಸುಮಾರು 25 ಸಾವಿರ. ಇಲ್ಲಿನ ರೈಲು ನಿಲ್ದಾಣವನ್ನು ಚೆನ್ನಾಗಿ ಅಭಿವೃದ್ಧಿಪಡಿಸಲಾಗಿದೆ. 4500 ವರ್ಷಗಳ ಇತಿಹಾಸ ಹೊಂದಿರುವ ಶರ್ಮಿಷ್ಠ ಸರೋವರವನ್ನು ಅದ್ಭುತ ಎಂಬ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. ಕಳೆದ ಒಂದು ದಶಕದಲ್ಲಿ ಇಲ್ಲಿ ಕ್ರಾಂತಿಕಾರಕ ಕೆಲಸಗಳು ಆಗಿವೆ ಎಂದು ಬಹುತೇಕ ಜನರು ಹೇಳುತ್ತಾರೆ.

ನರೇಂದ್ರ ಮೋದಿ ನೆಲೆಸಿದ್ದ ಮನೆಗೆ ಭೇಟಿ ನೀಡಿ ವಾಪಸಾಗುತ್ತಿದ್ದ ವೇಳೆ ಬಿರು ಬಿಸಿಲಿನಲ್ಲಿ ಕುಳಿತಿದ್ದ ರೇಖಾ ಬೆನ್ ಅವರೇ 'ಪ್ರಜಾವಾಣಿ' ಪ್ರತಿನಿಧಿಯನ್ನು ಕರೆದು ಮಾತನಾಡಿಸಿದರು. 'ಪಟ್ಟಣದಲ್ಲಿ ಅಗಲವಾದ ರಸ್ತೆಗಳು ಇವೆ. ಪಟ್ಟಣದ ಅಭಿವೃದ್ಧಿ ಆಗಿದೆ. ಶಿಕ್ಷಣದ ಕಡೆಗೆ ಹೆಚ್ಚಿನ ಒತ್ತು ನೀಡಲಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಮಸ್ಯೆಯೇ ಇಲ್ಲವೇ ಎಂದು ಕೇಳಿದರೆ, 'ಇಲ್ಲಿ ಹಲವು ಮನೆಗಳಿಗೆ ಬೀಗ ಹಾಕಿರುವುದನ್ನು ನೋಡಿದ್ದೀರಾ' ಎಂದು ಪ್ರಶ್ನಿಸಿದರು.

'ದೊಡ್ಡ ಮನೆಗೆ ಬೀಗ ಹಾಕಿರುವುದನ್ನು ನೋಡಿದೆ' ಎಂದಾಗ, 'ಇಲ್ಲಿ ಸುಮಾರು ಮನೆಗಳಿಗೆ ಬೀಗ ಹಾಕಲಾಗಿದೆ. ಅಲ್ಲಿ ಈಗ ಯಾರೂ ಇಲ್ಲ. ಆ ಮನೆಗಳ ನಿವಾಸಿಗಳು ವಿಸ್‌ನಗರ, ಗಾಂಧಿನಗರ, ಅಹಮದಾಬಾದ್‌ಗೆ ಸ್ಥಳಾಂತರ ಆಗಿದ್ದಾರೆ. ಇಲ್ಲಿ ಕೆಲಸಗಳು ಇಲ್ಲದ ಕಾರಣ ನಗರಕ್ಕೆ ವಲಸೆ ಹೋಗಿದ್ದಾರೆ' ಎಂದರು. 'ಉತ್ತಮ ಶಿಕ್ಷಣ ಪಡೆದ ಯುವಜನರಿಗೂ ಕೆಲಸ ಸಿಗುತ್ತಿಲ್ಲ. ದೂರದ ಊರಿಗೆ ಹೋಗಬೇಕು. ಕೆಲವರು ಕೆಲಸ ಇಲ್ಲದೆ ಸುಮ್ಮನೆ ಅಡ್ಡಾಡುತ್ತಿದ್ದಾರೆ' ಎಂದೂ ಹೇಳಿದರು. 'ನನಗೂ ಉದ್ಯೋಗ ಮಾಡಲು ಮನಸ್ಸಿದೆ. ಕೆಲಸ ಸಿಗದ ಕಾರಣ ಮನೆ ಕೆಲಸ ಮಾಡಿಕೊಂಡು ಇದ್ದೇನೆ. ಮಧ್ಯಾಹ್ನ ಹಾಗೂ ಸಂಜೆ ಹೊತ್ತಿನಲ್ಲಿ ಹರಟೆ ಹೊಡೆದುಕೊಂಡು ಕಾಲ ಕಳೆಯುತ್ತೇವೆ' ಎಂದು ಹೇಳಿದರು. ಜತೆಯಲ್ಲಿದ್ದ ಕಲ್ಪನಾ ಬೆನ್ ಸೇರಿ ನಾಲ್ಕೈದು ಮಹಿಳೆಯರು 'ಹೌದು ಹೌದು' ಎಂದು ಧ್ವನಿಗೂಡಿಸಿದರು. 'ನಮ್ಮದು ಒಂದೇ ಒಂದು ಮನವಿ. ಉದ್ಯೋಗ ಸೃಷ್ಟಿಸಿ. ನಮ್ಮನ್ನು ಕಾಪಾಡಿ. ಇಷ್ಟೆಲ್ಲ ಅಭಿವೃದ್ಧಿ ಮಾಡಿರುವ ಮೋದಿ ಅವರು ನಮ್ಮ ಈ ಸಮಸ್ಯೆಯನ್ನು ಬಗೆಹರಿಸುತ್ತಾರೆ ಎಂಬ ವಿಶ್ವಾಸ ಇದೆ' ಎಂದು ಹೇಳಿಕೊಂಡರು.

ಮೋದಿ ಅವರ ಮನೆಯಿಂದ ಕೂಗಳತೆ ದೂರದಲ್ಲಿ ಮಾತಿಗೆ ಸಿಕ್ಕ 55ರ ಹರೆಯದ ಗಜೇಂದ್ರ, 'ಇಲ್ಲಿ 24 ಗಂಟೆಯೂ ನೀರು ಬರುತ್ತದೆ. ಉತ್ತಮ ಶಿಕ್ಷಣ ಸಂಸ್ಥೆಗಳಿವೆ. ಆದರೆ, ಯುವಜನರಿಗೆ ಉದ್ಯೋಗ ಸಿಗುತ್ತಿಲ್ಲ. ಈ ಭಾಗದಲ್ಲಿ ಕೈಗಾರಿಕೆಗಳು ಸ್ಥಾಪನೆ ಆಗಿಲ್ಲ. ಕೈಗಾರಿಕಾ ಅಭಿವೃದ್ಧಿಗೆ ಒತ್ತು ನೀಡಿದ್ದರೆ ಸರಿ ಆಗುತ್ತಿತ್ತು' ಎಂದು ಸಲಹೆ ನೀಡಿದರು.

ವಡನಗರದ ಸಮೀಪದ ಟೀ ಅಂಗಡಿಯ ಮಾಲೀಕ ಸೂರಜ್, ಎಲ್ಲ ಪ್ರಶ್ನೆಗಳಿಗೂ 'ಮೋದಿ ಮೋದಿ' ಎಂದರು. ಅಂಗಡಿ ಸಮೀಪದ ಗದ್ದೆಯಲ್ಲಿ ಸಾಸಿವೆ ಕೃಷಿ ಬೆಳೆದು ನಿಂತಿತ್ತು. ಅವುಗಳನ್ನು ತೋರಿಸಿದ ಸೂರಜ್, 'ಇದನ್ನು ಬೆಳೆದಿದ್ದು ಮೋದಿ ಅವರ ಸಂಬಂಧಿಗಳು' ಎಂದರು. ಅವರ ಮನೆ ಎಲ್ಲಿದೆ ಎಂದು ಪ್ರಶ್ನಿಸಿದರೆ, 'ಇಲ್ಲಿ ಅವರ ಮನೆ ಇಲ್ಲ. ನನಗೆ ಮತ್ತೇನೂ ಗೊತ್ತಿಲ್ಲ' ಎಂದರು.

ಅದೇ ಹೊತ್ತಿಗೆ ಏಳೆಂಟು ಜನರ ಗುಂಪೊಂದು ಚಹಾ ಕುಡಿಯಲು ಬಂತು. ಅವರ ಪೈಕಿ ದೇವೇಂದ್ರ ಬಾಯಿ ಎಂಬುವರು, 'ಮೋದಿ ಅಧಿಕಾರಕ್ಕೆ ಬಂದ ಮೇಲೆ ಎಲ್ಲ ಕ್ಷೇತ್ರಗಳಲ್ಲಿ ವಿಕಾಸ ಆಗಿದೆ' ಎಂದು ಕೆಲವು ಅಭಿವೃದ್ಧಿ ಕಾರ್ಯಗಳ ಪಟ್ಟಿ ಮಾಡಿದರು. ಅದಕ್ಕೆ ಅಶೋಕ್ ಬಾಯಿ, 'ಪ್ರಧಾನಿ ಮೋದಿ ಹೇಳುವುದೆಲ್ಲ ಸುಳ್ಳು' ಎಂದು ಕಾಲೆಳೆದರು. ಆಗ ಅವರಿಬ್ಬರ ನಡುವೆ ಜಗಳ ಆರಂಭ ವಾಯಿತು. 'ಈ ಅಶೋಕ ಬಾಯಿಯೇ ಸುಳ್ಳುಗಾರ. ಈ ವ್ಯಕ್ತಿಗೆ ಅನಾರೋಗ್ಯ ಕಾಡಿದಾಗ ಆಯುಷ್ಮಾನ್ ಭಾರತ ಕಾರ್ಡ್‌ನಲ್ಲಿ ₹2 ಲಕ್ಷ ನೆರವು ನೀಡಲಾಗಿತ್ತು. ಲಾಭ ಪಡೆದು ಈಗ ಬಿಜೆಪಿಯನ್ನು ಟೀಕೆ ಮಾಡುತ್ತಿದ್ದಾರೆ' ಎಂದು ಆಕ್ಷೇಪಿಸಿದರು. ಅದಕ್ಕೆ ಅಶೋಕ್ ಬಾಯಿ, 'ಅದು ಸರ್ಕಾರದ ದುಡ್ಡು' ಎಂದು ತಿರುಗೇಟು ಕೊಟ್ಟರು. ಅವರ ಜಗಳ ಸ್ವಲ್ಪ ಹೊತ್ತು ಹೀಗೆ ಮುಂದುವರಿಯಿತು.

ವಡನಗರವು ಊಂಜಾ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದೆ. 1995ರಿಂದ ಇಲ್ಲಿ ಬಿಜೆಪಿಯೇ ಗೆಲುವು ಸಾಧಿಸುತ್ತಾ ಬಂದಿದೆ. ಆದರೆ,- 2017ರಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಆಶಾ ಪಟೇಲ್ ಗೆಲುವು ಸಾಧಿಸಿದ್ದರು. ಅವರು ಪಾಟೀದಾರ್ ಹೋರಾಟದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದ್ದರು. ಆಪರೇಷನ್ ಕಮಲದ ಮೂಲಕ ಬಿಜೆಪಿಯು ಅವರನ್ನು 2019ರಲ್ಲಿ ಸೆಳೆದುಕೊಂಡಿತ್ತು. ಉಪಚುನಾವಣೆಯಲ್ಲಿ ಆಶಾ ಪಟೇಲ್ ಗೆಲುವು ಸಾಧಿಸಿದ್ದರು. ಕಳೆದ ವರ್ಷ ಅನಾರೋಗ್ಯದಿಂದ ಮೃತಪಟ್ಟರು.

ವಡಗಾವ್: ಮೇವಾನಿಗೆ ಹೂವಿನ ಹಾಸಿಗೆಯಲ್ಲ!

ಗುಜರಾತ್ ಚುನಾವಣೆ

ಅಖಾಡದಲ್ಲೊಂದು ಸುತ್ತು


ಮಂಜುನಾಥ ಹೆಬ್ಬಾರ್

ವಡಗಾವ್: ದಲಿತ ನಾಯಕ ಜಿಗ್ನೇಶ್ ಮೇವಾನಿ ಅವರಿಗೆ 2017ರ ವಿಧಾನಸಭಾ ಚುನಾವಣೆಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ್ದವರೆಲ್ಲ ಈ ಸಲ ಕತ್ತಿ ಝಳಪಿಸುತ್ತಾ ನಿಂತಿದ್ದಾರೆ. ಇದರಿಂದಾಗಿ, ವಡಗಾವ್ ಕ್ಷೇತ್ರದಲ್ಲಿ ಮೇವಾನಿ ಅವರು ಗೆಲುವಿನ ಕುದುರೆಯನ್ನು ಮತ್ತೊಮ್ಮೆ ಏರಲು ಬೆವರು ಹರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ವಡಗಾವ್ ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರ. ಮೇವಾನಿ ಕಳೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಿಂತು ಜಯ ಗಳಿಸಿದ್ದರು. 2012ರಲ್ಲಿ ಕಾಂಗ್ರೆಸ್‌ನ ಮಣಿಲಾಲ್ ವಘೇಲಾ ಗೆದ್ದಿದ್ದರು. ಕಳೆದ ಬಾರಿ ಮೇವಾನಿಗೆ ಕ್ಷೇತ್ರವನ್ನು ಬಿಟ್ಟುಕೊಟ್ಟು ಸಬರಕಂಠ ಜಿಲ್ಲೆಯ ಐದರ್ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದ್ದರು.

ಕಳೆದ ಸಲ ಮೇವಾನಿ ಅವರು ಬಿಜೆಪಿಯ ವಿಜಯ ಚಕ್ರವರ್ತಿ ಅವರನ್ನು 20 ಸಾವಿರ ಮತಗಳ ಅಂತರದಿಂದ ಸೋಲಿಸಿದ್ದರು. ಕಾಂಗ್ರೆಸ್ ಜತೆಗೆ ಮುನಿಸಿಕೊಂಡು ಮಣಿಲಾಲ್ ವಘೇಲಾ ಅವರು ಈ ವರ್ಷದ ಏಪ್ರಿಲ್‌ನಲ್ಲಿ ಕಮಲ ಪಾಳಯಕ್ಕೆ ಜಿಗಿದರು. ಅವರು ಈಗ ಬಿಜೆಪಿಯ ಅಭ್ಯರ್ಥಿ. ಮೇವಾನಿ ಈ ಸಲ 'ಕೈ' ಅಭ್ಯರ್ಥಿ. ಆಮ್ ಆದ್ಮಿ ಪಕ್ಷವು ಸಾಮಾಜಿಕ ಕಾರ್ಯಕರ್ತ ದಲ್ಪತ್ ಭಾಟಿಯಾ ಅವರನ್ನು ಕಣಕ್ಕೆ ಇಳಿಸಿದೆ. ಭಾಟಿಯಾ ಅವರಿಗೆ ಜಿಲ್ಲೆಯಲ್ಲಿ ಉತ್ತಮ ಹೆಸರಿದೆ. ಜತೆಗೆ, ಬಿಎಸ್‌ಪಿ ಹಾಗೂ ಎಐಎಂಐಎಂ ಪಕ್ಷಗಳ ಹುರಿಯಾಳುಗಳು ಕಣದಲ್ಲಿದ್ದಾರೆ. ಇದರಿಂದಾಗಿ, ವಡಗಾವ್ ಕಣವು ಮೇವಾನಿ ಅವರಿಗೆ ಹೂವಿನ ಹಾಸಿಗೆಯಲ್ಲ.

ಈ ಸಲ ದಲಿತ ಮತಗಳ ವಿಭಜನೆ ದೊಡ್ಡ ಪ್ರಮಾಣದಲ್ಲಿ ಆಗಬಹುದು ಎಂಬ ಚರ್ಚೆಗಳು ಕ್ಷೇತ್ರದಲ್ಲಿ ನಡೆದಿವೆ. ಚೌಧರಿ ಸಮುದಾಯ ಹಾಗೂ ಬಿಜೆಪಿ ನಡುವಿನ ತಿಕ್ಕಾಟವೂ ನಿರ್ಣಾಯಕ ಪಾತ್ರ ವಹಿಸಬಹುದು ಎಂದು ಹಲವು ಮತದಾರರು ಅಭಿಪ್ರಾಯಪಡುತ್ತಾರೆ.

ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಚೌಧರಿ ಸಮುದಾಯಕ್ಕೆ ಸೇರಿದ ಮಾಜಿ ಸಚಿವ ವಿಪುಲ್ ಚೌಧರಿ ಅವರನ್ನು ಸೆಪ್ಟೆಂಬರ್ ತಿಂಗಳಲ್ಲಿ ಬಂಧಿಸಲಾಗಿತ್ತು. ಇದನ್ನು ಪ್ರತಿಭಟಿಸಿ ಚೌಧರಿ ಸೇನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಮುಖ್ಯಮಂತ್ರಿಯವರು ಜಿಲ್ಲೆಯಲ್ಲಿ ಗೌರವ ಯಾತ್ರೆ ನಡೆಸಿದ ಸಂದರ್ಭದಲ್ಲೂ ಧರಣಿ ನಡೆಸಿದ್ದರು. ಖುದ್ದು ಮುಖ್ಯಮಂತ್ರಿಯವರೇ ಪ್ರತಿಭಟನಾನಿರತರನ್ನು ಸಮಾಧಾನಪಡಿಸಲು ಪ್ರಯತ್ನಿಸಿದ್ದರು. ಅದರ ಬಳಿಕವೂ ಚೌಧರಿ ಸೇನೆಯ ಕಾರ್ಯಕರ್ತರ ಮುನಿಸು ಕಡಿಮೆಯಾಗಿರಲಿಲ್ಲ.

ಕಳೆದ ಐದು ವರ್ಷಗಳಲ್ಲಿ ಮೇವಾನಿ ಅವರನ್ನು ಹಣಿಯಲು ಬಿಜೆಪಿ ಹಲವು ಸಲ ಪ್ರಯತ್ನ ಮಾಡಿದೆ. 'ನಾನು ಹೂವಲ್ಲ. ಬೆಂಕಿ. ನನ್ನ ಮೇಲೆ ಯಾವ ಕ್ರಮ ಬೇಕಾದರೂ ಕೈಗೊಳ್ಳಿ. ಅದಕ್ಕೆ ಅಂಜುವುದಿಲ್ಲ' ಎಂದು ಮೇವಾನಿ ಹೇಳಿದ್ದರು. ಬಿಜೆಪಿಯ ಪಗಡೆಯಾಟದ ದಾಳಗಳಿಗೆ ಪ್ರತಿ ದಾಳ ಉರುಳಿಸಿದ್ದಾರೆ. ಮೇವಾನಿ ಪರವಾಗಿ ಕಾಂಗ್ರೆಸ್ ಮುಖಂಡ ಕನ್ಹಯ್ಯಾ ಕುಮಾರ್ ಕ್ಷೇತ್ರದಲ್ಲಿ ಹಲವು ಸುತ್ತಿನ ಪ್ರಚಾರ ನಡೆಸಿದ್ದಾರೆ.

ಕೋವಿಡ್ ಉತ್ತುಂಗಕ್ಕೆ ಏರಿದ ಸಂದರ್ಭದಲ್ಲಿ, ಜನರಿಗೆ ನೆರವಾಗಿದ್ದಕ್ಕೆ ಮೇವಾನಿ ಕುರಿತು ಹಲವು ಮತದಾರರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಅವರು ದೇಣಿಗೆ ಎತ್ತಿ ಆಮ್ಲಜನಕ ಘಟಕ ನಿರ್ಮಿಸಿ ಜನರ ನೆರವಿಗೆ ಧಾವಿಸಿದರು. 'ಈ ಸಲ ಚುನಾವಣಾ ಖರ್ಚಿಗೂ ದೇಣಿಗೆ ಎತ್ತಿದ್ದಾರೆ. ಇಂತಹ ನಾಯಕನನ್ನು ಮತ್ತೆಲ್ಲೂ ಕಾಣಲಾರಿರಿ. ಅವರು ಕಾಡಿನ ಸಿಂಹ ಇದ್ದಂತೆ. ಬಿಜೆಪಿ ವಿರುದ್ಧ ಹೋರಾಡಲು ಅಂತಹ ನಾಯಕ ವಿಧಾನಸಭೆಯಲ್ಲಿರಬೇಕು' ಎಂದು ವಡಗಾವ್‌ನ ನಿವಾಸಿ ಅಬ್ದುಲ್ ರಜಾಕ್ ಹೇಳುತ್ತಾರೆ. ಅದಕ್ಕೆ ಭಿನ್ನವಾದ ಅಭಿಪ್ರಾಯ ವ್ಯಕ್ತಪಡಿಸಿದ ಅಹ್ಮದ್ ಖಾನ್, 'ಈ ಸಲ ಮೇವಾನಿ ಅವರಿಗೆ ಸುಲಭದ ತುತ್ತಲ್ಲ. ಯಾರೇ ಗೆದ್ದರೂ ಕೆಲವೇ ಸಾವಿರ ಮತಗಳ ಅಂತರದಿಂದ' ಎಂದು ಅಭಿಪ್ರಾಯಪಡುತ್ತಾರೆ.

ವಡಗಾವ್‌ನ ಕಾರ್ಮಿಕ ಲಕ್ಷಣ ಬಾಯಿ, 'ಕ್ಷೇತ್ರದಲ್ಲಿ ಮೇವಾನಿ ಉತ್ತಮ ಕೆಲಸ ಮಾಡಿದ್ದಾರೆ. ಆದರೆ, ಬಿಜೆಪಿ ಸರ್ಕಾರ ಅನುದಾನ ನೀಡದೆ ತಾರತಮ್ಯ ಮಾಡಿತು. ದ್ವೇಷದ ರಾಜಕಾರಣದಿಂದ ಕೆಲವು ಕೆಲಸಗಳು ಸ್ಥಗಿತಗೊಂಡವು' ಎಂದರು.

ಮೇವಾನಿ ಕುಟುಂಬದವರು ಮೆಹಸಾನ ಜಿಲ್ಲೆಯ ಮೇವಾನಿ ಗ್ರಾಮದವರು. ಮೇವಾನಿ ಹುಟ್ಟಿದ್ದು ಬೆಳೆದಿದ್ದು ಅಹಮದಾಬಾದ್‌ನಲ್ಲಿ. ಕಾನೂನು ಹಾಗೂ ಪತ್ರಿಕೋದ್ಯಮ ಡಿಪ್ಲೊಮಾ ಪದವಿ ಪಡೆದಿರುವ ಅವರು ಅಹಮದಾಬಾದ್‌ನ ಪತ್ರಿಕೆಯೊಂದರಲ್ಲಿ ಕೆಲವು ಸಮಯ ಕೆಲಸ ಮಾಡಿದ್ದರು. ಊನಾದಲ್ಲಿ ದಲಿತರ ಮೇಲೆ ಸ್ವಘೋಷಿತ ಗೋರಕ್ಷಕರು ಹಲ್ಲೆ ನಡೆಸಿದ ಬಳಿಕ 2016ರ ಆಗಸ್ಟ್‌ನಲ್ಲಿ ಮೇವಾನಿ ಅವರು ಅಹಮದಾಬಾದ್‌ನಿಂದ ಊನಾದವರೆಗೆ ದಲಿತ ಅಸ್ಮಿತಾ ರ‍್ಯಾಲಿ ನಡೆಸಿದ್ದರು. ಆ ಬಳಿಕ ಅವರು ಗುಜರಾತ್‌ನ ದಲಿತ ನಾಯಕರಾಗಿ ಹೊರ ಹೊಮ್ಮಿದ್ದರು.

ಈ ಕ್ಷೇತ್ರ ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿದ್ದರೂ ಮುಸ್ಲಿಂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. 65 ಸಾವಿರ ಮುಸ್ಲಿಮರು, 45 ಸಾವಿರ ದಲಿತರು, 25 ಸಾವಿರ ಚೌಧರಿ, 20 ಸಾವಿರ ಠಾಕೂರರು, 13 ಸಾವಿರ ದರ್ಬಾರ್ ಸಮುದಾಯದವರು ಕ್ಷೇತ್ರದಲ್ಲಿದ್ದಾರೆ.

ಬಿಜೆಪಿಯಿಂದ ಹೇಳಿಕೆ ದುರುಪಯೋಗ: ಖರ್ಗೆ

ಅಹಮದಾಬಾದ್ (ಪಿಟಿಐ): ಗುಜರಾತ್‌ನಲ್ಲಿ ಚುನಾವಣಾ ಲಾಭಕ್ಕಾಗಿ ತಮ್ಮ ಹೇಳಿಕೆಯನ್ನು ಬಿಜೆಪಿ ದುರುಪಯೋಗಪಡಿಸಿಕೊಂಡಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶನಿವಾರ ಹೇಳಿದ್ದಾರೆ. ರಾಜಕೀಯವು ನೀತಿ ಕೇಂದ್ರಿತವೇ ಹೊರತು ವ್ಯಕ್ತಿಕೇಂದ್ರಿತ ಅಲ್ಲ ಎಂದು ಅವರು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾವಣನಂತೆ ಹತ್ತು ತಲೆ ಇದೆಯೇ ಎಂದು ಖರ್ಗೆ ಅವರು ಇತ್ತೀಚೆಗೆ ಪ್ರಶ್ನಿಸಿದ್ದರು. ಇದಕ್ಕೆ ಮೋದಿ ಮತ್ತು ಬಿಜೆಪಿಯ ಇತರ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ್ದರು.

ತಾವು ಕಾರ್ಯಕ್ಷಮತೆಯ ರಾಜಕಾರಣವನ್ನು ನಂಬಿದವರು. ಬಿಜೆಪಿಯ ರಾಜಕಾರಣದಲ್ಲಿ ಪ್ರಜಾಪ್ರಭುತ್ವದ ಸ್ಫೂರ್ತಿಯೇ ಇಲ್ಲ. ಎಲ್ಲವೂ ಒಬ್ಬ ವ್ಯಕ್ತಿಯ ಸುತ್ತಲೇ ಇದೆ. ಅವರೇ ಎಲ್ಲೆಡೆಯೂ ಇರುತ್ತಾರೆ ಎಂದು ಖರ್ಗೆ ಹೇಳಿದ್ದಾರೆ. 'ರಾವಣ' ಹೇಳಿಕೆಯ ಬಳಿಕ ಇದೇ ಮೊದಲ ಬಾರಿಗೆ ಈ ವಿಚಾರದ ಬಗ್ಗೆ ಖರ್ಗೆ ಅವರು ಮಾತನಾಡಿದ್ದಾರೆ.

ಎಎಪಿ ಯಾರದೋ ಕುಮ್ಮಕ್ಕಿನಂತೆ ಕಾಂಗ್ರೆಸ್ ಮತಗಳನ್ನು ಒಡೆಯುವುದಕ್ಕಾಗಿ ಕೆಲಸ ಮಾಡುತ್ತಿದೆ ಎಂದು ಎಎಪಿಯ ಗೆಲುವಿನ ಅವಕಾಶಗಳ ಬಗ್ಗೆ ಪ್ರಶ್ನಿಸಿದ್ದಕ್ಕೆ ಖರ್ಗೆ ಪ್ರತಿಕ್ರಿಯೆ ನೀಡಿದರು.

'ಅಭಿವೃದ್ಧಿ, ಹಣದುಬ್ಬರ, ನಿರುದ್ಯೋಗ, ಬಡತನದ ವಿಚಾರದಲ್ಲಿ ನಾನು ಸರ್ಕಾರವನ್ನು ಟೀಕಿಸಿದ್ದೇನೆ. ಪ್ರಧಾನಿಯಾಗಿದ್ದವರು (ಈ ಹಿಂದೆ) ಈ ರೀತಿಯಲ್ಲಿ ಚುನಾವಣಾ ಪ್ರಚಾರ ಮಾಡಿದ್ದನ್ನು ನೋಡಿದ್ದೀರಾ? ನಾನು ವಿದ್ಯಾರ್ಥಿಯಾಗಿದ್ದಾಗ ಜವಾಹರಲಾಲ್ ನೆಹರೂ, ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾ ಗಾಂಧಿ ಅವರನ್ನು ನೋಡಿದ್ದೇನೆ. ಮೊರಾರ್ಜಿ ದೇಸಾಯಿ ಮತ್ತು ಇತರ ಪಕ್ಷಗಳಿಂದ ಪ್ರಧಾನಿ ಆಗಿದ್ದವರನ್ನೂ ಕಂಡಿದ್ದೇನೆ. ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರವು 27 ವರ್ಷಗಳಲ್ಲಿ ಜನರಿಗಾಗಿ ಕೆಲಸ ಮಾಡಿದ್ದರೆ ಇಷ್ಟೊಂದು ಪ್ರಚಾರ ಮಾಡುವ ಅಗತ್ಯ ಇದೆಯೇ' ಎಂದು ಖರ್ಗೆ ಅವರು ಪ್ರಶ್ನಿಸಿದ್ದಾರೆ.

27 ವರ್ಷಗಳಿಂದ ಗುಜರಾತ್‌ನಲ್ಲಿ ಕಾಂಗ್ರೆಸ್‌ಗೆ ಅಧಿಕಾರ ಹಿಡಿಯುವುದು ಸಾಧ್ಯವಾಗಿಲ್ಲ. ಈ ಬಾರಿ ಪಕ್ಷವು 'ಮೌನ' ಪ್ರಚಾರ ನಡೆಸಿದೆ ಎಂದು ಖರ್ಗೆ ಹೇಳಿದ್ದಾರೆ. 'ಜನರು ಸ್ಪಂದಿಸುತ್ತಿದ್ದಾರೆ. ಬುಡಕಟ್ಟು, ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಕಾಂಗ್ರೆಸ್‌ಗೆ ಮುನ್ನಡೆ ಇದೆ. ಮುಂದುವರಿದ ಜಾತಿಗಳ ಜನರಿಗೆ ಕೂಡ ಹಣದುಬ್ಬರ, ನಿರುದ್ಯೋಗ, ಭ್ರಷ್ಟಾಚಾರದಿಂದ ಬೇಸರ ಬಂದುಬಿಟ್ಟಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಎರಡನೇ ಹಂತದ ಪ್ರಚಾರ ಅಂತ್ಯ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಗೆ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ 93 ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರವು ಶನಿವಾರ ಅಂತ್ಯವಾಗಿದೆ. ಮೊದಲ ಹಂತದಲ್ಲಿ 89 ಕ್ಷೇತ್ರಗಳಲ್ಲಿ ಡಿಸೆಂಬರ್ 1ರಂದು ಮತದಾನ ನಡೆದಿತ್ತು. ರಾಜ್ಯದಲ್ಲಿ ಒಟ್ಟು 182 ಕ್ಷೇತ್ರಗಳಿವೆ.

ಎರಡನೇ ಮತ್ತು ಕೊನೆಯ ಹಂತದ ಮತದಾನವು ಸೋಮವಾರ ನಡೆಯಲಿದೆ. ಒಟ್ಟು 833 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ.

ಉತ್ತರ ಪ್ರದೇಶದ ಮೈನ್‌ಪುರಿ ಲೋಕಸಭಾ ಕ್ಷೇತ್ರ ಮತ್ತು ಐದು ರಾಜ್ಯಗಳ ಆರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಬಹಿರಂಗ ಪ್ರಚಾರವೂ ಶನಿವಾರ ಕೊನೆಗೊಂಡಿದೆ. ಈ ಕ್ಷೇತ್ರಗಳಲ್ಲಿಯೂ ಸೋಮವಾರ ಮತದಾನ ನಡೆಯಲಿದೆ.

ನುಡಿ-ಕಿಡಿ

ಯಾವುದೇ ವ್ಯಕ್ತಿಯ ಬಗ್ಗೆ ಏನನ್ನೂ ಹೇಳುವುದಿಲ್ಲ. ವೈಯಕ್ತಿಕ ಟೀಕೆ ಮಾಡುವುದಿಲ್ಲ. ಏಕೆಂದರೆ, ಸಂಸದೀಯ ರಾಜಕಾರಣದಲ್ಲಿ ನನಗೆ 51 ವರ್ಷಗಳ ಅನುಭವ ಇದೆ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ನೂರು ಬೈಗುಳಗಳನ್ನು ಮೋದಿ ಅವರತ್ತ ಕಾಂಗ್ರೆಸ್ ಎಸೆದಿದೆ. ಶ್ರೀಕೃಷ್ಣನಂತೆ ಜನರು ಸುದರ್ಶನ ಚಕ್ರ ತಿರುಗಿಸಿ ಗುಜರಾತ್‌ನಲ್ಲಿ ವಿರೋಧ ಪಕ್ಷವನ್ನು ಪ್ರಜಾಸತ್ತಾತ್ಮಕವಾಗಿಯೇ ನಾಶ ಮಾಡಲಿದ್ದಾರೆ.

ಸಂಬಿತ್ ಪಾತ್ರಾ, ಬಿಜೆಪಿ ವಕ್ತಾರ

ಸ್ವಾತಂತ್ರ್ಯದ ಬಳಿಕ ಕಾಂಗ್ರೆಸ್ ಪಕ್ಷವನ್ನು ಬರ್ಖಾಸ್ತು ಮಾಡಲು ಗಾಂಧಿ ಬಯಸಿದ್ದರು. ಈಗ ಅದು ನಿಮ್ಮ ಹೊಣೆ. ಕಾಂಗ್ರೆಸ್‌ಮುಕ್ತ ಗುಜರಾತ್ ನಿಮ್ಮೆಲ್ಲ ಸಮಸ್ಯೆ ಪರಿಹರಿಸುತ್ತದೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಚೆಟ್ರಿ ಪಡೆಗೆ ಒಲಿಯದ ಗೆಲುವು

ಇಂಡಿಯನ್ ಸೂಪರ್ ಲೀಗ್: ಎಟಿಕೆಎಂಬಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತವರಿನ ಪ್ರೇಕ್ಷಕರ ಅಪಾರ ಬೆಂಬಲದೊಂದಿಗೆ ಕಣಕ್ಕಿಳಿದ ಬೆಂಗಳೂರು ಎಫ್‌ಸಿಗೆ ಗೆಲುವು ಒಲಿಯಲಿಲ್ಲ. ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) 1-0ಯಿಂದ ಸುನಿಲ್ ಚೆಟ್ರಿ ನಾಯಕತ್ವದ ತಂಡಕ್ಕೆ ಸೋಲುಣಿಸಿತು.

ಪಂದ್ಯದ 66ನೇ ನಿಮಿಷದಲ್ಲಿ ಡಿಮಿಟ್ರಿ ಪೆಟ್ರಾಟೋಸ್ ಗಳಿಸಿದ ಗೋಲು ಎಟಿಕೆಎಂಬಿ ತಂಡದ ಗೆಲುವಿಗೆ ಕಾರಣವಾಯಿತು. ಹ್ಯೂಗೊ ಬೌಮೊಸ್ ನೀಡಿದ ಪಾಸ್‌ನಲ್ಲಿ ಡಿಮಿಟ್ರಿ ಗೋಲ್‌ಪೋಸ್ಟ್‌ನತ್ತ 'ಕರ್ವಿಂಗ್ ಶಾಟ್' ಮೂಲಕ ಚೆಂಡು ಒದ್ದರು. ಬಿಎಫ್‌ಸಿ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರು ಎಡಭಾಗಕ್ಕೆ ಡೈವ್ ಮಾಡಿದರೆ, ಚೆಂಡು ಬಲಭಾಗದ ಮೂಲಕ ಗುರಿ ಸೇರಿತು.

ಇದಕ್ಕೂ ಮೊದಲು ಆರಂಭದಿಂದಲೇ ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿನ ಪೈಪೋಟಿ ಕಂಡುಬಂತು. ಹಲವು ಅವಕಾಶಗಳು ಎರಡೂ ತಂಡಗಳಿಗೆ ಲಭಿಸಿದವು. ಪರಸ್ಪರ ಪಾಸ್‌ಗಳನ್ನು ರವಾನಿಸುವಲ್ಲಿ ಎಟಿಕೆಎಂಬಿ ಆಟಗಾರರಲ್ಲಿ ಹೆಚ್ಚು ಹೊಂದಾಣಿಕೆ ಕಂಡುಬಂತು. ಆದರೆ ಈ ವಿಷಯದಲ್ಲಿ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ಆಟ ಪರಿಣಾಮಕಾರಿ ಎನಿಸಲಿಲ್ಲ.


ಗೋಲು ಗಳಿಸಿದ ಬಾಗನ್ ತಂಡದ ಡಿಮಿಟ್ರಿ ಪೆಟ್ರಾಟೋಸ್ ಅವರನ್ನು ಸಹ ಆಟಗಾರ ಅಭಿನಂದಿಸಿದರು– ಎಟಿಕೆಎಂಬಿ ಟ್ವಿಟರ್ ಚಿತ್ರ

ಐದನೇ ನಿಮಿಷದಲ್ಲೇ ಬಿಎಫ್‌ಸಿಯ ಜಾವಿ ಹೆರ್ನಾಂಡಿಸ್ ಅವರಿಗೆ ಗೋಲು ಗಳಿಸುವ ಸುವರ್ಣ ಅವಕಾಶವಿತ್ತು. ಆದರೆ ಎದುರಾಳಿ ಗೋಲ್‌ಕೀಪರ್ ವಿಶಾಲ್ ಕೈತ್ ಕೋಟೆ ದಾಟಲಾಗಲಿಲ್ಲ. ನಾಯಕ ಚೆಟ್ರಿ, ರಾಯ್‌ಕೃಷ್ಣ ಕೂಡ ಗೋಲು ಗಳಿಸುವ ಅವಕಾಶಗಳನ್ನು ತಪ್ಪಿಸಿಕೊಂಡಿದ್ದು ತಂಡಕ್ಕೆ ಮುಳುವಾಯಿತು.

ಈ ಸೋಲಿನೊಂದಿಗೆ ಬೆಂಗಳೂರು (7) ಪಾಯಿಂಟ್ಸ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನಕ್ಕಿಳಿಯಿತು. ಈ ಪಂದ್ಯದಲ್ಲಿ ಎಟಿಕೆಎಂಬಿಯ ಬ್ರೆಂಡನ್ ಹ್ಯಾಮಿಲ್, ಲೆನ್ನಿ ರಾಡ್ರಿಗಸ್ ಮತ್ತು ಸುಭಾಶಿಸ್ ಬೋಸ್ ಹಳದಿ ಕಾರ್ಡ್ ದರ್ಶನ ಮಾಡಿದರು.

ಎರಡನೇ ಸ್ಥಾನಕ್ಕೆ ಹೈದರಾಬಾದ್: ಚೆನ್ನೈನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ತಂಡವು 3-1ರಿಂದ ಆತಿಥೇಯ ಚೆನ್ನೈಯಿನ್ ಎಫ್‌ಸಿಗೆ ಸೋಲುಣಿಸಿತು. ಇದರೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಸದ್ಯ ತಂಡದ ಬಳಿ 19 ಪಾಯಿಂಟ್‌ಗಳಿವೆ

ಹೈದರಾಬಾದ್ ತಂಡಕ್ಕಾಗಿ ಹಲೀಚರಣ್ ನಾರ್ಜರಿ (65ನೇ ನಿಮಿಷ), ಚಿಂಗ್ಲೆನ್ಸನಾ ಸಿಂಗ್ (74ನೇ ನಿ.) ಮತ್ತು ಸಬ್‌ಸ್ಟಿಟ್ಯೂಟ್ ಆಟಗಾರ ಬೋರ್ಜಾ ಹೆರೆರಾ (85ನೇ ನಿ.) ಗೋಲು ದಾಖಲಿಸಿದರು. ಚೆನ್ನೈ ಪರ ಪೀಟರ್ ಸ್ಲಿಸ್ಕೊವಿಚ್ (78ನೇ ನಿ.) ಗೋಲು ಹೊಡೆದರು.

ಮೊಹಸಿನ್ ಮಿಂಚು: ರಾಜ್ಯಕ್ಕೆ ಮುನ್ನಡೆ

ಮೈಸೂರು: ಕರ್ನಾಟಕದ ಮೊಹಸಿನ್ ಖಾನ್ ಮಿಂಚಿನ ಬೌಲಿಂಗ್ ದಾಳಿಗೆ ಜಮ್ಮು ಮತ್ತು ಕಾಶ್ಮೀರ ತಂಡವು ಅಲ್ಪಮೊತ್ತಕ್ಕೆ ಕುಸಿಯಿತು. ಕರ್ನಾಟಕ ಮುನ್ನಡೆ ಗಳಿಸಿತು.

ಇಲ್ಲಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾದ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಜಮ್ಮು ಮತ್ತು ಕಾಶ್ಮೀರ 49.3 ಓವರ್‌ಗಳಲ್ಲಿ 86 ರನ್ ಗಳಿಸಿ ಆಲೌಟ್ ಆಯಿತು.

ಅದಕ್ಕೆ ಉತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ತಂಡ ಮೊದಲ ಓವರ್‌ನಲ್ಲಿಯೇ ವಿಶಾಲ್ ಓನತ್ ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ಸ್ವರೂಪ್ ಎಸ್. ಹಿಪ್ಪರಗಿ (61 ಬ್ಯಾಟಿಂಗ್) ಅಮೋಘ ಅರ್ಧ ಶತಕದ ನೆರವಿನಿಂದ ದಿನದಾಟದ ಮುಕ್ತಾಯಕ್ಕೆ 38 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 145 ರನ್ ಗಳಿಸುವ ಮೂಲಕ ಕೆಎಸ್‌ಸಿಎ ತಂಡವು 59 ರನ್ ಮುನ್ನಡೆ ಪಡೆಯಿತು.

ಸಂಕ್ಷಿಪ್ತ ಸ್ಕೋರು: ಜಮ್ಮು ಮತ್ತು ಕಾಶ್ಮೀರ: 49.3 ಓವರ್‌ಗಳಲ್ಲಿ 86 (ರಣಜೋತ್ ಸಿಂಗ್ 20. ಮೊಹಸಿನ್ ಖಾನ್ 41ಕ್ಕೆ 4, ಆದಿತ್ಯ ನಾಯರ್ 7ಕ್ಕೆ 2), ಕೆಎಸ್‌ಸಿಎ: 38 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 145 (ಸ್ವರೂಪ್ ಎಸ್. ಹಿಪ್ಪರಗಿ ಔಟಾಗದೆ 61, ಪ್ರಖರ್ ಚತುರ್ವೇದಿ ಔಟಾಗದೆ 37)

ಭಾರತ–ಬಾಂಗ್ಲಾ ಏಕದಿನ ಪಂದ್ಯ ಇಂದು; ರಾಹುಲ್, ಧವನ್ ಮೇಲೆ ಕಣ್ಣು

ಆರಂಭಿಕ ಬ್ಯಾಟಿಂಗ್ ಜೋಡಿಗೆ ಪರೀಕ್ಷೆ

ಮೀರಪುರ್ (ಪಿಟಿಐ): ಭಾರತ ಏಕದಿನ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಸ್ಥಾನ ಉಳಿಸಿಕೊಳ್ಳಲು ಶಿಖರ್ ಧವನ್ ಮತ್ತು ಕೆ.ಎಲ್. ರಾಹುಲ್ ಅವರಿಗೆ ಭಾನುವಾರ ಆರಂಭವಾಗಲಿರುವ ಬಾಂಗ್ಲಾದೇಶ ಎದುರಿನ ಸರಣಿಯು ಪರೀಕ್ಷಾ ಕಣವಾಗಲಿದೆ.

ಮೂರು ಪಂದ್ಯಗಳ ಸರಣಿ ಇದಾಗಿದೆ. ಈಚೆಗೆ ನ್ಯೂಜಿಲೆಂಡ್‌ನಲ್ಲಿ ನಡೆದ ಏಕದಿನ ಸರಣಿಯಲ್ಲಿ ವಿಶ್ರಾಂತಿ ಪಡೆದಿದ್ದ ರೋಹಿತ್ ಶರ್ಮಾ, ರಾಹುಲ್, ವಿರಾಟ್ ಕೊಹ್ಲಿ ಅವರು ತಂಡಕ್ಕೆ ಮರಳಿದ್ದಾರೆ.

ಇದರಿಂದಾಗಿ ತಂಡದ ಬಲ ಹೆಚ್ಚಿದೆ. ಆದರೆ ಈ ಸರಣಿಯಲ್ಲಿ ಸೂರ್ಯಕುಮಾರ್ ಯಾದವ್ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಸಂಜು ಸ್ಯಾಮ್ಸನ್ ಕೂಡ ಇಲ್ಲ. ಯುವ ಆಟಗಾರರಾದ ರಜತ್ ಪಾಟೀದಾರ್, ರಾಹುಲ್ ತ್ರಿಪಾಠಿ, ವೇಗಿ ಉಮ್ರಾನ್ ಮಲೀಕ್ ಸ್ಥಾನ ಗಿಟ್ಟಿಸಿದ್ದಾರೆ. ಗಾಯಗೊಂಡಿರುವ ಮೊಹಮ್ಮದ್ ಶಮಿ, ಭುವನೇಶ್ವರ್ ಕುಮಾರ್ ಹಾಗೂ ಜಸ್‌ಪ್ರೀತ್ ಬೂಮ್ರಾ ಅವರ ಗೈರಿನಲ್ಲಿ ಉಮ್ರಾನ್, ದೀಪಕ್ ಚಾಹರ್ ಹಾಗೂ ಸಿರಾಜ್ ಅವರಿಗೆ ಕಣಕ್ಕಿಳಿಯುವ ಅವಕಾಶ ಸಿಗಲಿದೆ.

ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಮತ್ತು ಅಕ್ಷರ್ ಪಟೇಲ್ ಸ್ಪಿನ್ ಬೌಲರ್ ಸ್ಥಾನಕ್ಕೆ ಪೈಪೋಟಿ ನಡೆಸುವ ಸಾಧ್ಯತೆ ಇದೆ. ವಿಕೆಟ್‌ಕೀಪಿಂಗ್‌ನಲ್ಲಿ ರಿಷಭ್ ಪಂತ್ ತಮ್ಮ ಸಾಮರ್ಥ್ಯ ತೋರುವ ಒತ್ತಡದಲ್ಲಿದ್ದಾರೆ. ಅವರು ವೈಫಲ್ಯದಿಂದ ಹೊರಬರದಿದ್ದರೆ ಇಶಾನ್ ಕಿಶನ್‌ಗೆ ಅವಕಾಶ ಸಿಗುವುದು ಖಚಿತ.


ಫ್ರಿಸ್‌ಬೀ ಆಟದಲ್ಲಿ ನಿರತ ಭಾರತ ತಂಡದ ವಿರಾಟ್ ಕೊಹ್ಲಿ ಮತ್ತು ಸಹ ಆಟಗಾರರು –ಎಎಫ್‌ಪಿ ಚಿತ್ರ


ಬಾಂಗ್ಲಾ ತಂಡವು ಈಚೆಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಎದುರು ಸೋತಿತ್ತು. ಏಕದಿನ ತಂಡಕ್ಕೆ ನಾಯಕತ್ವ ವಹಿಸಿಕೊಂಡಿರುವ ಲಿಟನ್ ದಾಸ್ ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವತ್ತ ಚಿತ್ತ ನೆಟ್ಟಿದ್ದಾರೆ. ಆದರೆ ತಂಡದಲ್ಲಿ ಪ್ರಮುಖ ಬೌಲರ್ ತಸ್ಕಿನ್ ಅಹಮದ್ ಗಾಯಗೊಂಡು ವಿಶ್ರಾಂತಿ ಪಡೆದಿದ್ದಾರೆ. ಇದರಿಂದಾಗಿ ಮುಸ್ತಫಿಜುರ್ ರೆಹಮಾನ್ ಮೇಲೆ ಒತ್ತಡ ಹೆಚ್ಚಲಿದೆ.

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಶಿಖರ್ ಧವನ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ರಜತ್ ಪಾಟೀದಾರ್, ರಾಹುಲ್ ತ್ರಿಪಾಠಿ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಸೇನ್, ಉಮ್ರಾನ್ ಮಲಿಕ್, ದೀಪಕ್ ಚಾಹರ್, ಶಾರ್ದೂಲ್ ಠಾಕೂರ್, ಶಹಬಾಜ್ ಅಹಮದ್, ಮೊಹಮ್ಮದ್ ಸಿರಾಜ್.

ಬಾಂಗ್ಲಾದೇಶ: ಲಿಟನ್ ಕುಮಾರ್ ದಾಸ್ (ನಾಯಕ), ಅನಾಮುಲ್ ಹೇಗ್ ಬಿಜಯ್, ಶಕೀಬ್ ಅಲ್ ಹಸನ್, ಮುಷ್ಫಿಕುರ್ ರಹೀಮ್, ಅಫಿಫ್ ಹುಸೇನ್, ಯಾಸೀರ್ ಅಲಿ ಚೌಧರಿ, ಮೆಹದಿ ಹಸನ್ ಮಿರಾಜ್, ಮುಸ್ತಫಿಜುರ್ ರೆಹಮಾನ್, ತಸ್ಕಿನ್ ಅಹಮದ್, ಹಸನ್ ಮೆಹಮೂದ್, ಇಬಾದತ್ ಹುಸೇನ್ ಚೌಧರಿ, ನಸೂಮ್ ಅಹಮದ್, ಮೆಹಮೂದ್ ಉಲ್ಲಾಹ, ನಜ್ಮುಲ್ ಹುಸೇನ್ ಶಾಂತೊ, ಖಾಜಿ ನೂರುಲ್ ಹಸನ್ ಸೋಹನ್, ಶರೀಫುಲ್ ಇಸ್ಲಾಮ್.

ಪಂದ್ಯ ಆರಂಭ: ಬೆಳಿಗ್ಗೆ 11.30.



ಟೆಸ್ಟ್ ಕ್ರಿಕೆಟ್: ಮುನ್ನಡೆಯ ನಿರೀಕ್ಷೆಯಲ್ಲಿ ಇಂಗ್ಲೆಂಡ್


ಪಾಕಿಸ್ತಾನ ಬ್ಯಾಟರ್‌ಗಳ ಅಬ್ಬರ

ರಾವಲ್ಪಿಂಡಿ (ಎಎಫ್‌ಪಿ): ಪಾಕಿಸ್ತಾನದ ಮೂವರು ಬ್ಯಾಟರ್‌ಗಳು ಶತಕ ಗಳಿಸುವ ಮೂಲಕ ಪ್ರವಾಸಿ ಇಂಗ್ಲೆಂಡ್‌ಗೆ ದಿಟ್ಟ ತಿರುಗೇಟು ನೀಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಮೂರನೇ ದಿನದಾಟದಲ್ಲಿ ಪಾಕ್ ತಂಡವು 136 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 499 ರನ್ ಗಳಿಸಿತು. ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 657 ರನ್ ಗಳಿಸಿತ್ತು. ಮೊದಲ ದಿನವೇ ನಾಲ್ವರು ಬ್ಯಾಟರ್‌ಗಳು ಶತಕ ಬಾರಿಸಿದ್ದರು.

ಅದಕ್ಕುತ್ತರವಾಗಿ ಆತಿಥೇಯ ತಂಡದ ಅಬ್ದುಲ್ಲಾ ಶಫೀಕ್ (114; 203ಎ, 4X13, 3X6), ಇಮಾಮ್ ಉಲ್ ಹಕ್ (121; 207ಎ, 4X15, 6X2) ಹಾಗೂ ನಾಯಕ ಬಾಬರ್ ಆಜಂ (136; 168ಎ, 4X19, 6X1) ಶತಕ ದಾಖಲಿಸಿದರು.

ಆರಂಭಿಕ ಜೋಡಿ ಶಫೀಕ್ ಮತ್ತು ಇಮಾಮ್ ಮೊದಲ ವಿಕೆಟ್ ಜೊತೆಯಾಟದಲ್ಲಿ 225 ರನ್ ಗಳಿಸಿದರು. ವಿಲ್ ಜ್ಯಾಕ್ಸ್ ಬೌಲಿಂಗ್‌ನಲ್ಲಿ ಶಫೀಕ್ ಔಟಾದರು. ಇದರೊಂದಿಗೆ ಜೊತೆಯಾಟ ಮುರಿಯಿತು. ಸ್ವಲ್ಪ ಹೊತ್ತಿನ ನಂತರ ಇಮಾಮ್ ಕೂಡ ಔಟಾದರು. ಅಜರ್ ಅಲಿ ಕೂಡ ಬೇಗನೆ ಔಟಾದರು.


ಬಾಬರ್ ಆಜಂ ಶತಕ ಸಂಭ್ರಮ – ಎಎಫ್‌ಪಿ ಚಿತ್ರ

ಈ ಹಂತದಲ್ಲಿ ನಾಯಕ ಬಾಬರ್ ಚೆಂದದ ಬ್ಯಾಟಿಂಗ್ ಮಾಡಿದರು. ಆದರೆ ಇನ್ನೊಂದು ಬದಿಯಲ್ಲಿ ವಿಕೆಟ್‌ಗಳನ್ನು ಉರುಳಿಸುವಲ್ಲಿ ಇಂಗ್ಲೆಂಡ್ ಬೌಲರ್‌ಗಳು ಯಶಸ್ವಿಯಾದರು. ಪಾಕ್ ತಂಡವು ಇಂಗ್ಲೆಂಡ್‌ನ ಮೊತ್ತವನ್ನು ಚುಕ್ತಾ ಮಾಡಲು ಇನ್ನೂ 158 ರನ್ ಗಳಿಸಬೇಕಿದೆ. ಆದರೆ, ಭಾನುವಾರ ಬೆಳಿಗ್ಗೆಯೇ ಮೂರು ವಿಕೆಟ್‌ಗಳನ್ನು ಕಿತ್ತು ದೊಡ್ಡ ಮುನ್ನಡೆ ಗಳಿಸುವ ಛಲದಲ್ಲಿ ಪ್ರವಾಸಿ ತಂಡವಿದೆ. ಈ ಅಂಗಳದಲ್ಲಿ ಇದುವರೆಗೆ ಒಟ್ಟು 1156 ರನ್‌ಗಳು ದಾಖಲಾಗಿವೆ. ಅದರಲ್ಲಿ ಒಟ್ಟು ಏಳು ಶತಕಗಳು ಸೇರಿವೆ!

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 101 ಓವರ್‌ಗಳಲ್ಲಿ 657. ಪಾಕಿಸ್ತಾನ: 136 ಓವರ್‌ಗಳಲ್ಲಿ 7ಕ್ಕೆ499 (ಅಬ್ದುಲ್ಲಾ ಶಫೀಕ್ 114, ಇಮಾಮ್ ಉಲ್ ಹಕ್ 121, ಬಾಬರ್ ಆಜಂ 136, ಸೌದ್ ಶಕೀಲ್ 37, ಮೊಹಮ್ಮದ್ ರಿಜ್ವಾನ್ 29, ಜ್ಯಾಕ್ ಲೀಚ್ 160ಕ್ಕೆ2, ವಿಲ್ ಜ್ಯಾಕ್ಸ್ 132ಕ್ಕೆ3)

ಪ್ರೊ ಕಬಡ್ಡಿ: ಪುಣೇರಿಗೆ ಜಯ

ಹೈದರಾಬಾದ್ (ಪಿಟಿಐ): ದಿಟ್ಟ ಆಟವಾಡಿದ ಪುಣೇರಿ ಪಲ್ಟನ್ ತಂಡದವರು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ರೋಚಕ ಜಯ ಸಾಧಿಸಿದರು.

ಇಲ್ಲಿಯ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಹಣಾಹಣಿಯಲ್ಲಿ ಪುಣೇರಿ ಪಲ್ಟನ್ 47-44ರಿಂದ ದಬಾಂಗ್ ಡೆಲ್ಲಿ ತಂಡವನ್ನು ಪರಾಭವಗೊಳಿಸಿತು. ಈ ಗೆಲುವಿನೊಂದಿಗೆ ಪುಣೇರಿ ಪಾಯಿಂಟ್ಸ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿತು.

ಪುಣೇರಿ ತಂಡದ ಆಕಾಶ್ ಶಿಂಧೆ ಮತ್ತು ಪಂಕಜ್ ಮೋಹಿತೆ ಕ್ರಮವಾಗಿ 16 ಮತ್ತು 11 ಪಾಯಿಂಟ್ಸ್ ಗಳಿಸಿ ಗೆಲುವಿನಲ್ಲಿ ಮಿಂಚಿದರು.

ತಲೈವಾಸ್‌ಗೆ ಜಯ: ಮತ್ತೊಂದು ಸೆಣಸಾಟದಲ್ಲಿ ತಮಿಳ್ ತಲೈವಾಸ್ 52-24ರಿಂದ ತೆಲುಗು ಟೈಟನ್ಸ್ ವಿರುದ್ಧ ಗೆದ್ದಿತು. ವಿಜೇತ ತಂಡದ ಅಜಿಂಕ್ಯ ಪವಾರ್ ಅಮೋಘ 20 ಪಾಯಿಂಟ್ಸ್ ಕಲೆಹಾಕಿದರು. ನರೇಂದರ್ (10) ಗೆಲುವಿಗೆ ಕೊಡುಗೆ ನೀಡಿದರು.

ಇಂದಿನ ಪಂದ್ಯಗಳು

ಯು ಮುಂಬಾ– ಜೈಂಟ್ಸ್

ಬೆಂಗಳೂರು ಬುಲ್ಸ್– ಯುಪಿ ಯೋಧಾ

ರಿಕಿ ಪಾಂಟಿಂಗ್ ಚೇತರಿಕೆ

ಪರ್ತ್ (ಪಿಟಿಐ): ಎದೆನೋವಿನ ಕಾರಣ ಆಸ್ಪತ್ರೆಗೆ ದಾಖಲಾಗಿದ್ದ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕ ರಿಕಿ ಪಾಂಟಿಂಗ್ ಅವರು ಚೇತರಿಸಿಕೊಂಡಿದ್ದು, ವೀಕ್ಷಕ ವಿವರಣೆಕಾರನಾಗಿ ಕೆಲಸ ಮುಂದುವರಿಸಿದ್ದಾರೆ.

ಆಸ್ಟ್ರೇಲಿಯಾ-ವೆಸ್ಟ್ ಇಂಡೀಸ್ ನಡುವಣ ಮೊದಲ ಟೆಸ್ಟ್ ಪಂದ್ಯಕ್ಕೆ ವೀಕ್ಷಕ ವಿವರಣೆ ಮಾಡುವ ಸಂದರ್ಭದಲ್ಲಿ ಶುಕ್ರವಾರ ಅಸ್ವಸ್ಥರಾಗಿದ್ದ ಅವರನ್ನು ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಕಳೆದ ದಿನ ನಾನು ತುಂಬಾ ಜನರನ್ನು ಗಾಬರಿಗೊಳ್ಳುವಂತೆ ಮಾಡಿದ್ದೆ ಮಾತ್ರವಲ್ಲ, ನನಗೂ ಆತಂಕ ಉಂಟಾಗಿತ್ತು' ಎಂದು ಶನಿವಾರ ನಾಲ್ಕನೇ ದಿನದಾಟದ ವೀಕ್ಷಕ ವಿವರಣೆ ವೇಳೆ ಪಾಂಟಿಂಗ್ ಹೇಳಿದರು.

ನೈಸ್ ಡಿಎಚ್ ಕಪ್: ಸೆಮಿ ಇಂದು

ಬೆಂಗಳೂರು: ಟೈಟನ್, ಸ್ವಿಸ್ ರೇ, ವಿಸೆನ್ ಮತ್ತು ಐಕ್ವಿಯಾ ತಂಡಗಳು ಇಲ್ಲಿ ನಡೆಯುತ್ತಿರುವ 'ನೈಸ್ ಡಿಎಚ್ ಕಪ್ ಫುಟ್‌ಬಾಲ್ ಟೂರ್ನಿ'ಯ ಸೆಮಿಫೈನಲ್ ಪ್ರವೇಶಿಸಿದವು.

ಭಾನುವಾರ ನಡೆಯಲಿರುವ ಸೆಮಿಫೈನಲ್ ಪಂದ್ಯಗಳಲ್ಲಿ ಟೈಟನ್–ವಿಸೆನ್ ಮತ್ತು ಸ್ವಿಸ್ ರೇ– ಐಕ್ವಿಯಾ ತಂಡಗಳು ಎದುರಾಗಲಿವೆ. ಫೈನಲ್ ಕೂಡಾ ಭಾನುವಾರ ನಡೆಯಲಿದೆ.

ಶನಿವಾರ ನಡೆದ ಮೊದಲ ಕ್ವಾರ್ಟರ್ ಫೈನಲ್‌ನಲ್ಲಿ ಟೈಟನ್ 1-0 ಗೋಲಿನಿಂದ ಅಡೋಬಿ ತಂಡವನ್ನು ಮಣಿಸಿತು.

ಇನ್ನೊಂದು ಎಂಟರಘಟ್ಟದ ಪಂದ್ಯದಲ್ಲಿ ಸ್ವಿಸ್ ರೇ ಪೆನಾಲ್ಟಿ ಶೂಟೌಟ್‌ನಲ್ಲಿ 3-2 ರಲ್ಲಿ ಬಾಷ್ ತಂಡವನ್ನು ಮಣಿಸಿತು.

ವಿಸೆನ್ 1-0 ರಲ್ಲಿ ತಾವಂತ್ ವಿರುದ್ಧ ಗೆದ್ದರೆ, ಐಕ್ವಿಯಾ 1-0 ರಲ್ಲಿ ಎಪ್ಸಿಲಾನ್ ತಂಡವನ್ನು ಮಣಿಸಿತು.

ವಿಂಡೀಸ್‌ಗೆ ಸೋಲು ತಪ್ಪಿಸುವರೇ ಬ್ರಾಥ್‌ವೇಟ್?

ಪರ್ತ್ (ಎಎಫ್‌ಪಿ): ಕ್ರೇಗ್ ಬ್ರಾಥ್‌ವೇಟ್ (ಬ್ಯಾಟಿಂಗ್ 101) ವೆಸ್ಟ್ ಇಂಡೀಸ್ ತಂಡವನ್ನು ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಪಂದ್ಯದಲ್ಲಿ ಸೋಲಿನ ದವಡೆಯಿಂದ ಪಾರು ಮಾಡುವ ಭರವಸೆ ಮೂಡಿಸಿದ್ದಾರೆ.

499 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿರುವ ವಿಂಡೀಸ್ ತಂಡವು ನಾಲ್ಕನೇ ದಿನದಾಟದ ಅಂತ್ಯಕ್ಕೆ 62 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 192 ರನ್ ಗಳಿಸಿದೆ. ಆರಂಭಿಕ ಬ್ಯಾಟರ್ ಕ್ರೇಗ್ ಮತ್ತು ಕೈಲ್ ಮೇಯರ್ಸ್ ಕ್ರೀಸ್‌ನಲ್ಲಿದ್ದಾರೆ.

ವಿಂಡೀಸ್ ತಂಡಕ್ಕೆ ಗೆಲುವು ಸಾಧಿಸಲು ಕೊನೆಯ ದಿನವಾದ ಭಾನುವಾರ 306 ರನ್ ಗಳಿಸುವ ಅಗತ್ಯವಿದೆ. ಇಲ್ಲವೇ ರಕ್ಷಣಾತ್ಮಕವಾಗಿ ಆಡಿ ಡ್ರಾ ಮಾಡಿಕೊಳ್ಳುವ ಅವಕಾಶವಿದೆ.


ಆದರೆ ಕೊನೆಯ ದಿನದ ಪಿಚ್‌ನಲ್ಲಿ ವಿಂಡೀಸ್ ತಂಡದ ಏಳು ವಿಕೆಟ್‌ಗಳನ್ನು ಗಳಿಸಿ ಗೆಲುವಿನ ಸಂಭ್ರಮ ಆಚರಿಸುವ ಛಲದಲ್ಲಿ ಆತಿಥೇಯರಿದ್ದಾರೆ.

ಲಾಬುಷೇನ್ ದಾಖಲೆ: ಆಸ್ಟ್ರೇಲಿಯಾದ ಬ್ಯಾಟರ್ ಮಾರ್ನಸ್ ಲಾಬುಷೇನ್ (104; 110ಎ, 4X13, 6X2) ಶತಕ ಬಾರಿಸಿದರು. ಅವರು ಮೊದಲ ಇನಿಂಗ್ಸ್‌ನಲ್ಲಿ ದ್ವಿಶತಕ ಗಳಿಸಿದ್ದರು. ಇದು ದಾಖಲೆಯಾಗಿದೆ.


ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 152.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 598ಡಿಕ್ಲೇರ್ಡ್; ವೆಸ್ಟ್ ಇಂಡೀಸ್: 98.2 ಓವರ್‌ಗಳಲ್ಲಿ 283. ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 37 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 182 ಡಿಕ್ಲೇರ್ಡ್ (ಡೇವಿಡ್ ವಾರ್ನರ್ 48, ಮಾರ್ನಸ್ ಲಾಬುಷೇನ್ ಔಟಾಗದೆ 104), ವೆಸ್ಟ್ ಇಂಡೀಸ್: 62 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 192 (ಕ್ರೇಗ್ ಬ್ರಾಥ್‌ವೇಟ್ ಬ್ಯಾಟಿಂಗ್ 101, ತೇಜನಾರಾಯಣ ಚಂದ್ರಪಾಲ್ 45, ಜರ್ಮೈನ್ ಬ್ಲ್ಯಾಕ್‌ವುಡ್ 24, ನೇಥನ್ ಲಯನ್ 54ಕ್ಕೆ2)

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 4 ಡಿಸೆಂಬರ್ 2022



ಯಕ್ಷಲೋಕದ ಧ್ರುವ ನಕ್ಷತ್ರ 11



ಮಸಾಲೆ ದೋಸೆ ತಿನ್ನೋದು ಬಿಟ್ಟಿದ್ದೇವಾ? 12



ಛಾಯಾಗ್ರಹಣದ 'ಯುವರಾಜ'! 13

ಒಲುಮೆ ಕವಿಗೆ ಒಲಿದವಳಿಗೂ ಸಮ್ಮಾನ

ಶರತ್ ಹೆಗ್ಡೆ

ನಿನ್ನೊಲುಮೆಯಿಂದಲೇ ಬಾಳು ಬೆಳಕಾಗಿರಲು ಚಂದ್ರಮುಖಿ ನೀನೆನಲು ತಪ್ಪೇನೆ?...

ಕೆ.ಎಸ್. ನರಸಿಂಹಸ್ವಾಮಿ ಅವರ ಕಾವ್ಯದ ಅದ್ಭುತ ಸಾಲುಗಳಲ್ಲಿ ಇದೂ ಒಂದು. ಈ ಸಾಲು, ಕವಿಯ ಬಾಳು ಬೆಳಗಿಸಿದ ಶಕ್ತಿಯನ್ನು ಗುರುತಿಸುವಲ್ಲೂ ಯಶಸ್ವಿಯಾಗಿದೆ. ಕವಿಗೇನೋ ಪ್ರಶಸ್ತಿ, ಪುರಸ್ಕಾರಗಳಿವೆ. ಆದರೆ, ಕವಿಯನ್ನು 'ಸಹಿಸಿಕೊಂಡ' ಅವರ ಪತ್ನಿಗೇನಿದೆ? ಆ ಚಿಂತನೆ ಮೊಳೆತಾಗಲೇ ಹುಟ್ಟಿಕೊಂಡದ್ದು 'ನಿನ್ನೊಲುಮೆಯಿಂದಲೇ' ಹೆಸರಿನ ಪ್ರಶಸ್ತಿ.

ಹೀಗೊಂದು ಆಲೋಚನೆ ಹೊಳೆದಾಗ ನರಹಳ್ಳಿ ಬಾಲಸುಬ್ರಹ್ಮಣ್ಯ, ಕಿಕ್ಕೇರಿ ಕೃಷ್ಣಮೂರ್ತಿ ಸಹಿತ ಹಲವು ಸಮಾನ ಮನಸ್ಕರು ಸೇರಿ ಅದನ್ನು ಅನುಷ್ಠಾನಕ್ಕೆ ತರುವ ಕಾರ್ಯಕ್ಕೆ ಮುಂದಾದರು. ಅದರ ಪರಿಣಾಮವೇ ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್‌ನ ಅಡಿ ಕೆಎಸ್‌ನ ಅವರ ಪತ್ನಿ ವೆಂಕಮ್ಮ ಅವರ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡುವ ಪರಿಪಾಟ ಆರಂಭವಾಗಿರುವುದು.



ಗಿರಿಜಾ ಲಕ್ಷ್ಮಣರಾವ್



ಸಮತಾ ಪಾತ್ರೋಟ

ಏನಿದು ನಿನ್ನೊಲುಮೆಯಿಂದಲೇ?

ಕೆ.ಎಸ್.ನ. ಅವರೇ ಹಲವಾರು ಬಾರಿ 'ನಾನೊಬ್ಬ ಕುಟುಂಬ ಕವಿ. ಏಕೆಂದರೆ ಹೆಚ್ಚಿನ ಪ್ರೇಮ ಕವಿತೆಗಳೆಲ್ಲ ಮದುವೆಯಾದ ಬಳಿಕ ಬರೆದಿರುವಂಥವು. ಇವು ಕುಟುಂಬಕ್ಕೆ ಅನ್ವಯಿಸುವ ಕವಿತೆಗಳು' ಎಂದಿದ್ದರಂತೆ. ಕುಟುಂಬವೆಂದರೆ ಅವರ ಪ್ರಕಾರ ವಿಶ್ವವೇ ಒಂದು ಕುಟುಂಬ. ದೇವರು ತಂದೆ. ಭೂಮಿ ತಾಯಿ, ಮನುಷ್ಯ ಮಗ. ಇದು ಅವರ ಭಾವ ವೈಶಾಲ್ಯ ಎಂದು ನೆನಪಿಸಿದರು ಕವಿ ಬಿ.ಆರ್. ಲಕ್ಷ್ಮಣರಾವ್.


'ಕವಿಗೆ ಪತ್ನಿಯ ಒಲುಮೆಯೇ ಆಧಾರ. ಇದುವರೆಗೆ ಕವಿಯ ಪತ್ನಿಯ ಹೆಸರಿಗೆ ಯಾವ ಪ್ರಶಸ್ತಿಯೂ ಇರಲಿಲ್ಲ. ಈಗ ಪ್ರೇಮಕವಿಯ ಪತ್ನಿಯ ಹೆಸರಿನ ಪ್ರಶಸ್ತಿಯನ್ನು ಹಾಲಿ ಕವಿಯ ಪತ್ನಿಗೆ ನೀಡುತ್ತಿರುವ ಉದಾಹರಣೆ ದೇಶದಲ್ಲಿ ಬೇರೆಲ್ಲಿಯೂ ಇಲ್ಲ. ಅಂಥ ಅಪರೂಪದ ಪ್ರಶಸ್ತಿ ಇದು' ಎನ್ನುತ್ತಾ ಕೆಎಸ್‌ನ ಒಡನಾಟ, ವೆಂಕಮ್ಮ ಅವರ ಜೀವನ ಪ್ರೀತಿಯನ್ನು ನೆನಪಿಸಿಕೊಂಡರು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಕಿಕ್ಕೇರಿ ಕೃಷ್ಣಮೂರ್ತಿ.

ಪ್ರಶಸ್ತಿಗೆ 'ಮೈಸೂರು ಮಲ್ಲಿಗೆ'ಯ ಕವಿಯ ಪತ್ನಿಯ ಹೆಸರು. ನನಗೆ 'ಜಾಜಿ ಮಲ್ಲಿಗೆ ಕವಿ' ಅಂತ ಕರೀತಾರೆ. ಈಗ ಮೈಸೂರು ಮಲ್ಲಿಗೆ ಕವಿ ಪತ್ನಿಯ ಹೆಸರಿನ ಪ್ರಶಸ್ತಿ, ಜಾಜಿ ಮಲ್ಲಿಗೆ ಕವಿಯ ಪತ್ನಿಗೆ ಸಲ್ಲುತ್ತಿದೆ. ಇದಕ್ಕಿಂತ ಖುಷಿ ಬೇರೇನಾದರೂ ಇದೆಯೇ ಎಂದು ಪ್ರಶ್ನಿಸಿದರು ಕವಿ ಸತ್ಯಾನಂದ ಪಾತ್ರೋಟ. ಅವರ ಪತ್ನಿ ಸಮತಾ ಪಾತ್ರೋಟ ಅವರು 2020–21ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

'ಕವಿ ಹೆಂಡ್ತಿಗೂ ಪ್ರಶಸ್ತಿ ಕೊಡ್ತಾರಂತ ಗೊತ್ತಿರ್ಲಿಲ್ರೀ. ನಂಗಂತೂ ಬಾಳ ಸಂತೋಷ ಆಗೇದ. ನನಗಿಂತಲೂ ನನ್ನ ಸ್ನೇಹಿತೆಯರು, ಹಿತೈಷಿಗಳಿಗೆ ತುಂಬಾ ಖುಷಿ ಆಗೇದ' ಎಂದರು ಸಮತಾ ಪಾತ್ರೋಟ.


2021-22 ನೇ ಸಾಲಿನ ಪ್ರಶಸ್ತಿಗೆ ಗಿರಿಜಾ ಲಕ್ಷ್ಮಣರಾವ್ (ಕವಿ ಲಕ್ಷ್ಮಣರಾವ್ ಅವರ ಪತ್ನಿ) ಅವರು ಪಾತ್ರರಾಗಿದ್ದಾರೆ. 'ನಾನು ಈ ಪ್ರಶಸ್ತಿಗೆ ಆಯ್ಕೆಯಾದದ್ದು ತುಂಬಾ ಹೆಮ್ಮೆ ಅನಿಸುತ್ತಿದೆ. ವೆಂಕಮ್ಮ ಅವರ ಹೆಸರಿನ ಪ್ರಶಸ್ತಿ ನನ್ನ ಪಾಲಿಗೆ ಆಶೀರ್ವಾದ ಎಂದೇ ಭಾವಿಸುತ್ತೇನೆ' ಎಂದು ಖುಷಿ ಹಂಚಿಕೊಂಡರು ಗಿರಿಜಾ.

ಚಂದ್ರಶೇಖರ ಕಂಬಾರ ಅವರ ಪತ್ನಿ ಸತ್ಯಭಾಮಾ, ಎಸ್.ಜಿ. ಸಿದ್ದರಾಮಯ್ಯ ಅವರ ಪತ್ನಿ ಪ್ರೇಮಲೀಲಾ, ಜಿ.ಎಸ್. ಸಿದ್ದಲಿಂಗಯ್ಯ ಅವರ ಪತ್ನಿ ರಮಾ ಕುಮಾರಿ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಪ್ರಶಸ್ತಿಯು ₹10 ಸಾವಿರ ನಗದು, ರೇಷ್ಮೆಸೀರೆ ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಈ ಬಾರಿಯ ಪ್ರಶಸ್ತಿ ಪ್ರದಾನ ಸಮಾರಂಭ ಡಿ. 10ರಂದು ಸಂಜೆ 4 ಗಂಟೆಗೆ ಬೆಂಗಳೂರಿನ ಶೇಷಾದ್ರಿ ರಸ್ತೆಯ (ಜೈನ್ ಯುನಿವರ್ಸಿಟಿ) ಸಿ.ಎಂ.ಎಸ್ ಬಿಸಿನೆಸ್ ಸ್ಕೂಲ್‌ನಲ್ಲಿ ನಡೆಯಲಿದೆ. ಸಮಾರಂಭದಲ್ಲಿ ಕೆ.ಎಸ್.ನ ಗೀತಗಾಯನವನ್ನೂ ಆಸ್ವಾದಿಸಬಹುದು.



'ನನ್ನ ಸಮುದಾಯದ ಪುರುಷರೇ ತುಳಿದರು...

ಸಂದರ್ಶನ: ನೀಲಾ ಎಂ.ಎಚ್.



ರಾಜಕೀಯ ಬದುಕಿನುದ್ದಕ್ಕೂ ಒಂದಿಲ್ಲೊಂದು ವಿವಾದಕ್ಕೆ ಮುಖಾಮುಖಿಯಾದವರು ನಫೀಸ್ ಫಜಲ್. ಮುಸ್ಲಿಂ ಸಮುದಾಯದ ಕಟ್ಟುಪಾಡುಗಳ ಹೊರತಾಗಿಯೂ ಪುರುಷ ಪಾರಮ್ಯದ ಕ್ಷೇತ್ರದಲ್ಲಿ ಅಸ್ತಿತ್ವ ಕಂಡುಕೊಂಡ ದಕ್ಷಿಣ ಭಾರತದಲ್ಲಿ ಸಚಿವ ಸ್ಥಾನಕ್ಕೇರಿದ ಮೊದಲ ಮುಸ್ಲಿಂ ಮಹಿಳೆ. ಇಂದಿರಾ ಗಾಂಧಿ ಅವರಿಂದ ಮೊದಲ್ಗೊಂಡು ರಾಹುಲ್ ಗಾಂಧಿ ಅವರಲ್ಲಿ ಕೊನೆಗೊಂಡ ತಮ್ಮ ರಾಜಕೀಯ ವೃತ್ತಾಂತ ಹಾಗೂ ಖಾಸಗಿ ಬದುಕನ್ನು ತೆರೆದಿಡುವ ಅವರ ಆತ್ಮಕತೆ 'ಬ್ರೇಕಿಂಗ್ ಬ್ಯಾರಿಯರ್ಸ್' ಇತ್ತೀಚೆಗೆ ಬಿಡುಗಡೆಯಾಗಿದೆ.

ಝಗಮಗಿಸುವ ರಾಜಕೀಯ ಪರದೆಯ ಒಳನೋಟ, ಅಧಿಕಾರದ ಹಾವುಏಣಿಯಾಟದಲ್ಲಿ ಜೊತೆಗೂಡಿದವರ ತಂತ್ರ– ಕುತಂತ್ರ, ತಮ್ಮ ಏಳಿಗೆಗೆ ತೊಡರುಗಾಲಾದ ತಮ್ಮದೇ ಸಮುದಾಯದ ರಾಜಕೀಯ ನಾಯಕರನ್ನು ಮುಲಾಜಿಲ್ಲದೇ ಬಯಲಿಗೆಳೆದಿರುವ ನಫೀಸ್, ತ್ರಿವಳಿ ತಲಾಖ್, ಭಯೋತ್ಪಾದನೆ, ಬಾಬ್ರಿ ಮಸೀದಿ, ಏಕರೂಪ ನಾಗರಿಕ ಸಂಹಿತೆಯಂತಹ ಸೂಕ್ಷ್ಮ ವಿಚಾರಗಳ ಬಗ್ಗೆಯೂ ಸ್ಪಷ್ಟವಾದ ನಿಲುವು ಮಂಡಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದಭಾಗ ಇಲ್ಲಿದೆ:

- **ಪುಸ್ತಕದಲ್ಲಿ ಬಹಳ ದಿಟ್ಟವಾಗಿ ವಿಷಯಗಳನ್ನು ಮಂಡಿಸಿದ್ದೀರಿ. ಅಂತಹದ್ದೊಂದು ತುಡಿತಕ್ಕೆ ಪ್ರೇರಣೆಯೇನು?**

ಶ್ರೀಮಂತ ಕುಟುಂಬದಿಂದ ಬಂದಿದ್ದರೂ ಪುರುಷ ದೌರ್ಜನ್ಯದ ಕರಿನೆರಳು ನನ್ನನ್ನು ಕಾಡದೇ ಬಿಡಲಿಲ್ಲ. ಅಪ್ಪ ನೀಡುತ್ತಿದ್ದ ಹಿಂಸೆಯಿಂದ ನಲುಗಿಹೋದ ಅಮ್ಮ ಖಿನ್ನತೆಗೆ ಜಾರಿದಾಗ, ತಮ್ಮನೊಟ್ಟಿಗೆ ಚೆನ್ನೈನ ಅಜ್ಜನ ಮನೆ ಸೇರಬೇಕಾಯಿತು. ಪ್ರತಿಷ್ಠಿತ ಮನೆತನದ ಅಜ್ಜ ನಮ್ಮನ್ನು ಮುದ್ದುಗರೆಯುತ್ತಿದ್ದನಾದರೂ ಅಜ್ಜಿಯ ವಿಷಯದಲ್ಲಿ ಮಾತ್ರ ದೌರ್ಜನ್ಯವೇ ಮೂರ್ತಿವೆತ್ತಂತೆ ತನ್ನ ಇನ್ನೊಂದು ಮುಖದರ್ಶನ ಮಾಡಿಸುತ್ತಿದ್ದ. ಬಳಿಕ ಬೋರ್ಡಿಂಗ್ ಶಾಲೆ ಸೇರಿ ಅನುಭವಿಸಿದ ಒಂಟಿತನ, ಬೆಳೆಯುತ್ತಾ ಬಂದಂತೆ ಕುಟುಂಬದ ಪುರುಷರಿಂದ ಮನೆಯ ಹೆಣ್ಣು ಮಕ್ಕಳು ಅನುಭವಿಸುತ್ತಿದ್ದ ಕಿರುಕುಳವನ್ನು ನೋಡನೋಡುತ್ತಲೇ ಗಟ್ಟಿಯಾಗಿ ಬೆಳೆದುನಿಂತವಳು ನಾನು. ನಮ್ಮಂತಹ ಮನೆತನದ ಹೆಣ್ಣುಮಕ್ಕಳ ಸ್ಥಿತಿಯೇ ಹೀಗಾದರೆ ಇನ್ನು ಸಾಮಾನ್ಯರ ಸ್ಥಿತಿ ಹೇಗಿರಬೇಡ? 11ನೇ ಪುಟಕ್ಕೆ

ತೃಣಮೂಲದಿಂದ ಗಿರಿಶಿಖರದವರೆಗೆ...

ಒಂದು ಹುಲ್ಲಿನ ಕ್ರಾಂತಿ

ರಹಮತ್ ತರೀಕೆರೆ

> ಹುಲ್ಲು ಎಂದರೆ ಕ್ಷುದ್ರ ಎಂಬ ಭಾವ ಇದೆ. ಆದರೆ, ಬೆಟ್ಟಕ್ಕೆ ಘನತೆ ಬರುವುದೇ ಅದರ ಅಡಿಯ ಹುಲ್ಲಿನಿಂದ ಮತ್ತು ಹುಲ್ಲಿನಲ್ಲಿ ನೆಲೆ ಪಡೆದ ಪುಟ್ಟ ಜೀವಿಗಳಿಂದ. ಈ ಹುಲ್ಲು ಮಾಡುವ ಕ್ರಾಂತಿಯೇನು ಸುಮ್ಮನೆಯೇ ಮತ್ತೆ? ಕುದುರೆಮುಖ ಬೆಟ್ಟದ ನೆತ್ತಿಯ ಮೇಲೆ ನಿಂತು ಹೀಗೊಂದು ಹುಲ್ಲಿನ ಧ್ಯಾನ....


ಅಡಿಗರ ಕವಿತೆಯೊಂದರಲ್ಲಿ 'ಹುಲ್ಲಿಗಿಲ್ಲ ಕಳ್ಳಿಗಿಲ್ಲ ಹೂವಿಗೇಕೆ ಸೌಸವ?' ಎಂಬ ಸಾಲಿದೆ. ಸಮಾನತಾವಾದಿಗಳು ಅಧಿಕಾರಕ್ಕೆ ಬಂದರೆ, ಹೂವಿನ ವೈಶಿಷ್ಟ್ಯವನ್ನು ಅಲ್ಲಗಳೆಯಲು ಇಂತಹ ಪ್ರಶ್ನೆ ಕೇಳುತ್ತಾರೆಂಬ ಆತಂಕದಲ್ಲಿ ಹುಟ್ಟಿದ ಸಾಲಿದು. ಕಳ್ಳಿ ಹುಲ್ಲು ಹೂವು ಒಂದೇ ಪ್ರಕೃತಿಯ ಸೃಷ್ಟಿಗಳಾದರೂ, ಸುಗಂಧ ಮತ್ತು ಆಕರ್ಷಕ ವರ್ಣಗಳಿರುವ ಹೂವಿನ ಅನನ್ಯತೆಯನ್ನು ಮನ್ನಿಸಬೇಕೆಂಬುದು ಇಲ್ಲಿನ ಆಶಯ. ಆದರೆ ಕುವೆಂಪು ಅವರಿಗೆ ನಿಸರ್ಗದ ಚರಾಚರದಲ್ಲಿ ಎಲ್ಲವೂ ಮಹತ್ವವಾದವೇ. 'ಹೂವೇ ದೇವರು' ಕವನ ಬರೆದರೂ, ಅವರು ಕಾಣಿಸುವ ಪ್ರಕೃತಿಯಲ್ಲಿ 'ಯಾರೂ ಮುಖ್ಯರಲ್ಲ, ಯಾವುದೂ ಅಮುಖ್ಯವಲ್ಲ'.

ಮೇಲ್ಕಾಣಿಸಿದ ದೃಷ್ಟಿಕೋನಗಳು ಕನ್ನಡ ಸಾಹಿತ್ಯದಲ್ಲಿ ಸಹಸ್ರಮಾನದಿಂದಲೂ ಎದುರುಬದುರಾಗಿ ಹರಿಯುತ್ತ ಬಂದಿವೆ. ದೊರೆ, ದೇವತೆ, ಮುನಿಗಳು ಕಾವ್ಯಕ್ಕೆ ನಾಯಕರಾಗಬೇಕೆಂದು ಒಂದು ಮಾರ್ಗ ಬಯಸಿದರೆ, ಲೋಕದ ಸಾಮಾನ್ಯ ಸಂಗತಿಗಳೂ ಕಾವ್ಯಕ್ಕೆ ವಸ್ತುಗಳಾಗಬಹುದು ಎಂಬುದು ಇನ್ನೊಂದು ಜಾಡು. ಈ ಎರಡನೇ ದೃಷ್ಟಿಕೋನಗಳು ಭಾರತ 20ನೇ ಶತಮಾನದಲ್ಲಿ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡ ಮೇಲೆ ಹೊಸ ಆಯಾಮ ಪಡೆದವು. ನಿಸರ್ಗದಲ್ಲಿ ಚರಾಚರವೂ ಸಮಾನ ಮಹತ್ವವುಳ್ಳವು ಮಾತ್ರವಲ್ಲ, ಪರಸ್ಪರ ಸಂಬಂಧವುಳ್ಳವು. ಒಂದಿಲ್ಲವಾದರೆ ಇನ್ನೊಂದಕ್ಕೆ ಅರ್ಥವಿಲ್ಲ, ಅಸ್ತಿತ್ವವೂ ಇಲ್ಲ ಎಂಬ ಪರಿಸರಪ್ರಜ್ಞೆ ರೂಪುಗೊಂಡ ಬಳಿಕ, ಈ ಆಯಾಮಕ್ಕೆ ಮತ್ತಷ್ಟು ಗಹನತೆ ಬಂತು. ಇಡೀ ತೇಜಸ್ವಿ ಬರೆಹ ಮೂಡಿರುವುದೇ ಈ ತತ್ವದಲ್ಲಿ. ಕಾಡು, ಮಣ್ಣು, ಮಂಜು, ಮಳೆ, ನೀರು, ಹಕ್ಕಿ, ಪ್ರಾಣಿ, ಮರ, ಬಳ್ಳಿ, ಹೂವು, ಹಣ್ಣುಗಳ ಪರಸ್ಪರ ನಂಟಿನ ಸರಪಣಿಯಲ್ಲಿ ಒಂದು ಕೊಂಡಿ ಕಳಚಿದರೂ ಇಡೀ ವ್ಯವಸ್ಥೆ ಕುಸಿಯುತ್ತದೆ ಎಂದು ಕಾಣಿಸುತ್ತದೆ.

ಈ ಸತ್ಯವು ಚಾರಣದಲ್ಲಿ ಚೆನ್ನಾಗಿ ಮನವರಿಕೆ ಆಗುತ್ತದೆ. ಚಾರಣದಲ್ಲಿ ಮರ, ಹೊಳೆ, ಪರ್ವತ, ಪ್ರಾಣಿ-ಪಕ್ಷಿಗಳು ಸಹಜವಾಗಿಯೇ ಎದ್ದು ತೋರುತ್ತವೆ. ಹೀಗೆ ಎದ್ದುತೋರದ ಇಂಬಳ, ಜೇಡ, ಹುಳ, ಚಿಕ್ಕಪುಟ್ಟ ಗಿಡಬಳ್ಳಿ, ಹುಲ್ಲು ಕೂಡ ಅಲ್ಲಿ ಇಷ್ಟೇ ಪ್ರಾಮುಖ್ಯವುಳ್ಳವು. ಪರ್ವತಾರೋಹಣ ಮಾಡಿ ನೆತ್ತಿಯಲ್ಲಿ ನಿಂತು ಕೆಳಗೆ ಸಣ್ಣದಾಗಿ ಕಾಣುವ ವಸ್ತುಗಳನ್ನು ಪಕ್ಷಿನೋಟದಿಂದ ನೋಡುವಾಗ ಶಿಖರದ ಮಹತ್ವ ತಿಳಿಯುತ್ತದೆ. ಆದರೆ ಈ ಶಿಖರಾರೋಹಣದ ಹರ್ಷದಲ್ಲಿ, ಅದನ್ನು ಮುಟ್ಟಲು ನಡೆದ ಹಾದಿ ಬದಿಯ ಹುಲ್ಲು, ಕಲ್ಲು, ಮುಳ್ಳುಗಳ ಅನುಭವಗಳೂ ಮಿಳಿತವಾಗಿರುತ್ತವೆ. ಅವೆಲ್ಲ ಕೂಡಿಯೇ ಪರ್ವತದ ಗಾತ್ರವನ್ನೂ ಶಿಖರದೆತ್ತರವನ್ನೂ ಅಡವಿಯ ದಟ್ಟತನವನ್ನೂ ಹೊಳೆಯ ಭೋರ್ಗರೆತವನ್ನೂ ನಿರ್ಮಿಸಿರುತ್ತವೆ.

ಆರೂಢ ಸಾಧನೆಯಲ್ಲಿ 'ಪಿಪೀಲಿಕಾ', 'ವಿಹಂಗಮ' ಎಂಬ ಮಾರ್ಗಗಳಿವೆ. ವಿಹಂಗಮ (ಪಕ್ಷಿ) ಮಾರ್ಗದಲ್ಲಿ ಆಗಸದಲ್ಲಿ ಹಾರುತ್ತ ಬಂದು ಮರದಲ್ಲಿರುವ ಹಣ್ಣಿಗೆ ನೇರ ಇಳಿಯಬಹುದು. ಪಿಪೀಲಿಕಾದ (ಇರುವೆ) ಹಾದಿ ಹಾಗಲ್ಲ. ಅಲ್ಲಿ ನೆಲದ ಮೇಲೆ ಹೊಟ್ಟೆ ಹೊಸೆಯುತ್ತ ಹರಿದು, ಬುಡವನ್ನೇರಿ ಕೊಂಬೆಯಲ್ಲಿ ಸಾಗಿ ಹಣ್ಣನ್ನು ಮುಟ್ಟಬೇಕು. ಅಲ್ಲಿ ತಲುಪಿದ ಗುರಿಯಷ್ಟೇ ನಡೆದ ಹಾದಿಯ ಅನುಭವವೂ ಮುಖ್ಯ. ಸಾಗಿದ ಹಾದಿಗೂ ಮುಟ್ಟಿದ ಗಮ್ಯಕ್ಕೂ ಭೇದವಿಲ್ಲ. ಚಾರಣವು ಮೂಲತಃ, ಪಿಪೀಲಿಕಾ ಮಾರ್ಗಿಯಾಗಿ ಗುಡ್ಡಬೆಟ್ಟಗಳನ್ನು ಹತ್ತಿ, ಶಿಖರದಲ್ಲಿ ವಿಹಂಗಮಗೊಳ್ಳುವ ಯಾನ. ಇಲ್ಲಿ ಗುರಿಗೆ ಕಣ್ಣಿಟ್ಟು ಸರಸರ ಏರುವುದಕ್ಕಿಂತ ಸಿಟಿ ಬಸ್ಸಿನಂತೆ ಅಲ್ಲಲ್ಲಿ ನಿಂತು ಹುಲ್ಲು, ಹೂವು, ಗಿಡ, ಪೊದೆಗಳನ್ನು ವೀಕ್ಷಿಸುತ್ತ ಹೋದರೆ, ಶಿಖರದ ಅನುಭವವೇ ಬೇರೆಯಾಗುತ್ತದೆ.

ಈಚೆಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗಿರುವ ಕುದುರೆಮುಖ, ಮೇರುತಿ ಹಾಗೂ ನೇತ್ರಾವತಿ ಪೀಕುಗಳನ್ನು ಏರುವ ಅವಕಾಶ ಒದಗಿತು. 44 ಕಿ.ಮೀ.ಗಳ ಚಾರಣ. ನವೆಂಬರ್ ತಿಂಗಳಾಗಿದ್ದರಿಂದ ಆಗಷ್ಟೆ ಮಳೆಮುಗಿದು ಸಣ್ಣಗಿನ ಚಳಿಬೆರೆತ ಚುರುಕು ಬಿಸಿಲು ಚಾದರದಂತೆ ಆವರಿಸಿತ್ತು. ಪರ್ವತಗಳ ಮೈಮೇಲೆ ಆಳೆತ್ತರದ ಮಾಣೆ, ಕರಡ ಮೊದಲಾಗಿ ನೂರಕ್ಕೂ ಹೆಚ್ಚು ಪ್ರಭೇದಗಳ ಹುಲ್ಲು



ಹುಲ್ಲು ತುಂಬಿದ ಹಾದಿಯಲ್ಲಿ...

ಬೆಳೆದಿತ್ತು. ಈ ಹುಲ್ಲಾದರೂ ಒಂಟಿಯಲ್ಲ. ಈಚಲು, ಫರ್ನ್, ಕುರಿಂಜಿ ಮೊದಲಾದ ಸಣ್ಣಗಿಡಗಳ ಸಂಗದೊಳಗಿತ್ತು. ಹುಲ್ಲೂ ಹೂವೂ ಒಟ್ಟಿಗಿದ್ದವು. ನಾವು ಬೆಳಬೆಳಿಗ್ಗೆಯೇ ಚಾರಣ ಆರಂಭಿಸುತ್ತಿದ್ದರಿಂದ ಹುಲ್ಲ ಗರಿಗಳು ಮಂಜಿನಿಂದ ಮುತ್ತಿನಹಾರಗಳಾಗಿದ್ದವು. ಪರ್ವತ ಮತ್ತು ಕಣಿವೆಗಳು ಹುಲ್ಲದಾರದಿಂದ ನೇಯ್ದ ಕುತನಿಯ ಅಂಗಿ ಧರಿಸಿದ್ದವು. ಚೂಪಾದ ಹುಲ್ಲಗರಿಗಳು ಆಗಸದ ಮಳೆಬಿಸಿಲಿಗೆ ಚಾಚಿದ ಪುಟ್ಟ ಕೈಗಳಂತಿದ್ದವು. ಹುಲ್ತೆನೆಗಳು ಚಾಮರದಂತೆ ಗಾಳಿಗೆ ಒಲೆದಾಡುತ್ತಿದ್ದವು. ಹಾಸುಹುಲ್ಲು ಶಿಖರಸ್ತನಗಳಿಗೆ ಕಟ್ಟಿದ ಹಸಿರು ಕಂಚುಕದಂತೆ ಕಾಣುತ್ತಿತ್ತು; ಮಂಜುಕವಿದು ತಣ್ಣನೆ ಗಾಳಿಬೀಸುವಾಗ ಸಮುದ್ರದ ತೆರೆಗಳಂತೆ ಹೊಯ್ದಾಡುತ್ತಿತ್ತು. ಮಲಗಿದ ಆನೆಯಂತೆ, ಬಸವನಂತೆ, ನಿಂತ ಕುದುರೆಯಂತೆ ಕಾಣುವ ಪರ್ವತಗಳ ಮೇಲೆ ಬೆಳೆದ ರೋಮಕವಚವಾಗಿತ್ತು.

ಕುದುರೆಮುಖ, ಮೇರುತಿ, ನೇತ್ರಾವತಿ ಪೀಕುಗಳ ಶಿಖರದಿಂದ ಸುತ್ತ ಹತ್ತಾರು ಮೈಲಿದೂರದ ದೃಶ್ಯಗಳೆಲ್ಲ ಕಾಣುತ್ತವೆ. ಅದೊಂದು ಅಪೂರ್ವ ಅನುಭೂತಿ. ನಿಜವಾದ ಚೆಲುವಿರುವುದು ಶಿಖರದ ತುದಿಯಲ್ಲಿ ಅಲ್ಲ, ಕೆಳಗೆ. ಅದರಲ್ಲೂ ಪರ್ವತದ ತೊಡೆಗಳಂತಿರುವ ಕಣಿವೆಗಳಲ್ಲಿ; ಹುಲ್ಲಬಟ್ಟೆಯ ಮೇಲೆ ಬಿಡಿಸಿದ ಕಸೂತಿಯಂತೆ ಒತ್ತಾಗಿ ಬೆಳೆದ ಅಡವಿಯಲ್ಲಿ; ಅದರೊಳಗೆ ಹುಟ್ಟಿ ದಬದಬಿಸುವ ಜಲದಲ್ಲಿ. ಈ ದೃಷ್ಟಿಯಿಂದ ಪರ್ವತಗಳನ್ನು ನೋಡಿದರೆ, ಅವು ತಮ್ಮೆತ್ತರ ಮತ್ತು ಗಾತ್ರದ ಗರ್ವಬಿಟ್ಟು ನಮ್ರಗೊಂಡಂತೆಯೂ, ಹುಲ್ಲುಹೂವು ತಮ್ಮ ಘನತೆಯನ್ನು ಮೆರೆಯುತ್ತಿರುವಂತೆಯೂ ಭಾಸವಾಗುತ್ತದೆ. 'ಹುಲ್ಲಾಗು ಬೆಟ್ಟದಡಿ' ಎಂದು ಕವಿ ಹೇಳಿದ್ದು, ಈ ವಿನಯ-ಘನತೆ ಸೂಚಿಸಲೆಂದೇ ಇರಬೇಕು.

ಪಶ್ಚಿಮಘಟ್ಟಗಳ ಶೋಲಾಗಳ ವಿಶಿಷ್ಟ ಲಕ್ಷಣವನ್ನು ವಿಶಾಲವಾದ ಬೋಳುಬೆಟ್ಟ ಮತ್ತು ಅಲ್ಲಲ್ಲಿ ತೇಪೆಹಾಕಿದಂತೆ ಕಾಡು ಎಂದೇ ವರ್ಣಿಸಲಾಗುತ್ತದೆ. ಈ ಬೋಳಲ್ಲೂ ಕಾಡಿದ್ದಿದ್ದರೆ ಎಷ್ಟು ಚಂದವಿತ್ತು ಎಂದೂ ಅನಿಸುತ್ತದೆ. 'ಬೋಳು' ಎನ್ನುವಾಗ ಅಲ್ಲಿ ಗಿಡಮರಗಳಿಲ್ಲ ಎಂಬ ದನಿಯಿದೆ. ಆದರೆ ಅಲ್ಲಿ ಹುಲ್ಲಿದೆ, ಹೂವುಗಳಿವೆ, ಅದರೊಳಗೆ ಪುಟ್ಟ ಜೀವಿಗಳಿವೆ! ಈ ಹುಲ್ಲುಬಯಲೇ ಅಲ್ಲವೇ ಕಡವೆ, ಆನೆ, ಕಾಡೆಮ್ಮೆ, ಹುಲ್ಲೆಗಳ ಅನ್ನದ ತಟ್ಟೆ? ಇವನ್ನು ಉಂಡು ತಾನೇ ಚಿರತೆ, ಹುಲಿಗಳು ಬದುಕಿರುವುದು? ಅಲ್ಲಲ್ಲಿ ಕಾಡುಕೋಣಗಳು ಹುಲ್ಲುಮೇದು ಹಾಕಿದ ತೊಪ್ಪೆಗಳೂ ಅವುಗಳಲ್ಲಿದ್ದ ಸಗಣಿಯನ್ನು ಉಂಡೆಕಟ್ಟಿ ಒಯ್ಯುವ ಹುಳುಗಳೂ ನಮಗೆ ಕಂಡವು. ಹುಲ್ಲಿನೊಳಗೆ ಗೂಡುಕಟ್ಟಿದ್ದ ಹಕ್ಕಿಗಳು ನಿರಂಕುಶಮತಿಗಳಾಗಿ ಹಾಡುತ್ತಿದ್ದವು. ಕರಡಿ-ಮುಳ್ಳುಹಂದಿಗಳು ಹುಲ್ಲಗೆಡ್ಡೆ ತಿನ್ನಲು ನೆಲ ತೋಡಿದ್ದವು. ಹುಲ್ಲು ಇಲ್ಲಿ ಬೀಳುವ ಭೀಷಣ ಮಳೆಯನ್ನು ತನ್ನ ಬೇರುಗಳ ಮೂಲಕ ಪರ್ವತದ ಹೊಟ್ಟೆಯೊಳಗಿಳಿಸಿ ಸಂಗ್ರಹಿಸಿ ವರ್ಷವಿಡೀ ಹರಿವ ಹೊಳೆಗಳಿಗೆ ಜನ್ಮಕೊಡುತ್ತದೆ. ಇಲ್ಲಿನ ಕಣಿವೆಗಳಲ್ಲಿ ಹುಟ್ಟುವ ಪ್ರತಿ ಹನಿಯೂ ಹುಲ್ಲಿನ ಕೊಡುಗೆಯೇ. ಮತ್ತೊಬ್ಬರ ದೃಷ್ಟಿಯಲ್ಲಿಯೂ ಲೋಕವನ್ನು ನೋಡತೊಡಗಿದರೆ, ನಾವು ಬರಡು, ನಿರ್ಜನ, ನೀರವ, ಬೋಳು ಶಬ್ದಗಳನ್ನು ಸರಳವಾಗಿ ಬಳಸಲಾರೆವು. ಖಾಲಿತನ ಕಾಣುವವರ ದೃಷ್ಟಿದೋಷವೇ ಹೊರತು, ಇರುವ ವಾಸ್ತವ ಅದಲ್ಲ.

ಪಶ್ಚಿಮಘಟ್ಟದ ಹುಲ್ಲು, ಪೈರಿನ ನಡುವೆ ತೆಗೆದೀಡಾಡುವ ಕಳೆಯಲ್ಲ. ಅದು ಅದರ ತೊಗಲು. ಶಿಖರಗಳಲ್ಲಿ ಬೀಸುವ ಗಾಳಿಗೆ ಮರದ ಕೊಂಬೆಗಳು ಮುರಿದಿದ್ದವು. ನೆತ್ತಿಯಲ್ಲಿದ್ದಾಗ ನಾವು ತರಗೆಲೆಗಳಂತೆ ಹಾರಿಹೋಗುವ ಭಯವೂ ಉಂಟಾಗುತ್ತಿತ್ತು. ಆದರೆ ಸುರಿಮಳೆಗೆ ಬೀಸುಗಾಳಿಗೆ ತುಸುವೇ ತಲೆಬಾಗಿ ಗಾಳಿಯನ್ನು ಹೋಗಲು ಬಿಟ್ಟ ಹುಲ್ಲು ಸೊಂಪಾಗಿ ಬದುಕಿತ್ತು. ಸಂಸೆ ಎಂಬಲ್ಲಿದ್ದ ನಮ್ಮ ಯೂತ್‌ಹಾಸ್ಟೆಲಿನ ಬೇಸ್‌ಕ್ಯಾಂಪು, ಸೋಮಾವತಿ ಹೊಳೆ ಬದಿಯಿತ್ತು. ಚಾರಣದಿಂದ ಬೆವೆತುಬಂದ ನಾವು ಸಂಜೆ ಅದರೊಳಗೆ ಬೀಳುತ್ತಿದ್ದೆವು. ಹೊಳೆಯಲ್ಲಿ ಮಳೆಗಾಲದ ಪ್ರವಾಹ ಎಷ್ಟು ರಭಸವಾಗಿ ಬಂದಿತ್ತೆಂದರೆ, ನೀರು ಹೊತ್ತುತಂದಿದ್ದ ಮರದ ದಿಮ್ಮಿಗಳು ಸೇತುವೆಯ ಕಿಂಡಿಗಳ ಮೂಲಕ ದಾಟದೆ ಅಡ್ಡ ನಿಂತು, ಕೋಟೆ ಕಟ್ಟಿದ್ದವು. ಇಂತಹ ಪ್ರವಾಹದಲ್ಲೂ ಹೊಳೆಯ ಮಧ್ಯೆ ದೊಡ್ಡದೊಡ್ಡ ಹುಲ್ಲು ತೆಂಡೆಗಳು ಕೊಚ್ಚಿ ಹೋಗದೆ ಮರಳುಗಲ್ಲೊಳಗೆ ಬೇರುಬಿಟ್ಟು ಸೊಂಪಾಗಿ ನಿಂತಿದ್ದವು. ಇವು ಬೇಸಗೆಯಲ್ಲೂ ಪ್ರವಾಹದಲ್ಲೂ ಬದುಕುಳಿವ ಉಪಾಯ ಕಂಡುಕೊಂಡಿವೆ. ಮಲೆನಾಡಿನ ಮಳೆಗೆ ಹುಲ್ಲುಬೆಳೆದು ಹೆಂಚಿನ ಮಾಡೆಲ್ಲವೂ ಬತ್ತದ ಗದ್ದೆಯಾಗುವುದಷ್ಟೆ. ಇದೇ ಹುಲ್ಲು, ಬಂಡೆಗಳ ಮೇಲಿನ ತೆಳುವಾದ ಧೂಳಿಯನ್ನೇ ಆಶ್ರಯಿಸಿ ಶಿಖರಗಳ ನೆತ್ತಿಯಲ್ಲೂ ಬದುಕಿತ್ತು. ಹುಲ್ಲು ನೆಲದ ಜತೆಗಿನ ಗಾಢನಂಟಿನ ರೂಪಕ. ರಾಜಕೀಯ ಪಕ್ಷಗಳು ಮತ್ತು ಚಳವಳಿಗಳು, ತಾವು ಜನಸಮುದಾಯಗಳ ಜತೆ ಸಾವಯವ ಸಂಬಂಧ ಹೊಂದಿದ್ದೇವೆ ಎಂಬರ್ಥದಲ್ಲಿ 'ತೃಣಮೂಲ' 'ಗ್ರಾಸ್‌ರೂಟ್' ಪರಿಭಾಷೆ ಬಳಸುತ್ತವೆ.

'ಹುಲ್ಲು' ಎಂದರೆ ಕ್ಷುದ್ರ ಎಂಬರ್ಥವೂ ಇದೆ. ಹಿಂದೆ ತಮ್ಮನ್ನು ಮಾರಾಟಕ್ಕೆ ಒಡ್ಡಿಕೊಂಡವರು, ತಲೆಯ ಮೇಲೆ ಹುಲ್ಲನ್ನು ಇರಿಸಿಕೊಂಡು ತಾವು ಪಶುಸಮಾನರೆಂದು ಸೂಚಿಸುತ್ತಿದ್ದರು. ಯುದ್ಧದಲ್ಲಿ ಸೋತವರು ಹುಲ್ಲನ್ನು ಬಾಯಲ್ಲಿ ಕಚ್ಚಿಹಿಡಿದರೆ, 'ಶರಣಾಗತರಾಗಿದ್ದೇವೆ, ಜೀವದಯೆ ಕೊಡಿ' ಎಂದರ್ಥ.

11ನೇ ಪುಟಕ್ಕೆ...



ಕುದುರೆಮುಖದ ಗಿರಿಕಂದರಗಳಿಗೆ ಹುಲ್ಲಿನ ಕುತನಿ ಅಂಗಿ

ಯಕ್ಷಲೋಕದ ಧ್ರುವ ನಕ್ಷತ್ರ

ಪುರುಷೋತ್ತಮ ಬಿಳಿಮಲೆ

ಇಡೀ ರಾತ್ರಿ ನಡೆಯುತ್ತಿದ್ದ 'ಮಹಾರಥಿ ಕರ್ಣ' ಯಕ್ಷಗಾನ ಪ್ರದರ್ಶನದಲ್ಲಿ ಒಟ್ಟು ಮೂರು ಕರ್ಣರಿರುತ್ತಿದ್ದರು. ಮೊದಲನೆಯ ಕರ್ಣ ಹುಡುಗ, ಉತ್ಸಾಹಿ, ಪುತ್ತೂರು ಶ್ರೀಧರ ಭಂಡಾರಿಯವರ ವೇಷ. ಎರಡನೆಯ ಕರ್ಣ ಬಹುಬಗೆಯ ಕ್ಲೇಶಗಳಿಗೊಳಗಾದವನು, ಉದ್ಯೋಗ ಪರ್ವದಲ್ಲಿ ಕಾಣಸಿಗುವವನು. ಇಲ್ಲಿ ಕುಂಬಳೆ ಸುಂದರರೇ ಕರ್ಣ. ಈ ಭಾಗದಲ್ಲಿ ತನ್ನ ಶ್ರದ್ಧೆಯ ಕೇಂದ್ರವನ್ನೇ ಚೂರಾಗಿಸಿಕೊಂಡು ಕರ್ಣ ಬಳಲುತ್ತಾನೆ. ಕೊನೆಯ ದುರಂತ ಕರ್ಣನ ವೇಷ ಮಾಡುತ್ತಿದ್ದವರು ಪುತ್ತೂರು ನಾರಾಯಣ ಹೆಗ್ಡೆಯವರು. ಶ್ರೀಧರ, ಸುಂದರರಾಯರು ಮತ್ತು ಹೆಗ್ಡೆಯವರು ಸೇರಿ ಯಕ್ಷಗಾನದ ಸುವರ್ಣಯುಗಕ್ಕೊಂದು ಭಾಷ್ಯ ಬರೆಯುತ್ತಿದ್ದರು.

> ಯಕ್ಷಗಾನದ ಸುವರ್ಣ ಯುಗದ ದೊಡ್ಡ ಪ್ರತಿಭೆಯೆಂದರೆ ಕುಂಬಳೆ ಸುಂದರ ರಾವ್. ತಮ್ಮ ಅಸಾಧಾರಣ ಪ್ರತಿಭೆಯಿಂದ ಲಕ್ಷಾಂತರ ಯಕ್ಷಗಾನ ರಸಿಕರ ಮನಸೂರೆಗೊಂಡಿದ್ದ ಅವರು, ಯಕ್ಷಲೋಕದಲ್ಲಿ ತಮ್ಮದೇ ಛಾಪು ಮೂಡಿಸಿದವರು.

ನಾನು ಕಣ್ಣು ಬಾಯಿಬಿಟ್ಟು ಆಟ ನೋಡುತ್ತಿದ್ದೆ. ಕೌರವನ ಆಸ್ಥಾನದಲ್ಲಿ ಧುರವೀಳ್ಯ ಸ್ವೀಕರಿಸಿ ಹೊರಟ ಕೃಷ್ಣ ಅನತಿ ದೂರ ಸಾಗಿ ಇದ್ದಕ್ಕಿದ್ದಂತೆ ಹಿಂಬಾಲಿಸಿ ಬರುತ್ತಿದ್ದ ಕರ್ಣನ ಬರಸೆಳೆದು ಅಪ್ಪಿ 'ಕರ್ಣಾ, ನನಗೂ ನಿನಗೂ ಭೇದವೇ?' ಎಂದು ಕೇಳುತ್ತಾನೆ. ಇದುವರೆಗೆ ತನ್ನನ್ನು ಸೂತ ಪುತ್ರನೆಂದೇ ಭಾವಿಸಿಕೊಂಡಿದ್ದ ಕರ್ಣ ದಿಗ್ಭ್ರಮೆಗೊಂಡು ಹೇಳುತ್ತಾನೆ - 'ಕೃಷ್ಣಾ, ನೀನೋ ಒಂದು ಪರ್ವತ, ನಾನೋ ಪ್ರಪಾತ. ನೀನೋ ಆ ಮಹಾ ಸಿಂಧು, ನಾನೋ ಆ ಸಿಂಧುವಿನಿಂದ ಸಿಡಿದು ಬಿದ್ದ ಒಂದು ಬಿಂದು, ಹೇ ಜಗದ ಬಂಧೂ, ನಾನೂ ನೀನೂ ಹೇಗೆ ಒಂದು?' ಹೀಗೆ ಹೇಳುವಾಗ ಕುಂಬಳೆಯವರ ಮಾತುಗಳು ಯಾಂತ್ರಿಕವಾಗುತ್ತಿರಲಿಲ್ಲ. ಬದಲು ಭಾವೋತ್ಕರ್ಷದಿಂದ ಕೂಡಿರುತ್ತಿದ್ದುವು. ಭಾರತೀಯ ಕಾವ್ಯ ಮೀಮಾಂಸೆಯ ಎಲ್ಲ ಲಕ್ಷಣಗಳೂ ಕುಂಬಳೆಯವರ ಮಾತಿನ ಮುಂದೆ ನಮಗೆ ಸಪ್ಪೆ ಅನಿಸುತ್ತಿದ್ದವು.

ನಾನು ಯಕ್ಷಗಾನ ನೋಡಲು ಆರಂಭಿಸಿದ್ದು ಬಹುಮಟ್ಟಿಗೆ 1959-60ರ ಸುಮಾರಿನಲ್ಲಿ. ಅಂದಿನಿಂದ ಇಂದಿನವರೆಗೆ ಕಳೆದ 60 ವರ್ಷಗಳಲ್ಲಿ ನಾನು ನೂರಾರು ಯಕ್ಷಗಾನಗಳನ್ನು ನೋಡಿದ್ದೇನೆ, ತಾಳಮದ್ದಳೆಗಳ ವಾದ ವಿವಾದಗಳಿಗೆ ಕಿವಿಗೊಟ್ಟಿದ್ದೇನೆ. ಹವ್ಯಾಸಿ ಕಲಾವಿದರೊಂದಿಗೆ ಅವಕಾಶ ಸಿಕ್ಕಿದಾಗಲೆಲ್ಲ ಗೆಜ್ಜೆ ಕಟ್ಟಿ, ಕುಣಿದು, ಅರ್ಥ ಹೇಳಲು ಹೆಣಗಿದ್ದೇನೆ. ಕಲಾವಿದರೊಂದಿಗೆ ವಿದೇಶ ಸುತ್ತಿದ್ದೇನೆ. ಈಗ 2022ರ ಕೊನೆಯಲ್ಲಿ ಒಂದು ಕ್ಷಣ ನಿಂತು ಹಿಂದಿರುಗಿ ನೋಡಿದರೆ, ನಾನು ಮತ್ತು ನನ್ನ ತಲೆಮಾರಿನ ಜನರು ಯಕ್ಷಗಾನ ನೋಡುತ್ತಿದ್ದ ಕಾಲವು ಯಕ್ಷಗಾನದ ಸುವರ್ಣ ಯುಗ ಆಗಿತ್ತೇ ಎಂಬ ಭಾವ ಬಲವಾಗಿ ಮೂಡುತ್ತಿದೆ.

ನಾವೆಲ್ಲ ದಾಮೋದರ ಮಂಡೆಚ್ಚ, ಕಡತೋಕ ಮಂಜುನಾಥ ಭಾಗವತ, ಬಲಿಪ ನಾರಾಯಣ ಭಾಗವತ, ಅಗರಿ, ಪುತ್ತಿಗೆ, ಪದ್ಯಾಣ, ಉಪ್ಪೂರು, ಕಾಳಿಂಗ ನಾವುಡ, ನೀಲಾವರ ಮೊದಲಾದ ಸಾರ್ವಕಾಲಿಕ ಮಹತ್ವದ ಭಾಗವತರ ಹಾಡುಗಳಿಗೆ ಕಿವಿ ಕೊಟ್ಟಿದ್ದೇವೆ. ನಿಡ್ಲೆ ನರಸಿಂಹ ಭಟ್, ದಿವಾಣ ಭೀಮಭಟ್, ಚಿಪ್ಪಾರು ಕೃಷ್ಣಯ್ಯ ಬಲ್ಲಾಳ್, ಕಾಸರಗೋಡು ವೆಂಕಟರಮಣ, ಕುದ್ರೆ ಕೂಡ್ಲು ರಾಮಭಟ್, ಪದ್ಯಾಣ ಶಂಕರ ನಾರಾಯಣ ಭಟ್, ಗೋಪಾಲಕೃಷ್ಣ ಕುರುಪ್, ಹಿರಿಯಡಕ ಗೋಪಾಲ ರಾವ್ ಮತ್ತಿತರ ಮಹಾನ್ ಕಲಾವಿದರ ಕೈಚಳಕಗಳಿಗೆ ಪುಳಕಗೊಂಡಿದ್ದೇವೆ.

ರಂಗದ ಮೇಲೆ ಇನ್ನಿಲ್ಲದಂತೆ ಮೆರೆದ ಪಡ್ರೆ ಚಂದು, ಅಳಿಕೆ ರಾಮಯ್ಯ ರೈ, ಕುರಿಯ ವಿಠಲ ಶಾಸ್ತ್ರಿ, ಶೇಣಿ ಗೋಪಾಲಕೃಷ್ಣ ಭಟ್, ರಾಮದಾಸ ಸಾಮಗ, ಪುತ್ತೂರು ನಾರಾಯಣ ಹೆಗ್ಡೆ, ಕೋಳ್ಯೂರು ರಾಮಚಂದ್ರ ರಾವ್, ಎಂಪೆಕಟ್ಟೆ ರಾಮಯ್ಯ ರೈ, ಮಿಜಾರು ಅಣ್ಣಪ್ಪ, ವಿಟ್ಲ ಗೋಪಾಲಕೃಷ್ಣ ಜೋಶಿ, ಬಂಟ್ವಾಳ ಜಯರಾಮ ಆಚಾರ್ಯ, ಕೆರೆಮನೆ ಗಜಾನನ ಹೆಗಡೆ, ಮಹಾಬಲ ಹೆಗಡೆ, ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ, ಪ್ರಭಾಕರ ಜೋಶಿ, ಬಣ್ಣದ ಮಾಲಿಂಗ, ಕುಟ್ಯಪ್ಪು, ಅಂಬು, ಶ್ರೀಧರ ಭಂಡಾರಿ, ಅರುವ ಕೊರಗಪ್ಪ, ಕೊಂಡದಕುಳಿ ರಾಮಚಂದ್ರ ಹೆಗಡೆ ಮೊದಲಾದ ಕಲಾವಿದರ ಭಿನ್ನ ಪಾತ್ರಾಭಿವ್ಯಕ್ತಿಗಳನ್ನು ನೋಡಿ ಸಂಭ್ರಮಿಸಿದ್ದೇವೆ.

ಇರಾ, ಕರ್ನಾಟಕ, ಧರ್ಮಸ್ಥಳ, ಕಟೀಲು, ಕದ್ರಿ, ಸುರತ್ಕಲ್ ಮೇಳಗಳು ತಿರುಗಾಟದಲ್ಲಿ ಇತಿಹಾಸ ಸೃಷ್ಟಿಸಿದ್ದಕ್ಕೆ ನಾವೇ ಸಾಕ್ಷಿ. ಅಮೃತ ಸೋಮೇಶ್ವರ, ರಾಘವ ನಂಬಿಯಾರ್, ಅನಂತರಾಮ ಬಂಗಾಡಿ ಅವರಂತಹವರು ರಂಗದ ಮೇಲೆ ಅಭೂತಪೂರ್ವ ಯಶಸ್ಸು ಸಾಧಿಸಿದ ಪ್ರಸಂಗಗಳನ್ನು ಬರೆದದ್ದು ಕೂಡಾ ನಮ್ಮ ಕಾಲದಲ್ಲಿಯೇ. ಶಿವರಾಮ ಕಾರಂತರು ಕುಣಿದಿದ್ದನ್ನು ನಾವು ಕಂಡಿದ್ದೇವೆ. ಈ ಅರ್ಥದಲ್ಲಿ ನಾವು ಪುಣ್ಯವಂತರು. ಯಕ್ಷಗಾನದ ಸುವರ್ಣ ಯುಗಕ್ಕೆ ಸಾಕ್ಷಿಗಳಾದ ಭಾಗ್ಯ ನಮ್ಮದು. ಇಂಥ ಕಾಲಘಟ್ಟದ ಬಹುದೊಡ್ಡ ಪ್ರತಿಭೆಯೆಂದರೆ ಕುಂಬಳೆ ಸುಂದರ ರಾವ್. ತಮ್ಮ ಅಸಾಧಾರಣ ಪ್ರತಿಭೆಯಿಂದಾಗಿ ಕುಂಬಳೆಯವರು ಲಕ್ಷಾಂತರ ಯಕ್ಷಗಾನ ರಸಿಕರ ಮನಸೂರೆಗೊಂಡದ್ದಲ್ಲದೆ, ಯಕ್ಷಲೋಕದಲ್ಲಿ ತಮ್ಮದೇ ಛಾಪು ಮೂಡಿಸಿ ಇತಿಹಾಸ ಸೃಷ್ಟಿಸಿದರು.

ನೆನಪು

ನಮ್ಮ ಭಾಗ್ಯವೋ ಎಂಬಂತೆ, ಸುಂದರ ರಾಯರು ತಮ್ಮ ಆತ್ಮಚರಿತ್ರೆಯನ್ನೂ ಬರೆದು ಮಹದುಪಕಾರ ಮಾಡಿದ್ದಾರೆ. ಸುಂದರಕಾಂಡ (ಸಂ: ಅಮೃತ ಸೋಮೇಶ್ವರ) ಅವರ ಅಭಿನಂದನ ಕೃತಿಯೇ ಹೌದಾದರೂ, ಅದರ ಆರಂಭದ 'ಯಕ್ಷಪಥ ಯಾತ್ರಿಕ' ಭಾಗದಲ್ಲಿ 236 ಪುಟಗಳಷ್ಟು ದೀರ್ಘವಾದ ಜೀವನ ಸ್ಮೃತಿ ಸಂಚಯವಿದ್ದು, ಅದರಲ್ಲಿ ಕುಂಬಳೆಯವರು ತಮ್ಮ ಕಲಾ ಜೀವನದ ಏಳು-ಬೀಳುಗಳ ಬಗ್ಗೆ ತುಂಬಾ ಪ್ರಾಮಾಣಿಕವಾಗಿ ಬರೆದುಕೊಂಡಿದ್ದಾರೆ.

ಕುಂಬಳೆ ಪರಿಸರದಲ್ಲಿ ನೇಯ್ಗೆ ಕುಲ ವೃತ್ತಿ ಮಾಡಿಕೊಂಡಿದ್ದ ಅವರ ತಂದೆಯ ಹೆಸರು ಕುಂಞಕಣ್ಣ ಮತ್ತು ತಾಯಿ ಕಲ್ಯಾಣಿ. ಬಡಕುಟುಂಬದಲ್ಲಿ ಜನಿಸಿದ ಮಲಯಾಳಂ ಮಾತೃಭಾಷೆಯ ಸುಂದರ ಎಂಬ ಹೆಸರಿನ ಹುಡುಗ, ಅತ್ತ ನೇಯ್ಗೆಯನ್ನೂ ಕಲಿಯದೆ, ಇತ್ತ ಶಾಲೆಗೂ ಹೋಗದೆ, ಯಕ್ಷಗಾನ ಕಲಾವಿದನಾಗಿ ಹಂತ ಹಂತವಾಗಿ ಮೇಲೇರುತ್ತಾ ಹೋಗಿ, ಕುಂಬಳೆ ಸುಂದರ ರಾವ್ ಆಗಿ ರೂಪುಗೊಂಡ ಬಗೆಯ ಅತ್ಯಂತ ರೋಚಕ ವಿವರಗಳು ಇಲ್ಲಿವೆ.

ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಊರು ಬಿಡಬೇಕಾದ ಸಂದರ್ಭ ಬಂದದ್ದು, ಬಣ್ಣಹಚ್ಚಿ, ವೇಷ ಕಟ್ಟಿದರೂ ರಂಗಸ್ಥಳ ಪ್ರವೇಶ ಮಾಡಲಾಗದೇ ವೇಷ ಬಿಚ್ಚಿ, ಬಣ್ಣ ಅಳಿಸದೇ ಮನೆ ಸೇರಿದ ಪ್ರಸಂಗ - ಇತ್ಯಾದಿ ಘಟನೆಗಳನ್ನು ಸುಂದರ ರಾಯರು ಒಂದು ಬಗೆಯ ಮುಗ್ಧತೆಯಲ್ಲಿ ವಿವರಿಸುವ ಸೊಗಸನ್ನು ಓದಿಯೇ ತಿಳಿದುಕೊಳ್ಳಬೇಕು. ಕುಂಬಳೆಯವರು ಬಡತನದ ಬೇಗುದಿಯಲ್ಲಿ ಉರಿದು, ಅದರ ಬೂದಿಯಿಂದೆದ್ದು ಬಂದು ಮುಂದೆ ಸುಮಾರು 60 ವರ್ಷಗಳ ಕಾಲ ಯಕ್ಷಗಾನ ರಂಗಭೂಮಿಯ ಅದ್ವಿತೀಯ ಕಲಾವಿದರಾಗಿ ರಾರಾಜಿಸಿದ್ದನ್ನು ನಾವೆಲ್ಲ ಕಣ್ಣಾರೆ ಕಂಡಿದ್ದೇವೆ. ನಿರಂತರ ಅವಮಾನಕ್ಕೊಳಗಾದ 'ಮಾಸ್ಟರ್ ಸುಂದರ' ಮುಂದೆ ಪ್ರಾಸಬದ್ಧವಾಗಿ ಮಾತಾಡುವಾಗ ಬದುಕು ಮತ್ತು ರಂಗಭೂಮಿ ಅನುಸಂಧಾನಗೊಂಡು, ನನ್ನಂಥ ಅನೇಕ ಪ್ರೇಕ್ಷಕರ ಕಣ್ಣು ತೇವಗೊಂಡದ್ದು ಸುಳ್ಳಲ್ಲ. ಕೂಡ್ಲು ಮೇಳ, ಸುರತ್ಕಲ್ ಮೇಳ, ಕುಂಡಾವು, ಧರ್ಮಸ್ಥಳ ಮೇಳಗಳಲ್ಲಿ ಕುಂಬಳೆಯವರು ವೇಷಧಾರಿಯಾಗಿ, ಊರೆಲ್ಲಾ ತಾಳಮದ್ದಳೆಯ ಅರ್ಥಧಾರಿಯಾಗಿ ಜನಮನ ಸೂರೆಗೊಂಡರು.

ಈಗ ದೆಹಲಿಯಲ್ಲಿ ಕಣ್ಣು ತೇವಮಾಡಿಕೊಂಡು ಕುಳಿತಿರುವ ನನ್ನ ಮುಂದೆ ಕುಂಬಳೆಯವರ ಚಂದ್ರಾವಳಿಯ ಕೃಷ್ಣ, ಸುಧನ್ವ ಮೋಕ್ಷದ ಸುಧನ್ವ, ಮಹಾಕಲಿ ಮಗಧೇಂದ್ರದ ಕೃಷ್ಣ, ಕೋಟಿ ಚೆನ್ನಯದ ಪೆರುಮಲೆ ಬಲ್ಲಾಳ, ಸಿರಿಮಹಾತ್ಮೆಯ ಕಾಂತು ಪೂಂಜ, ಕಚದೇವಯಾನಿಯ ಕಚ, ಕಾಯಕಲ್ಪದ ಚ್ಯವನ, ಅಮರವಾಹಿನಿಯ ಭಗೀರಥ, ಪಾದುಕಾಪ್ರದಾನದ ಭರತ, ಭರತೇಶ ವೈಭವದ ಭರತ, ಮಹಾರಥಿ ಕರ್ಣದ ಕರ್ಣ, ತ್ರಿಪುರ ಮಥನದ ಚಾರ್ವಾಕ, ಗೋಗ್ರಹಣದ ಉತ್ತರ, ಚಕ್ರವರ್ತಿ ದಶರಥದ ದಶರಥ, ವಿಶ್ವಾಮಿತ್ರ ಮೇನಕೆಯ ವಿಶ್ವಾಮಿತ್ರ ಮೊದಲಾದ ಪಾತ್ರಗಳು ಜೀವಂತವಾಗಿ ಕಾಣುತ್ತಿವೆ. ಅವರ ಮಾತುಗಳಿಗೆ ಕ್ರಿಯೆಯಾಗುವ ಅಪೂರ್ವ ಗುಣವಿರುವುದರಿಂದಾಗಿ 'ಕುಂಬಳೆಯವರಿಗೆ ಕುಣಿಯಲು ಬರುವುದಿಲ್ಲ' ಎಂಬ ಮಾತಿಗೆ ಅರ್ಥವೇ ಉಳಿಯುವುದಿಲ್ಲ. ದುರಂತದ ಛಾಯೆ ಇರುವ ಪಾತ್ರಗಳನ್ನು ಕುಂಬಳೆಯವರ ಹಾಗೆ ನಿರ್ವಹಿಸುವ ಕಲಾವಿದರು ಯಕ್ಷಲೋಕದಲ್ಲಿ ಬಹಳ ಜನರಿಲ್ಲ.

ನಾನು ಬದುಕಿದ ಕಾಲಘಟ್ಟದ ಬಗ್ಗೆ ಹೆಮ್ಮೆಪಟ್ಟುಕೊಳ್ಳಲು ಕುಂಬಳೆಯವರೂ ಕಾರಣ ಎಂಬುದು ಸಣ್ಣ ಸಂಗತಿಯೇನಲ್ಲ.



ಕುಂಬಳೆ ಸುಂದರ ರಾವ್ ಚಿತ್ರ: ಯಜ್ಞ ಮಂಗಳೂರು

ತೃಣಮೂಲದಿಂದ ಗಿರಿಶಿಖರದವರೆಗೆ...

10ನೇ ಪುಟದಿಂದ...

ರಾವಣ ಅಶೋಕವನಕ್ಕೆ ಬಂದಾಗ ಸೀತೆ ಕೈಯಲ್ಲಿ ಹುಲ್ಲುಕಡ್ಡಿ ಹಿಡಿದು ಮಾತಾಡುತ್ತಿದ್ದಳು - ನೀನೂ ನಿನ್ನ ಅಧಿಕಾರ ಸಂಪತ್ತುಗಳೂ ತೃಣಸಮಾನ ಎಂದು ಸೂಚಿಸುವಂತೆ. ಹುಲ್ಲು ಅಪಕೀರ್ತಿಯ ಪ್ರತೀಕ ಕೂಡ. ಮಹಾದೇವಿಯಕ್ಕ 'ನಿಮ್ಮ ಮನೆಗೆ ಹೂವ ತಹೆನಲ್ಲದೆ ಹುಲ್ಲತಾರೆನು' ಎನ್ನುತ್ತಾಳೆ. ಆದರೆ ಇದೇ ಹುಲ್ಲು ಕಡ್ಡಿಯಾಗಿ ಮುಳುಗುವವರಿಗೆ ನಾವೆಯಾಗುತ್ತದೆ; ಚಾರಣಿಗರಿಗೆ ಹತ್ತುವಾಗ ಇಳಿವಾಗ ಜಾರಿದರೆ, ಬೀಳದಂತೆ ಹಿಡಿದುಕೊಳ್ಳುವ ಅಭಯ ಹಸ್ತವಾಗುತ್ತದೆ; ಬಡವರ ಮನೆಯ ಚಾವಣಿಗೆ ಹೊದಿಕೆ, ಹಕ್ಕಿಗೂಡಿಗೆ ಮೆತ್ತೆ, ಕುದುರೆ, ಕುರಿ, ದನಕ್ಕೆ ಮೇವು ಆಗುತ್ತದೆ. ಹಿಮಾಲಯದ ಚಾರಣದಲ್ಲಿ ಸ್ಥಳೀಯರು ಹುಲ್ಲಹೊರೆ ಹೊತ್ತು ಎದುರಾಗುವುದನ್ನು ಕಾಣಬಹುದು. 'ಬಿದಿರೇ ನೀನಾರಿಗಲ್ಲದವಳು' ಎಂದು ಹಾಡುವಾಗ, ಶರೀಫರಿಗೆ ಬಿದಿರೂ ಹುಲ್ಲಿನ ಜಾತಿಯ ಸಸ್ಯವೆಂದು ಗೊತ್ತಿತ್ತೇ? ಪರ್ಯಾಯ ಬೇಸಾಯದ ಹರಿಕಾರ ಫುಕುವೋಕಾ 'ಒಂದು ಹುಲ್ಲಿನ ಕ್ರಾಂತಿ' ಎಂದು ಪುಸ್ತಕವನ್ನೇ ಬರೆದನು.

ಸಮಸ್ಯೆಯೆಂದರೆ, ಸರ್ವವ್ಯಾಪಿಯಾದ ಈ ಹುಲ್ಲೇ ಒಣಗಿದಾಗ ಕಾಡಿಗೆ, ಬೆಟ್ಟಕ್ಕೆ, ಹಕ್ಕಿ-ಪಕ್ಕಿಗಳಿಗೆ ಘಾತಕವಾಗುವುದು. ಹೊಸಹುಲ್ಲು ಹುಟ್ಟಲೆಂದು ಪಶುಗಾಹಿಗಳು ಬೆಟ್ಟಗಳಿಗೆ ಬೆಂಕಿಕೊಡುವ ಪದ್ಧತಿಯನ್ನು ಲಾಗಾಯ್ತಿನಿಂದ ಇಟ್ಟುಕೊಂಡಿದ್ದಾರೆ. ಸುಟ್ಟರೂ ಬುಡದಲ್ಲಿ ಜೀವವುಳಿಸಿಕೊಂಡ ತೆಂಡೆಯಲ್ಲಿ ಹೊಸಹುಲ್ಲು ಚಿಗುರುತ್ತದೆ. ಆದರೆ ಜತೆಗಿದ್ದ ಗಿಡಮರಗಳು ಬೂದಿಯಾಗುತ್ತವೆ. ಹುಲ್ಲಿನೊಳಗೆ ಮನೆಮಾಡಿದ ಹಕ್ಕಿ, ಕೀಟ ಅಳಿಯುತ್ತವೆ. ಮೇರುತಿ ಪರ್ವತದಲ್ಲಿ ಹುಲ್ಲಿನ ಸಂಗ ಮಾಡಿದ ಗಿಡಗಂಟೆಗಳೆಲ್ಲ ಸುಟ್ಟು ಅಸ್ಥಿಪಂಜರವಾಗಿ ನಿಂತಿದ್ದವು. ಹುಲ್ಲಿಗೆ ಬೆಂಕಿ ಬಿದ್ದಾಗ ಕಾಫಿ, ಚಹದ ತೋಟಗಳು ಸುಡಬಾರದೆಂದೂ ಎಸ್ಟೇಟಿನವರೇ ಕೆಳಗಿನಿಂದ ಬೆಂಕಿ ಕೊಡುವುದುಂಟಂತೆ. ಮಲೆನಾಡ ಸಂಪತ್ತಿಗೆ ಕಾರಣವಾಗಿರುವ ಕಾಫಿ, ಚಹ, ರಬ್ಬರ್, ಅಡಿಕೆ, ಏಲಕ್ಕಿ, ಮೆಣಸಿನ ತೋಟಗಳು, ಶೋಲಾ ಕಾಡು, ಹೊಳೆ, ಪ್ರಾಣಿಗಳ ಮೇಲೆ ಹೂಡಿದ ಕದನದ ಫಲಗಳೂ ಹೌದು. ನಮ್ಮ ಚಾರಣ ವೈಲ್ಡ್‌ಲೈಫ್ ಫೋಟೊಗ್ರಫಿಗಳಲ್ಲಿ ಎಷ್ಟೇ ನಿಸರ್ಗಪ್ರೀತಿ-ಪರಿಸರಪ್ರಜ್ಞೆ ಇದ್ದರೂ, ಅವು ಪ್ರಾಣಿಪಕ್ಷಿಗಳ, ಕಾಡು-ನದಿಗಳ ನೆಮ್ಮದಿಯ ಬಾಳುವೆಗೆ ತೊಡಕೇ.

ನಾವು ಕುದುರೆಮುಖದಲ್ಲಿ ಸಾಗರೋಪಮವಾಗಿ ಹಬ್ಬಿರುವ ಹುಲ್ಲುಗಾವಲಿನಲ್ಲಿ ನಡೆಯುತ್ತಿರುವಾಗ, ಒಂದು ಕಡವೆ ಗಾಬರಿಗೊಂಡು, ಸರಸರ ಕಣಿವೆಯನ್ನೇರಿ ಪರ್ವತದ ಇನ್ನೊಂದು ಬದಿಗೆ ಮರೆಯಾಯಿತು. ಮರೆಯಾಗುವ ಮುನ್ನ ಬೆಟ್ಟದ ತುದಿಯಲ್ಲೊಮ್ಮೆ ನಿಂತು ನಮ್ಮತ್ತ ನೋಡಿತು. ಆ ನೋಟದಲ್ಲಿ ಏನರ್ಥವಿತ್ತು?



ಬೆಟ್ಟದಲ್ಲಿ ಹುಲ್ಲು ಆವರಿಸದ ಜಾಗವಾದರೂ ಎಲ್ಲಿದೆ?



ಬೆಟ್ಟದಡಿಯಲ್ಲಿ ಬೆಳೆದ ಹೂವಿನ ತೆನೆ

'ನನ್ನ ಸಮುದಾಯದ ಪುರುಷರೇ ತುಳಿದರು...

10ನೇ ಪುಟದಿಂದ...

ಯಾವುದೇ ಕ್ಷೇತ್ರದಲ್ಲಿ ಮಹಿಳೆಯರು ಮುಂದೆ ಬರುವುದಕ್ಕೆ ಬಹಳ ಕಷ್ಟಪಡಬೇಕಾಗುತ್ತದೆ. ಅಂತಹವರಿಗೆ ನನ್ನ ಬದುಕೇ ಮಾದರಿಯಾಗಬೇಕು. ಅವರು ಅಸ್ಮಿತೆ ಕಂಡುಕೊಳ್ಳಲು ನನ್ನ ಹಾದಿ ಪ್ರೇರಣೆಯಾಗಬೇಕು. ಅದಕ್ಕೆಂದೇ ವಿದ್ಯಾರ್ಥಿಗಳಿಗೆ ಪುಸ್ತಕವನ್ನು ರಿಯಾಯಿತಿ ದರದಲ್ಲಿ ಕೊಡಲು ನಿರ್ಧರಿಸಿದ್ದೇನೆ.

• ಇಂದಿರಾ ಗಾಂಧಿ ಅವರನ್ನು ಬಹಳ ಆಪ್ತವಾಗಿ ಸ್ಮರಿಸಿದ್ದೀರಿ...

ಹೌದು, ಅವರು ನನ್ನ ರೋಲ್ ಮಾಡೆಲ್. ಅವರೊಬ್ಬ ಅಭೂತಪೂರ್ವ ಮಹಿಳೆ. 'ಷಿ ಈಸ್ ದಿ ಓನ್ಲಿ ಮ್ಯಾನ್ ಇನ್ ದಿ ಕ್ಯಾಬಿನೆಟ್' ಎಂದು ಜನ ಅವರ ಬಗ್ಗೆ ಆಗ ಹೇಳುತ್ತಿದ್ದ ಮಾತು ಸರಿಯಾಗಿಯೇ ಇತ್ತು. ನಾನು 13 ವರ್ಷದವಳಿದ್ದಾಗ, ಇಂದಿರಾ ಅವರು ತಂದೆ ನೆಹರೂ ಅವರೊಟ್ಟಿಗಿದ್ದ ಫೋಟೊವನ್ನು ಪತ್ರಿಕೆಯೊಂದರಲ್ಲಿ ನೋಡಿದೆ. ಅದು ನನ್ನನ್ನು ಬಹುವಾಗಿ ಆಕರ್ಷಿಸಿತು. ರಾಜಕೀಯದ ಅಭಿಲಾಷೆಯ ಬೀಜ ನನ್ನೊಳಗೆ ಅಂಕುರಿಸಿದ್ದು ಆಗಲೇ. ಮುಂದೆ, ರಾಜಕೀಯ ಸೇರುವ ಹಂಬಲಕ್ಕೆ ತಣ್ಣೀರೆರಚಬಾರದೆಂಬ ನನ್ನ ಷರತ್ತು, 30ನೇ ವಯಸ್ಸು ದಾಟಿದ ಬಳಿಕ ಸೇರಬಹುದೆಂಬ ಪ್ರತಿ ಷರತ್ತಿನ ಮೇರೆಗೆ 17ನೇ ವಯಸ್ಸಿನಲ್ಲಿ ಹಸನ್ ಅವರೊಟ್ಟಿಗೆ ನನ್ನ ಮದುವೆಯಾಯಿತು.

• ರಾಜಕಾರಣಿಯಾಗಿ ನಿಮ್ಮ ಸಮುದಾಯ ನಿಮ್ಮನ್ನು ಸ್ವೀಕರಿಸಿದ್ದು ಹೇಗೆ?

ನಾನು 'ಡಬಲ್ ಮೈನಾರಿಟಿ'. ಮೊದಲಿಗೆ ಮಹಿಳೆ, ಎರಡನೆಯದಾಗಿ, ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಸೇರಿದವಳು. 'ಇವಳು ಭಾಳಾ ಸ್ಟೈಲಿಷ್, ಇವಳಿಗೆ ರಾಜಕೀಯ ಏನು ಗೊತ್ತು' ಎಂದು ಜರಿದವರೇ ಹೆಚ್ಚು ಮಂದಿ. ಹಲವರಿಗೆ ನನ್ನ ಬೋಲ್ಡ್‌ನೆಸ್ ಇಷ್ಟವಾಗಲಿಲ್ಲ. ವಾಸ್ತವದಲ್ಲಿ ಒಬ್ಬ ಪುರುಷನಿಗಿಂತ ಮಹಿಳೆಯೇ ಚೆನ್ನಾಗಿ ಕೆಲಸ ಮಾಡುತ್ತಾಳೆ. ಆದರೂ ಹೆಜ್ಜೆಹೆಜ್ಜೆಗೂ ನನಗೆ ತೊಡರುಗಾಲಾದವರಲ್ಲಿ ಹೆಚ್ಚಿನವರು ನನ್ನದೇ ಸಮುದಾಯದ ರಾಜಕೀಯ ಮುಖಂಡರು. ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ಎಂಎಲ್ಎ, ಎಂಎಲ್‌ಸಿ ಮಾಡಲು ಹವಣಿಸುತ್ತಿದ್ದ ಅವರಿಗೆ ನನ್ನ ರಾಜಕೀಯ ಪ್ರವೇಶದಿಂದ ಇರುಸುಮುರುಸಾಗಿತ್ತು.

• ಅಧಿಕಾರದ ಏಣಿ ಏರುವ ಮಾರ್ಗ ಹೇಗಿತ್ತು?

ರಾಜಕೀಯದಲ್ಲಿ ಹೊಂದಾಣಿಕೆ ಬಹಳ ಮುಖ್ಯ. ಆದರೆ ನನ್ನದು ಹೋರಾಟದ ಮನೋಭಾವ. ಮಹತ್ವಾಕಾಂಕ್ಷೆಯ ಗುರಿ ಸಾಧನೆಯ ಹಾದಿಯಲ್ಲಿ ಎಷ್ಟೋ ಬಾರಿ ನನ್ನ ಪ್ರತಿಷ್ಠೆಗೆ ಪೆಟ್ಟು ಬಿದ್ದಿದೆ. ವೈದ್ಯಕೀಯ ಶಿಕ್ಷಣ ಸಚಿವೆಯಾಗಿದ್ದಾಗ ಆಸ್ಪತ್ರೆಗಳಿಗೆ ಕಳಪೆ ವಿದೇಶಿ ಉಪಕರಣಗಳನ್ನು ಖರೀದಿಸಲು ₹3 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟ ಆರೋಪ ಹೊರಿಸಿದರು. ತೆಲಗಿಯ ಛಾಪಾ ಕಾಗದ ಹಗರಣದಲ್ಲಿ ನನ್ನ ಪತಿಯನ್ನು ಸಿಲುಕಿಸಲು ನೋಡಿದರು. ಮುಸ್ಲಿಂ ಸಮುದಾಯದವರು ಹೆಚ್ಚಾಗಿರುವ ವಿಜಯಪುರದಲ್ಲಿ (ಆಗಿನ ಬಿಜಾಪುರ) ನಾನು ಸ್ಪರ್ಧಿಸಬಯಸಿದಾಗ, ಬೆಂಗಳೂರಿಂದ ಬಂದು ಇಲ್ಲಿ ನಿಲ್ಲುವುದೇಕೆ ಎಂದು ಆಕ್ಷೇಪಿಸಿದವರು ಅದೇ ಬೆಂಗಳೂರಿನ ಸಲೀಂ ಅಹಮದ್ ಅವರಿಗೆ ಹುಬ್ಬಳ್ಳಿ- ಧಾರವಾಡದಲ್ಲಿ ನಿಲ್ಲಲು ಅನುವು ಮಾಡಿಕೊಟ್ಟರು. ಯುವಕನೊಬ್ಬ ಪೊಲೀಸ್ ವಶದಲ್ಲಿ ಮೃತಪಟ್ಟ ಪ್ರಕರಣವೊಂದರಲ್ಲಿ ನಾನು ಜೈಲಿಗೂ ಹೋಗಿಬಂದೆ. ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿ ನನಗೆ ಸಿಕ್ಕ ಸಚಿವ ಸ್ಥಾನ ಸಹ ನನ್ನ ತೀವ್ರ ಹೋರಾಟದ ಫಲವೇ. ಸಿಕ್ಕ ಕುರ್ಚಿಯನ್ನು ಕಸಿಯಲು ಹೆಜ್ಜೆಹೆಜ್ಜೆಗೂ ಆಯುಧ ಹಿಡಿದು ನಿಲ್ಲುವವರಿರುತ್ತಾರೆ. ಅವರಿಂದ ಪಾರಾಗುವ ಕಸರತ್ತಿನಲ್ಲಿ ಅಧಿಕೃತ ಕೆಲಸಕ್ಕೆ ನಿಮಗೆ ಸಿಗುವ ಸಮಯವಾದರೂ ಎಷ್ಟು?

ಅಂತಹ ಕ್ಲಿಷ್ಟ ಸ್ಥಿತಿಯಲ್ಲೂ ಆಸ್ಪತ್ರೆಗಳಿಗೆ ದಿಢೀರ್ ಭೇಟಿ, ಗ್ರಾಮೀಣ ಪ್ರದೇಶಗಳಿಗೆ ಟೆಲಿ ಮೆಡಿಸಿನ್ ಸೌಲಭ್ಯದಂತಹ ಕೆಲಸಗಳನ್ನು ಮಾಡಿಕೊಂಡಿದ್ದವಳಿಗೆ ಪಾರ್ಟಿಯೊಂದರಲ್ಲಿ ಪಾಲ್ಗೊಂಡಿದ್ದೇ ಮುಳುವಾಯಿತು. ಅಲ್ಲಿ ಮದ್ಯಸೇವಿಸಿದ್ದಾಗಿ, ನೃತ್ಯ ಮಾಡಿದ್ದಾಗಿ ಅಪಪ್ರಚಾರ ಮಾಡಲಾಯಿತು. ಅದು ನನ್ನ ರಾಜೀನಾಮೆ ಕೇಳುವ ಮಟ್ಟಕ್ಕೂ ಹೋಯಿತು. ಕೊನೆಗೆ ನನ್ನ ಸಚಿವ ಸ್ಥಾನ ಉಳಿಯಿತಾದರೂ ಖಾತೆ ಬದಲಾಯಿತು. ಈ ಪ್ರಕರಣ ನನ್ನನ್ನು ಅಲುಗಾಡಿಸಿಬಿಟ್ಟಿತು. 'ನಿನಗಿಂತ ಮೇಲ್ಮಟ್ಟದಲ್ಲಿ ಇರುವವರನ್ನು ಎದುರು ಹಾಕಿಕೊಂಡರೆ ನಿನ್ನ ಅಸ್ತಿತ್ವಕ್ಕೇ ಧಕ್ಕೆಯಾಗುತ್ತದೆ' ಎಂದು ಸ್ನೇಹಿತ ಆರ್.ಕೆ.ಧವನ್ ಅವರು ಆಗಾಗ ಹೇಳುತ್ತಿದ್ದ ಕಿವಿಮಾತನ್ನು ಆಲಿಸಿ ಮೌನಕ್ಕೆ ಶರಣಾದೆ. ಹೀಗೆ ಅಪಪ್ರಚಾರಕ್ಕೆ ಕಿವಿಗೊಟ್ಟು ಖಾತೆ ಬದಲಿಸಿದ ಬಗ್ಗೆ, ಈಗಿನ ನನ್ನ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಎಸ್.ಎಂ.ಕೃಷ್ಣ ವಿಷಾದ ವ್ಯಕ್ತಪಡಿಸಿದರು. ಇಷ್ಟು ವರ್ಷಗಳ ಮೇಲೆ ಹೀಗಾದರೂ ನನಗೆ ನ್ಯಾಯ ಸಿಕ್ಕಿತು.

• ನಿಮ್ಮ ಸಾಧನೆಯ ಏಣಿಗೆ ಮೆಟ್ಟಿಲಾದ ಪ್ರಮುಖರು?

ಮಹಿಳೆಗೆ ಮಹಿಳೆಯೇ ಶತ್ರು ಎಂಬುದು ಪುರುಷರು ಹುಟ್ಟುಹಾಕಿರುವ ಮಾತಷ್ಟೇ. ವಾಸ್ತವದಲ್ಲಿ ಮಹಿಳೆಗೆ ಪುರುಷರೇ ಅಡ್ಡಗಾಲು. ರಾಜಕೀಯದಲ್ಲಿ ಹೆಚ್ಚು ಅಧಿಕಾರ ಇರುವುದು ಅವರಿಗೇ ತಾನೆ? ಹಾಗಾಗಿ ಅವರ ಮಾತೇ ನಡೆಯುವುದು. ಅಷ್ಟಾದರೂ ಬೆನ್ನಿಗಿದ್ದು ಮಾರ್ಗದರ್ಶನ ನೀಡಿದ ಎಸ್.ಎಂ.ಕೃಷ್ಣ, ಮಣಿಶಂಕರ್ ಅಯ್ಯರ್, ನನ್ನ ಪತಿ ಹಸನ್ ಅಂತಹವರನ್ನು ನಾನಿಲ್ಲಿ ಹೆಸರಿಸಲೇಬೇಕು. ಪ್ರೇಮಾ ಕೃಷ್ಣ, ಮಾರ್ಗರೇಟ್ ಆಳ್ವ, ಅಂಬಿಕಾ ಸೋನಿ ಅವರಂತಹ ಮಹಿಳೆಯರು ನನ್ನ ಕೈಹಿಡಿದು ನಡೆಸಿದರು.

ಹಿಂದಿನ ಮುಖ್ಯಮಂತ್ರಿಗಳೆಲ್ಲ ನೆಪಮಾತ್ರಕ್ಕೆ ಒಬ್ಬ ಮಹಿಳೆಗಷ್ಟೇ ಸಂಪುಟದಲ್ಲಿ ಸ್ಥಾನ ನೀಡುತ್ತಿದ್ದರು. ಆದರೆ ಎಸ್.ಎಂ. ಕೃಷ್ಣ ರಾಜ್ಯದಲ್ಲಿ ಅದೇ ಮೊದಲ ಬಾರಿಗೆ ಮೋಟಮ್ಮ, ರಾಣಿ ಸತೀಶ್, ಸುಮಾ ವಸಂತ್ ಮತ್ತು ನನ್ನನ್ನು ಒಳಗೊಂಡು ನಾಲ್ವರು ಮಹಿಳೆಯರಿಗೆ ಸಚಿವೆಯರಾಗುವ ಅವಕಾಶಕೊಟ್ಟರು.

• ಯುವ ಮಹಿಳಾ ರಾಜಕಾರಣಿಗಳಿಗೆ ನಿಮ್ಮ ಕಿವಿಮಾತು?

ಒಬ್ಬ ಮಹಿಳೆಯನ್ನು ನಿಂದಿಸುವುದು, ಆಪಾದನೆಗೆ ಗುರಿಪಡಿಸುವುದು ಬಹಳ ಸುಲಭ. ಚಾರಿತ್ರ್ಯಹರಣ, ಲಂಚದ ಆಪಾದನೆಯ ಮೂಲಕ ಅವಳನ್ನು ಕುಗ್ಗಿಸುವ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಮಹಿಳೆಯರಿಗೆ ಎಲ್ಲಕ್ಕಿಂತ ಹೆಚ್ಚಾಗಿ ತಾಳ್ಮೆ ಇರಬೇಕು. ರಾಮನ ವನವಾಸದಂತೆ, ರಾಜಕೀಯ ಸೇರಿ 14 ವರ್ಷ ಕಾಯ್ದ ಬಳಿಕ ನನಗೆ ವಿಧಾನಪರಿಷತ್ ಸದಸ್ಯೆಯಾಗುವ ಭಾಗ್ಯ ಲಭಿಸಿತು. ರಾಜಕೀಯವಾಗಲೀ ಖಾಸಗಿ ಬದುಕಾಗಲೀ ನಮ್ಮ ಮನಸ್ಸು ಎಮ್ಮೆಯ ಚರ್ಮದಂತೆ ಗಟ್ಟಿಯಾಗಿ ಇರಬೇಕು. ಹಾಗಿಲ್ಲದಿದ್ದರೆ ಮಕ್ಕಳು, ಗಂಡನನ್ನು ನೋಡಿಕೊಂಡು ಮನೆಯಲ್ಲಿರುವುದು ಒಳಿತು.

• ರಾಜಕೀಯ ಅಖಾಡ ಆಗ– ಈಗ?

ಈಗ ಮಹಿಳೆಯರು ರಾಜಕೀಯದಲ್ಲಿ ಏಗುವುದು ಇನ್ನೂ ಕಷ್ಟವಿದೆ. ಗಂಡಸರಾಗಲಿ ಹೆಂಗಸರಾಗಲಿ ಶಾಸಕರಾಗಬೇಕೆಂದರೆ ಪಕ್ಷಾತೀತವಾಗಿ ಕೋಟ್ಯಂತರ ರೂಪಾಯಿ ಇಟ್ಟುಕೊಂಡಿರಬೇಕು. ಚುನಾವಣಾ ಖರ್ಚಿಗೆ ಯಾವ ಗಂಡ ತಾನೇ ಹೆಂಡತಿಗೆ ಅಷ್ಟೊಂದು ಹಣ ಕೊಡುತ್ತಾನೆ? ಹಿಂದೆ ನಮ್ಮ ಕಾಲದಲ್ಲಿ ಎಂಎಲ್ಎ ಸೀಟು ಕೋಟಿ ಲೆಕ್ಕದಲ್ಲಿ ಮಾರಾಟವಾಗುತ್ತಿತ್ತು. ರಾಹುಲ್ ಗಾಂಧಿ ಎಐಸಿಸಿ ಅಧ್ಯಕ್ಷರಾಗಿ ಬಂದ ಮೇಲೆ ಇಂತಹ ದುಡ್ಡಿನ ವ್ಯವಹಾರಕ್ಕೆ ಬ್ರೇಕ್ ಬಿತ್ತು. ಈಗೇನಿದ್ದರೂ ಮೆರಿಟ್ ಮೇಲೆ ಸೀಟು ಹಂಚಿಕೆಯಾಗುತ್ತದೆ. ವೈಯಕ್ತಿಕವಾಗಿ ಹೇಳಬೇಕೆಂದರೆ, ರಾಹುಲ್ ಅವರಿಂದ ನನಗೆ ಅವಮರ್ಯಾದೆಯೇ ಆಗಿದೆ. ಆದರೂ ಅವರಲ್ಲಿ ಇರುವ ಒಳ್ಳೆಯ ಗುಣವನ್ನೂ ಗುರುತಿಸಬೇಕಲ್ಲವೇ? ಹಾಗೇ 'ತ್ರಿವಳಿ ತಲಾಖ್'ಗೆ ಸಂಬಂಧಿಸಿದ ಕಾನೂನು ತಂದು ಮುಸ್ಲಿಂ ಮಹಿಳೆಯರ ನೆಮ್ಮದಿಗೆ ಕಾರಣರಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾನು ಆಭಾರಿಯಾಗಿದ್ದೇನೆ. ಕಾನೂನು ಕೈಗೆತ್ತಿಕೊಂಡು ಅಸಾಂವಿಧಾನಿಕವಾಗಿ ವರ್ತಿಸುತ್ತಾ ಮಹಿಳೆಯರ ಹಕ್ಕುಗಳಿಗೆ ಚ್ಯುತಿ ತರುತ್ತಿರುವ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯನ್ನು (ಎಐಎಂಪಿಎಲ್‌ಬಿ) ರದ್ದುಗೊಳಿಸಬೇಕು, ಎಲ್ಲ ಅಲ್ಪಸಂಖ್ಯಾತರು ಮುಖ್ಯವಾಹಿನಿಗೆ ಬರುವುದಕ್ಕೆ ಪೂರಕವಾದ ಏಕರೂಪ ನಾಗರಿಕ ಸಂಹಿತೆ ಜಾರಿಗೊಳ್ಳಬೇಕು. ಹಾಗೇ ತಮ್ಮನ್ನು ತರತಮದಿಂದ ಕಾಣುವ ಪೌರತ್ವ ತಿದ್ದುಪಡಿ ಮಸೂದೆಯು ಮುಸ್ಲಿಮರಿಗೆ ಎಂದಿಗೂ ಪಥ್ಯವಲ್ಲ ಎಂಬುದನ್ನೂ ಅವರ ಗಮನಕ್ಕೆ ತರಬಯಸುತ್ತೇನೆ.

ಮುನ್ನೋಟ 04-12-2022 ರಿಂದ 10-12-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಬದುಕನ್ನು ವಿಲಾಸಿಯಾಗಿ ಕಳೆಯುವ ಹೊರತಾಗಿ ಬೇರೆ ಜವಾಬ್ದಾರಿಗಳೂ ಇರುತ್ತವೆ ಎಂದು ತಿಳಿಯಿರಿ. ಖರ್ಚುಗಳು ಹೆಚ್ಚಾಗಬಹುದು. ಹಣ ನಿರ್ವಹಣೆಯನ್ನು ಸರಿಯಾಗಿ ಮಾಡಿರಿ. ನಿಮ್ಮ ಕುಟುಂಬದ ಪಾಲುದಾರಿಕೆ ವ್ಯವಹಾರವನ್ನು ಹೆಚ್ಚು ಮುಂದುವರಿಸುವುದರಲ್ಲಿ ನಿಮಗೆ ಲಾಭವಿದೆ. ಸೇನೆಯಲ್ಲಿರುವವರು ಎಚ್ಚರವಹಿಸಬೇಕಾದ ಅಗತ್ಯವಿದೆ. ಕೃಷಿಕರಿಗೆ ಲಾಭ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ನಡವಳಿಕೆ ಬಹಳ ಕಾಠಿಣ್ಯವಾಗಿರುತ್ತದೆ. ಕೃಷಿಯಿಂದ ಹೆಚ್ಚು ಲಾಭವಿರುತ್ತದೆ. ಭೂ ವ್ಯವಹಾರವನ್ನು ಮಾಡುವವರಿಗೆ ಆದಾಯ ಸ್ವಲ್ಪ ಹೆಚ್ಚುತ್ತದೆ. ವ್ಯವಹಾರಗಳಲ್ಲಿ ಏನೇ ತೊಡಕುಗಳು ಬಂದರೂ ಅದನ್ನು ಸಮಾಧಾನವಾಗಿ ಕುಳಿತು ಬಗೆಹರಿಸಿಕೊಳ್ಳುವುದು ಉತ್ತಮ. ತಾಯಿಯಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಬೆಂಬಲ ದೊರಕುತ್ತದೆ. ವೃತ್ತಿಯಲ್ಲಿ ಯಶಸ್ಸು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವ್ಯಾಪಾರ-ವ್ಯವಹಾರಗಳಲ್ಲಿ ಬಹಳ ಶ್ರದ್ಧೆವಹಿಸುವಿರಿ. ವಿದೇಶಗಳಿಗೆ ಆಹಾರ ವಸ್ತುಗಳನ್ನು ಸರಬರಾಜು ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಹಣಕಾಸಿನ ವ್ಯವಹಾರಗಳಲ್ಲಿ ಎಚ್ಚರವಾಗಿರುವುದು ಒಳ್ಳೆಯದು. ಸಂಗಾತಿಯಿಂದ ನಿಮ್ಮ ವ್ಯವಹಾರಗಳಿಗೆ ಬಂಡವಾಳ ದೊರೆಯುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಅಲ್ಪಯಶಸ್ಸು ದೊರೆಯಬಹುದು. ಆರೋಗ್ಯದ ಕಡೆಗೆ ಹೆಚ್ಚಿನ ಗಮನವಿರಲಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮ ಮಾತಿಗೆ ಹೆಚ್ಚು ಬೆಲೆ ಬರುವ ಸಾಧ್ಯತೆಗಳಿವೆ. ಧನಾದಾಯ ನಿಮ್ಮ ನಿರೀಕ್ಷೆಯಷ್ಟು ಇರುವ ಸಾಧ್ಯತೆ ಇದೆ. ನಿಮ್ಮ ನಡವಳಿಕೆಯಿಂದ ವ್ಯವಹಾರಗಳಲ್ಲಿ ಸ್ಥಾನಮಾನ ವ್ಯತ್ಯಾಸವಾಗಬಹುದು. ಸಂಗಾತಿಯಿಂದ ಸ್ವಲ್ಪ ಕೋಪ ಎದುರಿಸಬೇಕಾಗಬಹುದು. ಹಿರಿಯರಿಂದ ನಿಮಗೆ ಬೇಕಾದ ಮಾರ್ಗದರ್ಶನ ದೊರೆಯುತ್ತದೆ. ವೃತ್ತಿಯಲ್ಲಿ ಹಿತ ಶತ್ರುಗಳ ಕಾಟ ಹೆಚ್ಚಾಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಗೌರವ, ಕೀರ್ತಿ ಪ್ರಾಪ್ತಿಯಾಗುವ ಸಂದರ್ಭವಿದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚು ಭಾಗವಹಿಸುವ ಅವಕಾಶ ದೊರೆಯುತ್ತದೆ. ಆಸ್ತಿ ಸಂಬಂಧಿತ ವಿಚಾರಗಳಲ್ಲಿ ಮೇಲುಗೈ ಸಾಧಿಸುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಉತ್ತಮ ಯಶಸ್ಸು ಇರುತ್ತದೆ. ಮೂಳೆ ಸಂಬಂಧಿ ನೋವು ನಿಮ್ಮನ್ನು ಕಾಡಬಹುದು. ವ್ಯಾಪಾರದಲ್ಲಿ ಲಾಭದ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಒಂದು ರೀತಿ ನೆಮ್ಮದಿಯನ್ನು ಕಾಣುವಿರಿ. ಹಣದ ಒಳಹರಿವು ಅಗತ್ಯಕ್ಕಿಂತ ಕಡಿಮೆ ಇರುತ್ತದೆ. ನಿಮ್ಮ ಚಟುವಟಿಕೆಗಳಿಂದ ಜನರ ಗಮನವನ್ನು ಸೆಳೆಯುವಿರಿ. ವ್ಯವಹಾರಗಳಲ್ಲಿ ಮೇಲುಗೈ ಸಾಧಿಸಲು ಪ್ರಯತ್ನ ಪಡುವಿರಿ. ಮಕ್ಕಳ ವಿಚಾರದಲ್ಲಿ ನಿಮ್ಮ ಎಣಿಕೆ ತಪ್ಪಾಗಬಹುದು. ಅವರ ಬಗ್ಗೆ ಗಮನ ಹರಿಸುವುದು ಒಳಿತು. ಉಸಿರಾಟದ ತೊಂದರೆ ಅಥವಾ ಮೂಳೆ ತೊಂದರೆಗಳಿದ್ದಲ್ಲಿ ಚಿಕಿತ್ಸೆ ಪಡೆಯಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಹತ್ತಿರ ಬರುವ ಸಾಧ್ಯತೆ ಇದೆ. ನಿಮ್ಮ ಮಾತುಕತೆಗಳಲ್ಲಿ ಹೆಚ್ಚಿನ ವ್ಯಾವಹಾರಿಕತೆ ಕಾಣಬಹುದು. ಆಸ್ತಿ ವಿಚಾರದಲ್ಲಿ ಅಂತಹ ಪ್ರಗತಿ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಸಿಗುವುದು ಕಷ್ಟ. ಹಣದ ವ್ಯವಹಾರಗಳಲ್ಲಿ ಹಿನ್ನಡೆ ಅನುಭವಿಸಬೇಕಾಗಬಹುದು. ಕಫದ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿರಿ. ಕೃಷಿಕರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆತ್ಮಗೌರವ ಅಗತ್ಯಕ್ಕಿಂತ ಜಾಸ್ತಿ ಇರುತ್ತದೆ. ಹಣದ ಒಳಹರಿವು ನಿರೀಕ್ಷೆಯಷ್ಟು ಇರುತ್ತದೆ. ನಿಮ್ಮ ವೈರಿಗಳನ್ನು ಮಣಿಸಲು ಅವರದೇ ರೀತಿಯ ಸಾಕಷ್ಟು ತಂತ್ರಗಳನ್ನು ಹೆಣೆಯುವಿರಿ. ಆಸ್ತಿ ವಿಚಾರದಲ್ಲಿ ಸ್ವಲ್ಪ ಗೊಂದಲ ಉಂಟಾಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸನ್ನು ಪಡೆಯುವ ಯೋಗವಿದೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ಬುದ್ಧಿವಂತಿಕೆಯಿಂದ ನಡೆದುಕೊಳ್ಳುವುದರ ಜೊತೆಗೆ ನಿಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸದಿಂದ ಉತ್ತಮ ಅನುಕೂಲವಾಗಲಿದೆ. ಸದ್ಯ ತಾಂತ್ರಿಕ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಇರುತ್ತವೆ. ಹಣದ ಒಳಹರಿವು ಸ್ವಲ್ಪ ಕಡಿಮೆ ಎನಿಸಿದರೂ ತೊಂದರೆಯಿರುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹೆಚ್ಚು ಶ್ರದ್ಧೆವಹಿಸಿ ಕೆಲಸ ಮಾಡುವಿರಿ. ಹಾಗಾಗಿ ಉದ್ಯೋಗದಲ್ಲಿ ಯಾವುದೇ ರೀತಿಯ ಏರಿಳಿತ ಇರುವುದಿಲ್ಲ. ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ಬರುತ್ತದೆ. ಆದಾಯವೂ ಹೆಚ್ಚುತ್ತದೆ. ಒಡಹುಟ್ಟಿದವರ ಕೆಲವು ಕೆಲಸಗಳನ್ನು ಮಾಡಿಕೊಡುವಿರಿ. ಆಸ್ತಿ ವಿಚಾರದಲ್ಲಿ ಹಿನ್ನಡೆ ಇರುತ್ತದೆ. ವಿದೇಶದಲ್ಲಿರುವವರು ಈಗ ಸ್ಥಿರಾಸ್ತಿಯನ್ನು ಮಾಡಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಧನಾದಾಯ ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ಒಡಹುಟ್ಟಿದವರಲ್ಲಿ ಭಿನ್ನಾಭಿಪ್ರಾಯ ಬರುವ ಸಾಧ್ಯತೆ ಇದೆ. ಸ್ಥಿರಾಸ್ತಿಗಾಗಿ ಸತತ ಪ್ರಯತ್ನ ಮಾಡುತ್ತಿರುವವರಿಗೆ ಆಸ್ತಿ ಒದಗುತ್ತದೆ. ವ್ಯಾಪಾರ- ವ್ಯವಹಾರಗಳಲ್ಲಿ ನಿಮ್ಮ ಪಾತ್ರ ಹೆಚ್ಚುತ್ತದೆ. ಕಾರ್ಮಿಕರ ಕೊರತೆಯಿಂದ ಬಳಲುತ್ತಿದ್ದ ಉದ್ದಿಮೆಗಳಿಗೆ ಕೊರತೆ ನೀಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಅತಿಯಾದ ಗೌರವ ನಿಮ್ಮನ್ನು ಕಾಡಬಹುದು. ವಿದೇಶಿ ವ್ಯವಹಾರ ಮಾಡುವವರಿಗೆ ಸಾಲ ಸೌಲಭ್ಯಗಳು ದೊರೆಯುತ್ತವೆ. ವಿದೇಶದಲ್ಲಿ ಹೋಟೆಲ್ ಉದ್ಯಮ ನಡೆಸುವವರಿಗೆ ಲಾಭ ಹೆಚ್ಚುತ್ತದೆ. ಒಡಹುಟ್ಟಿದವರೊಡನೆ ಸಂಬಂಧ ಸುಧಾರಿಸಿಕೊಳ್ಳಲು ಯತ್ನ ಮಾಡುವಿರಿ. ವೃತ್ತಿಯಲ್ಲಿ ಅಂತಹ ತೃಪ್ತಿ ಇರುವುದಿಲ್ಲ. ವಿದೇಶಿ ಭಾಷೆಗಳನ್ನು ಕಲಿಯಬೇಕೆನ್ನುವವರಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆ.

ಪದಬಂಧ 2766



ಮೇಲಿನಿಂದ ಕೆಳಕ್ಕೆ
1. 'ಲೋಕ ಮಾತೇ' ನೀ 'ವಿಶ್ವಕ್ಕೇ ಜನ್ಮದಾತೇ' 5
2. ವನದಲ್ಲಿ ಸಿಗುವ ವಸ್ತ್ರ 3
3. ಹಿತವಾಗಿ ಬೀಸುವ ಮಂದಾನಿಲ 3
4. ವಿರಳವಾದ ಎಣ್ಣೆ ವ್ಯಾಪಾರದ ಬೆಂಗಳೂರಿನ ಪೇಟೆ 5
5. 'ವಿರಸಂ' ಮರಣಕ್ಕೆ ಮೂಲವಾದರೆ ಜನನಕ್ಕೆ? 3
6. ಕವಿಯ ಲೇಖನಿಯಿಂದ ಮೂಡಿದ ಕಲ್ಪನೆಯ ಸಾಲುಗಳು 3
7. ಹಾಡುಗಾರಿಕೆಯೇ ಇವನ ಕೆಲಸ 3
10. ಸದಾ ಹಿತವನ್ನು ಬಯಸುವವ 3
12. ಚಿಲ್ಲರೆ ವ್ಯಾಪಾರಕ್ಕೆ ನಮ್ಮ ಕಿಸೆಯಲ್ಲಿರಬೇಕಾದ ಹಣ 3
13. ಪವಾಡಗಳನ್ನು ತೋರಬಲ್ಲವನೇ ಈ ಮಹಾ ಪುರುಷ 5
14. ಒಂದರ ಹಿಂದೆ ಒಂದು ಸರದಂತೆ ಪೋಣಿಸಿದ್ದು ತಲೆಕೆಳಗಾಗಿದೆ 3
15. ಆಧಾರವಿಲ್ಲದೆ ಕೆಳಕ್ಕೆ ಬೀಳುವುದು 3
16. ರೆಕ್ಕೆ ಕಟ್ಟಿಕೊಂಡು ಹಾರಲು ಸಿದ್ಧವಾಗಿರುವವನನ್ನು ಹೀಗೆನ್ನಬಹುದೆ 3
17. ಕತ್ತೆಯನ್ನು ದೂಷಿಸುವ ರಾಮಾಯಣದ ಜೋಡಿ ರಾಕ್ಷಸರು 5
20. ಕಕ್ಷಿಯ ಪರವಾಗಿ ಕೋರ್ಟಿನಲ್ಲಿ ವಾದಿಸುವ ಆಂಗ್ಲ ವಕೀಲ 3
22. ರಂಜಿಸುವ ಬಾಲೆ 3

ಎಡದಿಂದ ಬಲಕ್ಕೆ
1. ರಾಧಾ ಕೃಷ್ಣರ ಒಲುಮೆಯನ್ನು ಬಣ್ಣಿಸಿದ ಮಹಾಕವಿ 4
3. ವಿಜ್ಞಾನದ ಬಳಕೆಗೆ ಬೇಕಾಗುವ ತಂತ್ರ 4
5. ಬ್ರಹ್ಮನ ಮುನಿ ಪುತ್ರರಲ್ಲಿ ಹಿರಿಯ 3
7. 'ಉಫ್' ಎಂದಾಗ ಉರುಳುವ ಕನಸಿನ ಗುಡಿ 5
8. ಬೀಳ್ಕೊಡುಗೆಯ ಕೊನೆಯಲ್ಲಿ ಆದಾಯ 3
9. ಪಾಲಿಸಬೇಕಾದ ಕಟ್ಟಳೆಗಳ ಮಹಾ ಪುಸ್ತಕ 5
11. ಕೆಂಪುರಂಗೇರಿದ ಮುಗಿಲ ಹೂವು 5
13. ಜೇನಿನಂತೆ ಸಿಹಿಯಾಗಿ ನುಡಿಯುವವಳು 5
15. ಕಬ್ಬಿಣದ ಅದಿರು ಸಿಗುವ ಹಯವದನ ಸ್ಥಳ 5
18. ದಾನವ ರೂಪಿ ಹೆಣ್ಣು 3
19. ಕಂಡು ಕಣ್ಮರೆಯಾಗುವ ಸುಖ ಭೋಗಗಳ ಪತ್ತೆ 5
21. ಅಲೆಅಲೆಯಾಗಿ ಬರುವ ವಾರಪತ್ರಿಕೆ 3
23. ಭೂಮಿಯ ವ್ಯಾಜ್ಯ 4
24. ಸತ್ಯ ಸ್ವಭಾವದ ಶರಣ 4

ಪದಬಂಧ ಉತ್ತರ -2765

ಮೇಲಿಂದ ಕೆಳಕ್ಕೆ

1. ತಾರಾಬಳಗ 2.ತಲೆಗಡುಕ 3.ರಂಗಪ್ರವೇಶ 8.ಕೆಳಗಾಲು 9.ನವಭಾವ 10.ರಾಕ್ಷಸ 12.ಪೀಠಿಕೆ 13.ಬಡಗನಾಡು 14.ವನಭೋಜನ 16.ನೆರೆಸಮೂಹ

ಎಡದಿಂದ ಬಲಕ್ಕೆ

1. ತಾತಮುತ್ತಾತ 3.ರಂಗೋಲಿ 4.ಕುಮಾರಾ 6.ಬಯಲುರಂಗ 7.ವೇದಿಕೆ 9.ನಯಾಗರಾ 11.ಕಪೀಶ 13.ಬಸವ 15.ಕೆನೆಹಾಲು 17.ವರಾಂಡ 18.ಭೋಗವಿಲಾಸ 19.ನಾಡೋಜ 20.ಮೂಷಿಕ 21.ಕುರುಡು 22.ನದೀಕಲಹ

ಮಸಾಲೆ ದೋಸೆ ತಿನ್ನೋದು ಬಿಟ್ಟಿದ್ದೇವಾ?

ಕಾರಂತರು ನಮ್ಮ ನಡುವೆ ಇಲ್ಲವಾಗಿ ಇದೇ 9ಕ್ಕೆ ಭರ್ತಿ 25 ವರ್ಷ. ಆದರೆ, ದಿನ ಕಳೆಯುತ್ತಾ ಹೋದಂತೆ ಅವರ ಚಿಂತನೆಗಳು ಇನ್ನೂ ಹೆಚ್ಚು ಪ್ರಸ್ತುತವಾಗುತ್ತಾ ಹೊರಟಿವೆ...

ನಾರಾಯಣ ರಾಯಚೂರ್

ಕನ್ನಡದ ಮೇರು ಲೇಖಕರಲ್ಲೊಬ್ಬರು ಡಾ.ಶಿವರಾಮ ಕಾರಂತರು. ಅವರ ಬದುಕು-ಬರಹ ಎರಡೂ ವೈವಿಧ್ಯಮಯ, ವಿದ್ವತ್ಪೂರ್ಣ. 95 ವರ್ಷಗಳ ತುಂಬು ಜೀವನದ ಸಾಧನೆಯಲ್ಲಿ 427 ಕೃತಿಗಳನ್ನು ಬರೆದರು - ಅವುಗಳಲ್ಲಿ ಕಾದಂಬರಿ, ನಾಟಕ, ಕಥೆ, ಪ್ರವಾಸ ಕಥನ, ವಿಜ್ಞಾನ ಸಾಹಿತ್ಯ, ಬಾಲ ಸಾಹಿತ್ಯ, ವಿಶ್ವಕೋಶ ಎಲ್ಲವೂ ಸೇರಿದ್ದವು. ಹೀಗಾಗಿ ಅವರೊಬ್ಬ ನಡೆದಾಡುವ ವಿಶ್ವಕೋಶವೇ ಆಗಿದ್ದರು. ಕೊನೆಗಾಲದಲ್ಲೂ, ತಮ್ಮ ಪ್ರಾಣಪಕ್ಷಿ ಹಾರಿಹೋಗುವ ತುಸು ಮೊದಲೂ, ಹಕ್ಕಿಗಳನ್ನು ಕುರಿತಾದ ಒಂದು ಪುಸ್ತಕ ರಚನೆಯಲ್ಲಿ ತೊಡಗಿದ್ದರಂತೆ ಅವರು!

ಕಾರಂತರು ಗಂಭೀರ ಸ್ವಭಾವದವರೆಂದೇ ಸುಪರಿಚಿತರು. ಆದರೆ, ನನ್ನ-ಅವರ ಮೊದಲ ಭೇಟಿ ಅವರ ಭಿನ್ನ ವ್ಯಕ್ತಿತ್ವವನ್ನೂ ಪರಿಚಯಿಸಿತು. ಎಂಬತ್ತರ ದಶಕದ ಸಂದರ್ಭ. ನಮ್ಮ ಬ್ಯಾಂಕ್‌ನ ಕನ್ನಡ ಸಂಘದ ಕಾರ್ಯಕ್ರಮವೊಂದಕ್ಕೆ ಕಾರಂತರು ಅತಿಥಿ. ಸರಿಯಾದ ಸಮಯಕ್ಕೆ ಕಾರು ಸಂಘದ ಮುಖ್ಯದ್ವಾರದ ಬಳಿ ಬಂತು. ಕಾರಂತರು ಇಳಿದರು. ನಾನು ಬರಮಾಡಿಕೊಂಡು ಎದುರಿಗಿದ್ದ ಸಂಘದ ಇತರ ಪದಾಧಿಕಾರಿಗಳನ್ನು ಕಾರಂತರಿಗೆ ಪರಿಚಯಿಸುತ್ತ 'ಇವರು... ನಾಗೇಶ್ ಅಂತ...' ಎನ್ನುತ್ತಾ, ನಮ್ಮ ಸಂಘದ ಖಜಾಂಚಿ ಎನ್ನಬೇಕು ಅನ್ನುವಷ್ಟರಲ್ಲಿಯೇ ಕಾರಂತರು, 'ಅಂತ... ಯಾಕೆ? ಇನ್ನೂ ಡೆಫನೇಟ್ ಇಲ್ಲವೋ?' ಎಂದು ಬಿಡೋದೇ! ನಂಗೊ ಅಚ್ಚರಿಮಿಶ್ರಿತ ಆನಂದ. ಪರವಾಗಿಲ್ವೆ, ಕಾರಂತರೂ ಹಾಸ್ಯಪ್ರಜ್ಞಾಪ್ರಿಯರೇ. ಸುಮ್ಮನೆ ಅವರ ಬಗ್ಗೆ ಜನ ಏನೋ ಹೆದರಿಸಿದ್ದರಲ್ಲ ಎಂದುಕೊಂಡೆ.

ಯಕ್ಷಗಾನದಲ್ಲಿ ಅವರು ಹೊಸ ಪ್ರಯೋಗ ಮಾಡಿದರು - ಅದೂ ಇಳಿ ವಯಸ್ಸಿನಲ್ಲಿ, ತಾವೇ ಗೆಜ್ಜೆ ಕಟ್ಟಿ ಕುಣಿದರು. ಸಿನಿಮಾ ಮಾಡಿದರು. ಮುಂಬೈಗೆ ಹೋಗಿ ಸಿನಿಮಾ ತಂತ್ರ ಕಲಿತು, ಕ್ಯಾಮೆರಾ ಖರೀದಿಸಿ ತಂದು ಅಭಿನಯಿಸಿ, ನಿರ್ದೇಶಿಸಿ ಚಿತ್ರ ನಿರ್ಮಾಣ ಮಾಡಿದರು. ಒಮ್ಮೆ ಒಬ್ಬ ಬಡಗಿ ಮೇಜು ಮಾಡಿದ್ದು ಸರಿ ಬರಲಿಲ್ಲವೆಂದು ತಾವೇ ಉಳಿ, ಗರಗಸ ಹಿಡಿದು ಪೀಠ ತಯಾರಿಸಿದ ಹಟವಾದಿಯವರು.


ತಮ್ಮ ಪುಸ್ತಕಕ್ಕೆ ತಾವೇ ಮುಖಪುಟ ಚಿತ್ರ ಬರೆದುಕೊಂಡ ಏಕೈಕ ಸಾಹಿತಿ ಆ ಕಾಲದಲ್ಲಿ ಯಾರಾದರೂ ಇದ್ದಿದ್ದರೆ ಅದು ಕಾರಂತರು ಮಾತ್ರ! ಮೊಳೆ ಜೋಡಿಸಿ ಅಚ್ಚುಮಾಡುತ್ತಿದ್ದ ದಿನಗಳಲ್ಲಿ ತಾವೇ ಮುದ್ರಣಾಲಯವನ್ನು ತೆರೆದು, ಮೊಳೆ ಜೋಡಿಸಿ, ಅಚ್ಚುಮಾಡಿ ತಮ್ಮ ಪುಸ್ತಕಗಳನ್ನು ಹೊರತಂದ ಸಾಹಸವನ್ನು ಅವರ ಮಾತುಗಳಲ್ಲಿಯೇ ಕೇಳಿ: 'ಮುದ್ರಣಾಲಯದ ಮೊಳೆ ಜೋಡಿಸುವವ, ಅಚ್ಚು ಮಾಡುವವ, ಪ್ರೂಫ್ ನೋಡುವವ, ಮುದ್ರಿಸುವವ ಇಷ್ಟಾಗಿ ಪುಸ್ತಕ ಸಿದ್ಧವಾದ ಮೇಲೆ ಓದುಗನೂ ನಾನೊಬ್ಬನೇ'.

ಇನ್ನು ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ 'ಕೇಳಿಸ್ಕೊಳ್ಳಿ, ಬರ ಬಂದಿದೆ ಅಂತ ಮಸಾಲೆ ದೋಸೆ ತಿನ್ನೋದು ಬಿಟ್ಟಿದ್ದೇವಾ' ಎಂದು ಕೇಳಿದವರು ಕಾರಂತರು! ಮೊದಲ ವಿಶ್ವ ಕನ್ನಡ ಸಮ್ಮೇಳನ 1985ರಲ್ಲಿ ಮೈಸೂರಿನಲ್ಲಿ ನಡೆಯಿತು. ಕುವೆಂಪು ಅವರಂಥ ಘಟಾನುಘಟಿಗಳೆದುರೇ 'ನಾಡಿನಲ್ಲಿ ಬರ ಇರುವಾಗ ವಿಶ್ವ ಕಾಣದ ಸಮ್ಮೇಳನಗಳು ಬೇಕೇ' ಎಂದು ಪ್ರಶ್ನೆ ಮಾಡಿದವರಿಗೆ ಕಾರಂತರು ಉತ್ತರಿಸಿದ ಬಗೆ ಇದು.

'ಮೂಕಜ್ಜಿಯ ಕನಸುಗಳು' ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ. ಮೂಕಜ್ಜಿಯ ಮೂಲಕ ಕಾರಂತರೇ ಮಾತನಾಡಿದ್ದಾರೆ. 'ನಾಲ್ಕು ದಿನ ಚಂದವಾಗಿ ಇರಬೇಕು'. ಇದು ಮೂಕಜ್ಜಿಯ ತತ್ವ. ಚಂದವಾಗಿ ಅಂದರೆ? 'ಇರುವಷ್ಟು ದಿನ ನಮಗೂ ಹಿತವಾಗಿ, ನಾಲ್ಕು ಜನರಿಗೂ ಹಿತವಾಗಿ ಬಾಳುವುದಪ್ಪಾ. ಬರಿ ಮನುಷ್ಯರಿಗಷ್ಟೇ ಅಲ್ಲ, ಆಚೀಚಿನ ಎಲ್ಲ ಜೀವಿಗಳಿಗೂ. ಪರರಿಗೆ ಸುಖ ಕೊಡಲು ಬಾರದೆ ಹೋದರೂ ಪರವಾಗಿಲ್ಲ, ದುಃಖ ಕೊಡದಿದ್ದರೆ ಸಾಕು' ಇಂತಹ ಅಸ್ತಿತ್ವವಾದಿ ಮಾನವತತ್ವವನ್ನು ಪ್ರತಿಪಾದಿಸುವ ತತ್ವಜ್ಞಾನಿ ಮೂಕಜ್ಜಿ. ಮೂಡೂರು, ನಾಡೂರು, ಪಾಡೂರು, ಬಸರಿಕಟ್ಟೆ, ಅಶ್ವಥಕಟ್ಟೆ, ಬೂದಿಕಟ್ಟೆ ಇವು ಸಾಂಕೇತಿಕ.

ಗಣ್ಯ ಪತ್ರಕರ್ತರಾಗಿದ್ದ ಎಚ್.ವೈ.ಶಾರದಾಪ್ರಸಾದ್ ಹಾಗೂ ಕಾರಂತರು ಆಪ್ತಸ್ನೇಹಿತರು. ಭಾರತೀಯ ವಿದ್ಯಾಭವನದ ಕಾರ್ಯಕ್ರಮವೊಂದಕ್ಕೆ ಕಾರಂತರು ದೆಹಲಿಗೆ ಬಂದಾಗ ಪತ್ರಕರ್ತನೊಬ್ಬ ಕಾರಂತರಿಗೆ ಕೇಳಿದ್ದ: 'ಮಿಸ್ಟರ್ ಕಾರಂತ್? ಯು ಆರ್ ಎ ಹೆಕ್ಟಿಕ್ ರೈಟರ್, ಆ್ಯಕ್ಟಿವಿಸ್ಟ್, ಡು ಯು ಬರ್ನ್ ಮಿಡ್ ನೈಟ್ ಆಯಿಲ್?' ಅದಕ್ಕೆ ಕಾರಂತರ ಚುಟುಕು - ಚಾಲಾಕಿನ ಪ್ರತ್ಯುತ್ತರ: 'ನೋ, ಸನ್‌ಲೈಟ್ ಇಸ್ ಇನಫ್ ಫಾರ್ ಮಿ'!

1997ರ ಡಿಸೆಂಬರ್ 9ರಂದು ಕಾರಂತರು ನಮ್ಮನ್ನಗಲಿದ ದಿನ. 'ಕಾರಂತರ ನಿಧನದಿಂದ ಉಜ್ವಲ ಸೃಜನ ಪರಂಪರೆಯ ಒಂದು ತಲೆಮಾರಿನ ಮುಕ್ತಾಯದ ಶೂನ್ಯದೊಳಕ್ಕೆ ನಾವು ಪ್ರವೇಶಿಸಿದ ಅನುಭವ' ಎಂದಿದ್ದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಮಾತು ಎಷ್ಟು ಧ್ವನಿಪೂರ್ಣ. ಕಾರಂತರು ನಮ್ಮನ್ನಗಲಿ 25 ವರ್ಷಗಳೇ ಆಗಿರಬಹುದು. ಆದರೆ, ಚಿಂತನೆಗಳಿಂದ ನಮ್ಮ ನಡುವೆ ಬದುಕಿದ್ದಾರೆ.



ಕಲೆ: ಭಾವು ಪತ್ತಾರ್

'ಸಾವು ಬರುವುದು ಅದರ ಇಷ್ಟವಿದ್ದಾಗ'

ಶಿವರಾಮ ಕಾರಂತರ ಜತೆ ಒಂದು ಕಾಲ್ಪನಿಕ ಸಂದರ್ಶನ/ ಫಟಾಫಟ್ ಪ್ರಶ್ನೋತ್ತರ. ಉತ್ತರವನ್ನು ಅವರ ನುಡಿಗಟ್ಟಿನಿಂದಲೇ ಆಯ್ದದ್ದು!

- **ಕಾರಂತರೇ ಸಾವಿನ ಬಗ್ಗೆ ನಿಮ್ಮ ಅಭಿಪ್ರಾಯ?**

ಕರೆದರೆ ಸಾವು ಬರುತ್ತದೆಯೇ? ಅದು ಬರುವುದು ಅದರ ಇಷ್ಟವಿದ್ದಾಗ. ನಮ್ಮ ತಯ್ಯಾರಿ ಅದು ನೋಡುತ್ತದೆಯೇ? ಅದು ಬರುವಾಗ ನಾವು ತಯಾರಿರಬೇಕು.

- **ಬಾಲ ಸಾಹಿತ್ಯ, ಬಾಲವನ ಎಂದ ಪ್ರಿಯ ಕಾರಂತಜ್ಜ ನೀವು. ಪಾಲಕರಿಗೆ ನಿಮ್ಮ ಕಿವಿಮಾತು?**

ಮಕ್ಕಳಿಗಾಗಿ ಆಸ್ತಿ ಮಾಡಬೇಡಿ; ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ.

- **ಸಾಹಿತಿಯ ಸ್ಥಾನಮಾನದ ಬಗ್ಗೆ ಏನಂತೀರಿ?**

ಸಾಹಿತಿಗಳಿಗೆ ಸಮಾಜದಲ್ಲಿ ಬೇರೇ ಪಾತ್ರವೇನೂ ಇಲ್ಲ. ಸಾಹಿತಿ ಲೋಕೋದ್ಧಾರಕ ಎಂಬ ಭಾವನೆಯೂ ಬೇಡ. ಆತನೂ ಎಲ್ಲರ ಹಾಗೊಬ್ಬ ಮನುಷ್ಯ. ತನ್ನ ಅನುಭವವನ್ನು ಹೇಳುತ್ತಾನೆ-ಪರಿಹಾರ ಸೂಚಿಸುವುದಲ್ಲ-ಒತ್ತಾಯಿಸುವುದಲ್ಲ. ಆತ ಬರೆದ ಮಾತ್ರಕ್ಕೆ ಮಹಾನುಭಾವ ಆಗೋಲ್ಲ. ಬರೆಯದವರೂ ದೊಡ್ಡ ಕೆಲಸಗಳನ್ನು ಮಾಡಿದ್ದಾರೆ.

- **ಪರಿಸರ ಪ್ರೀತಿ ಹೇಗಿರಬೇಕು ಕಾರಂತರೇ?**

ಜಾತ್ರೆಗೆ ಬಂದವರು ಜಾತ್ರೆ ಮುಗಿಸಿ ಹೊರಡುವಾಗ ತಾವು ನಲಿದು, ಉಂಡುಹೋದ ನೆಲದ ಮೇಲೆ ಎಲ್ಲೆಲ್ಲೂ ತಮ್ಮ ಉಚ್ಚಿಷ್ಟವನ್ನು ಚೆಲ್ಲಿ ಹೋದರೆ ಹೇಗಾದೀತು? ನಾವೇ ಅಲ್ಲಿಗೆ ತಿರುಗಿ ಬಾರದಿದ್ದರೇನಾಯಿತು? ಅಲ್ಲಿಗೆ ಬರುವ ನಮ್ಮ ಮಕ್ಕಳು ಏನೆಂದುಕೊಂಡಾರು? ಅಷ್ಟನ್ನಾದರೂ ಯೋಚಿಸುವ ಬುದ್ಧಿ ಈ ದೇಶವನ್ನು ನಡೆಸುವ ಹಿರಿಯರಿಗೆ ಇಲ್ಲದೆ ಹೋದರೆ ಹೇಗೆ?

- **ದೇಶದ ಇಂದಿನ ಸ್ಥಿತಿ-ಗತಿಯ ಬಗ್ಗೆ?**

ಈ ದೇಶ ಎತ್ತ ಹೋಗುತ್ತಿದೆಯೋ ಗೊತ್ತಿಲ್ಲ. ಏನು ಮಾಡಿದರೂ, ನಾನು ಪತ್ರಿಕೆಗಳಲ್ಲಿ ಬರಬೇಕು, ನಾನು ಇಂಥವ ಎಂದು ಹೇಳಿಕೊಳ್ಳುವ ಆತ್ಮರತಿಯಲ್ಲಿ ಮುಳುಗಿದ್ದೇವೆ. ನಮ್ಮನ್ನು ನಾವೇ ದೊಡ್ಡವರು ಎಂದು ಹೇಳಿಕೊಳ್ಳುತ್ತಿರುವ ಆಸ್ಪತ್ರೆ ಆಗುತ್ತಿದೆ ಈ ದೇಶ.

- **ಹಣ, ಹಣ, ಹಣ ಎಂದು ಹಣದ ಹಿಂದೆ ಬಿದ್ದವರ ಬಗ್ಗೆ ಏನಂತೀರಿ ಕಾರಂತರೇ?**

ಹಣ ಎಂದರೆ ಉಪ್ಪು ಇದ್ದಂತೆ - ಅದನ್ನು ತುಸುವೇ ನಾಲಿಗೆಯ ಮೇಲಿಟ್ಟುಕೊಂಡರೆ ರುಚಿ. ಹೆಚ್ಚಾಗಿ ತಿಂದರೆ ದಾಹ

- **ದೇವರ ಬಗ್ಗೆ ಏನು ಹೇಳುತ್ತೀರಿ?**

ನಾನು ದೇವರನ್ನು ನಂಬುವುದಿಲ್ಲ. ಏಕೆಂದರೆ ನಾನು ನೋಡಿಲ್ಲ. ನನಗೆ ಯಾವುದು ಗೊತ್ತಿಲ್ಲವೋ ಅದನ್ನು ನಾನು ನಂಬುವುದಿಲ್ಲ. ರಾಮಕೃಷ್ಣ ಪರಮಹಂಸರು ನಂಬಿದ್ದರು. ತಪಸ್ಸಿನಿಂದ ಕಂಡು ಕೊಂಡಿದ್ದರು. ನನಗೆ ರಾಮ ಅಂದರೆ ರಾಜಾ ರವಿವರ್ಮ ಅವರ ಚಿತ್ರ; ಕೃಷ್ಣ ಅಂದರೆ, ಗುಬ್ಬಿ ವೀರಣ್ಣನವರ ಕೃಷ್ಣಲೀಲೆ ನೆನಪಿಗೆ ಬರುತ್ತದೆ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾವು ನಂಬಿದ್ದೇವೆ. ಆದರೆ ಆ ರೀತಿ ಆಗಿಲ್ಲ. ನನಗೆ ಅನುಕೂಲವಾದಾಗ ಮಾತ್ರ ದೇವರನ್ನು ನಂಬುತ್ತೇವೆ ಅನ್ನುವುದು ಸರಿಯಲ್ಲ.


- **ಕಡೆಯದಾಗಿ ತೃಪ್ತಿಕರ ಬದುಕಿನ ಪರಿಭಾಷೆ?**

ಬದುಕಿನಲ್ಲಿ ಪರಮಾವಧಿ ತೃಪ್ತಿಯನ್ನು ಕೊಡಬಲ್ಲ ಸಂಗತಿ ಎಂದರೆ ತಾನು ಸರಿಯಾಗಿ ನಡೆದಿದ್ದೇನೆ ಎಂಬ ಆತ್ಮವಿಶ್ವಾಸ. ಯಾರಿಗೂ ಉಪದೇಶ ಮಾಡಬೇಡಿ. ನೀವೇನು ಹೇಳಬೇಕೆನ್ನುತ್ತಿದ್ದೀರೋ ಹಾಗೆ ಬದುಕಿ ತೋರಿಸಿ.

ನಾಗರಿಕತೆಯ ನಿರೂಪಕನ ಚಿಂತನೆಗಳು

ಎನ್.ಎಸ್. ಗುಂಡೂರ

ವಿಮರ್ಶೆ



ಪು: 150 ₹50

ಡಿ.ಆರ್.ನಾಗರಾಜ್
ಲೇ: ನಟರಾಜ್ ಹುಳಿಯಾರ್
ಪ್ರ: ಸಾಹಿತ್ಯ ಅಕಾದೆಮಿ
ಸಂ: 080-22245152

ಡಿ.ಆರ್. ನಾಗರಾಜ್ ನೆನಪಿನ ಅಕ್ಷರ ಚಿಂತನ ಮಾಲೆಯ 'ಕುಮಾರಿಲ ಭಟ್ಟ' (2001) ಕೃತಿಯ ಒಂದು ಸಾಲಿನಿಂದ ಪ್ರಸ್ತುತ ಪುಸ್ತಕವನ್ನು ಪರಿಚಯಿಸುವುದು ಸೂಕ್ತವೆನಿಸುತ್ತದೆ: 'ಇಂದಿನವರು ತಮಗೆ ತಿಳಿಯದಿದ್ದ ಶಬ್ದಾರ್ಥ ಸಂಬಂಧವನ್ನು ಹಿಂದಿನವರ ವ್ಯವಹಾರದಿಂದ ತಿಳಿಯುತ್ತಾರೆ.' ಹಾಗೆಯೇ ಆಧುನಿಕ ಕರ್ನಾಟಕದ ನಿನ್ನೆಗಳ ಸ್ಮೃತಿ ನಮಗೆ ಇಂದು ಮುಖ್ಯವೆನಿಸಿದರೆ, ನಮ್ಮ ಬೌದ್ಧಿಕ ಲೋಕವನ್ನು ಸೃಷ್ಟಿಸಿ, ರೂಪಿಸಿದ ನಿನ್ನೆಯ ಪೂರ್ವಸೂರಿಗಳ ಜೊತೆ ನಾವು ಅನುಸಂಧಾನ ನಡೆಸುವುದು ಹೆಚ್ಚು ಉಪಯುಕ್ತವೆನಿಸುತ್ತದೆ.

ಇಂತಹ ಸಂದರ್ಭದಲ್ಲಿ ನಮ್ಮ ವಿಮರ್ಶೆಯ ಗತವನನ್ನೂ ಮತ್ತೆ ಮತ್ತೆ ನೆನಪಿಸಿಕೊಳ್ಳುವುದು ಮುಖ್ಯ. ಆದ್ದರಿಂದ ಮುಳಿಯ ತಿಮ್ಮಪ್ಪಯ್ಯನವರ ತಲೆಮಾರಿನಿಂದ ಹಿಡಿದು, ಆಧುನಿಕ ಕನ್ನಡ ವಿಮರ್ಶಾ ವಿವೇಕದ ಎರಡು ಕಣ್ಣುಗಳಂತಿರುವ ಕೀರ್ತಿನಾಥ ಕುರ್ತಕೋಟಿ ಮತ್ತು ಡಿ.ಆರ್. ನಾಗರಾಜ್ ಅವರವರೆಗೆ ಎಲ್ಲರೊಡನೆ ಮಾತುಕತೆ ನಡೆಸುವುದು ಸೂಕ್ತ. ಈ ನಿಟ್ಟಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾರತೀಯ ಸಾಹಿತ್ಯ ನಿರ್ಮಾಪಕರು ('ಭಾಸಾನಿ') ಮಾಲೆಯಲ್ಲಿ ಈಗಾಗಲೇ ಕುರ್ತಕೋಟಿ ಅವರ ಕುರಿತು ಎಸ್.ಆರ್. ವಿಜಯಶಂಕರ ಅವರಿಂದ ಕೃತಿ ಬಂದಿದೆ. ಇದೇ ಮಾಲೆಯಲ್ಲಿ ನಟರಾಜ್ ಹುಳಿಯಾರ್ ಅವರ ಪ್ರಸ್ತುತ ಪುಸ್ತಕ ಡಿ.ಆರ್. ಬರಹಗಳ ಸಾರವನ್ನು ಪುನರ್ ಸೃಷ್ಟಿಸಿ, ಕನ್ನಡದ ವಿಮರ್ಶೆ ಕುರಿತು ನಾವು ಆಲೋಚಿಸುವಂತೆ ಮಾಡುತ್ತದೆ.

ಡಿ.ಆರ್. ಅವರನ್ನು ಆರಾಧಿಸುವ ಹಾಗೂ ಕಟುಟೀಕೆಗೆ ಒಳಪಡಿಸುವ ಅತಿರೇಕಗಳಿಗೆ ಹೋಗದೆ, ಅವರನ್ನು ಹೇಗೆ ನೋಡಬಹುದು? ದಕ್ಷಿಣ ಏಷ್ಯಾದ ಒಬ್ಬ ತರುಣ ಚಿಂತಕ ಕೇವಲ 44 ವರ್ಷ ಬದುಕಿ, ಅಂತರರಾಷ್ಟ್ರೀಯಮಟ್ಟದ ಬೌದ್ಧಿಕ ಹಂಬಲವನ್ನಿಟ್ಟುಕೊಂಡಿದ್ದು ವಿಸ್ಮಯವೇ ಸರಿ. ಆದರೆ, ಅವರ ಅತ್ಯುತ್ತಮ ಎನ್ನಬಹುದಾದ ಬರಹ ಅವರ ಬದುಕಿನ ನಂತರದ ದಿನಗಳಲ್ಲಿ ಬರುವುದಿತ್ತು. ಆದ್ದರಿಂದ ಡಿ.ಆರ್. ಜಗತ್ತನ್ನು ಗ್ರಹಿಸಿ, ಸೃಷ್ಟಿಸಿದ ಲೋಕಜ್ಞಾನವು, ಕನ್ನಡದ ಬೌದ್ಧಿಕತೆಯ ಫಸಲು ಭರ್ಜರಿಯಾಗಿ ಬೆಳೆಯುವಂತೆ ಬಿತ್ತಿದ ಬೀಜವೆಂದೇ ಹೇಳಬಹುದು. ಅವರ ಚಿಂತನ ಕ್ರಮ, ಬರವಣಿಗೆಗಳಲ್ಲಿರುವ ಮಿತಿಗಳಿಗೆ ಕುರುಡಾಗದೆ ಈ ಮಾತನ್ನು ಹೇಳುತ್ತಿದ್ದೇನೆ.

ಕಥನ ಕ್ರಮವನ್ನು ಜ್ಞಾನ ಉತ್ಪಾದನೆಯ ಸಾಧನ ಎಂದು ನಂಬಿದ್ದ ಡಿ.ಆರ್., ವಾಲ್ಟರ್ ಬೆಂಜಮಿನ್‌ನ ಕಥನ-ರೂಪಕದ ವಿಮರ್ಶಾ ಮಾದರಿಯನ್ನು ರೂಢಿಗೊಳಿಸಿ, ಕನ್ನಡ ವಿಮರ್ಶೆಯ ನುಡಿಗಟ್ಟನ್ನು ರೂಪಿಸಲು ಪ್ರಯತ್ನಿಸಿದ್ದರು. ಅವರ ಇಂಗ್ಲಿಶ್ ಪ್ರಬಂಧಗಳ ಸಂಕಲನವಾದ ಲಿಸ್‌ನಿಂಗ್ ಟು ದ ಲ್ಯೂಮ್‌ನ (2012) ಪೀಠಿಕೆಯಲ್ಲಿ ಪೃಥ್ವಿದತ್ತ ಚಂದ್ರ ಶೋಭಿ ಅವರು ಡಿ.ಆರ್. ಅವರ ವಿಮರ್ಶೆಯ ಕಸುಬನ್ನು 'ನಿರೂಪಣಾ ಕಲ್ಪನೆ' (ನರೇಟಿವ್ ಇಮ್ಯಾಜಿನೆಶನ್) ಎಂದು ಗುರುತಿಸುತ್ತಾರೆ. ಅವರ ಪ್ರಕಾರ ಡಿ.ಆರ್. ನಮ್ಮ ನಾಗರಿಕತೆಯ ಪುರಾಣಕಾರ.

ಈಗಾಗಲೇ ಡಿ.ಆರ್. ಅವರ ಬರಹ, ಚಿಂತನೆಗಳನ್ನು ಕುರಿತು ಲೇಖನಗಳು, ಪುಸ್ತಕಗಳು, ಸಂಶೋಧನಾ ಮಹಾಪ್ರಬಂಧಗಳು ಬಂದಿವೆ. ಉದಾಹರಣೆಗೆ, ವಿ. ಚಂದ್ರಶೇಖರ ನಂಗಲಿ ಅವರು ಬರೆದ 'ಡಿ.ಆರ್. ನಾಗರಾಜ್' ಪುಸ್ತಿಕೆ; ಲಿಂಗಪ್ಪ ಗೋನಾಳರ 'ಡಿ.ಆರ್ ನಾಗರಾಜ್‌ರ ಸಾಹಿತ್ಯ ಚಿಂತನೆ', ಅಜಕ್ಕಳ ಗಿರೀಶ್ ಭಟ್ಟ ಅವರ 'ಡಿ.ಆರ್.ಅವರ ಮೂಡು ಪಡು' ಹಾಗೂ ಪ್ರಕಾಶ ಬಡವನಹಳ್ಳಿಯವರ 'ಡಿ.ಆರ್. ನಾಗರಾಜ್ ವಿಮರ್ಶೆಯ ಕಥನ'. ಇತ್ತೀಚಿಗೆ ಬಂದ ಶಿವರಾಜ ಬ್ಯಾಡರಹಳ್ಳಿ ಸಂಪಾದಿಸಿದ 'ಅನನ್ಯ ಪ್ರತಿಭೆಯ ಪರಿ' ಹಾಗೂ ವೆಂಕಟೇಶ ಇಂದ್ವಾಡಿ ಸಂಪಾದಿಸಿದ 'ಡಿ.ಆರ್. ನಾಗರಾಜ್ ಅವರ ಸಮಗ್ರ ಸಾಹಿತ್ಯ ಚಿಂತನೆ' ಬಿಡಿ ಲೇಖನಗಳನ್ನೊಳಗೊಂಡಿವೆ. ಹುಳಿಯಾರ್ ಅವರು ಪಿ. ಲಂಕೇಶ ಮತ್ತು ಡಿ.ಆರ್ ಅವರನ್ನು ಮುಖಾಮುಖಿಯಾಗಿಸಿ ಈ ಹಿಂದೆಯೇ 'ಇಂತಿ ನಮಸ್ಕಾರಗಳು' ಎಂಬ ಕೃತಿಯನ್ನು ಬರೆದಿದ್ದು, ಪ್ರಸ್ತುತ ಪುಸ್ತಕದಲ್ಲಿ ಡಿ.ಆರ್. ಅವರನ್ನು ಸಮಗ್ರವಾಗಿ, ಆತ್ಮೀಯತೆಯಿಂದ ಚಿತ್ರಿಸಿದ್ದಾರೆ.

ಪುಸ್ತಕದಲ್ಲಿ ಒಟ್ಟು 12 ಅಧ್ಯಾಯಗಳಿವೆ. ಡಿ.ಆರ್. ಅವರು ಬಳಸಿ, ಬೆಳೆಸಿದ ಪರಿಕಲ್ಪನೆಗಳು, ಬೌದ್ಧಿಕ ಮಾರ್ಗಗಳನ್ನೊಳಗೊಂಡಂತೆ, ಅವರ ಎಲ್ಲ ಕೃತಿಗಳಿಗೆ ತಲಾ ಒಂದೊಂದು ಅಧ್ಯಾಯವನ್ನು ಮೀಸಲಿಡಲಾಗಿದೆ. 'ಭಾಸಾನಿ' ಮಾಲೆಯ ಮೂಲ ಉದ್ದೇಶ ಬಹುಶಃ ಲೇಖಕರನ್ನು ಸಾಮಾನ್ಯ ಓದುಗನಿಗೆ ಪರಿಚಯಿಸುವುದು. ಆದ್ದರಿಂದ ಇಲ್ಲಿ ಬರಹಗಾರರ ಬೌದ್ಧಿಕ ಚರಿತ್ರೆಯನ್ನು, ಅವರ ಅಧ್ಯಯನ ವಿಧಾನ ಹಾಗೂ ಚಿಂತನ ಕ್ರಮಗಳನ್ನು ಕುರಿತು ಸಂಕೀರ್ಣವಾದ ಪ್ರಮೇಯಗಳನ್ನು ಬೆಳೆಸಲು ಅವಕಾಶ ಇಲ್ಲ. ಇಂತಹ ಮಿತಿಗಳ ಮಧ್ಯೆಯೇ ಹುಳಿಯಾರ್ ಅವರು ಡಿ.ಆರ್. ಅವರ ಬೌದ್ಧಿಕ ಪಲ್ಲಟಗಳನ್ನು ಸೆರೆ ಹಿಡಿದು, ಅವರ ಕೃತಿಗಳನ್ನು ಓದಿಗೆ ಒಳಪಡಿಸಿದ್ದಾರೆ. ಕೆಲವೊಮ್ಮೆ ಸಾರಾಂಶ ಪುನರುಕ್ತಿಗೊಂಡಿದ್ದರೂ, ಡಿ.ಆರ್. ಅವರ ಚಿಂತನೆಗಳ ಪುನರ್ ಸೃಷ್ಟಿ ಸ್ಪಷ್ಟವಾಗಿದೆ. ಆದರೆ ಅವರನ್ನು ವಿಶಾಲವಾದ ಕನ್ನಡದ ವೈಚಾರಿಕ ಪರಂಪರೆಯ ಹಿನ್ನೆಲೆಯಲ್ಲಿಟ್ಟು ನೋಡಿದ್ದರೆ ಇನ್ನೂ ಹೆಚ್ಚಿನ ಪ್ರಯೋಜನ ಆಗಬಹುದಿತ್ತೇನೋ.

ಈ ಪುಸ್ತಕದಲ್ಲಿ ನನಗೆ ಇಷ್ಟವಾದ ಕೆಲವು ಸಂಗತಿಗಳನ್ನು ಉಲ್ಲೇಖಿಸಲೇಬೇಕು. ಅಗ್ರಹಾರ ಕೃಷ್ಣಮೂರ್ತಿ ತಮ್ಮೊಡನೆ ಹಂಚಿಕೊಂಡಿದ್ದ ಡಿ.ಆರ್. ಅವರ ವೈಯಕ್ತಿಕ ಟಿಪ್ಪಣಿಗಳನ್ನು ಹುಳಿಯಾರ್ ಅವರು ಸೂಕ್ಷ್ಮತೆಯಿಂದ ಬಳಸಿಕೊಂಡಿರುವುದು ಅನನ್ಯವಾಗಿದೆ. ಕೊನೆಯ ಎರಡು ಅಧ್ಯಾಯಗಳು ಸಂಶೋಧನಾ ವಿದ್ಯಾರ್ಥಿಗಳಿಗೆ ಒಳನೋಟಗಳನ್ನು ಒದಗಿಸುವಲ್ಲಿ ಸಹಾಯಕವಾಗಲಿವೆ. 'ಡಿ.ಆರ್. ಅವರ ವಿಮರ್ಶಾ ಮತ್ತು ಸಂಶೋಧನಾ ವಿಧಾನ' ಎಂಬ ಅಧ್ಯಾಯವು ಈ ವಿಮರ್ಶಕನ ಅಂತರ್ ಶಿಸ್ತೀಯ ವಿಧಾನವನ್ನು ಪರಿಚಯಿಸುತ್ತ, ಅವರ ಬೌದ್ಧಿಕ ನಂಬಿಕೆಯನ್ನು ವಿವರಿಸುತ್ತದೆ.


ಹುಳಿಯಾರ್ ಅವರು ಈ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಡಿ.ಆರ್. ವಿಮರ್ಶಾ ಮಾದರಿಗಳಿಂದ ನಮ್ಮ ಲೇಖಕರು ಮತ್ತು ಓದುಗರು ಕಲಿತಿರುವ ಹಾಗೂ ಕಲಿಯುವ ಸಾಧ್ಯತೆಗಳನ್ನು ಊಹಿಸಿದ್ದಾರೆ. ಉದಾಹರಣೆಗೆ, ಬರಗೂರು ರಾಮಚಂದ್ರಪ್ಪ ಹಾಗೂ ತೇಜಸ್ವಿ ಅವರ ಕಾದಂಬರಿಗಳನ್ನು ಕುರಿತು ಡಿ.ಆರ್. ಮಾಡಿರುವ ವಿಶ್ಲೇಷಣೆಗಳು ಸ್ವತಃ ಆ ಲೇಖಕರುಗಳನ್ನು ಹಾಗೂ ಪರೋಕ್ಷವಾಗಿ ಇತರ ಕಾದಂಬರಿಕಾರರನ್ನು ತಟ್ಟಿ, ಅವರ ಮುಂದಿನ ಬರವಣಿಗೆಯ ದಿಕ್ಕುಗಳನ್ನು ಬದಲಾಯಿಸಿರಬಹುದಾದ ಸಾಧ್ಯತೆಯನ್ನು ವಿಶ್ಲೇಷಿಸಿದ್ದು ವಿಶಿಷ್ಟವಾಗಿದೆ. ಡಿ.ಆರ್. ಅವರ ವಿಶ್ಲೇಷಣೆಯಿಂದ ದೇವನೂರ ಮಹಾದೇವ ಅವರೂ ತಮ್ಮ ಬರವಣಿಗೆ ಕುರಿತು ಮರು ಆಲೋಚಿಸಿದ್ದರ ಬಗ್ಗೆ ಸಂದರ್ಶನವೊಂದರಲ್ಲಿ ಉಲ್ಲೇಖಿಸಿದ್ದನ್ನು ಇಲ್ಲಿ ನೆನೆಯಬಹುದು.

ಕೊನೆಯದಾಗಿ, ನಮ್ಮ ಆಧುನಿಕ ವಿಮರ್ಶೆ ಸುಮಾರು ಒಂದು ಶತಮಾನದಷ್ಟು ಹಳೆಯದಾದರೂ ಈ ವಿಮರ್ಶಾ ವಿವೇಕ ಕನ್ನಡದ ಸಾಮಾಜಿಕ ಹಾಗೂ ಸಾರ್ವಜನಿಕ ಪ್ರಜ್ಞೆಯ ಭಾಗವಾಗಿಲ್ಲ. ಇಂತಹ ಸಂದರ್ಭದಲ್ಲಿ ಈ ತರಹದ ಪರಿಚಯಾತ್ಮಕ ಪುಸ್ತಕಗಳು ವಿಮರ್ಶಾ ಲೋಕಕ್ಕೆ ನಮಗೆ ಪ್ರವೇಶವನ್ನು ಒದಗಿಸುತ್ತವೆ ಎಂಬುದೇನೋ ನಿಜ. ಆದರೆ, ನಮ್ಮ ವಿಮರ್ಶಕರ ಕೃತಿಗಳನ್ನು ನಿಕಟವಾಗಿ ಓದಿ, ಕಲಿಯದಿದ್ದರೆ ನಮಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಪೂರ್ವಸೂರಿಗಳು ಮಾತನಾಡುತ್ತಾರೆ, ನಾವು ಕೇಳಿಸಿಕೊಳ್ಳಬೇಕಷ್ಟೇ!

ವಿಸ್ಮೃತಿಗಳ ಧ್ಯಾನ

ಆರ್.ತಾರಿಣಿ ಶುಭದಾಯಿನಿ

ಒಳನೋಟ



ಪು: 72 ₹80

ಅವನ ಮುಖ ಮರೆತು ಹೋಗಿದೆ
ಲೇ: ಪ್ರತಿಭಾ ನಂದಕುಮಾರ್
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಸಂ: 9449174662

ಪ್ರತಿಭಾ ನಂದಕುಮಾರ್ ಅವರ 'ಅವನ ಮುಖ ಮರೆತು ಹೋಗಿದೆ' ಹಲವು ಬಗೆಯ ವಿಸ್ಮೃತಿಗಳನ್ನು ಕುರಿತು ಧೇನಿಸುವ ಕವನ ಸಂಕಲನವಾಗಿದೆ. ಇಲ್ಲಿ ಸ್ಥೂಲವಾಗಿ ಎರಡು ಬಗೆಯ ವಿಸ್ಮೃತಿಗಳನ್ನು ಗುರುತಿಸಬಹುದು. ಮನುಷ್ಯನ ಮನುಷ್ಯತ್ವದ ಚಹರೆ ಕಳೆದುಹೋಗಿ ಅವನೊಳಗಿರುವ ವಿಕೃತಿಗಳು ಉಕ್ಕುತ್ತಿರುವಾಗ, ಅವನೊಳಗೆ ಹಿಂದೆ ಇದ್ದಿರಬಹುದಾದ ಮನುಷ್ಯತ್ವದ ಸ್ಮೃತಿಯ ಬಗೆಗೆ ಇಲ್ಲಿನ ಕವಿತೆಗಳು ಗಮನ ಕೇಂದ್ರೀಕರಿಸುತ್ತವೆ. ಇದು ಮನುಷ್ಯತ್ವದ ವಿಸ್ಮೃತಿಯಾದರೆ, ಮನುಷ್ಯರ ನಡುವೆ ಮಾತಿನಿಂದ ಬಂಧವೇರ್ಪಡಿಸುವ ಮಾತಿನ ಅರ್ಥಪದರಗಳು ಸವೆಯುತ್ತಾ ಬಂದು ಮಾತಿನ ದುರ್ವಾಸನೆ ಮಾತ್ರ ಹೊಮ್ಮುವಂತೆ ಇರುವಾಗ ವಾಗಾರ್ಥಗಳ ಲೋಕ ವಿಸ್ಮೃತಿಯಲ್ಲಿ ಅಡಗಿರುವಂತೆ ತೋರುತ್ತಿರುವುದನ್ನು ಕಾಣಿಸುವುದರತ್ತ ಗಮನಹರಿಸುವುದನ್ನೂ ಈ ಕವಿತೆಗಳಲ್ಲಿ ಕಾಣಬಹುದು.

ಹಾಗೆ ನೋಡಿದರೆ 'ಮುಖ ಮರೆತು ಹೋಗುವುದು' ಎಂದರೆ ಗುರುತು ಮರೆತು ಹೋಗುವುದು. ಗುರುತು ಎನ್ನುವುದು ನೆನಪಿನ ಸತ್ವ ಮಾತ್ರವಲ್ಲ, ಅಸ್ತಿತ್ವದ ಕುರುಹೂ ಹೌದು. ಸದ್ಯ ಈ ಸಂಕಲನ ಗಮನ ಹರಿಸುತ್ತಿರುವುದು ಇಂತಹ ಮರೆವಿನ ಮರೆಗುಳಿ ಸಮುದಾಯಗಳು, ವ್ಯಕ್ತಿಗಳ ಬಗ್ಗೆ. ದುರಿತಕಾಲದ ಕ್ರೌರ್ಯವು ನಾವು ಕಳೆದುಕೊಂಡ ಮಾತಿನ ಸಂವಹನ, ಸಾಮರಸ್ಯವನ್ನೂ ಮನುಷ್ಯತ್ವದ ಸೆಲೆಗಳನ್ನೂ ವಿಸ್ಮೃತಿಗೆ ತಳ್ಳಿದಂತಿದೆ. ಇದನ್ನು ಕುರಿತು ಧ್ಯಾನಿಸುವ ಕವಿತೆಗಳು ಪ್ರಸ್ತುತ ಸಂಕಲನದಲ್ಲಿವೆ.

ಪ್ರತಿಭಾ ಅವರ ಮೊದಲ ಕವಿತೆಗಳು 'ನಾವು ಹುಡುಗಿಯರೇ ಹೀಗೆ' ಎನ್ನುವ ಸಾರ್ವತ್ರಿಕ ಸ್ತ್ರೀವಾದದ ನೆಲೆಯಲ್ಲಿ ಹುಟ್ಟಿದಂಥವು. ಆನಂತರ 'ಆಹಾ ಪುರುಷಾಕಾರಂ', 'ಅವರು ಪುರಾವೆಗಳನ್ನು ಕೇಳುತ್ತಾರೆ', 'ಕವಡೆಯಾಟ' ಮುಂತಾದ ಸಂಕಲನಗಳಲ್ಲಿ ಪ್ರತಿಭಾ ಅವರ ಕಾವ್ಯವು ಹೆಣ್ಣು ಎದುರಿಸಬಹುದಾದ ಕ್ರೌರ್ಯಗಳನ್ನು ಅಭಿಮುಖಗೊಳಿಸಿಕೊಂಡು, ಒಂದು ಸೂಕ್ಷ್ಮ ಸಂವೇದನೆಯ ಮನಸ್ಸನ್ನು ಹೆಣ್ಣಾಗಿ ನೋಡುವ ನೆಲೆಗೆ ತಲುಪಿತು. ಸ್ತ್ರೀತ್ವದ ಪುರಾಣ ಇನ್ನೂ ಇಷ್ಟಕ್ಕೇ ಮುಗಿಯಲಿಲ್ಲ ಎಂದು 'ಮುದುಕಿಯರಿಗಿದು ಕಾಲವಲ್ಲ' ಎನ್ನುವ ಹಂತಕ್ಕೆ ಹೊರಳಿಕೊಂಡು ಹೆಣ್ಣಿನ ದೇಹದ ಪಯಣವೆಂಬುದನ್ನೇ ನೆಪವಾಗಿಟ್ಟುಕೊಂಡು ಅವರ ಕಾವ್ಯ ಲೋಕಾವಲೋಕನ ಮಾಡಿತು.

ಇದೀಗ ಸುದ್ದಿಯಲ್ಲೇ ಎಲ್ಲವೂ ಎಂದು ದಿನದ ಇಪ್ಪತ್ನಾಲ್ಕು ಗಂಟೆಗಳ ಸುದ್ದಿ ಸಂಭ್ರಮದಲ್ಲಿ ತೊಡಗಿದವರಿಗೆ ಸುದ್ದಿಯೊಳಗೆ ಇರುವ ತಲ್ಲಣ, ಆತಂಕಗಳನ್ನು ಛೇದಿಸಲು ಆಗದು ಎನ್ನುವ ಪ್ರಮೇಯದೊಂದಿಗೆ ಅವರ ಹೊಸ ಕವಿತೆಗಳು ಬಂದಿವೆ. ಸಮಕಾಲೀನ ಜಗತ್ತಿನ ದುಃಖ ಮತ್ತು ಭಾಷೆ ಎರಡೂ ಕ್ಲೀಷೆಯಾಗಿರುವುದನ್ನು ಅವು ಗುರುತಿಸಿಕೊಳ್ಳುತ್ತವೆ:

ಕ್ಲೀಷೆಯಾಗಿದೆ ದುಃಖ/ಪ್ರಾಸಕ್ಕೂ
ಎಟುಕುವುದಿಲ್ಲ.
ಇಕಾರಕ್ಕೂ ಆಕಾರಕ್ಕೂ ಹೊಂದುವುದಿಲ್ಲ./
ಬಿಟ್ಟು ಬಿಡುವುದು ಒಳ್ಳೆಯದು.
ಬದಲಿಗೆ ಸುಖ ಪದ ಬಳಕೆಗೆ ಎಷ್ಟೊಂದು
ಅನುಕೂಲ (ಇದು ಗೌರಿ ಸುಖ)

ಪ್ರತಿಭಾ ಅವರ ಕಾವ್ಯದ ಗಮನ ಸದ್ಯ ಚಂದಗಾಣಿಸುವ ಕಾವ್ಯಸೃಷ್ಟಿಯ ಕಡೆಗಂತೂ ಇಲ್ಲ. ಅವರ ಹಿಂದಿನ ಎರಡು ಸಂಕಲನಗಳಲ್ಲಿ ದುರಿತ ಕಾಲದ ದಿಕ್ಕೆಟ್ಟ ಸ್ಥಿತಿಗಳು ಸಂವೇದನೆಗಳನ್ನು ನಾಶಪಡಿಸುತ್ತಿರುವುದನ್ನು ಶೋಧಿಸಿಕೊಂಡಂತೆಯೇ ಪ್ರಸ್ತುತ ಸಂಕಲನದ ಕವಿತೆಗಳು ಸಹ ಸಮಕಾಲೀನ ಬದುಕಿನ ತಲ್ಲಣಗಳೇನು ಎಂಬುದರ ಬಗ್ಗೆ ಇನ್ನಷ್ಟು ಸೂಕ್ಷ್ಮವೂ ಖಚಿತವೂ ಆಗಿ ಗ್ರಹಿಸುತ್ತಿವೆ.

ಮಾತು, ಅಭಿವ್ಯಕ್ತಿಗಳನ್ನು ಕಳೆದುಕೊಂಡ ಜಡ ಸಮುದಾಯಗಳು ಕೇಳುವುದನ್ನೂ ಕಳೆದುಕೊಂಡಿವೆ. ಮಾತಿನ ಶಕ್ತಿ ಹೀಗೆ ಹಾಳಾಗಿರುವುದಕ್ಕೆ ವಾಗರ್ಥಗಳು ಭಿನ್ನವಾಗಿರುವುದೇ ಕಾರಣವಾಗಿರಬಹುದು. ಈ ಮಾತಿಗೆ ಪೂರಕವಾಗಿ ಕೆಳಗಿನ ಸಾಲುಗಳನ್ನು ಗಮನಿಸಬಹುದು:

ಹಳೆಯ ಪಳೆಯುಳಿಕೆಯ ಮಾತುಗಳು
ಸವೆಯುವುದೇ ಇಲ್ಲಾ
ಇಲ್ಲಿ ಆಡದ ಮಾತುಗಳು ಮಾಡದ ಕೃತ್ಯಗಳ/
ಭರ್ಜರಿ ಬೇಟೆಗಳ ಕುಹಕ (ಓಡಿ ಹೋಗೋಣ)


ಸಮಕಾಲೀನ ಜಗತ್ತಿನ ಕ್ರೌರ್ಯವು ದೈಹಿಕವೋ ಮಾನಸಿಕವೋ ಎಂದು ಕೇಳಿಕೊಂಡರೆ ಎರಡೂ ಎನ್ನುವುದನ್ನು ಇಲ್ಲಿನ ಕವಿತೆಗಳು ಕಂಡುಕೊಂಡಿವೆ. ಸ್ತ್ರೀವಾದವು ತಾತ್ವಿಕವಾಗಿ ಎದುರಿಸುತ್ತಾ ಬಂದ ಪಿತೃತ್ವದ ಕ್ರೌರ್ಯವು ಇಂದು ಲಿಂಗಭೇದದ ಪರಿಧಿಯನ್ನು ದಾಟಿ ಸಾರ್ವತ್ರಿಕವಾಗಿ ಹಬ್ಬುತ್ತಿರುವ ಕ್ರೌರ್ಯವಾಗುವುದನ್ನು ಗುರುತಿಸಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಸಹ ಪ್ರತಿಭಾ ಅವರ ಈ ಸದ್ಯದ ಕವಿತೆಗಳು ಕ್ರೌರ್ಯವನ್ನು ಕುರಿತು ಧ್ಯಾನಿಸುತ್ತವೆ.

ಈ ಕ್ರೌರ್ಯದ ಅನಾವರಣವನ್ನು ಮಾಡುವಾಗ ಎದುರಾಗುವ ತೊಡಕು ಎಂದರೆ ಪೊಲಿಟಿಕಲ್ ಕರೆಕ್ಟ್‌ನೆಸ್ ನಿಲುವಿನದು. ಯಾರನ್ನೋ ಮೆಚ್ಚಿಸುವ, ಬಹುಜನದ ಅಭಿಪ್ರಾಯಗಳಿಗೆ ತಕ್ಕನಾಗಿ ನಿಲ್ಲಬೇಕಾದ, ಬರೆಯಬೇಕಾದ ಸಂದರ್ಭ ಈ ಕಾಲದ ಒತ್ತಡವೇ ಸರಿ. ಪ್ರತಿಭಾ ಕಾವ್ಯ ಹಾಗೆನೋಡಿದರೆ ಎಂದಿಗೂ 'ಕರೆಕ್ಟ್‌ನೆಸ್' ಪ್ರೇಮಿನೊಳಗೆ ಕೂರುವಂತದ್ದಲ್ಲ. ನೇರಾನೇರ ಬಯಕೆಗಳನ್ನು ಹೇಳುವ, ತನಗನಿಸಿದ್ದನ್ನು ವ್ಯಕ್ತಪಡಿಸಿಯೇ ತೀರುವ ಒಳಬಂಡಾಯದ ಸೆಲೆಯೇ ಅವರ ಕಾವ್ಯವನ್ನು ಜೀವಂತವಾಗಿ ಇರಿಸುವುದು.

ಪ್ರತಿಭಾ ಅವರು ರಾಜಕೀಯ ಪದ್ಯಗಳನ್ನು ಬರೆದರೂ ಅದರಲ್ಲಿ ಲೋಕಕ್ಕೊಪ್ಪುವ ರುಚಿ ಇರದು. ಅದರಲ್ಲೊಂದು ಬಿಡುಬೀಸಾದ ಆತ್ಮಸಮ್ಮಾನದ ಸೆಳಕು ಇರುತ್ತದೆ. 'ಶನಿಗೊಂದು ಪ್ರಾರ್ಥನೆ' ಕವಿತೆಯಲ್ಲಿ ಹೆಣ್ಣುಮಕ್ಕಳನ್ನು ತನ್ನ ಹತ್ತಿರ ಬಿಟ್ಟುಕೊಳ್ಳದ ಶನಿಯನ್ನೆ ಛೇಡಿಸುತ್ತದೆ. ರಾಮಮಂದಿರ ಕಟ್ಟುವವರಿಗೆ '..ನಿಮ್ಮ ಮನೆಗಳಲ್ಲಿ ರಾಮಭಕ್ತಿಗಿಂತ ತುಂಬಿ ರಹೀಮ ಹಗೆತನ' ಎನ್ನುವ ಮಾತನ್ನು ನೇರವಾಗಿ ಹೇಳಬಲ್ಲರು. ಹೀಗೆ ತಮ್ಮ ದನಿ ರಾಜಕೀಯವಾದರೆ ಅದಕ್ಕೆ ನೀವೇ ಹೊಣೆ ಎನ್ನುವ ಉತ್ತರದಾಯಿತ್ವವನ್ನು ಇಲ್ಲಿನ ಕವಿತೆಗಳು ಹೊರಿಸುತ್ತವೆ. ಆದುದರಿಂದ ಇಲ್ಲಿ ರಾಜಕೀಯದ 'ಕರೆಕ್ಟ್‌ನೆಸ್' ಎನ್ನುವ ತಿಳಿವಳಿಕೆಯ ಮರು ತಿಳಿವಳಿಕೆ ಕಾಣುತ್ತದೆ! ಕವಿತೆಯ ಈಡಿಯಮ್ಮಿನಲ್ಲೇ ಈ ರಾಜಕೀಯವನ್ನು ಎತ್ತುವುದು ಅದಕ್ಕೆ ಉತ್ತರ ಕೊಡುವುದು ಇಲ್ಲಿ ಅಂತಿಮವಾಗಿ ಪ್ರತಿಭಾ ಅವರ ಆಯ್ಕೆಯಾಗಿದೆ.

ಮೊದಲ ಓದು

ಸಂಶೋಧನಾ ಕ್ಷೇತ್ರಕ್ಕೆ ಕನ್ನಡ ಪದಕೋಶ



ಪು: 344 ₹350


ಲಿಂಗ ವ್ಯವಸ್ಥೆಯ ಅಧ್ಯಯನಗಳಲ್ಲಿ ಸಮಾನಾರ್ಥಕ ಪದಗಳು
ಪ್ರಧಾನ ಸಂ: ಆರ್. ಇಂದಿರಾ
ಸಹ ಸಂ: ಪ್ರಮುಲ ರಾಮನ್, ಶಾಂತಿ ಜಿ.
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಸಂ: 9980560013

ದಶಕಗಳ ಹಿಂದೆ ಕನ್ನಡದ ಸಂಶೋಧನಾ ಮಹಾಪ್ರಬಂಧಗಳಲ್ಲಿ ಇಂಗ್ಲಿಷ್ ಶಬ್ದಗಳ ಬಳಕೆ ಅಧಿಕವಾಗಿತ್ತು. ಆ ಶಬ್ದಗಳಿಗೆ ಸಮಾನಾರ್ಥಕವಾಗಿ ಕನ್ನಡ ಪದಗಳ ಕೊರತೆಯೇ ಈ ರೀತಿ ಆಂಗ್ಲ ಪದಗಳ ಬಳಕೆಗೆ ಪ್ರಮುಖ ಕಾರಣವಾಗಿತ್ತು.

ವಿಷಯದ ಗ್ರಹಿಕೆಯ ಉದ್ದೇಶದಿಂದ ಉನ್ನತ ಶಿಕ್ಷಣದ ಎಲ್ಲ ಮಟ್ಟಗಳಲ್ಲೂ ಬೋಧನೆ ಮತ್ತು ಕಲಿಕೆಯಲ್ಲಿ ಮಾಧ್ಯಮವಾಗಿ ಕನ್ನಡ ಬಳಕೆಯಾಗುತ್ತಿದೆ. ಆಂಗ್ಲ ಪದಗಳೇ ತುಂಬಿರುತ್ತಿದ್ದ ಸಂಶೋಧನಾ ಪ್ರಬಂಧಗಳಿಂದು ಕನ್ನಡದಲ್ಲಿಯೇ ಮೂಡಿಬರುತ್ತಿವೆ. ಹೇಗೆ ಅಧ್ಯಯನಶಿಸ್ತುಗಳ ಕ್ಷೇತ್ರ ವಿಶಾಲವಾಗುತ್ತಿದೆಯೋ ಹಾಗೆಯೇ ಕನ್ನಡದ ಭಾಷಾ ಭಂಡಾರವೂ ಹಿಗ್ಗುತ್ತಿದೆ. ವಿಷಯದ ಬಗ್ಗೆ ಜ್ಞಾನ ಹೆಚ್ಚುತ್ತಿದ್ದಂತೆ ಹೊಸ ಪದಗಳೂ ಸೇರ್ಪಡೆಯಾಗುತ್ತಿವೆ. ಜೊತೆಗೆ ಈಗಿರುವ ಪದಗಳಿಗೂ ಹೊಸ ವ್ಯಾಖ್ಯಾನ ದೊರೆಯುತ್ತಿದೆ. ಹೊಸ ಪದಗಳಿಗೆ ಆಂಗ್ಲ-ಕನ್ನಡ ಭಾಷೆಯ ನಿಘಂಟುಗಳಿಂದ ಭಾಷಾಂತರ ಮಾಡುವುದೂ ಅಷ್ಟು ಸೂಕ್ತವಲ್ಲ. ಸಂದರ್ಭೋಚಿತವಾಗಿ ಆ ವಾಕ್ಯಕ್ಕೆ ಸರಿಹೊಂದುವಂಥ ಪದಗಳನ್ನು ಬಳಸುವುದು ಅಷ್ಟೇ ಮುಖ್ಯವಾಗಿದೆ. ಈ ನಿಟ್ಟನಲ್ಲಿ ಈ ಕೃತಿ ಮೂಡಿಬಂದಿದೆ.

ಪ್ರಸ್ತುತ ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ವೇಗವಾಗಿ ಬೆಳೆಯುತ್ತಿರುವ ವಿಷಯವೆಂದರೆ ಲಿಂಗ ವ್ಯವಸ್ಥೆಯ ಅಧ್ಯಯನ. ಕಾನೂನು, ಆಡಳಿತ, ಆರ್ಥಿಕ ವ್ಯವಸ್ಥೆ ಹೀಗೆ ಎಲ್ಲ ವ್ಯವಸ್ಥೆಗಳನ್ನೂ ಲಿಂಗದ ಆಯಾಮದಿಂದ ನೋಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಮಹಿಳಾ ಅಧ್ಯಯನ ಹಾಗೂ ಲಿಂಗ ವ್ಯವಸ್ಥೆಯ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯಲ್ಲಿ ಲಭ್ಯವಿರುವ ಪದಭಂಡಾರದ ಅಗತ್ಯ ಹಿಂದೆಂದಿಗಿಂತಲೂ ಅಧಿಕವಾಗಿದೆ. ಈ ಉದ್ದೇಶ ಈಡೇರಿಸುವುದೇ ಈ ಪದಗುಚ್ಛದ ಆಶಯ. ಕೃತಿಯಲ್ಲಿ ಲಿಂಗವ್ಯವಸ್ಥೆಯನ್ನೇ ಕೇಂದ್ರವಾಗಿಟ್ಟುಕೊಂಡು, ಅದರ ಅಧ್ಯಯನ ಮತ್ತು ಸಂಶೋಧನೆಗಳಲ್ಲಿ ವಿಶ್ವದಾದ್ಯಂತ ಚಾಲ್ತಿಯಲ್ಲಿರುವ ಆಂಗ್ಲ ಭಾಷೆಯ ಪದಗಳಿಗೆ ಸಮಾನಾರ್ಥಕ ಪದಗಳನ್ನು ನೀಡಲಾಗಿದೆ. ಜೊತೆಗೆ ಲಿಂಗನ್ಯಾಯ ಸ್ಥಾಪನೆಗಾಗಿ ಅಸ್ತಿತ್ವಕ್ಕೆ ಬಂದ ಕಾಯಿದೆಗಳನ್ನೂ ಇಲ್ಲಿ ಕನ್ನಡದಲ್ಲಿ ಕೊಡಲಾಗಿದೆ. 'ಲಿಂಗ ವ್ಯವಸ್ಥೆಯ ಅಧ್ಯಯನಕ್ಕೆ ಪೂರಕವಾದ ಎಲ್ಲ ಪರಿಕಲ್ಪನೆಗಳೂ ಇಲ್ಲಿ ಸೇರ್ಪಡೆಯಾಗಿವೆ ಎಂದು ನಾವು ಹೇಳುವುದಿಲ್ಲ. ಇದು ನಮ್ಮ ಮೊದಲ ಪ್ರಯತ್ನ' ಎನ್ನುವ ಮೂಲಕ ಸಂಪಾದಕ ಬಳಗವು ಕೃತಿಯ ವಿಸ್ತರಣೆಯ ಸುಳಿವನ್ನೂ ನೀಡಿದೆ.

ಅಲ್ಲಮನ ವಿಸ್ತಾರ ನೋಟದ ಕಥನ ರೂಪ



ಪು: 548 ₹450

ಬಯಲ ಬೆರಗು
ಲೇ: ಸುಮಂಗಲಾ ಎಸ್. ಮುಮ್ಮಿಗಟ್ಟಿ
ಪ್ರ: ಮ.ನಿ.ಪ್ರ.ಚೆನ್ನವೀರ ಮಹಾಸ್ವಾಮಿಗಳ ಗ್ರಂಥ ಪ್ರಕಟಣಾ ಸೇವಾ ಸಮಿತಿ

ಬಯಲು ಎಂದರೆ ಎಲ್ಲವೂ ಇರುವುದು ಹಾಗೂ ಏನೂ ಇಲ್ಲದ್ದು. ಅಲ್ಲಮ ಪ್ರಭುವಿನ ವ್ಯಾಖ್ಯಾನವೂ ಇದೇ ಆಗಿತ್ತು. ಅಲ್ಲಮನ ವಚನಗಳಲ್ಲಿ ಬಯಲು ಎಂಬ ಶಬ್ದ ನೂರಾರು ಬಾರಿ ಪುನರಾವರ್ತನೆಯಾಗಿದೆ. ಬಯಲಿನ ನಿರಾಕಾರ, ಅಗೋಚರದ ಬೆರಗನ್ನು ಕಂಡವನು ಅಲ್ಲಮ. ಆ ಎಲ್ಲ ದರ್ಶನಗಳಿಗೊಂದು ಕಥನ, ನಿರೂಪಣೆಯ ಚೌಕಟ್ಟು ಕಟ್ಟಿಕೊಟ್ಟಿದ್ದಾರೆ ಲೇಖಕಿ ಸುಮಂಗಲಾ ಎಸ್. ಮುಮ್ಮಿಗಟ್ಟಿ.

ಶೀರ್ಷಿಕೆ ಮತ್ತು ಆಶಯವೇ ಹೇಳುವಂತೆ ಈ ಕಾದಂಬರಿಯಲ್ಲಿ ಕಥಾನಾಯಕ ಅಲ್ಲಮಪ್ರಭುವಿನ ಬದುಕನ್ನು ಅಧ್ಯಾತ್ಮ ಮತ್ತು ಅನುಭಾವದ ಆಯಾಮದಲ್ಲಿ ಕಟ್ಟಿಕೊಟ್ಟಿಕೊಡಲಾಗಿದೆ. ಶರಣರ ವಚನಗಳು ಆಯಾ ಸನ್ನಿವೇಶಕ್ಕೆ ತಕ್ಕಂತೆ ಉಲ್ಲೇಖಗೊಂಡಿವೆ. ಕೃತಿಯ ಹಿಂದೆ ಹಲವು ಗ್ರಂಥ-ಸಾಹಿತ್ಯಗಳ ಅಧ್ಯಯನವಿದೆ. ವೈಚಾರಿಕ ಸಂವಾದಗಳು ಅಲ್ಲಲ್ಲಿ ಇವೆ. ಅಲ್ಲಮನ ಪಯಣದ ಹೆಜ್ಜೆಯ ಜಾಡನ್ನೂ ಜಾಲಾಡಲಾಗಿದೆ. ಶರಣ ಗೊಗ್ಗಯ್ಯನ ಕೃಷಿ ಭೂಮಿಯಲ್ಲೇ ನಡೆದ ಸಂವಾದ, ಗವಿಯೊಳಗೆ ಕುಳಿತು ಧ್ಯಾನಸ್ಥರಾಗಿ ಗುಹೇಶ್ವರನೊಂದಿಗೆ ನಡೆಸಿದ ಅನುಸಂಧಾನ, ಆ ಹೊತ್ತಿನಲ್ಲಿ ಮರಿಗಳೊಂದಿಗೆ ಬಂದ ಕರಡಿಯು ನೋಡಿ ಹಾಗೇ ಸುಮ್ಮನೆ ಹೋದ ಘಟನೆ ಕುರಿತಾದ ಕಥೆ, ಜನರ ಡಾಂಭಿಕ ಆಚರಣೆಗಳಿಗೆ ಮರುಕ, ವಚನಗಳಲ್ಲಿನ ದರ್ಶನದ ಸೊಬಗನ್ನು ಕಾದಂಬರಿ ಕಟ್ಟಿಕೊಟ್ಟಿದೆ. ದೇಹದೊಳಗೆ ದೇವಾಲಯವಿದ್ದು/ ಮತ್ತೆ ಬೇರೆ ದೇವಾಲಯವೇಕೆ?/ ಎರಡಕ್ಕೆ ಹೇಳಲಿಲ್ಲಯ್ಯಾ/ ಗುಹೇಶ್ವರಾ ನೀನು ಕಲ್ಲಾದಡೆ ನಾನೇನಪ್ಪೆನು?... ಇಂಥ ಅನೇಕ ವಚನಗಳನ್ನೂ, ಅವುಗಳ ಅಂತರಾರ್ಥವನ್ನೂ ಜನಸಾಮಾನ್ಯರಿಗೆ ಅರ್ಥ ಮಾಡಿಸುತ್ತಾ ಸಾಗುತ್ತಾರೆ ಲೇಖಕಿ. ಅದಕ್ಕೆ ಪೂರಕವಾಗಿ ಬಸವಣ್ಣನವರ ವಚನಗಳೂ ಅಲ್ಲಲ್ಲಿ ಕಾಣಿಸುತ್ತವೆ. ಊರ ಮುಂದಿನ ಅರಳಿಕಟ್ಟೆ, ಮನೆಗಳ ಜಗುಲಿ, ಹೊಲ, ತೋಟ, ಗುಡ್ಡದ ಪ್ರಶಾಂತ ಪ್ರದೇಶ ಇವು ಅಲ್ಲಮರ ಸಂದೇಶಗಳು ಪಸರಿಸಿದ, ಬಾಯಿಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಸಾಗಿದ ಜಾಗಗಳು. ಅಲ್ಲಮನ ಅರಿವು ಮೂಡಿಸಿಕೊಳ್ಳಲು ಆಸಕ್ತರಿಗೆ ರುಚಿಸಬಲ್ಲ ಕೃತಿ.



ಅದೇನೋ ನಿರೀಕ್ಷೆಯಲ್ಲಿ ಹಳದಿ ಕತ್ತಿನ ಪಿಕಳಾರ

ಫೋಟೊಗ್ರಫಿ



ಬಹಿರ್ಜಿ ಘೋರ್ಪಡೆ



ಸಂಡೂರಿನ ಶಿವ ವಿಲಾಸ ಅರಮನೆಯ ಬೆಳಕಿನ ವೈಭವ

ಛಾಯಾಗ್ರಹಣದ ಯುವರಾಜ!

ನಾಡುಕಂಡ ಅಪರೂಪದ ಛಾಯಾಗ್ರಾಹಕರಾಗಿದ್ದ ಎಂ.ವೈ. ಘೋರ್ಪಡೆ ತಮ್ಮ ಚಿತ್ರಗಳಿಂದ ಅಂತರರಾಷ್ಟ್ರೀಯಮಟ್ಟದಲ್ಲಿ ಹೆಸರಾದವರು. ಅವರ ಮೊಮ್ಮಗ ಬಹಿರ್ಜಿ ಸಹ ಅವರ ಹಾದಿಯಲ್ಲೇ ಸಾಗಿದ್ದಾರೆ

ಕಾರ್ತಿಕ್ ವಿ. ಕಾಳೆ

ದಿವಂಗತ ಎಂ.ವೈ. ಘೋರ್ಪಡೆ ಅವರ ಹೆಸರು ಹೇಳಿದರೆ ಸಾಕು, ತಟ್ಟನೆ ಕಣ್ಮುಂದೆ ಮೆರವಣಿಗೆ ಹೊರಡುವುದೆಂದರೆ ಅವರು ತೆಗೆದ ವನ್ಯಜೀವಿ ಚಿತ್ರಗಳು. ಅದು ಹುಲಿಯೊಂದು ತನ್ನ ಬೇಟೆಯನ್ನು ಹೊತ್ತು ತರುತ್ತಿರುವ ದೃಶ್ಯವೇ ಆಗಿರಬಹುದು, ಆನೆಗಳ ಪರಿವಾರ ಮರಿಯಾನೆಗಳಿಗೆ ಮಜ್ಜನ ಮಾಡಿಸುತ್ತಿರುವ ದೃಶ್ಯವೇ ಆಗಿರಬಹುದು, ಕರಡಿಯೊಂದು ತನ್ನ ಮರಿಯನ್ನು ಕೂಸುಮರಿ ಮಾಡಿಕೊಂಡು ಹೊತ್ತೊಯ್ಯುತ್ತಿರುವ ದೃಶ್ಯವೇ ಆಗಿರಬಹುದು, ಘೋರ್ಪಡೆ ಅವರ ಕ್ಯಾಮೆರಾ ಕೈಚಳಕಕ್ಕೆ ಮಾರುಹೋಗದವರೇ ಇರಲಿಲ್ಲ.



ಊಟ ದಕ್ಕಿಸಿಕೊಂಡ ಖುಷಿಯಲ್ಲಿ ಮಿಂಚುಳ್ಳಿ

ಎಂ.ವೈ.ಜಿ. ಅವರ ಮೊಮ್ಮಗ ಬಹಿರ್ಜಿ ಘೋರ್ಪಡೆ ಕೂಡ ಅವರ ತಾತನಂತೆಯೇ ಛಾಯಾಗ್ರಹಣಕ್ಕೆ ಹೆಸರಾದವರು. ಬಾಲ್ಯದಿಂದಲೇ ತಾತನ ಕ್ಯಾಮೆರಾಗಳನ್ನು, ಅವುಗಳು ಹೆಕ್ಕಿ ತಂದ ತಾಜಾ ತಾಜಾ ಚಿತ್ರಗಳನ್ನು ನೋಡುತ್ತಾ ಬೆಳೆದ ಬಹಿರ್ಜಿ ಅವರು, ದೊಡ್ಡವರಾದಂತೆ ತಾವೂ ಅದೇ ಕ್ಯಾಮೆರಾವನ್ನು ಹೆಗಲಿಗೇರಿಸಿಕೊಂಡವರು. ಸಂಡೂರು ರಾಜವಂಶಸ್ಥರ ಕುಡಿಯಾಗಿ, ಘೋರ್ಪಡೆ ಮನೆತನದ ಗಣಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿ ಬಿಡುವಿಲ್ಲದೆ ಕೆಲಸದಲ್ಲಿ ನಿರತರಾದರೂ ಛಾಯಾಗ್ರಹಣವೆಂದರೆ ಹುರುಪಿನಿಂದ ಹೊರಟುಬಿಡುವರು.

ನಾರಿಹಳ್ಳದ ಪ್ರಾಕೃತಿಕ ಸೊಬಗನ್ನು ನಾವು ಬಹಿರ್ಜಿ ಅವರ ಕ್ಯಾಮೆರಾ ಕಣ್ಣಿನಿಂದಲೇ ನೋಡಬೇಕು. ಮಿಂಚುಳ್ಳಿಯೊಂದು ಚುಂಚಿನಲ್ಲಿ 'ಊಟ' ಹಿಡಿದು ಇನ್ನೇನು ತಿನ್ನಲು ರೆಂಬೆಯ ಮೇಲೆ ಕುಳಿತ ನೋಟ ಎಷ್ಟೊಂದು ಆಕರ್ಷಕ. ಎಲೆಗಳಿಲ್ಲದ ರೆಂಬೆಯ ಮೇಲೆ ನೊಣಬಾಕನೊಂದು ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತ ನೋಟ ಕೂಡ ಅಷ್ಟೇ ಸಮ್ಮೋಹಕ.

ಬಹಿರ್ಜಿ ಅವರ ಕ್ಯಾಮೆರಾ ಪ್ರೇಮವನ್ನು ಅವರ ಕಿರಿಯ ಸಹೋದರ ಏಕಾಂಬರ ಹೀಗೆ ನೆನೆಯುತ್ತಾರೆ: 'ಒಮ್ಮೆ ದಾದಾ (ಅಣ್ಣ) ಚಿಕ್ಕವರಿದ್ದಾಗ ತಾತಾ ಅವರ ಕ್ಯಾಮೆರಾಗಳನ್ನು ತೆಗೆದುಕೊಂಡು ಅವುಗಳನ್ನು ಸರಿಯಾಗಿ ಬಳಸುವುದು ಗೊತ್ತಿಲ್ಲದೇ ಕೆಡಿಸಿಬಿಟ್ಟಿದ್ದರು. ಇದನ್ನು ಕಂಡ ತಾತಾ, ದಾದಾಗೆ ಬಾಸುಂಡೆ ಬರುವಂತೆ ಹೊಡೆದುಬಿಟ್ಟಿದ್ದರು. ಆದರೂ ದಾದಾ ಕ್ಯಾಮೆರಾ ಬಳಸುವುದನ್ನು ಬಿಡಲೇ ಇಲ್ಲ. ಅದರ ಮೇಲೆ ಮೋಹ ಬೆಳೆಸಿಕೊಳ್ಳುತ್ತಾ ಬಂದು, ಇದೀಗ ತಾತಾ ಅವರಂತೆಯೇ ಸಮ್ಮೋಹಕ ಚಿತ್ರಗಳನ್ನು ಸೆರೆಹಿಡಿದು ಕೊಡುತ್ತಿದ್ದಾರೆ'.

ಬಹಿರ್ಜಿ ಅವರು ಕಳೆದ ಅಕ್ಟೋಬರ್–ನವೆಂಬರ್ ಆಸುಪಾಸಿನಲ್ಲಿ ಸಂಡೂರಿನ ಅನೇಕ ರಮಣೀಯ ಚಿತ್ರಗಳನ್ನು ಸೆರೆ ಹಿಡಿದರು. ಸಂಡೂರಿನ ಆರಾಧ್ಯ ದೈವ ಕಾರ್ತಿಕೇಯ ಸ್ವಾಮಿಯ ದೇವಸ್ಥಾನ, ತಾರಾನಗರದ ಅಣೆಕಟ್ಟು, ಸಂಡೂರಿನ ಯಾಣವೆಂದೇ ಪ್ರಸಿದ್ಧವಾದ ಉಬ್ಬಲಗಂಡಿಯ ಬೆಟ್ಟ, ತಾರಾನಗರ ಹತ್ತಿರದ ಬೆಟ್ಟದಲ್ಲಿರುವ ಬತೇರಿ, ದೇವಗಿರಿಯ ಸಂಡೂರು ಮ್ಯಾಂಗನೀಸ್ ಆ್ಯಂಡ್ ಐರನ್ ಓರ್ಸ್‌ನ ಗಣಿ, ನರಸಿಂಹಸ್ವಾಮಿ ದೇವಸ್ಥಾನ, ದೇವಸ್ಥಾನದ ಪಕ್ಕದಲ್ಲಿರುವ ಸುಂದರ ಬೆಟ್ಟದ ಸಾಲು, ಹರಿಶಂಕರ, ಭೀಮತೀರ್ಥ, ಶಿವ ವಿಲಾಸ ಅರಮನೆ ಹಾಗೂ ಶಿವಪುರ ಕೆರೆಯ ಸೊಬಗನ್ನು ಸೆರೆ ಹಿಡಿದಿದ್ದಾರೆ. ಬಹಿರ್ಜಿ ಅವರ ಕ್ಯಾಮೆರಾ ಕೈಚಳಕ, ಸಮಯ ಪ್ರಜ್ಞೆ ತಾಳ್ಮೆಯನ್ನೂ ಈ ಚಿತ್ರಗಳು ಢಾಳಾಗಿ ತೋರಿಸುತ್ತವೆ.

ಸಂಡೂರು ಹಾಗೂ ಸುತ್ತಮುತ್ತಲಿನ ಊರಿನ ಬಹುತೇಕ ಜನರು ಕೆಲವು ಸ್ಥಳಗಳನ್ನು ನೋಡಿಯೇ ಇಲ್ಲ. ಆ ಸ್ಥಳಗಳ ಬಗ್ಗೆ ಮಾಹಿತಿಯೂ ಇಲ್ಲ. ಅಲ್ಲದೇ ಆ ಸ್ಥಳಗಳಿಗೆ ಹೋಗಲಿಕ್ಕೆ ಸಾಧ್ಯವೂ ಆಗುವುದಿಲ್ಲ. ಉದಾಹರಣೆಗೆ ತಾರಾನಗರ ಡ್ಯಾಂ ಹತ್ತಿರವಿರುವ ಬೆಟ್ಟದ ಮೇಲಿರುವ ಬತೇರಿಯನ್ನು ಬಹುತೇಕ ಜನ ನೋಡಿಲ್ಲ. ಅಂಥ ಸ್ಥಳಗಳ ಪರಿಚಯವನ್ನು ಮಾಡಿಸಿದ್ದಾರೆ ಈ 'ಮುಕ್ಕಣ್ಣ'.

ದರೋಜಿ ಕರಡಿ ಧಾಮದಲ್ಲಿ ಹೆಚ್ಚು–ಕಡಿಮೆ ಪ್ರತೀ ಕರಡಿಯೂ ಇವರ ಕ್ಯಾಮೆರಾ ಮುಂದೆ ಪೋಸು ನೀಡಿದೆ. ತಾತನಂತೆ ದಿನಗಟ್ಟಲೇ ಬಹಿರ್ಜಿ ಅವರೂ ಈ ಕರಡಿ ಧಾಮದಲ್ಲಿ ಅಪರೂಪದ ದೃಶ್ಯಗಳಿಗಾಗಿ ತಾಳ್ಮೆಯಿಂದ ಕಾದಿದ್ದಾರೆ. 'ತಾತನ ಕ್ಯಾಮೆರಾ ಕೌಶಲದ ಮುಂದೆ ನನ್ನದೇನು ಮಹಾ' ಎಂದೆನ್ನುವ ಬಹಿರ್ಜಿ, ಚಿತ್ರ ಸೆರೆ ಹಿಡಿಯುವ ಕಲೆಯಲ್ಲಿ ತಾತನ ಹಾದಿಯಲ್ಲೇ ನಡೆದಿರುವುದಂತೂ ನಿಜ.



ನಾರಿಹಳ್ಳದ ರಮಣೀಯ ನೋಟ

ಕನ್ನಡದ ಕಣ್ಣಿನ ಶಾಂತಕವಿ

ಎಚ್.ಆರ್.ಅಮರನಾಥ

'ಬೇರೆ ಭಾಷೆಗಳ ಪ್ರಭಾವದಿಂದ ಕನ್ನಡದಲ್ಲಿ ಯೋಚಿಸುವುದನ್ನು, ಭಾವಿಸುವುದನ್ನು, ಅನುಭವಿಸುವುದನ್ನು ಮರೆತುಬಿಟ್ಟರೆ ಆಗ ಕನ್ನಡತ್ವಕ್ಕೆ ತೊಂದರೆಗಳು ಎದುರಾಗುತ್ತವೆ', 'ಕವಿಯ ಪ್ರಜ್ಞೆಗೂ ಭಾಷೆಗೂ ಇರುವ ಸಂಬಂಧವನ್ನು ಅದರ ತೀವ್ರಸ್ವರೂಪದಲ್ಲಿ ಶಾಂತಕವಿಗಳು ಕಂಡುಕೊಂಡಿದ್ದರು' - ಹೀಗೆ ಭಾಷಾ ಅಸ್ಮಿತೆ ಕುರಿತ ಹಲವಾರು ಮಾರ್ಮಿಕ ಮಾತುಗಳುಳ್ಳ 'ಶಾಂತಕವಿಗಳ ವಿಶ್ರಾಂತಿ' ಎಂಬುದು ಕನ್ನಡ ರಂಗಭೂಮಿ ಪಿತಾಮಹ ಎಂದು ಹೆಸರಾದ ಸಕ್ಕರಿ ಬಾಳಾಚಾರ್ಯ 'ಶಾಂತಕವಿ'ಗಳ (1856- 1921) ಜೀವನ-ಸಾಧನೆಗಳ ಕುರಿತಾದ ನಾಟಕ. ಶಾಂತಕವಿಗಳ ಕನ್ನಡತ್ವದ ಶೋಧನೆಯನ್ನು ಅವರ ಜೀವನದಲ್ಲಿ ನಡೆದ ಕೆಲವು ನೈಜ ಘಟನೆಗಳ ಹಿನ್ನೆಲೆಯಲ್ಲಿ ಕಟ್ಟಿಕೊಡಲು ಈ ನಾಟಕವನ್ನು ರಚಿಸಿ ನಿರ್ದೇಶಿಸಿದ ಪ್ರಕಾಶ ಗರುಡ ಪ್ರಯತ್ನಿಸಿದ್ದಾರೆ.

ಸುಮಾರು ಎರಡು ತಾಸುಗಳಷ್ಟು ಸುದೀರ್ಘವಾದ ಈ ನಾಟಕವು ಬ್ರಿಟಿಷ್ ವಸಾಹತು ಕಾಲಘಟ್ಟದಲ್ಲಿ ಮರಾಠಿ ಭಾಷೆಯ ಪ್ರಭಾವದಿಂದಾಗಿ ಉತ್ತರ ಕರ್ನಾಟಕದಲ್ಲಿ ಕನ್ನಡತ್ವವು ಎದುರಿಸಿದ ಬಿಕ್ಕಟ್ಟನ್ನು ಶಾಂತಕವಿಗಳು ರಂಗಕರ್ಮಿಯಾಗಿ, ಕೀರ್ತನಕಾರರಾಗಿ ಏಕಾಂಗಿಯಾಗಿ ಎದುರಿಸಿದ ರೀತಿಯನ್ನು ನಮ್ಮೆದುರಿಗೆ ಬಿಚ್ಚಿಡುತ್ತದೆ. ಈ ಆದ್ಯ ನಾಟಕಕಾರ ಕನ್ನಡಕ್ಕಾಗಿ ಹೋರಾಡಿದ ರೋಚಕ ಕಥನವು ಏಕೆ ಇಷ್ಟು ಅಲ್ಪಾವಧಿಯಲ್ಲಿ ವಿಸ್ಮೃತಿಗೆ ಒಳಗಾಯಿತು ಎಂಬ ವಿಷಾದ ಭಾವವನ್ನು ಪ್ರೇಕ್ಷಕನ ಮನದಲ್ಲಿ ಮೂಡಿಸುತ್ತದೆ.



ರಂಗಭೂಮಿ

ಕೀರ್ತನೆ, ದುಂದುಮೆ, ನಾಟಕ ಮುಂತಾಗಿ 70ಕ್ಕೂ ಹೆಚ್ಚು ಕೃತಿಗಳನ್ನು ಶಾಂತಕವಿಗಳು ಬರೆದಿದ್ದರೂ ನಮಗೆ ಈಗ ದೊರಕುವುದು ಬೆರಳಣಿಕೆಯಷ್ಟು ಕೃತಿಗಳು ಮಾತ್ರ. 'ಅವರ ಕೃತಿಗಳನ್ನಂತೂ ನಾವು ಉಳಿಸಿಕೊಂಡಿಲ್ಲ, ಅವರು ರಚಿಸಿದ ಕೃತಿಗಳ ಪಟ್ಟಿಯನ್ನಾದರೂ ನಮ್ಮ ಜನ ನೆನಪಿನಲ್ಲಿಟ್ಟುಕೊಂಡರೆ ಸಾಕು' ಎಂಬ ಮೊನಚು ಮಾತು ಕಣ್ಮರೆಯಾಗುತ್ತಿರುವ ಕನ್ನಡ ಕೃತಿಗಳನ್ನು ಈಗಲಾದರೂ ಎಚ್ಚರ ವಹಿಸಿ ಉಳಿಸಿಕೊಳ್ಳಬೇಕಾದ ತುರ್ತನ್ನು ಒತ್ತಿ ಹೇಳುತ್ತದೆ.

ದ.ರಾ.ಬೇಂದ್ರೆಯವರು ಬರೆದ 'ಶಾಂತಕವಿಗಳ ವಿಶ್ರಾಂತಿ' ಎಂಬ ಹಾಡಿನ ಜೊತೆಗೆ ಶಾಂತಕವಿಗಳೇ ಬರೆದ ಸುಮಾರು 20 ಹಾಡು, ಕಂದ, ವೃತ್ತ ಪದ್ಯಗಳನ್ನು ಸಂದರ್ಭಕ್ಕನುಗುಣವಾಗಿ ನಾಟಕದುದ್ದಕ್ಕೂ ಬಳಸಿಕೊಳ್ಳಲಾಗಿದೆ. ಶಾಂತಕವಿಗಳೇ ಸೃಷ್ಟಿಸಿದ ಅಂತಃಶೀಲ ಮತ್ತು ಬಹಿಃಶೀಲ ಹಾಗೂ ಹೇಳಪ್ಪ ಮತ್ತು ಕೇಳಪ್ಪ ಎಂಬ ಪಾತ್ರಗಳನ್ನು ವೃತ್ತಿ ರಂಗಭೂಮಿಯ ನಾಟಕದ ಸಂಯೋಜನೆಯಾದ ಒಳದೃಶ್ಯ (ಡೀಪ್‌ಸೀನ್) ಮತ್ತು ಹೊರದೃಶ್ಯ (ಫ್ರಂಟ್ ಸೀನ್) ಪರಿಕಲ್ಪನೆಯಲ್ಲಿ ಬಳಸಿಕೊಳ್ಳಲಾಗಿದೆ. ಶಾಂತಕವಿಗಳೇ ಬರೆದ ಹಾಗೂ ಸದ್ಯ ದೊರೆತಿರುವ 'ಉಷಾಹರಣ', 'ವತ್ಸಲಾಹರಣ' ಮತ್ತು 'ಸೀತಾರಣ್ಯ ಪ್ರವೇಶ' ನಾಟಕಗಳ ದೃಶ್ಯಗಳನ್ನು ನಾಟಕದೊಳಗಿನ ನಾಟಕ (ಗರ್ಭಾಂಕ) ತಂತ್ರವಾಗಿ ಬಳಸಿಕೊಳ್ಳಲಾಗಿದೆ.

ಕೊನೆಯಲ್ಲಿ ಬರುವ ಯುವಕವಿ ಬೇಂದ್ರೆಯವರ ಮಾತುಗಳು ಇಡೀ ನಾಟಕಕ್ಕೆ ಮತ್ತು ಕನ್ನಡತ್ತ್ವದ ಕುರಿತು ಶಾಂತಕವಿಗಳ ಚಿಂತನೆಗೆ ಭಾಷ್ಯ ಬರೆದಂತಿದೆ. ಅವರು ಹೇಳುತ್ತಾರೆ: 'ಸಕ್ಕರಿ ಬಾಳಾಚಾರ್ಯರಿಗೆ ತಮ್ಮ ಮಾಧ್ವಮತದ ಬಗ್ಗೆ ದುರಭಿಮಾನ ಇರಲಿಲ್ಲ ಮತ್ತು ಇತಿಹಾಸದ ತತ್ವಜ್ಞಾನದ ಅರಿವಿನ ವಿಶಾಲ ಹೃದಯವಂತಿಕೆ ಇತ್ತು ಎಂಬುದಕ್ಕೆ ವಿದ್ಯಾರಣ್ಯ ವಿಜಯ ಕೃತಿಯೇ ಸಾಕ್ಷಿಯಾಗಿದೆ'.

ಶಾಂತಕವಿಗಳು ತಮ್ಮ ವ್ಯಕ್ತಿತ್ವ ಮತ್ತು ಕೃತಿ ರಚನಾ ನೆಲೆಯಲ್ಲಿ ಆಗಿನ ಸಾಂಪ್ರದಾಯಿಕ ಬರಹಗಾರರಿಗಿಂತ ತೀರಾ ಭಿನ್ನರಾಗಿದ್ದರು ಮತ್ತು ಆಧುನಿಕರಾಗಿದ್ದರು. 'ಅವರು ಹೊತ್ತಿಸಿದ ಕನ್ನಡತ್ತ್ವದ ದೀವಟಿಗೆಯ ಶಾಖವನ್ನು ನೀಲಾಂಜನದ ಬೆಳಕಾಗಿ ಮಾಡಿಕೊಂಡವರು ವರಕವಿ ಬೇಂದ್ರೆಯವರು' ಎಂದು ನಾಟಕದಲ್ಲಿ ಬರುವ ಮಾತು ಶಾಂತಕವಿಗಳ ಭಾಷೆಯ ಅಸ್ಮಿತೆಯ ಶೋಧದ ಮಹತ್ತ್ವವನ್ನು ತೋರಿಸುತ್ತದೆ.

ಈ ನಾಟಕವನ್ನು ರಂಗಕ್ಕೆ ತಂದ ಧಾರವಾಡದ ಗೊಂಬೆಮನೆ ತಂಡ ಮತ್ತು ಆಯೋಜಿಸಿದ ಶಾಂತಕವಿ ಟ್ರಸ್ಟ್ ಈ ಎರಡೂ ಸಂಸ್ಥೆಗಳು ಅಭಿನಂದನಾರ್ಹವಾಗಿವೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಗಣಿತದಲ್ಲಿ ಗರ್ದಿ ಗಮ್ಮತ್ತು

ಉತ್ತರ ಥಟ್ ಅಂತ ಹೇಳಿ

ನಿಮ್ಮ ಗೆಳೆಯನಿಗೆ 99 ಅಂಕಿಯನ್ನು ಬರೆಯಲು ಹೇಳಿ. ಅದಕ್ಕೆ ಯಾವುದೇ ಎರಡಂಕಿಯ ಸಂಖ್ಯೆಯಿಂದ ಗುಣಿಸಲು ಹೇಳಿ. ಆದರೆ, ಆತ ಗುಣಿಸುವ ಮೊದಲೇ ಉತ್ತರವನ್ನು ನೀವು ಥಟ್ ಎಂದು ಹೇಳಿ ಆಶ್ಚರ್ಯಪಡಿಸಬಹುದು. ಅದು ಹೇಗೆ?

ಹೀಗೆ: ನಿಮ್ಮ ಗೆಳೆಯ 99ರ ಕೆಳಗೆ ಯಾವ ಸಂಖ್ಯೆಯನ್ನು ಬರೆದುಕೊಳ್ಳುತ್ತಾನೋ. ಅದರಲ್ಲಿ ಒಂದು ಅಂಕಿಯನ್ನು ಕಳೆದು ಎಡಭಾಗದಲ್ಲಿ ಮೊದಲು ಆ ಸಂಖ್ಯೆಯನ್ನು ಬರೆಯಿರಿ. ನಂತರ ಆ ಸಂಖ್ಯೆಯ ಅಂಕಿಗಳನ್ನು 99ರಿಂದ ಕಳೆಯಿರಿ. ಬರುವ ಎರಡು ಅಂಕಿಗಳನ್ನು ಬಲಭಾಗದಲ್ಲಿ ಬರೆಯಿರಿ. ಈಗ ಎಡಭಾಗದ ಹಾಗೂ ಬಲಭಾಗದ ಅಂಕಿಗಳನ್ನು ಜೋಡಿಸಿ ಓದಿದರೆ ಉತ್ತರ ಸಿದ್ಧ.

ಉದಾ: ನಿಮ್ಮ ಗೆಳೆಯ 99
x 62 ಎಂದು ಬರೆದುಕೊಂಡರೆ

ಹಂತ 1 : 62 -1 = 61 (ಎಡಭಾಗದ ಉತ್ತರ)

ಹಂತ 2: 99 - 61 = 38 (ಬಲಭಾಗದ ಉತ್ತರ)

ಎರಡನ್ನೂ ಜೋಡಿಸಿದರೆ ಉತ್ತರ = 6138

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಹೊಸ ಪದ ರಚಿಸಿ

	ಜ	ಗ	ಸುಳಿವು
1			ಸ್ಥಳ
2			ತುಕ್ಕು
3			ಹಾರು
4			ಎತ್ತರದಿಂದ ನೀರು ಬೀಳುವ ಒಂದು ಸ್ಥಳ
5			ಒಂದು ಚಲನಚಿತ್ರ

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಸಂಗೀ ಮಗ ಸಂತ = ____________
2. ಮೊಲದ ಹುರುಕು = ____________
3. ಮನೆ ವಧು ಭಾರ = ____________
4. ರಿ ನಗಬಾರದು = ____________

ಹಳ್ಳಿ ಆಟಗಳು

ಇಲ್ಲಿ ಹಳೇ ಆಟಗಳ ಕೆಲವು ಜನಪದ ಹೆಸರುಗಳನ್ನು ಕೊಟ್ಟಿದ್ದೇವೆ ಗಮನಿಸಿ. ಆಡಿ ನೋಡಿ

- ಕುಂಟ ಮುಟ್ಟೋ ಆಟ
- ಕುಂಟೆ ಬಿಲ್ಲೆ/ ಕುಂಟಾಪಿಲ್ಲೆ/ ಕುಂಟಲಪಿ
- ಗಡಿಪಾರ್
- ಗದ್ದೆ ಯಾರದು?
- ಗರಂ ಪತ್ಥರ್/ ಬಿಸಿ ಕಲ್ಲಿನ ಆಟ
- ಗಾಣದ ಓಟ
- ಗಾಲಿಯಾಟ
- ಗೋಣಿ ಗಾಲಿಯಾಟ/ ದೇಕ ಗೋಲಿ ಆಟ
- ಗುದ್ದು ಮೂಟೆ ಆಟ
- ಗುರಮ್ಮಾ ಗುರುಮ್ಮಾ ಚೋಟಿಗೋ
- ಗೂಳಿ ಕಾಳಗ
- ಘರ್ ಚಾವ್
- ಗೋಲಿ ಗುಂಡಾ ಆಟ
- ಚಾಪದ ಆಟ
- ಚಿನ್ನಿ ಕೋಲು
- ಚಿನ್ನಿ ದಾಂಡು/ ಚಿಣಿಪಣಿ ಆಟ
- ಚಿನ್ನತರುವ ಆಟ/ ಉಪ್ಪಾರಪಡ್ಡೆ ಆಟ

ಶಬ್ದಾಟ

ಇಲ್ಲಿ ಕೊಟ್ಟಿರುವ ಅಕ್ಷರಗಳ ಪಟ್ಟಿಯಿಂದ ಎರಡಕ್ಷರ ಆಯ್ದುಕೊಂಡು ಮುಂದೆ ಕೊಟ್ಟಿರುವ ಪದ ಸುಳಿವಿಗೆ ಹೊಂದುವಂತೆ ಪದ ಮಾಡಿ

ಅಕ್ಷರಗಳ ಪಟ್ಟಿ

ಕು	ಕೊ	ಕ	ಕೊ	ಕ	ಕ್ಕು	ಕ್ಕು
ಕ್ಕಿ	ಕು	ಕ	ಕ್ಕು	ಕ್ಕೆ	ಕ್ಕ	ಕ್ಕೆ

ಪದ ಸುಳಿವು

1. ___ ___ ನಾಗಾರಾಧನೆಯ ಒಂದು ಯಾತ್ರಾ ಸ್ಥಳ
2. ___ ___ ಕಟ್ಟಿಗೆ ಅಥವಾ ಕಬ್ಬಿಣದ ವಕ್ರವಾಗಿರುವ ಕಂಬಿ
3. ___ ___ ಕುಟುಕು
4. ___ ___ ವಾಂತಿ ಮಾಡು
5. ___ ___ ಚಿಕ್ಕಮ್ಮ
6. ___ ___ ಚಿಕ್ಕಪ್ಪ
7. ___ ___ ಪಕ್ಷಿಯ ಚುಂಚು





ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ


1. ಮಗಿ 2. ಮೂಗು 3. ಮೂಗ
4. ಮುಗಿ 5. ಮಗು

ಅದಲು ಬದಲು

1. ಗುರಿಮುಟ್ಟು 2. ನಗೆಮದ್ದು
3. ಕನ್ನಡಿಗ 4. ಜಾಣಲತಾ

ಇಂಗ್ಲಿಷಿನಲ್ಲಿ ವಿನೋದ

1. CURT
2. MONKEY
DONKEY

3. 

ಅಕ್ಷರ ಆಟ

1. ನೀರು 2. ನೀರೆ 3. ನೀಲಿ
4. ನೀನು 5. ನೀಳ 6. ನೀಡು
7. ನೀಗು 8. ನೀಚ


ಲೆಕ್ಕ ಮಾಡು ಮೋಜು ನೋಡು

$$\begin{array}{r} 859 \\ +\ 743 \\ \hline 1602 \end{array}$$


ಡಜ್ಞ ಚಕ್ಕು ಕೀಶ್ರಸ್ಪು ಕಥೆಯ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ಗಾಂಧೀಜಿಯ ಅಂಗಿ



ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಮೈಮೇಲೆ ಒಂದೇ ಖಾದಿಯ ವಸ್ತ್ರವನ್ನು ಕಾಣಬಹುದು. ಬಿಳಿಯ ಖಾದಿ ಪಂಚೆ ಮತ್ತು ಶಾಲು ಹೊದ್ದು ಅವರು ಇರುತ್ತಿದ್ದುದನ್ನು ಚಿತ್ರಗಳಲ್ಲಿ ಕಾಣಬಹುದು



ಒಮ್ಮೆ ಒಬ್ಬ ಬಾಲಕನಿಗೆ ಗಾಂಧೀಜಿ ಏಕೆ ಒಂದೇ ಬಟ್ಟೆಯಲ್ಲಿ ಇರುತ್ತಾರೆ ಎಂಬ ಕುತೂಹಲ ಮೂಡಿತು. ಅವರನ್ನು ಭೇಟಿಯಾದಾಗ, 'ನಿಮಗೆ ಬೇಕಾದರೆ ನನ್ನ ಅಮ್ಮನ ಬಳಿ ಹೇಳಿ ಅಂಗಿ ಹೊಲಿಸಿ ತರುತ್ತೇನೆ' ಎಂದು ಹೇಳಿಯೇಬಿಟ್ಟ




ಅಂದಹಾಗೆ ಆ ಬಾಲಕನ ತಾಯಿ ಹೊಲಿಗೆ ವೃತ್ತಿ ಮಾಡುತ್ತಿದ್ದಳು. ಗಾಂಧೀಜಿಯವರಿಗೆ ಎಷ್ಟು ಬೇಕಾದರೂ ಬಟ್ಟೆ ಹೊಲಿಸಿಕೊಡಬಲ್ಲೆ ಎಂಬ ನಂಬಿಕೆ ಅವನದ್ದು. ಅಮ್ಮನ ಬಳಿ ಹೇಳಿಯೂ ಇದ್ದ



ಬಾಲಕನಿಗೆ ಉತ್ತರಿಸಿದ ಗಾಂಧೀಜಿ, ನನಗೆ 40 ಕೋಟಿ ಬಂಧುಗಳಿದ್ದಾರೆ. ಅವರೆಲ್ಲರಿಗೆ ಅಂಗಿ ಸಿಗದೆ ನಾನೊಬ್ಬನೇ ಹೇಗೆ ಧರಿಸಲಿ ಎಂದರು. ಭಾರತದಲ್ಲಿ ಅಂದು ಸುಮಾರು 40 ಕೋಟಿ ಜನರಿದ್ದರು. ಬಹುತೇಕರು ತೀರಾ ಬಡವರಿದ್ದರು. ಅವರೆಲ್ಲರಿಗೂ ಅನ್ನ, ವಸತಿ, ಬಟ್ಟೆ ಸಿಗಬೇಕು ಎಂಬುದು ಗಾಂಧೀಜಿ ಆಸೆಯಾಗಿತ್ತು

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಶಿಖರ್ ಮಾಳೇಕರ್
ಮುಂಡಗೋಡ



ಯಶಸ್ವಿ ಎಚ್.ಎಂ.
ಹೊಸಹಳ್ಳಿ (ಮಂಡ್ಯ)



ಅಮೋಘ ನಾಯಕರ
ಗಜೇಂದ್ರಗಡ (ಗದಗ)

ಸರಿ ಉತ್ತರ ಮುಂದಿನ ವಾರ... ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ: majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎಂಟರಘಟ್ಟಕ್ಕೆ ನೆದರ್ಲೆಂಡ್ಸ್ ಲಗ್ಗೆ



ಮೆಂಫಿಸ್ ಡಿಪೆ —ಎಎಫ್‌ಪಿ ಚಿತ್ರ

ಅಲ್ ರಯ್ಯಾನ್. ಕತಾರ್ (ಎಪಿ): ಮೆಂಫಿಸ್ ಡೆಪೆ, ಡೇಲಿ ಬ್ಲೈಂಡ್ ಮತ್ತು ಡೆಂಜೆಲ್ ಡಂಫ್ರೈಸ್ ಅವರ ಗೋಲುಗಳ ನೆರವಿನಿಂದ ಅಮೆರಿಕ ತಂಡವನ್ನು ಮಣಿಸಿದ ನೆದರ್ಲೆಂಡ್ಸ್ ತಂಡದವರು ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಖಲೀಫಾ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಚೇತೋಹಾರಿ ಪ್ರದರ್ಶನ ನೀಡಿದ 'ಡಚ್' ತಂಡ 3–1 ಗೋಲುಗಳಿಂದ ಗೆದ್ದಿತು.

ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿದ ನೆದರ್ಲೆಂಡ್ಸ್ ತಂಡಕ್ಕೆ ಮೆಂಫಿಸ್ ಡಿಪೆ 10ನೇ ನಿಮಿಷದಲ್ಲಿ ಮುನ್ನಡೆ ತಂದಿತ್ತರು. ಅವರು ಸುಮಾರು 14 ಯಾರ್ಡ್ ದೂರದಿಂದ ಒದ್ದ ಚೆಂಡು ಅಮೆರಿಕದ ಗೋಲ್‌ಕೀಪರ್ ಮ್ಯಾಟ್ ಟರ್ನರ್ ಅವರನ್ನು ತಪ್ಪಿಸಿಕೊಂಡು ಗುರಿ ಸೇರಿತು.

ಮೊದಲಾರ್ಧದ ಇಂಜುರಿ ಅವಧಿಯಲ್ಲಿ ಬ್ಲೈಂಡ್ ಅವರು (45 + 1ನೇ ನಿ.) ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಹಜಿ ರೈಟ್ ಅವರು 76ನೇ ನಿಮಿಷದಲ್ಲಿ ಗೋಲು ಗಳಿಸಿ ಅಮೆರಿಕ ತಂಡದ ಹಿನ್ನಡೆಯನ್ನು 1–2ಕ್ಕೆ ತಗ್ಗಿಸಿದರು. ಕ್ರಿಸ್ಟಿಯನ್ ಪುಲಿಸಿಚ್ ನೀಡಿದ ಕ್ರಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡು ಎದುರಾಳಿ ಗೋಲ್‌ಕೀಪರ್ ಆಂದ್ರೆಸ್ ನೋಪೆರ್ಟ್ ಅವರ ಮೇಲಿಂದ ಗುರಿ ಸೇರಿಸಿದರು.

ಆದರೆ ಆಕ್ರಮಣಕಾರಿ ಆಟ ಮುಂದುವರಿಸಿದ ನೆದರ್ಲೆಂಡ್ಸ್ ತಂಡಕ್ಕೆ ಡಂಫ್ರೈಸ್ 81ನೇ ನಿಮಿಷದಲ್ಲಿ ಮೂರನೇ ಗೋಲು ತಂದಿತ್ತು ಗೆಲುವು ಖಚಿತಪಡಿಸಿದರು. ಮೊದಲ ಎರಡು ಗೋಲುಗಳಲ್ಲೂ ಡಂಫ್ರೈಸ್ ಅವರ ನೆರವು ಇತ್ತು.

42ನೇ ನಿಮಿಷದಲ್ಲಿ ಅಮೆರಿಕ ತಂಡಕ್ಕೆ ಸಮಬಲ ಸಾಧಿಸುವ ಅವಕಾಶ ಒದಗಿಬಂದಿತ್ತು. ಆದರೆ ಟಿಮ್ ವೆಯಾ ಅವರು 25 ಯಾರ್ಡ್ ದೂರದಿಂದ ಒದ್ದ ಚೆಂಡನ್ನು ನೋಪೆರ್ಟ್ ತಡೆದರು.

1974, 1978 ಮತ್ತು 2010ರ ವಿಶ್ವಕಪ್ ಟೂರ್ನಿಯ 'ರನ್ನರ್ಸ್ ಅಪ್' ಆಗಿರುವ 'ಆರೆಂಜ್ ಬ್ರಿಗೇಡ್' ತನ್ನ ಗೆಲುವಿನ ಓಟವನ್ನು 19 ಪಂದ್ಯಗಳಿಗೆ ವಿಸ್ತರಿಸಿತು. ನೆದರ್ಲೆಂಡ್ಸ್ ತಂಡ ಶುಕ್ರವಾರ ನಡೆಯಲಿರುವ ಕ್ವಾರ್ಟರ್ ಫೈನಲ್‌ನಲ್ಲಿ ಅರ್ಜೆಂಟೀನಾ ಅಥವಾ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

2002ರ ಬಳಿಕ ಇದೇ ಮೊದಲ ಬಾರಿಗೆ 16ರ ಘಟ್ಟ ದಾಟಬೇಕೆಂಬ ಅಮೆರಿಕದ ತಂಡದ ಆಸೆ ಕೈಗೂಡಲಿಲ್ಲ.

ಗುಂಪು 'ಜಿ' ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಡ್ರಾ	ಸೋಲು	ಗೋಲು ಅಂತರ	ಪಾಯಿಂಟ್
ಬ್ರೆಜಿಲ್	3	2	0	1	2	6
ಸ್ವಿಟ್ಜರ್ಲೆಂಡ್	3	2	0	1	1	6
ಕ್ಯಾಮರೂನ್	3	1	1	1	0	4
ಸರ್ಬಿಯಾ	3	0	1	2	-3	1

16ರ ಘಟ್ಟದಲ್ಲಿ ಇಂದು ಪೋಲೆಂಡ್ ವಿರುದ್ಧ ಸೆಣಸು

ಫ್ರಾನ್ಸ್‌ಗೆ ಎಂಬಾಪೆ, ದೆಂಬೆಲೆ ಬಲ

ದೋಹಾ (ರಾಯಿಟರ್ಸ್): ಸತತ ಎರಡನೇ ಟ್ರೋಫಿಯ ಮೇಲೆ ಕಣ್ಣಿಟ್ಟಿರುವ ಫ್ರಾನ್ಸ್ ತಂಡ ಫಿಫಾ ವಿಶ್ವಕಪ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಭಾನುವಾರ ಪೋಲೆಂಡ್ ತಂಡದ ಸವಾಲು ಎದುರಿಸಲಿದೆ.

ಅಲ್ ತುಮಾಮಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಫ್ರಾನ್ಸ್, ಗೆಲ್ಲುವ 'ಫೇವರಿಟ್' ಎನಿಸಿಕೊಂಡಿದೆ. ಆದರೆ ಪೋಲೆಂಡ್ ಅಚ್ಚರಿಯ ಫಲಿತಾಂಶ ನೀಡಬಲ್ಲ ತಾಕತ್ತು ಹೊಂದಿರುವುದರಿಂದ ತುರುಸಿನ ಪೈಪೋಟಿ ನಡೆಯುವುದರಲ್ಲಿ ಅನುಮಾನವಿಲ್ಲ.

ಲೀಗ್ ಹಂತದಲ್ಲಿ ಇನ್ನೂ ಒಂದು ಪಂದ್ಯ ಬಾಕಿಯಿರುವಂತೆಯೇ ನಾಕೌಟ್‌ನಲ್ಲಿ ಸ್ಥಾನ ಖಚಿತಪಡಿಸಿಕೊಂಡಿದ್ದ ಫ್ರಾನ್ಸ್, ಕೊನೆಯ ಪಂದ್ಯದಲ್ಲಿ ಟುನೀಷಿಯಾ ಕೈಯಲ್ಲಿ 0–1 ರಲ್ಲಿ ಸೋತಿತ್ತು. ಆದರೆ ಆ ಪಂದ್ಯದಲ್ಲಿ ಪ್ರಮುಖರಿಗೆ ವಿಶ್ರಾಂತಿ ನೀಡಲಾಗಿತ್ತು.

ಮೊದಲ ಪಂದ್ಯವನ್ನು ಅರ್ಜೆಂಟೀನಾ ಕೈಯಲ್ಲಿ 0–2 ರಲ್ಲಿ ಸೋತಿದ್ದ, ಪೋಲೆಂಡ್ ಆ ಬಳಿಕ ಚೇತರಿಕೆಯ ಆಟವಾಡಿ 16ರ ಘಟ್ಟ ತಲುಪಿದೆ. ಸ್ಟ್ರೈಕರ್ ರಾಬರ್ಟ್ ಲೆವನ್‌ಡೊವ್‌ಸ್ಕಿ ಮೇಲೆ ಈ ತಂಡ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದೆ.

ಮತ್ತೊಂದೆಡೆ ಫ್ರಾನ್ಸ್ ತಂಡ ಸ್ಟಾರ್ ಸ್ಟ್ರೈಕರ್ ಕೈಲಿಯಾನ್ ಎಂಬಾಪೆ, ಆಂಟೋನ್ ಗ್ರೀಸ್‌ಮನ್ ಮತ್ತು ಉಸ್ಮಾನ್ ದೆಂಬೆಲೆ ಅವರ ಬಲದಿಂದ ಕಣಕ್ಕಿಳಿಯಲಿದೆ.

ಎಂಬಾಪೆ ಮತ್ತು ದೆಂಬೆಲೆ ಅವರನ್ನು ಕಟ್ಟಿಹಾಕಲು ಪೋಲೆಂಡ್ ಡಿಫೆಂಡರ್‌ಗಳಿಗೆ ಹೆಚ್ಚಿನ ಶ್ರಮವಹಿಸಬೇಕಿದೆ. ಅನುಭವಿ ಆಟಗಾರ ಒಲಿವಿಯೆರ್ ಗಿರೋಡ್ ಅವರೂ ಮಿಂಚುವ ವಿಶ್ವಾಸದಲ್ಲಿದ್ದಾರೆ.



ಫ್ರಾನ್ಸ್ ತಂಡದ ಕೈಲಿಯಾನ್ ಎಂಬಾಪೆ —ಎಎಫ್‌ಪಿ ಚಿತ್ರ

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಫ್ರಾನ್ಸ್ ಪರ ಅತ್ಯಧಿಕ ಗೋಲು ಗಳಿಸಿದ ಆಟಗಾರ ಎನಿಸಿಕೊಳ್ಳಲು ಗಿರೋಡ್‌ಗೆ ಇನ್ನೊಂದು ಗೋಲು ಬೇಕು. 51 ಗೋಲುಗಳನ್ನು ಗಳಿಸಿರುವ ಅವರು ಥಿಯರಿ ಹೆನ್ರಿ ಜತೆ ದಾಖಲೆಯನ್ನು ಹಂಚಿಕೊಂಡಿದ್ದಾರೆ.

'ಪೋಲೆಂಡ್ ತಂಡ ಅನುಭವಿ ಆಟಗಾರರನ್ನು ಹೊಂದಿದೆ. ಲೆವನ್‌ಡೊವ್‌ಸ್ಕಿ ವಿಶ್ವದ ಅತ್ಯುತ್ತಮ ಸ್ಟ್ರೈಕರ್‌ಗಳಲ್ಲಿ ಒಬ್ಬರು. ಎದುರಾಳಿಗಳನ್ನು ಹಗುರವಾಗಿ ಕಂಡಿಲ್ಲ' ಎಂದು ಫ್ರಾನ್ಸ್ ಕೋಚ್ ದಿದಿಯೆ ದೆಶಾಂಪ್ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ.

ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಗೆಲ್ಲುವ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಇಂಗ್ಲೆಂಡ್ ಅಥವಾ ಸೆನೆಗಲ್ ಸವಾಲು ಎದುರಿಸಲಿದೆ

ಇಂದಿನ ಪಂದ್ಯ (ಪ್ರೀಕ್ವಾರ್ಟರ್‌ಫೈನಲ್)

- ಫ್ರಾನ್ಸ್ Vs ಪೋಲೆಂಡ್ — ರಾತ್ರಿ 8.30
- ಇಂಗ್ಲೆಂಡ್ Vs ಸೆನೆಗಲ್ — ರಾತ್ರಿ 12.30
- ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ಬಲಾಬಲ: ಫ್ರಾನ್ಸ್ ತಂಡ ಪೋಲೆಂಡ್ ವಿರುದ್ಧ ಆಡಿದ ಕಳೆದ ಏಳು ಪಂದ್ಯಗಳಲ್ಲಿ ಸೋತಿಲ್ಲ. 1982 ರಲ್ಲಿ ನಡೆದಿದ್ದ ಸ್ನೇಹಪರ ಪಂದ್ಯದಲ್ಲಿ ಕೊನೆಯದಾಗಿ ಮಣಿದಿತ್ತು. ವಿಶ್ವಕಪ್‌ನಲ್ಲಿ ಇವೆರಡು ತಂಡಗಳು ಒಮ್ಮೆ ಮಾತ್ರ ಎದುರಾಗಿದ್ದು, 1982ರ ಟೂರ್ನಿಯಲ್ಲಿ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯವನ್ನು ಪೋಲೆಂಡ್ 3–2 ರಲ್ಲಿ ಜಯಿಸಿತ್ತು.

ಪ್ರೀ ಕ್ವಾರ್ಟರ್‌ಗೆ ಸ್ವಿಟ್ಜರ್ಲೆಂಡ್

ದೋಹಾ (ಎಎಫ್‌ಪಿ): ತೀವ್ರ ಪೈಪೋಟಿ ಕಂಡುಬಂದ ಪಂದ್ಯದಲ್ಲಿ ಸರ್ಬಿಯಾ ತಂಡಕ್ಕೆ ಸೋಲುಣಿಸಿದ ಸ್ವಿಟ್ಜರ್ಲೆಂಡ್ ತಂಡವು ವಿಶ್ವಕಪ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್ ತಲುಪಿತು.

ಇಲ್ಲಿಯ ಸ್ಟೇಡಿಯಂ 974 ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ ಸ್ವಿಟ್ಜರ್ಲೆಂಡ್ 3–2ರಿಂದ ಸರ್ಬಿಯಾ ವಿರುದ್ಧ ಗೆದ್ದಿತು.

ಶೆರ್ಡಾನ್ ಶಾಕಿರಿ 20ನೇ ನಿಮಿಷದಲ್ಲಿ ಗಳಿಸಿದ ಗೋಲು ಸ್ವಿಟ್ಜರ್ಲೆಂಡ್‌ಗೆ ಮುನ್ನಡೆ ತಂದುಕೊಟ್ಟಿತು. ಆದರೆ ಮೊದಲಾರ್ಧದ ಅವಧಿಯಲ್ಲೇ ಅಲೆಕ್ಸಾಂಡರ್ ಮಿಟ್ರೊವಿಚ್ (ಹೆಡರ್) ಮತ್ತು ದುಸಾನ್ ವ್ಲಾಹೊವಿಚ್ ದಾಖಲಿಸಿದ ಗೋಲುಗಳಿಂದ ಸರ್ಬಿಯಾ ಗೆಲುವಿನ ನಿರೀಕ್ಷೆ ಮೂಡಿಸಿತ್ತು.

ಮೊದಲಾರ್ಧದ ಮುಗಿಯಲು ಕೇವಲ ಒಂದು ನಿಮಿಷ ಇರುವಾಗ ಬ್ರೀಲ್ ಎಂಬೊಲೊ ಸ್ವಿಸ್ ಪರ ಸಮಬಲದ ಗೋಲು ಹೊಡೆದರು. ಇದಾದ ನಾಲ್ಕನೇ ನಿಮಿಷದಲ್ಲೇ ರೆಮೊ ಫ್ರೆಲರ್ ತೋರಿದ ಕಾಲ್ಚಳಕ ತಂಡದ ಗೆಲುವಿಗೆ ಕಾರಣವಾಯಿತು.

ಈ ಸೋಲಿನೊಂದಿಗೆ ಸರ್ಬಿಯಾ ತಂಡವು ಟೂರ್ನಿಯಿಂದ ಹೊರಬಿದ್ದಿತು.

ಐದು ವಿಶ್ವಕಪ್ ಟೂರ್ನಿಗಳಲ್ಲಿ ನಾಲ್ಕನೇ ಬಾರಿ ಸ್ವಿಟ್ಜರ್ಲೆಂಡ್ ತಂಡವು ನಾಕೌಟ್ ತಲುಪಿದೆ.

ಗೋಲುಗಳ ವಿವರ

ಸ್ವಿಟ್ಜರ್ಲೆಂಡ್- 3
ಶೆರ್ಡಾನ್ ಶಾಕಿರಿ (20ನೇ ನಿ.)
ಬ್ರೀಲ್ ಎಂಬೊಲೊ (44ನೇ ನಿ.)
ರೆಮೊ ಫ್ರೆಲರ್ (48ನೇ ನಿ.)

ಸರ್ಬಿಯಾ-2
ಅಲೆಕ್ಸಾಂಡರ್ ಮಿಟ್ರೊವಿಚ್ (26 ನಿ.)
ದುಸಾನ್ ವ್ಲಾಹೊವಿಚ್ (35ನೇ ನಿ.)

ವಿಶ್ವಕಪ್‌ನಲ್ಲಿ ಬ್ರೆಜಿಲ್‌ಗೆ ಸೋಲುಣಿಸಿದ ಆಫ್ರಿಕಾದ ಮೊದಲ ತಂಡ

ಕ್ಯಾಮರೂನ್‌ಗೆ ಸ್ಮರಣೀಯ ಜಯ

ದೋಹಾ (ಎಎಫ್‌ಪಿ): ವಿಶ್ವಕಪ್ ಟೂರ್ನಿಯಿಂದ ಹೊರಬೀಳುವ ಮುನ್ನ ಸ್ಮರಣೀಯ ಗೆಲುವು ದಾಖಲಿಸಿದ ಹಿರಿಮೆ ಕ್ಯಾಮರೂನ್ ತಂಡದ್ದಾಯಿತು.

ವಿನ್ಸೆಂಟ್ ಅಬೂಬಕ್ಕರ್ ಗಳಿಸಿದ ಗೋಲಿನ ಬಲದಿಂದ ಬ್ರೆಜಿಲ್ ತಂಡವನ್ನು 1–0ಯಿಂದ ಪರಾಭವಗೊಳಿಸಿದ ಕ್ಯಾಮರೂನ್, ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಈ ಸಾಧನೆ ಮಾಡಿದ ಆಫ್ರಿಕಾದ ಮೊದಲ ತಂಡ ಎನಿಸಿಕೊಂಡಿತು.

ಲುಸೈಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಜಿ ಗುಂಪಿನ ಹಣಾಹಣಿಯಲ್ಲಿ ಸೋತರೂ ಬ್ರೆಜಿಲ್ ತಂಡವು ಈಗಾಗಲೇ 16ರ ಘಟ್ಟಕ್ಕೆ ಅರ್ಹತೆ ಗಳಿಸಿದ್ದರಿಂದ ಫಲಿತಾಂಶ ಯಾವುದೇ ಪರಿಣಾಮ ಬೀರಲಿಲ್ಲ. ಆದರೆ ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ತಂಡವು 3–2ರಿಂದ ಸರ್ಬಿಯಾ ತಂಡವನ್ನು ಮಣಿಸಿ, ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದೊಂದಿಗೆ ಪ್ರೀಕ್ವಾರ್ಟರ್ ಟಿಕೆಟ್ ಪಡೆಯಿತು.

ಈ ಗುಂಪಿನಲ್ಲಿ ಬ್ರೆಜಿಲ್ ಅಗ್ರಸ್ಥಾನ ಗಳಿಸಿತು.



ಕ್ಯಾಮರೂನ್ ತಂಡದ ಆಟಗಾರರ ಸಂಭ್ರಮ— ಎಎಫ್‌ಪಿ ಚಿತ್ರ

ರೆಡ್ ಕಾರ್ಡ್ ಪಡೆದ ಅಬೂಬಕ್ಕರ್: ಜಿದ್ದಾಜಿದ್ದಿನ ಪೈಪೋಟಿ ಕಂಡುಬಂದ ಪಂದ್ಯದಲ್ಲಿ ನಿಗದಿತ ಅವಧಿಯವರೆಗೆ ಯಾವುದೇ ಗೋಲು ದಾಖಲಾಗಲಿಲ್ಲ. ಇಂಜುರಿ ಅವಧಿಯಲ್ಲಿ (92ನೇ ನಿಮಿಷ) ಸಬ್‌ಸ್ಟಿಟ್ಯೂಟ್ ಆಟಗಾರ ಜೆರೋಮ್ ಎನ್‌ಗೊಮ್ ಎಂಬೆಕೆಲಿ ನೀಡಿದ ಕ್ರಾಸ್‌ನಲ್ಲಿ ವಿನ್ಸೆಂಟ್ ಅಬೂಬಕ್ಕರ್ ಚೆಂದದ ಹೆಡರ್ ಮಾಡಿದರು. ಚೆಂಡು ಗೋಲುಪೋಸ್ಟ್‌ನೊಳಗೆ ಸೇರುತ್ತಿದ್ದಂತೆ ಕ್ಯಾಮರೂನ್ ಆಟಗಾರರು ಸಂಭ್ರಮದ ಹೊಳೆಯಲ್ಲಿ ಮಿಂದೆದ್ದರು.

ಈ ವೇಳೆ ಅಂಗಣದಿಂದ ಹೊರಗೋಡಿ ಜೆರ್ಸಿ ಕಳಚಿ ಸಂಭ್ರಮಿಸಿ ವಾಪಸ್ ಬಂದ ಅಬೂಬಕ್ಕರ್ ಅವರಿಗೆ ರೆಫರಿ ರೆಡ್‌ಕಾರ್ಡ್ ನೀಡಿದರು. ಇದೇ ಪಂದ್ಯದಲ್ಲಿ ಬ್ರೆಜಿಲ್ ಆಟಗಾರನನ್ನು ಬೀಳಿಸಿ ಒರಟು ಆಟವಾಡಿದ್ದ ಅಬೂಬಕ್ಕರ್ ಅವರಿಗೆ ಹಳದಿ ಕಾರ್ಡ್ ನೀಡಿದ್ದ ರೆಫರಿ ಇಸ್ಮಾಯಿಲ್ ಎಲ್‌ಫಾತ್ ಅವರು ಎಚ್ಚರಿಕೆ ನೀಡಿದ್ದರು. ರೆಡ್ ಕಾರ್ಡ್ ನೀಡುವ ಮೊದಲು ಇಸ್ಮಾಯಿಲ್ ಅವರು ಅಬೂಬಕ್ಕರ್ ಅವರ ಕೈಕುಲುಕಿ ಮಂದಹಾಸ ಬೀರಿದರು.

1998ರ ಬಳಿಕ ಗುಂಪು ಹಂತದಲ್ಲಿ ಬ್ರೆಜಿಲ್ ಸೋತಿದ್ದು ಇದೇ ಮೊದಲು. ಆ ವರ್ಷ ನಾರ್ವೆ ತಂಡಕ್ಕೆ ಮಣಿದಿತ್ತು. ಈ ಪಂದ್ಯದಲ್ಲಿ ಬ್ರೆಜಿಲ್ ಪ್ರಮುಖ ಆಟಗಾರರಿಗೆ ವಿಶ್ರಾಂತಿ ನೀಡಿತ್ತು. ಪಾದದ ಗಾಯದಿಂದ ಬಳಲುತ್ತಿರುವ ನೇಮರ್ ಕೂಡ ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ.

ಮುಖ್ಯಾಂಶಗಳು

- ಇಂಜುರಿ ಅವಧಿಯಲ್ಲಿ ಗೋಲು ಗಳಿಸಿದ ಅಬೂಬಕ್ಕರ್
- ಬ್ರೆಜಿಲ್ ಪರ ಗಮನಸೆಳೆದ ಗ್ಯಾಬ್ರಿಯಲ್ ಮಾರ್ಟನೆಲಿ

ಅಪ್ಪ ಹೇಳಿದ ಸೇನೆಯ ಕತೆಯೇ ಪ್ರೇರಣೆ

ದ್ವಿಶತಕದ ದಾಖಲೆಯನ್ನು ಮೆಲುಕು ಹಾಕಿದ ಕ್ರಿಕೆಟಿಗ ವಿವಿಎಸ್ ಲಕ್ಷ್ಮಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶ ಕಾಯುವ ಸೈನಿಕರನ್ನು ನೋಡು. ಕೊನೆಯುಸಿರು ಇರುವವರೆಗೂ ನಮ್ಮ ರಕ್ಷಣೆಗೆ ಹೋರಾಡುತ್ತಾರೆ. ಅವರ ಸಾಹಸ ಮತ್ತು ತ್ಯಾಗಗಳು ನಿನಗೆ ಪ್ರೇರಣೆಯಾಗಲಿ. ಬೆನ್ನುನೋವಿಗೆ ಹೆದರಬೇಡ ಅಂದರು. ಆ ಮಾತುಗಳು ಸ್ಫೂರ್ತಿ ತುಂಬಿದವು. ಮುಂದೆ ಹೊಸ ಇತಿಹಾಸವೇ ನಿರ್ಮಾಣವಾಯಿತು'–

ಭಾರತ ಕ್ರಿಕೆಟ್ ತಂಡದ ಮಾಜಿ ಬ್ಯಾಟರ್ ವಿವಿಎಸ್ ಲಕ್ಷ್ಮಣ್ ಅವರ ಮಾತುಗಳಿವು. 21 ವರ್ಷಗಳ ಹಿಂದೆ ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ಲಕ್ಷ್ಮಣ್ 281 ರನ್ ಗಳಿಸಿ ಭಾರತ ತಂಡದ ಗೆಲುವಿಗೆ ಕಾರಣರಾಗಿದ್ದರು. ಆ ಪಂದ್ಯದಲ್ಲಿ ಅವರು ಮತ್ತು ರಾಹುಲ್ ದ್ರಾವಿಡ್ ಜೊತೆಯಾಟವೂ ಇತಿಹಾಸ ಪುಸ್ತಕದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ. ಆದರೆ ಈ ಪಂದ್ಯಕ್ಕೂ ಮುನ್ನ ಲಕ್ಷ್ಮಣ್ ವಿಪರೀತ ಬೆನ್ನುನೋವು ಹಾಗೂ ಸ್ನಾಯುಬಿಗಿತದ ಸಮಸ್ಯೆ ಎದುರಿಸಿದ್ದರು.

ಶನಿವಾರ ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಏರ್ಪಡಿಸಲಾಗಿದ್ದ ತಮ್ಮ ಜೀವನಾಧಾರಿತ '281 ಆ್ಯಂಡ್ ಬಿಯಾಂಡ್' ಕೃತಿಯ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮ ನಿರ್ವಹಿಸಿದ ಕ್ರೀಡಾ ಲೇಖಕಿ ಶಾರದಾ ಉಗ್ರಾ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಲಕ್ಷ್ಮಣ್, 'ಅವತ್ತು ಕೋಲ್ಕತ್ತದ ಕೋಣೆಯಲ್ಲಿ ಕನ್ನಡಿ ಮುಂದೆ ನಿಂತು ನನ್ನ ದೇಹ ನೋಡಿಕೊಂಡೆ. ವಿಪರೀತ ಬೆನ್ನುನೋವು ಮತ್ತು ಸ್ನಾಯುವಿನ ಬಿಗಿತದಿಂದಾಗಿ ಒಂದು ಬದಿಯಲ್ಲಿ ಶರೀರ ವಾಲಿತ್ತು. ಮರುದಿನ ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಪಂದ್ಯದಲ್ಲಿ ಆಡುವ ಅವಕಾಶ ತಪ್ಪಿಹೋಗುವ ಹತಾಶೆಯಿಂದ ಗಳಗಳನೇ ಅತ್ತಿದ್ದೆ. ಆದರೆ ತಂದೆ ಹೇಳಿದ ಮಾತುಗಳು ಪ್ರೇರಣೆಯಾದವು. ಫಿಜಿಯೊ ಆರೈಕೆಯಿಂದಾಗಿ ಶೇ 60ರಷ್ಟು ಫಿಟ್ ಆಗಿದ್ದೆ. ಆಡುವ ಅವಕಾಶ ಲಭಿಸಿತು' ಎಂದರು.

ಈ ಸಂದರ್ಭದಲ್ಲಿ ಕ್ರಿಕೆಟ್ ಲೇಖಕ ಆರ್. ಕೌಶಿಕ್ ಹಾಜರಿದ್ದರು.



ಶಾರದಾ ಉಗ್ರಾ, ವಿವಿಎಸ್ ಲಕ್ಷ್ಮಣ್ ಮತ್ತು ಆರ್. ಕೌಶಿಕ್ —ಪ್ರಜಾವಾಣಿ ಚಿತ್ರ

BANGALORE LITERATURE FESTIVAL

ಡಿಯಾಗೊ ಅಭಿಮಾನಿಯಿಂದ ಜನಜಾಗೃತಿ

ಕತಾರ್‌ಗೆ ಮರಡೋನಾ ಚಿನ್ನಲೇಪಿತ ಪ್ರತಿಮೆ

ಮಂಗಳೂರು: ಫುಟ್‌ಬಾಲ್ ದಂತಕತೆ ಡಿಯೆಗೊ ಮರಡೋನಾ ಅಭಿಮಾನಿ ಕೇರಳದ ಬೋಚೆ (ಬಾಬ್ಬಿ ಚೆಮ್ಮನೂರ್) ಅವರು ಮಾದಕ ಪದಾರ್ಥ ಸೇವನೆ ವಿರುದ್ಧ ಯುವಜನರಲ್ಲಿ ಜಾಗೃತಿ ಮೂಡಿಸಲು ವಿಶೇಷ ಅಭಿಯಾನ ಕೈಗೊಂಡಿದ್ದಾರೆ. ಮರಡೋನಾ ಅವರ ಸಮೀಪದಲ್ಲಿ ತಾವು ನಿಂತಿರುವಂತೆ ಆಳೆತ್ತರದ, ಚಿನ್ನಲೇಪಿತ ಪ್ರತಿಮೆ ಮಾಡಿಸಿದ್ದಾರೆ. ಈ ಪ್ರತಿಮೆ ಮತ್ತು ಚಿನ್ನದಿಂದ ತಯಾರಿಸಿದ ಫುಟ್‌ಬಾಲ್ ಪ್ರತಿಕೃತಿಯ ಜೊತೆ ಯಾತ್ರೆ ಕೈಗೊಂಡಿದ್ದಾರೆ.

ಮರಡೋನಾ ಅವರ ಚಿನ್ನಲೇಪಿತ ಪ್ರತಿಕೃತಿಯನ್ನು ಕತಾರ್‌ನಲ್ಲಿ ಫಿಫಾ ವಿಶ್ವಕಪ್ ನಡೆಯುವ ಅಂಗಣದಲ್ಲಿ ಪ್ರದರ್ಶಿಸಲು ಉದ್ದೇಶಿಸಿರುವ ಅವರು ದೇಶದ ವಿವಿಧ ನಗರಗಳಲ್ಲಿ ಅದರ ಪ್ರದರ್ಶನ ಏರ್ಪಡಿಸಿ, ಮಾದಕ ಪದಾರ್ಥ ವಿರುದ್ಧ ಜಾಗೃತಿ ಮೂಡಿಸುತ್ತಿದ್ದಾರೆ.

ಈ ಕುರಿತು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೋಚೆ, 'ಮರಡೋನಾ ಅವರ ಚಿನ್ನಲೇಪಿತ ಪ್ರತಿಮೆಯ ಜೊತೆ ಸೆಲ್ಫಿ ತೆಗೆದು ಇನ್‌ಸ್ಟಾಗ್ರಾಂ ಮೂಲಕ ಕಳುಹಿಸಬಹುದು. ಚಿನ್ನದಿಂದ ನಿರ್ಮಿಸಿರುವ ಫುಟ್‌ಬಾಲ್ ಪ್ರತಿಕೃತಿಯನ್ನು ಒಬ್ಬರಿಗೆ ಬಹುಮಾನವಾಗಿ ನೀಡಲಾಗುವುದು' ಎಂದರು.

'ಮಾದಕ ಪದಾರ್ಥ ವಿರುದ್ಧದ ಜಾಗೃತಿ ಅಭಿಯಾನ ಮಂಗಳೂರು, ಉಡುಪಿ, ಭಟ್ಕಳ, ಗೋವಾ ಮಾರ್ಗವಾಗಿ ಮುಂಬೈ ತಲುಪಲಿದೆ. ಅಲ್ಲಿಂದ ವಿಮಾನದ ಮೂಲಕ ಪ್ರತಿಮೆಯನ್ನು ಕತಾರ್‌ಗೆ ತೆಗೆದುಕೊಂಡು ಹೋಗಿ ಅಲ್ಲಿನ ವಸ್ತುಸಂಗ್ರಹಾಲಯದಲ್ಲಿ ಇರಿಸಲಾಗುವುದು' ಎಂದು ಅವರು ವಿವರಿಸಿದರು.

'ಮರಡೋನಾ ಅವರದು ಮಗುವಿನಂತಹ ಮನಸು. ಜೀವನದ ಕೊನೆಗಾಲದಲ್ಲಿ ಮಾದಕ ಪದಾರ್ಥ ಸೇವನೆ ವಿರುದ್ಧ ಜಾಗೃತಿಯಲ್ಲಿ ತೊಡಗಿದ್ದರು. ಅವರು ನನ್ನ ನೆಚ್ಚಿನ ಆಟಗಾರ. ಅವರು ಬದುಕಿದ್ದಾಗ ಚಿನ್ನಲೇಪಿತ ಪ್ರತಿಮೆ ಮಾಡಿಸಲು ಸಾಧ್ಯವಾಗಿಲ್ಲ. ಫಿಫಾ ವಿಶ್ವಕಪ್ ಸಂದರ್ಭದಲ್ಲಿ ಈ ಕನಸು ನನಸು ಮಾಡುತ್ತಿದ್ದೇನೆ' ಎಂದರು.

'ಫುಟ್‌ಬಾಲ್ ಪ್ರತಿಕೃತಿಗೆ ₹ 6 ಲಕ್ಷ ಹಾಗೂ ಮರಡೋನಾ ಅವರ ಚಿನ್ನಲೇಪಿತ ಪ್ರತಿಮೆಗೆ ₹ 1 ಕೋಟಿ ವೆಚ್ಚವಾಗಿದೆ. ಮರಡೋನಾ ಸ್ಮರಣಾರ್ಥ ಅರ್ಜೆಂಟೀನಾ ಫುಟ್‌ಬಾಲ್ ಸಂಸ್ಥೆಯಿಂದ ಭಾರತೀಯರಿಗೆ ತರಬೇತಿ ಕೊಡಿಸಲಾಗುವುದು. ಫಿಫಾ ವಿಶ್ವಕಪ್‌ನಲ್ಲಿ ಭಾರತ ತಂಡವೂ ಪ್ರತಿನಿಧಿಸಬೇಕು ಎಂಬುದು ನನ್ನ ಕನಸು' ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಅಧ್ಯಕ್ಷ ಡಿ.ಎಂ.ಅಸ್ಲಾಂ ಹಾಗೂ ಲೊವೆಟ್ಟಾ ಮಿನೇಜ್, ಬೋಚೆ ಅವರ ಆಪ್ತ ಸಹಾಯಕಿ ಸರಿನಾ, ಸಾರ್ವಜನಿಕ ಸಂಪರ್ಕಾಧಿಕಾರಿ ಜೋಜಿ ಎಂ.ಜೆ. ಇದ್ದರು.



ಡಿಯೆಗೊ ಮರಡೋನಾ ಅವರ ಚಿನ್ನ ಲೇಪಿತ ಪ್ರತಿಮೆಯ ಜೊತೆ ಬೋಚೆ (ಬಾಬ್ಬಿ ಚೆಮ್ಮನ್ನೂರ್)

ಹಾಕಿ: ಆಸ್ಟ್ರೇಲಿಯಾ ತಿರುಗೇಟು

ಅಡಿಲೇಡ್ (ಪಿಟಿಐ): ಆರಂಭದಲ್ಲಿ ಮುನ್ನಡೆ ಗಳಿಸಿದರೂ ಆ ಬಳಿಕ ಆಟದ ಮೇಲಿನ ಲಯ ಕಳೆದುಕೊಂಡ ಭಾರತ ತಂಡ, ಆಸ್ಟ್ರೇಲಿಯಾ ವಿರುದ್ಧದ ಐದು ಪಂದ್ಯಗಳ ಹಾಕಿ ಸರಣಿಯ ನಾಲ್ಕನೇ ಪಂದ್ಯದಲ್ಲಿ 1-5 ರಲ್ಲಿ ಸೋತಿತು.

ಶನಿವಾರ ನಡೆದ ಪಂದ್ಯವನ್ನು ಗೆಲ್ಲುವ ಮೂಲಕ ಆತಿಥೇಯರು ಸರಣಿಯಲ್ಲಿ 3–1ರಲ್ಲಿ ಮುನ್ನಡೆ ಸಾಧಿಸಿದರು.

ಮೊದಲ ಎರಡು ಪಂದ್ಯಗಳಲ್ಲಿ ಸೋತಿದ್ದ ಭಾರತ, ಮೂರನೇ ಪಂದ್ಯ ಗೆದ್ದು ಸರಣಿ ಜಯದ ಕನಸು ಜೀವಂತವಾಗಿರಿಸಿಕೊಂಡಿತ್ತು. ಆದರೆ ಗೆಲುವಿನ ಓಟ ಮುಂದುವರಿಸಲು ವಿಫಲವಾಯಿತು.

ದಿಲ್‌ಪ್ರೀತ್ ಸಿಂಗ್ 25ನೇ ನಿಮಿಷದಲ್ಲಿ ಗೋಲು ಗಳಿಸಿ ಭಾರತಕ್ಕೆ ಮುನ್ನಡೆ ತಂದಿತ್ತರು. ಎರಡನೇ ಕ್ವಾರ್ಟರ್ ಬಳಿಕ ಆಸ್ಟ್ರೇಲಿಯಾ ಪಂದ್ಯದ ಮೇಲೆ ಹಿಡಿತ ಸಾಧಿಸಿತು.

ಜೆರಿಮಿ ಹೇವಾರ್ಡ್ (29ನೇ ನಿ.) ಮತ್ತು ಜೇಕ್ ವೆಟನ್ (30ನೇ ನಿ.) ಅವರು 50 ಸೆಕೆಂಡುಗಳ ಅಂತರದಲ್ಲಿ ಗೋಲು ಗಳಿಸಿ ಆಸ್ಟ್ರೇಲಿಯಾಕ್ಕೆ 2–1 ಮುನ್ನಡೆ ತಂದಿತ್ತರು. ಟಾಮ್ ವಿಕ್‌ಹ್ಯಾಂ (34 ನೇ ನಿ.), ಹೇವಾರ್ಡ್ (41ನೇ ನಿ.) ಮತ್ತು ಮ್ಯಾಟ್ ಡಾಸನ್ (54ನೇ ನಿ.) ಅವರು ಗೆಲುವಿನ ಅಂತರ ಹೆಚ್ಚಿಸಿದರು.

ಬ್ಯಾಡ್ಮಿಂಟನ್: ಫೈನಲ್‌ಗೆ ಉನ್ನತಿ

ನವದೆಹಲಿ (ಪಿಟಿಐ): ಭಾರತದ ಉನ್ನತಿ ಹೂಡಾ ಅವರು ಏಷ್ಯನ್ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಸುತ್ತು ತಲುಪಿದ್ದಾರೆ.

ಥಾಯ್ಲೆಂಡ್‌ನ ನೋಥಬುರಿಯಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಬಾಲಕಿಯರ ಸಿಂಗಲ್ಸ್ (17 ವರ್ಷದೊಳಗಿನವರು) ವಿಭಾಗದಲ್ಲಿ ಫೈನಲ್ ತಲುಪುವ ಮೂಲಕ ಉನ್ನತಿ, ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು.

ಸೆಮಿಫೈನಲ್ ಪಂದ್ಯದಲ್ಲಿ ಉನ್ನತಿ 21-8, 21-17ರಿಂದ ಜಪಾನ್‌ನ ಮಿಯೊನ್ ಯೊಕೌಚಿ ಅವರನ್ನು ಪರಾಭವಗೊಳಿಸಿದರು. ಭಾನುವಾರ ನಡೆಯುವ ಫೈನಲ್‌ನಲ್ಲಿ ಭಾರತದ ಆಟಗಾರ್ತಿ, ಥಾಯ್ಲೆಂಡ್‌ನ ಸರುನ್ರಕ್ ವಿತಿದ್ಸನ್ ಅವರನ್ನು ಎದುರಿಸುವರು.

ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಅನೀಶ್ ತೊಪ್ವಾನಿ, 17 ವರ್ಷದೊಳಗಿನವರ ವಿಭಾಗದ ಡಬಲ್ಸ್ ಆಟಗಾರರಾದ ಅರ್ಶ್ ಮೊಹಮ್ಮದ್–ಸಂಸ್ಕಾರ್ ಸಾರಸ್ವತ್ ಕೂಡ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟರು. ಅರ್ಶ್–ಸಂಸ್ಕಾ ೯21-15, 21-19ರಿಂದ ಚೀನಾ ತೈಪೆಯ ಚಿ ರುಯಿ ಚಿವು– ಶಾವು ಹುವಾ ಚಿವು ಎದುರು ಗೆದ್ದರು.

ಇಂಗ್ಲೆಂಡ್‌ಗೆ ಸೆನೆಗಲ್ ಸವಾಲು

ದೋಹಾ (ರಾಯಿಟರ್ಸ್): ಸ್ಟಾರ್ ಆಟಗಾರ ಹ್ಯಾರಿ ಕೇನ್ ಅವರು ಫಾರ್ಮ್ ಕಂಡುಕೊಳ್ಳುವರು ಎಂಬ ವಿಶ್ವಾಸದಲ್ಲಿರುವ ಇಂಗ್ಲೆಂಡ್ ತಂಡ, ವಿಶ್ವಕಪ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೆನೆಗಲ್ ತಂಡದ ಸವಾಲು ಎದುರಿಸಲಿದೆ.

ಅಲ್ ಬೈತ್ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ಗೆಲುವು ಪಡೆಯುವುದು ಸುಲಭವಲ್ಲ. ಏಕೆಂದರೆ ಈ ಹಿಂದೆ ಹಲವು ಅಚ್ಚರಿಯ ಫಲಿತಾಂಶಗಳನ್ನು ನೀಡಿರುವ ಸೆನೆಗಲ್, ದಿಟ್ಟ ಆಟವಾಡುವ ತಾಕತ್ತು ಹೊಂದಿದೆ.

ಇಂಗ್ಲೆಂಡ್ ತಂಡ ಆಫ್ರಿಕಾದ ದೇಶಗಳ ವಿರುದ್ಧ ಆಡಿರುವ 21 ಪಂದ್ಯಗಳಲ್ಲಿ ಒಮ್ಮೆಯೂ ಸೋತಿಲ್ಲ. ಆದರೆ ಸೆನೆಗಲ್ ವಿರುದ್ಧ ಇದೇ ಮೊದಲ ಬಾರಿ ಆಡಲಿದ್ದು ಪಂದ್ಯ ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಇಂಗ್ಲೆಂಡ್ ಪರ 51 ಗೋಲುಗಳನ್ನು ಗಳಿಸಿರುವ ಕೇನ್ ಅವರು ಲೀಗ್ ಹಂತದಲ್ಲಿ ಕಾಲ್ಚಳಕ ತೋರುವಲ್ಲಿ ವಿಫಲರಾಗಿದ್ದರು.


ವಯಸ್ಸು ತಿದ್ದಿ ವಂಚನೆ: ತಂದೆ–ತಾಯಿಯೂ ಆರೋಪಿ

ಲಕ್ಷ್ಯ ಸೇನ್, ಕೋಚ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಯಸ್ಸು ತಿದ್ದಿದ ಜನನ ಪ್ರಮಾಣಪತ್ರ ಸೃಷ್ಟಿಸಿ ಸರ್ಕಾರ ಹಾಗೂ ಪ್ರತಿಭಾವಂತ ಆಟಗಾರರನ್ನು ವಂಚಿಸಿದ ಆರೋಪದಡಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಹಾಗೂ ಕೋಚ್ ವಿಮಲ್ ಕುಮಾರ್ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ದೂರುದಾರ ಎಂ.ಜಿ. ನಾಗರಾಜ್ ಅವರು ವಂಚನೆ ಕೃತ್ಯದ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ಸುಳ್ಳು ಪ್ರಮಾಣಪತ್ರದ ಸಲ್ಲಿಸಿರುವ ಅನುಮಾನವಿರುವ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸುವಂತೆ ಆದೇಶಿಸಿತ್ತು. ಅದರನ್ವಯ ಇದೀಗ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಲಕ್ಷ್ಯ ಸೇನ್

'ಲಕ್ಷ್ಮ ಸೇನ್ ತಂದೆ ಧೀರೇಂದ್ರ ಕುಮಾರ್ ಸೇನ್, ತಾಯಿ ನಿರ್ಮಲ ಸೇನ್ ಸಹೋದರ ಚಿರಾಗ್ ಸೇನ್ ಅವರನ್ನೂ ಆರೋಪಿಯನ್ನಾಗಿ ಮಾಡಲಾಗಿದೆ. ಕೋಚ್ ವಿಮಲ್ ಕುಮಾರ್ ಐದನೇ ಆರೋಪಿ' ಎಂದು ತಿಳಿಸಿವೆ.

ಕೋಚ್ ಜೊತೆ ಸೇರಿ ತಿದ್ದುಪಡಿ: 'ಧೀರೇಂದ್ರಕುಮಾರ್ ಹಾಗೂ ನಿರ್ಮಲ ಸೇನ್ ಅವರು ತಮ್ಮ ಇಬ್ಬರೂ ಮಕ್ಕಳಿಗೆ ಬ್ಯಾಡ್ಮಿಂಟನ್ ತರಬೇತಿ ಕೊಡಿಸಿದ್ದರು. ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಹಾಗೂ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿ ಕೋಚ್ ಆಗಿರುವ ವಿಮಲ್‌ಕುಮಾರ್ ಜೊತೆ ಸಂಚು ರೂಪಿಸಿ, ಮಕ್ಕಳ ವಯಸ್ಸು ತಿದ್ದುಪಡಿ ಮಾಡಿ ಜನನ ಪ್ರಮಾಣ ಪತ್ರ ಸೃಷ್ಟಿಸಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೈಜ ವಯಸ್ಸು ಮುಚ್ಚಿಟ್ಟಿದ್ದ ಲಕ್ಷ್ಯಸೇನ್, 2010ರಿಂದ ಬ್ಯಾಡ್ಮಿಂಟನ್ ಟೂರ್ನಿಗಳಲ್ಲಿ ಗೆದ್ದಿದ್ದಾರೆ. ವಂಚನೆ ಮೂಲಕವೇ ಸರ್ಕಾರದ ಹಲವು ಸೌಲಭ್ಯಗಳನ್ನು ಪಡೆದಿದ್ದಾರೆ. ಇದರಿಂದಾಗಿ ಅರ್ಹ ವಯಸ್ಸಿನ ಆಟಗಾರರಿಗೆ ಅನ್ಯಾಯವಾಗಿದೆ. ಆರೋಪಿಗಳ ಕೃತ್ಯದಿಂದಾಗಿ ಸರ್ಕಾರಕ್ಕೂ ವಂಚನೆ ಯಾಗಿದೆ' ಎಂದು ಮೂಲಗಳು ತಿಳಿಸಿವೆ.

ಈ ಕುರಿತು ಪ್ರತಿಕ್ರಿಯಿಸಿರುವ ಧೀರೇಂದ್ರಕುಮಾರ್ ಸೇನ್, 'ಆರೋಪ ಸತ್ಯಕ್ಕೆ ದೂರವಿದೆ. ಸಮಗ್ರ ತನಿಖೆಯಿಂದ ಸತ್ಯ ಹೊರಬರಲಿ' ಎಂದರು.

ಜನ್ಮ ದಿನಾಂಕ ವಂಚನೆ ಹೇಗೆ?: 'ಆರೋಪಿ ಚಿರಾಗ್, 1996ರ ಫೆಬ್ರುವರಿಯಲ್ಲಿ ಜನಿಸಿದ್ದರು. ಆದರೆ, ಇವರ ಜನ್ಮ ದಿನಾಂಕವನ್ನು 1998ರ ಜುಲೈ ಎಂಬುದಾಗಿ ಜನನ ಪ್ರಮಾಣ ಪತ್ರ ಸೃಷ್ಟಿಸಲಾಗಿತ್ತು. ಅದೇ ರೀತಿ ಆರೋಪಿ ಲಕ್ಷ್ಯ ಸೇನ್ 1998ರಲ್ಲಿ ಜನಿಸಿದ್ದರು. ಇವರ ಜನ್ಮವರ್ಷವನ್ನು 2001 ಎಂಬುದಾಗಿ ನಮೂದಿಸಿ ನಕಲಿ ಜನನ ಪ್ರಮಾಣ ಪತ್ರ ಸೃಷ್ಟಿಸಿದ್ದರು. ಈ ಮೂಲಕ ಚಿರಾಗ್ ಅವರ ವಯಸ್ಸನ್ನು ಎರಡೂವರೆ ವರ್ಷ ಹಾಗೂ ಲಕ್ಷ್ಯ ಸೇನ್ ಅವರದ್ದು ಮೂರು ವರ್ಷ ಕಡಿಮೆ ಎಂಬುದಾಗಿ ನಮೂದಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.